ISSN: 2249-2429 A Quarterly Education and Research Journal Annual Subscription ₹. 500/-

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA**

- ಖಂಡಕಾವ್ಯ ಮತ್ತು ಮಹಾಕಾವ್ಯ
- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
- ಹಾವೇರಿ ನಗರದ ಗುತ್ತಿಗೆ ಪೌರಕಾರ್ಮಿಕರು
- ಹಾರೂಗೇರಿ ಗ್ರಾಮ ಪಂಚಾಯತ್ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆ






Volume : 6, Issue : 2, Pages 52, 7th Sept 2016

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

7ನೇ ಸಪ್ಟಂಬರ 2016 ಸಂಪುಟ : 6 ಸಂಚಿಕೆ : 2

ಪ್ರಕಾಶಕರು :

**ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಕರ್ನಾಟಕ ವಿಶ್ವವಿದ್ಯಾಲಯ ಮಾಜಿ ಸಿಂಡಿಕೇಟ್ ಸದಸ್ಯರು.

ಸಂಪಾದಕರು :

**ಡಾ. ಎನ್. ಬಿ. ಕೊಂಗವಾಡ**

ಸಹಸಂಪಾದಕರು :

**ಡಾ. ಎಸ್. ಬಿ. ಯಾದವಾಡ**



ಸಂಪಾದಕ ಮಂಡಳಿ :

- ಡಾ. ಶ್ರೀಮತಿ ಎನ್. ಲಕ್ಷ್ಮಿ
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- ಡಾ. ಎಸ್. ಎಸ್. ಪಾಟೀಲ
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- ಡಾ. ಎ. ವ್ಹಿ. ಬಮಗೊಂಡ
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ
- ಡಾ. ಶ್ರೀಮತಿ ಶೋಭಾ ನಾಯ್ಕರ
  ಡಯಟ್, ಧಾರವಾಡ.
- ಡಾ. ಬಿ. ಎಲ್. ಲಕ್ಕಣ್ಣವರ
  ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
- ಜನನಾಥ್ ಢಾಂಗೆ
  ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.



## Shikshan Soudha

*A Quarterly Education and Research Journal*

**Vidyanidhi Prakashana ®**
**Sri Sivakumar Agency ®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com


The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

**ಶಿಕ್ಷಣ ಸೌಧ**

## ಅಂತರಂಗ
## Inside

### ಸೈದ್ಧಾಂತಿಕ (Articles)


**05** ಅನ್ನ ಕಾದಂಬರಿಯಲ್ಲಿ ಹಸಿವಿನ ಆಯಾಮಗಳು – ಶಿವನಗೌಡ ಪಾಟೀಲ

**07** ಬಸವಣ್ಣನವರ ಸಮಾಜ ರಚನೆ – ಡಾ. ಅಮೃತೇಶ್ವರ ಪಾಟೀಲ – ಅಯ್ಯಣ್ಣ ಲಿಂಗಣ್ಣ

**09** ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು – ಡಾ. ಸಂಜೀವ ಆರ್. ನಾಯಕ

**11** ಖಂಡಕಾವ್ಯ ಮತ್ತು ಮಹಾಕಾವ್ಯ : ಒಂದು ತೌಲನಿಕ ಟಿಪ್ಪಣಿ – ಪ್ರೊ. ಮಲ್ಲಪ್ಪ ಬಂಡಿ

**15** ಕಲಚೂರಿಯರು ಮತ್ತು ರಾಷ್ಟ್ರಕೂಟ ಸಂಬಂಧ – ಶ್ರೀಮತಿ ಶೈಲಜಾ ಎಸ್. ಕರಡಿ

**16** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ : ಲಿಂಗ ಸಂಬಂಧಿ ವಿಶ್ಲೇಷಣೆ – ಭೀಮೇಶ

**22** ಕೊರಗರ ಕುಲಕಸುಬುಗಳು – ರಾಘವೇಂದ್ರ ಎಲ್.

**23** ಕಂಪಣ ಬಾಸವೂರಿನ ವೀರಗಲ್ಲುಗಳು – ಶಿವಯೋಗಿ ಕೋರಿಶೆಟ್ಟರ


### ಸಂಶೋಧನೆಗಳು (Research Articles)


**26** ಹಾವೇರಿ ನಗರದ ಗುತ್ತಿಗೆ ಪೌರಕಾರ್ಮಿಕರು : ಒಂದು ಅಧ್ಯಯನ – ಪ್ರಶಾಂತ ಹೆಚ್.ವೈ., ರಾಘವೇಂದ್ರ ಬಿ. ಶಿರೂರ

**31** ಹಾರೂಗೇರಿ ಗ್ರಾಮಪಂಚಾಯತ್ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆ : ಒಂದು ಸಮಾಜಶಾಸ್ತ್ರಿಯ ಅಧ್ಯಯನ – ಕೆ. ಎಸ್. ಕಾಂಬಳೆ, ಡಾ. ಡಿ. ಆರ್. ಪಾಟೀಲ

**36** ಚೆಂಚು ಬುಡಕಟ್ಟಿನ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ – ಡಾ. ಮಲ್ಲಿಕಾರ್ಜುನ ಬಿ. ಮಾನ್ವಡೆ

**43** ಭಾರತೀಯ ಮಹಿಳೆಯರ ಸಬಲೀಕರಣದ ಐತಿಹಾಸಿಕ ಬೆಳವಣಿಗೆ – ರಾಜಶೇಖರ ಮಾವಿನಮರದ


### ಶಿಕ್ಷಣ ತಜ್ಞರು (Educationists)


**50** ಡಾ. ಝಾಕೀರ ಹುಸೇನ – ಎನ್.ಎಂ. ಮುಲ್ಲಾ

## ಸಂಪಾದಕೀಯ

# ಶಿಕ್ಷಕ ರಾಷ್ಟ್ರ ರಕ್ಷಕ

''ಇಂದಿನ ಬಾಲಕರು ನಾಳಿನ ನಾಗರಿಕರು'' ಕಲಿಕೆಯ ಮಂದಿರಗಳಲ್ಲಿ ನಾಳಿನ ನಾಗರಿಕರಿಗೆ ತರಬೇತಿ ನೀಡಲಾಗುತ್ತದೆ. ಈ ನಾಗರಿಕರ ತರಬೇತಿಯ ಆಧಾರದ ಮೇಲೆ ರಾಷ್ಟ್ರದ ಭವಿತವ್ಯವು ನೆಲೆಯೂರಿರುತ್ತದೆ. ಶಿಕ್ಷಕನು ವಿದ್ಯಾರ್ಥಿಗಳಲ್ಲಿ ರಾಷ್ಟ್ರ ನಿರ್ಮಾಣದ ಜವಾಬ್ದಾರಿಯನ್ನು ಬೆಳೆಸುವನು. ಹುಮಾಯೂನ ಕಬೀರ್ ಹೇಳಿದಂತೆ, ಶಿಕ್ಷಕರು ಶಬ್ದಶಃ ದೇಶದ ಭವಿತವ್ಯದ ನಿಯಂತ್ರಕರು ಒಂದು ದೇಶದ ಗುಣಮಟ್ಟ ಮತ್ತು ಘನತೆ ಆ ದೇಶದ ಪ್ರಜೆಗಳ ರಾಜಕೀಯ ಜ್ಞಾನ ಮತ್ತು ದೇಶಭಕ್ತಿ ಮತ್ತು ವೈಚಾರಿಕತೆಯನ್ನು ಅವಲಂಬಿಸಿರುತ್ತದೆ. ಒಬ್ಬ ವೈದ್ಯನು ಒಬ್ಬ ರೋಗಿಯನ್ನು ಬದುಕಿಸಿದರೆ ಒಬ್ಬ ಇಂಜನೀಯರನು ಕೇವಲ ಒಂದು ಕಟ್ಟಡವನ್ನು ಸುಭದ್ರವಾಗಿ ಕಟ್ಟಿದರೆ ಕೇವಲ ಒಬ್ಬ ಶಿಕ್ಷಕ ಇಡೀ ರಾಷ್ಟ್ರವನ್ನೇ ಕಟ್ಟಬಲ್ಲನು.

ಹೆನ್ರಿ ಆಡಮ್ಸ್‌ರವರ ಪ್ರಕಾರ ಪಾಲಕನು ಜೀವಕೊಡಬಲ್ಲನೇ ಹೊರತು ಅವನು ಅದಕ್ಕಿಂತಲೂ ಹೆಚ್ಚು ಏನನ್ನೂ ಕೊಡಲಾರನು ಕೊಲೆಗಾರನು ಜೀವ ತೆಗೆದುಕೊಳ್ಳುತ್ತಾನೆ. ಆದರೆ ಅವನ ಕೆಲಸ ಅಲ್ಲಿಗೆ ಮುಗಿಯುತ್ತದೆ. ಆದರೆ ಶಿಕ್ಷಕನು ವಿದ್ಯಾರ್ಥಿಗಳ ಮೇಲೆ ನಿರಂತರ ಪ್ರಭಾವ ಬೀರುತ್ತಾನೆ ಅವನ ಪ್ರಭಾವವು ಯಾವಾಗ ನಿಲ್ಲುತ್ತದೆ ಎಂದು ಹೇಳಲಾಗದು.

ಶಿಕ್ಷಕನು ವಿದ್ಯಾರ್ಥಿಗಳ ಹವ್ಯಾಸಗಳು ಅಭಿರುಚಿಗಳು ನಡತೆಗಳು ಮತ್ತು ಅವೆಲ್ಲಕ್ಕಿಂತಲೂ ಮಿಗಿಲಾಗಿ ಚಾರಿತ್ರ್ಯ ಸಂವರ್ಧನೆಯಲ್ಲಿ ಮಹತ್ವದ ಪಾತ್ರವನ್ನಾಡುತ್ತಾನೆ. ಉತ್ತಮ ಶಿಕ್ಷಣವನ್ನು ಒದಗಿಸಲು ಇಟ್ಟಂಗಿ ಗಾರೆಗಳು ಬೇಕಾಗಿಲ್ಲ ಬೋಧನಾ ಸಾಧನ ಸಲಕರಣೆಗಳು ಮಹತ್ವದವುಗಳಾಗಿದ್ದರೂ ಸಹಿತ ಉತ್ತಮ ಶಿಕ್ಷಕರ ಅಗತ್ಯವಿದೆ.

ಶಿಕ್ಷಕನು ರಾಷ್ಟ್ರದ ಬೆನ್ನೆಲುಬುವಾಗಿರುವಂತೆ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವ ಸಾಧಕನಾಗಿದ್ದಾನೆ. ರಾಷ್ಟ್ರದ ಒಳಿತು ಶಿಕ್ಷಕರ ಒಳಿತನ ಮೇಲೆ ಅವಲಂಬಿತವಾಗಿದೆ. ಭಾರತದ ಭವಿತವ್ಯವು ಶಿಕ್ಷಕನಿಂದ ವರ್ಗಕೋಣೆಯಲ್ಲಿ ರೂಪಿತಗೊಳ್ಳುತ್ತದೆ. ಯಾವುದೇ ದೇಶದ ಗುಣಮಟ್ಟವು ಆ ದೇಶದ ಪ್ರಜೆಗಳ ಗುಣಮಟ್ಟವನ್ನು ಆಧರಿಸಿದೆ. ಆ ಪ್ರಜೆಗಳ ಗುಣಮಟ್ಟವು ಅವರು ಪಡೆಯುವ ಶಿಕ್ಷಣದ ಗುಣಮಟ್ಟವನ್ನು ಅವಲಂಬಿಸಿದೆ, ಪ್ರಜೆಗಳ ಶಿಕ್ಷಣದ ಗುಣಮಟ್ಟವು ಅವರ ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿದೆ. ಶಿಕ್ಷಕ ರಾಷ್ಟ್ರ ರಕ್ಷಕ ಅವನಿಗೊಂದು ಅನಂತ ನಮನಗಳು.

**- ಡಾ. ಎನ್.ಬಿ. ಕೊಂಗವಾಡ**
ಸಂಪಾದಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಅನ್ನ ಕಾದಂಬರಿಯಲ್ಲಿ ಹಸಿವಿನ ಆಯಾಮಗಳು

✍ **ಶಿವನಗೌಡ ಪಾಟೀಲ,** ಪಿಎಚ್.ಡಿ ಸಂಶೋಧನಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಹೊಸಪೇಟೆ ತಾ. ಬಳ್ಳಾರಿ

ಕನ್ನಡ ಸಾಹಿತ್ಯಕ್ಕೆ ರಂ. ಶ್ರೀ. ಮುಗಳಿ ಅವರ ಕೊಡುಗೆ ಅಪಾರವಾದುದಾಗಿದೆ. ಇವರು ಕನ್ನಡ ಸಾಹಿತ್ಯ ಚರಿತ್ರೆಯನ್ನು ನಿರ್ಮಿಸಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದವರಾಗಿದ್ದಾರೆ. ಇವರ ಈ ಕೃತಿಗೆ 1956ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಾಗಿನಿಂದ ರಂ. ಶ್ರೀ. ಮುಗಳಿ ಅವರ ಹೆಸರು ಸಾಹಿತ್ಯ ಲೋಕದಲ್ಲಿ ಸ್ಥಿರವಾಗಿ ಉಳಿಯಿತು. ಈ ಕೃತಿಯ ಪ್ರಖರ ಬೆಳಕಿಗೆ ಅವರ ಇತರ ಸಾಹಿತ್ಯವು ಎಲೆಮರೆಯ ಕಾಯಿಯಂತೆ ಉಳಿಯಿತೆಂದರೆ ತಪ್ಪಾಗಲಾರದು. ಕಾವ್ಯ, ಕತೆ, ಕಾದಂಬರಿ, ನಾಟಕ, ಜೀವನಚರಿತ್ರೆ, ವಿಮರ್ಶೆ, ಹಾಗೂ ಲಲಿತ ಪ್ರಬಂಧಗಳನ್ನು ರಚಿಸುವ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದಿದ್ದಾರೆ. ಮುಗಳಿ ಅವರ ಅನ್ನ ಕಾದಂಬರಿಯನ್ನು ಕುರಿತು ಮುಂದಿನ ಹಂತದಲ್ಲಿ ವಿಶ್ಲೇಷಣೆ ಹಾಗೂ ವಿಮರ್ಶೆ ಮಾಡಲಾಗಿದೆ. ಮುಗಳಿ ಅವರು ಒಟ್ಟು ನಾಲ್ಕು ಕಾದಂಬರಿಗಳನ್ನು ರಚಿಸಿದ್ದು ಬಾಳುರಿ (1934), ಕಾರಣಪುರುಷ (1938), ಅನ್ನ (1948) ಇವು ಸಾಮಾಜಿಕ ಕಾದಂಬರಿಗಳಾಗಿದ್ದು, ಅಗ್ನಿವರ್ಣ(1982) ಪೌರಾಣಿಕ ಕತೆಯನ್ನೊಳಗೊಂಡ ಕಾದಂಬರಿಯಾಗಿದೆ. ಮುಗಳಿ ಅವರ ನಾಲ್ಕು ಕಾದಂಬರಿಗಳಲ್ಲಿ 'ಅನ್ನ' ಕಾದಂಬರಿಯು ಅದು ಹೆಚ್ಚು ಮನ್ನಣೆಯನ್ನು ಗಳಿಸಿದ ಕಾದಂಬರಿಯಾಗಿದೆ. ಅದು ಬರಗಾಲದ ಅನುಭವವನ್ನು ವಸ್ತುವಾಗಿ ಹೊಂದಿರುವ ಕನ್ನಡದ ಅಪರೂಪ ಕಾದಂಬರಿಗಳಲ್ಲಿ ಒಂದಾಗಿದೆ. ವ್ಯಕ್ತಿ, ಸಮಾಜ ಮತ್ತು ಜೀವನದ ಸ್ಥೂಲ ಹಿನ್ನೆಲೆಯಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವ ಪ್ರಯತ್ನ ಈ ಕಾದಂಬರಿಯಲ್ಲಿ ನಡೆದಿದೆ. ಆದರ್ಶವಾದದ ಹಿನ್ನೆಲೆಯಲ್ಲಿ ರಚನೆಗೊಂಡ ಕಾದಂಬರಿ ಇದಾಗಿದ್ದು, ಯಾವುದೇ ವಿಷಯದಲ್ಲಿ ಅತಿರೇಕಕ್ಕೆ ಹೋಗಲು ಸಿದ್ಧವಿಲ್ಲದ ಮುಗಳಿ ಅವರ ಮನೋಧರ್ಮವು ಪ್ರಸ್ತುತ ಕಾದಂಬರಿಯಲ್ಲಿ ಒಡಮೂಡಿದೆ. ಮುಗಳಿ ಅವರ ನಿರೂಪಣೆ ಶೈಲಿಯು ಉತ್ತರ ಕರ್ನಾಟಕದ ದೇಸಿ ಭಾಷೆಯನ್ನು ಒಳಗೊಂಡಂತಿದೆ.

ಕಾದಂಬರಿಯು ಅಮೃತ ಎಂಬ ವಿದ್ಯಾರ್ಥಿಯ ಜೀವನ ವೃತ್ತಾಂತದಿಂದ ಪ್ರಾರಂಭಗೊಳ್ಳುತ್ತದೆ. ಅವನು ಗ್ರ್ಯಾಂಟ್ ಮೆಡಿಕಲ್ ಕಾಲೇಜಿನ ಅಂತಿಮ ವರ್ಷದ ಎಂ.ಬಿ.ಬಿ.ಎಸ್ ಓದುತ್ತಿರುವ ವಿದ್ಯಾರ್ಥಿ. ತಂದೆ ತಾಯಿಗಳಾದ ಶಂಭುರಾಯರು ಮತ್ತು ಪಾರ್ವತಿಬಾಯಿಯವರು ಮಗನ ಓದಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುತ್ತಾರೆ. ಮಗನಾದ ಅಮೃತನು ಮುಂದೊಂದು ದಿನ ಆರ್ಥಿಕವಾಗಿ ಸದೃಢಗೊಂಡು ನಮ್ಮನ್ನು ಸಾಕಿ-ಸಲಹುನೆಂಬ ಆಶಾಭಾವನೆಯೇ ಅವರ ಹಸಿವಿನ ಇನ್ನೊಂದು ನೋಟವಾಗಿರುತ್ತದೆ. ಆದರೆ ಅಮೃತನು ಪಶ್ಚಿಮ ಬಂಗಾಳದ ನೆರೆಹಾವಳಿ ಕುರಿತಂತೆ ಪತ್ರಿಕೆಯಲ್ಲಿ ಪ್ರಕಟವಾದ ವರದಿ ಮತ್ತು ಲೋಕಸೇವಾನಂದರ ಉಪನ್ಯಾಸಗಳಿಗೆ ಪ್ರಭಾವಿತನಾಗಿ ದೇಶ ಸೇವೆಯಲ್ಲಿ ಸದಾಕಾಲ ದುಡಿಯಬೇಕೆಂಬ ಹಂಬಲ ಅವನನ್ನು ಕಾಡುತ್ತಿರುತ್ತದೆ. ಈ ಪ್ರಭಾವವೇ ಅವನಲ್ಲಿ ಮುಂದೆ ತನ್ನ ಓದನ್ನು ಮೊಟಕುಗೊಳಿಸಿ ದೇಶಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ. ಪಾತ್ರ ದೃಷ್ಟಿಯಿಂದ ಇದನ್ನು ಗಮನಿಸುವುದಾದರೆ ಕಾದಂಬರಿಯು ಓದುಗರಿಗೆ ಅಮೃತನು ಹೊರಟ ದಾರಿಯು ಸರಿಯೇ....? ಎಂಬ ಪ್ರಶ್ನೆಯನ್ನು ಮನದಾಳದಲ್ಲಿ ಮೂಡಿಸುತ್ತದೆ. ಇದೇ ಮಾದರಿಯ ಪಾತ್ರಚಿತ್ರಣವನ್ನು ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ' ಕಾದಂಬರಿಯಲ್ಲಿ ಬರುವ ನಾಣಿಯ ಪಾತ್ರವು ಈ ಮಾದರಿಯನ್ನೇ ಹೋಲುವಂತಿದೆ.

ಮುಗಳಿ ಅವರು ಅನ್ನ ಕಾದಂಬರಿಯ ಶೀರ್ಷಿಕೆಯನ್ನು ಅನ್ವರ್ಥಗೊಳಿಸುವಂತೆ ಅದರಲ್ಲಿ ಅನ್ನದ ಹಸಿವಿನ ಚಿತ್ರಣವನ್ನು ವ್ಯಾಪಕವಾದ ರೀತಿಯಲ್ಲಿ ಚಿತ್ರಿಸಿರುವುದನ್ನು ಗಮನಿಸಬಹುದಾಗಿದೆ. ತಂದೆ ತಾಯಿಗಳಾದ ಶಂಭುರಾಯರು ಪಾರ್ವತಿಬಾಯಿಯರು ಮಗನಾದ ಅಮೃತನು ಬಂದು ನಮ್ಮ ಕಷ್ಟಗಳಿಗೆ ಭಾಗಿಯಾಗಿ ನಮ್ಮನ್ನು ನೋಡಿಕೊಳ್ಳುತ್ತಾನೆಂದು ಒಂದು ಕಡೆಯ ಹಸಿವಾದರೆ, ಮತ್ತೊಂದು ಕಡೆ ತಂಗಿಯಾದ ಸುಂದರಾಳ ಮುಂದಿನ ಹೊಸಬದುಕಿಗೆ ಕಾಲಿಡುವ ಮನದಾಳದ ಹಸಿವು ಈ ರೀತಿ ಕಂಡರೆ, ಪ್ರಾಯಕ್ಕೆ ಬಂದ ವೀಣಾಳ ಅಮೃತ ಪ್ರೇಮದ ಮತ್ತೊಂದು ಹಸಿವಾಗಿ, ಅದೆ ರೀತಿ ಪಶ್ಚಿಮ ಬಂಗಾಳದ ವಿದೇಶಿ ಸೈನಿಕರ ಕೆಟ್ಟ ಕಾಮದ ಹಸಿವಾಗಿ ಈ ಕಾದಂಬರಿಯಲ್ಲಿ ಕಂಡುಬರುತ್ತದೆ. ಅಲ್ಲಿಯು ಸಹ ಮೋಸ, ವಂಚನೆ, ಮಾನಸಿಕ, ದೈಹಿಕ, ಲೈಂಗಿಕ ದೌರ್ಜನ್ಯ, ಲಂಚಗುಳಿತನ ಇನ್ನೊಂದು ಆಯಾಮದಲ್ಲಿ ನಡೆಯುವ ಶೋಷಣೆಗಳನ್ನು ಸಹ ಹಸಿವಿನ ಇನ್ನೊಂದು ಕೆಟ್ಟ ಮುಖವಾಗಿದೆ ಎನ್ನಬಹುದು.

ಮುಗಳಿ ಅವರು ಕಾದಂಬರಿಯಲ್ಲಿ ಅಂದಿನ ಕಾಲದಲ್ಲಿನ ಬರಪರಸ್ಥಿತಿಯನ್ನು ವಿವಿಧ ಸಂದರ್ಭಗಳಲ್ಲಿ ಕಟ್ಟಿಕೊಡುತ್ತಿದ್ದಾರೆ. ಬರದ ಪರಿಸ್ಥಿಯು ಜನರನ್ನು ಹೇಗೆ ಕಂಗೆಡೆಸಿತ್ತೆಂದರೆ ತಮ್ಮ ಪ್ರದೇಶವನ್ನು ಬಿಟ್ಟು ಮತ್ತೊಂದು ಪ್ರದೇಶಕ್ಕೆ ಗುಳೆ ಹೋಗುವಂತಹ ಸ್ಥಿತಿಯನ್ನು ತಂದೊಡಿತ್ತು. ಗುಳೆ ಹೋದ ಕಡೆಗಳಲ್ಲೂ ಸರಿಯಾಗಿ ಕೆಲಸ ಸಿಗದೇ ರೈಲ್ವೆಸ್ಟೇಷನ್ನಿನಲ್ಲಿಯೇ ಟಿಕೇಟ್ ಇಲದೇ ಪಯಣಿಸುತ್ತಿರುವುದನ್ನು ಗಮನಿಸಿದ ಟಿಕೇಟ್ ಮಾಸ್ತರನು ಆ ಗೂಳೆಕಾರರನ್ನು ತರಾಟೆಗೆ ತಗೆದುಕೊಳ್ಳುತ್ತಾನೆ. ಕೈಯಲ್ಲಿ ಕಾಸು ಇಲದೇ ಹಸಿವೆಯಿಂದ ಊರಿಗೆ ಹೋಗುತ್ತಿರುವುದಾಗಿ ತಿಳಿಸುತ್ತಾರೆ ಮತ್ತು ನಮ್ಮ ಊರಿನ ಮನೆಗಳಲ್ಲಿ ತಿನ್ನಲು ಏನೂ ಇಲ್ಲದ ಪರಿಸ್ಥಿತಿ ಇರುವುದರಿಂದ ಅಲ್ಲಿ ಸ್ಥಾಪಿಸಿರುವ ಸರಕಾರದವರ ಅನ್ನಛತ್ರಕ್ಕೆ ಹೊರಟಿರುವುದಾಗಿ ತಿಳಿಸುತ್ತಾರೆ. ಮುಗಳಿ ಅವರು ಬರಗಾಲದಲ್ಲಿ ಗಂಜಿ ಕೇಂದ್ರ/ಅನ್ನಛತ್ರಗಳು ಸರ್ವೇ ಸಾಮಾನ್ಯ ರೀತಿಯಲ್ಲಿ ಕಂಡುಬರುವ ರೀತಿಯಲ್ಲಿ ಒಡಮೂಡಿದೆ. ಅಂದಿನ ಕಾಲದ ಬರಗಾಲದ ಭೀಕರತೆಯನ್ನು ಬಿಂಬಿಸುವ ಮುದುಕಿಯ ಮಾತು ಈ ರೀತಿ ಬಿತ್ತರಿಸಿದ್ದಾರೆ. "ಬ್ಯಾಡೋ ಎಪ್ಪಾ ಇಂತಾ ಬರಗಾಲ ಎಂದೆಂದೂ ಬರದ ಬ್ಯಾಡೋ ನಮ್ಮಪ್ಪ ಎಂಟುಮಂದಿಗೆ ಕುಸುಕುನ್ನಿಗೆ ದಿನಾಹೊಟ್ಟಿಗೆ ಹಾಕತೀದಿ ನಿನ್ನ ಹೊಟ್ಟಿ ತಣ್ಣಗಾಗಲಿ" ಎನ್ನುವಂತೆ ಹಾಗೆ ಮುಂದುವರೆದು "ಮನೆಯೊಳಗಿನ ಕಾಳುತೀರಿದವು ಎಲ್ಲ ವಸ್ತ್ರ, ಒಡವೆ, ಪಾತ್ರೆ, ದನ-ಕರ ಮಾರಿ ಒಂದೆರಡು ತಿಂಗಳು ಬದುಕಿದರು. ಎಲ್ಲಾ ಮುಗಿದು ಹೋಯಿತು ಊರು ಬಿಟ್ಟು ಮಕ್ಕಳನ್ನು ಕಟ್ಟಿಗೊಂಡು ಹೊರಟರು. ಎಲ್ಲಿಗೆ, ಯಾತಕ್ಕೆ ಎಂಬುದು ಗೊತ್ತಿಲ್ಲ. ದಾರಿಯಲ್ಲಿ ತಿರಕ್‌ಸಾಲಿ, ಹೊನ್ನಿಕುಕ್ಕಿ, ಗೊರಜಿಕೊಪ್ಪಲ ಸಿಕ್ಕಿದ್ದು ತಿಂದರು. ಜೋಳ, ಸಜ್ಜೆ ಸಿಗದಾದ ಕಾರಣ ಅನೇಕ ಜನರ ಆಹಾರ ಈ ಬಗೆಯ ತೊಪ್ಪಲವೆ ಆಗಿತ್ತು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆದರೂ ಹಾಗೆ ಮಾಡಿ ಕೆಲವು ದಿನ ನೂಕಿದರು" ಎಂಬುದನ್ನು ಅಂದಿನ ಕಾಲಘಟ್ಟದ ಬರದ ಭೀಕರತೆಯನ್ನು ವಿವಿಧ ಮಗ್ಗುಲುಗಳ ಮೂಲಕ ಅನಾವರಣಗೊಳಿಸಿದಂತಿದೆ.

ಈ ಕಾದಂಬರಿಯಲ್ಲಿ ಮುಗಳಿ ಅವರ ಕವಿ ಹೃದಯ ಭಾವನೆಗಳ ಹೇರಳವಾದ ನಿದರ್ಶನಗಳನ್ನು ನಾವು ಮನಗಾಣಬಹುದಾಗಿದೆ. ಅನ್ನದ ಕೇಂದ್ರವಾಗಿರುವ ಹಸಿವಿನ ಪ್ರಪಂಚದೊಳಗೂ ಅವರು ರಮ್ಯಯುತವಾದ ಅಮೃತ–ವೀಣಾಳ ಪ್ರೀತಿ ಸಂಕೋಲೆಯನ್ನು ಬೆಸೆಯುವ ಅವರ ಶೈಲಿ ಇದನ್ನು ಸ್ಪಷ್ಟಪಡಿಸುತ್ತದೆ. ಅಂತಹ ಒಂದು ಸಂದರ್ಭ ತಿಳಿಯುವುದಾದರೆ "ಅವೆರಡೂ ಹೃದಯಗಳು ಕ್ರಮೇಣ ಹತ್ತಿರ ಹತ್ತಿರವಾದವು ಒಳಗೆ ಹುದುಗಿದ ರತಿ ಮೇಲು ನೆಲೆಗೆ ಬಾರದಿದ್ದರೂ ತನ್ನ ವಕ್ರವಿಲಾಸವನ್ನು ಅದು ತೋರದಿರಲಿಲ್ಲ. ಅಮೃತನಿಗೆ ಇದರ ಅರಿವು ಹೆಚ್ಚಾಗಿ ತಲೆದೋರಿತು. ವೀಣಾಳ ಬಗೆಗೆ ತನ್ನ ಸ್ನೇಹದ ಮರುಕ ಎಷ್ಟು ನಿರ್ಮಲವಾದರೂ ಅದು ಬೇರೆ ಕೋರಿಕೆಯಲ್ಲಿ ಅರಳುವ ಲಕ್ಷಣವಿರುವುದೆಂದರಿತನು... ವೀಣೆಯ ತಂತಿ ಮಿಡಿದಾಗ ಆಗಾಗ ಆಗುವ ಸಹ ಕಂಪನವನ್ನು ಯಾರು ತಡೆಯಬಲ್ಲರು?" "ಕ್ಷಣ ಕ್ಷಣಕ್ಕೆ ಅಗಲುತ್ತಿದ್ದ ಹೃದಯಗಳು ಹೆಚ್ಚು ಹೆಚ್ಚು ಬೆರೆಯುತ್ತಿದ್ದವು" ಇಂತಹ ಪ್ರೀತಿಯುತ ಸಂವೇದನೆಯ ಹಸಿವು ಕಾದಂಬರಿಯ ಸಂದರ್ಭಕ್ಕೆ ಅನುಗುಣವಾಗಿ ಕಂಡುಬರುತ್ತದೆ.

ಮುಂದುವರೆದು ಹೇಳುವುದಾದರೆ ಪಶ್ಚಿಮ ಬಂಗಾಳದಿಂದ ಊರಿಗೆ ಮರಳುವ ಅಮೃತನು ಎದುರಿಸಬೇಕಾಗಿ ಬಂದುದು ಅವನ ಸ್ವಂತ ಮನೆಯ ಪರಿಸ್ಥಿತಿಯನ್ನು ಅದು ದಿನನಿತ್ಯದ ಜೀವನಕ್ಕೆ ಹೊಂದಿಕೊಂಡು ಕಷ್ಟದಲ್ಲಿಯೇ ಸಾಗುತ್ತಿರುವಾಗ ಮತ್ತೆ ಅಮೃತನು ದೇಶ ಸೇವೆಗೆಂದು ಸನ್ನದ್ಧನಾಗುವಂತೆ ಮಾಡುವುದು. ಹಿರಿಯ ವ್ಯಕ್ತಿ ಜನಾರ್ಧನರಾಯರಿಂದ ಎಂಬುದು ತಿಳಿದುಬರುತ್ತದೆ. ಅದೇ ರೀತಿಯಾಗಿ ಡಾ. ದಾತಾರಂತಹ ಉದಾರ ವ್ಯಕ್ತಿತ್ವ ಉಳ್ಳವರು ಹಲವಾರು ಜನರೊಂದಿಗೆ ಸಂಘಟನೆ, ಪ್ರೇರಣೆ, ಪ್ರೋತ್ಸಾಹ, ಸಾಂತ್ವನ, ವಿಮೋಚನೆ ಮುಂತಾದ ನಾನಾ ಕಾರ್ಯಗಳಲ್ಲಿ ದುಡಿಯಲೆಂದೇ ಪ್ರೇರಕ ಶಕ್ತಿಯಾಗಿ ಪ್ರಬೋಧಾನಂದ, ಡಾ. ದಾತಾರಂತ ಪಾತ್ರಗಳು ಮುಖ್ಯವಾಗಿವೆ. ದೇಶಸೇವೆ ಮಾಡಬೇಕೆಂದು ಸದಾ ಚಡಪಡಿಸುವ ಅಮೃತನನ್ನು ಹತ್ತಿರದಿಂದ ಬಲ್ಲವರಾದ ದಾತಾರರು ಜನರ ಸೇವೆಗಾಗಿ ಮನೆ–ಮಠಗಳನ್ನು ಬಿಟ್ಟು ಅಲೆಯಬೇಕಾಗಿಲ್ಲ. ತನ್ನ ಸುತ್ತಮುತ್ತಲಿರುವ ಬಡವರಿಗೆ ಕೈಲಾದ ಸಹಾಯ ಮಾಡಿದರೆ ಸಾಕು. ಅದೇ ನಿಜವಾದ ದೇಶಸೇವೆ ಎಂದು ಅಮೃತನಿಗೆ ಸ್ಪಷ್ಟಪಡಿಸುತ್ತಾರೆ. ಆದರೆ ಅವನು ಆ ವಿಷಯಕ್ಕೆಲ್ಲ ಕಿವಿಗೊಡದೆ ಸಮಾಜಮುಖಿಯಾದ ಚಟುವಟಿಕೆಗಳಲ್ಲಿ ಹೆಚ್ಚು–ಹೆಚ್ಚು ತೊಡಗಿ ಕೊಂಡವನಾಗಿ ಸಮಾಜದ ವಿವಿಧ ಮುಖಗಳನ್ನು ಅರಿತವನಾಗಿ ಬಡವರ ಹೃದಯ ಶ್ರೀಮಂತಿಕೆ ಒಂದೊಂದು ಒಡಲಿನ ಆಳದಲ್ಲೂ ಇರುವ ಉರಿ ಹಸಿವಿನ ತಲ್ಲಣ ಸಂವಾದಕ್ಕಾಗಿ ಹಪಹಪಿಸುವ ಮನೋಭಾವಗಳನ್ನು ಕುರಿತಂತೆ ಚಿತ್ರಿಸುತ್ತಾರೆ.

ಅಮೃತನ ವೈಯಕ್ತಿಕ ಬದುಕಿನಲ್ಲಿ ಹಣದ ಆಮಿಷಕ್ಕೆ ಒಲ್ಲದ ಹೆಂಡತಿಯನ್ನು ಮದುವೆಯಾಗುವಂತದ್ದು ಕಿರುಸನ್ನಿವೇಶವಾದರೂ, ಆದರೆ ಹಾಗೆ ದೊರೆತ ಹಣದಿಂದ ಬಹುಕಾಲ ಮುಂದೂಡಲ್ಪಟ್ಟ ತಂಗಿ ಸುಂದರಾಳ ಮದುವೆ ಮಾಡಿಸಿ ಆ ಮೂಲಕ ಕೌಟುಂಬಿಕ ಜೀವನದಲ್ಲಿ ತನ್ನ ವರ್ಚಸ್ಸು ಹೆಚ್ಚುವಂತೆ ಮಾಡಿಕೊಂಡದ್ದು ಇದರ ಇನ್ನೊಂದು ಮುಖವನ್ನು ಸೂಚಿಸುತ್ತದೆ. ಇಷ್ಟು ಮಾತ್ರವಲ್ಲದೇ ವೀಣಾಳೊಂದಿಗೆ ಅವನು ಬೆಳಸಿಕೊಂಡ ಪ್ರೀತಿಯು ಬಹುಪಾಲು ಗುಪ್ತವಾಗಿಯೇ ನಡೆದಿದ್ದ ಭಾವನಾತ್ಮಕ ಸಂಬಂದಗಳೂ ಬೇರೆಯ ನೆಲೆಯನ್ನು ಕಂಡುಕೊಳ್ಳುತ್ತವೆ.

ಅಮೃತನು ಮತ್ತೆ ಮೊಟಕುಗೊಂಡ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುವುದಾಗಿ ಮುಂಬುಗೆ ತೆರಳಿದಾಗಲೂ ತನ್ನ ವೈದ್ಯಕೀಯ ಶಿಕ್ಷಣವನ್ನು ಮುಂದುವರೆಸದೇ ಮತ್ತೆ ಬಂಗಾಳಕ್ಕೆ ತೆರಳುತ್ತಾನೆ. ಅಲ್ಲಿಯೇ ಇದ್ದು ರೋಗಿಗಳ ಆರೈಕೆಯಲ್ಲಿ ಮಗ್ನವಾಗಿದ್ದ ವೇಳೆಯಲ್ಲಿ ಅವನಿಗೆ ಸಾಂಕ್ರಾಮಿಕ ಮಲೇರಿಯಾ ರೋಗವು ಅಂಟಿಕೊಳ್ಳುತ್ತದೆ. ತನ್ನ ಆರೋಗ್ಯವನ್ನು ನಿರ್ಲಕ್ಷಿಸಿ ಇತರರನ್ನು ಉಪಚರಿಸುತ್ತಿರುವಾಗಲೇ ಹಂತ ಹಂತವಾಗಿ ಕುಸಿಯುತ್ತಿದ್ದ ಅವನ ಆರೋಗ್ಯವು ಕ್ಷೀಣಗೊಂಡು ಸಾವಿನೊಡನೆ ಅಂತ್ಯಗೊಳ್ಳುವ ಮೂಲಕ ಕಾದಂಬರಿ ಮುಕ್ತಾಯ ಗೊಳ್ಳುತ್ತದೆ. ಈ ಹಂತದವರೆಗೂ ಅಮೃತನ ಪಾತ್ರವು ಕಾದಂಬರಿಯೊಳಗಡೆ ಆದರ್ಶವಾದದ ಹಿನ್ನೆಲೆಯಲ್ಲಿ ಮಿಂದೆದ್ದ ಪಾತ್ರವಾಗಿದೆ. ಆ ಕಾಲದ ಸಾಮಾನ್ಯ ಲಕ್ಷಣಗಳಲ್ಲೊಂದಾದ ಹುತಾತ್ಮತೆಯನ್ನು ಈ ಪಾತ್ರದೊಂದಿಗೆ ಸಮಿಕರಿಸಿದ್ದಾರೆ. ಅದೇ ರೀತಿಯಾಗಿ ಎಚ್.ಎಸ್.ರಾಘವೇಂದ್ರರಾವ್ ಅವರು ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ ಕತೆಗಳು ಸಂಪಾದಿತ ಕೃತಿಯ ಮುನ್ನುಡಿ ಭಾಗದಲ್ಲಿ ತಿಳಿಸಿರುವ ಹಾಗೆ ಗಮನಿಸುವುದಾದರೆ "ಅನ್ನ" ಕಾದಂಬರಿಯಲ್ಲಿ ಬರುವ ಬಹುತೇಕ ಪಾತ್ರಗಳು ನಾಯಕತ್ವ ಗುಣವನ್ನು ನೀಡುವುದಕ್ಕಿಂತ ಹೆಚ್ಚಾಗಿ ನಿಷ್ಠೆಯಿಂದ ದುಡಿದು ಬಲಿದಾನವಾಗುವ ಪಾತ್ರಗಳೇ ಇಲ್ಲಿ ಜಾಸ್ತಿ, ಆದರೆ ನಿರಾಶಾವಾದವು ಮುಗಳಿಯವರಿಗೆ ಇಷ್ಟವಾಗುವ ಗುಣವಲ್ಲ. ಎಂತಹ ದುರಂತದ ಒಡಲಿನಲ್ಲಿಯೂ ಮನುಷ್ಯಚೇತನದಲ್ಲಿ ಅವರಿಗೆ ಇರುವ ನಂಬಿಕೆಯು ಕುಗ್ಗುವುದಿಲ್ಲ. ವಂಚಕರು, ದುಷ್ಟರು, ಅಹಂಕಾರಿಗಳು ಇರಬಹುದು. ಅಂತವರನ್ನು ಮುಗಳಿ ಅವರು ಚಿತ್ರಿಸುತ್ತಾರೆ ಆದರೆ ಆ ವಾಸ್ತವ ಪ್ರಜ್ಞೆಯು ಅವರ ಆದರ್ಶಪರತೆ ಮತ್ತು ಜೀವನ ವಿವೇಕಗಳಿಗೆ ಧಕ್ಕೆ ತರುವುದಿಲ್ಲವೆಂದಿದ್ದಾರೆ.

ತಾಳ್ತಜೆ ವಸಂತ ಕುಮಾರ ಅವರು ತಮ್ಮ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ. ಮುಗಳಿ ಕೃತಿಯಲ್ಲಿ ತಿಳಿಸುವಂತೆ ವಸ್ತುವಿನ ದೃಷ್ಟಿಯಿಂದ ಅನ್ನ ಕಾದಂಬರಿಯಲ್ಲಿ ಅಂತಹ ಹೊಸತನವಿಲ್ಲ. ಉಳಿದೆರಡು ಕಾದಂಬರಿಗಳಿಗೆ ಹೋಲಿಸಿದರೆ ನಿರೂಪಣೆಯಲ್ಲಿ ಸ್ವಲ್ಪ ಮಟ್ಟಿನ ಬಿಗಿ ಇದರಲ್ಲಿ ಕಂಡುಬರುತ್ತದೆ. ಅತಿಯಾದ ವಿವರಣೆಗಳನ್ನು ಕೈಬಿಟ್ಟಿದ್ದರೆ ಇದು ಇನ್ನಷ್ಟು ಸಮರ್ಥಕವಾಗಬಹುದಾಗಿತ್ತು. ತೀವ್ರವಾದ ಆವೇಶ, ಆಕ್ರೋಶಗಳು ಒಂದು ಬಗೆಯ ಹಿಡಿತಕ್ಕೆ ಒಳಪಟ್ಟು ಮುಗಳಿಯವರಿಂದಲೂ ಸಂಯಮದ ನಿರ್ವಹಣೆಯನ್ನು ಸೂಚನೆ ಕೊಡುತ್ತದೆ. ಮುಗಳಿಯವರು ಬರೆದ ಮೂರು ಸಾಮಾಜಿಕ ಕಾದಂಬರಿಗಳಲ್ಲಿ ಇದು ಮೇಲ್ಮಟ್ಟದ್ದಾಗಿದೆ. ಆದರೆ ಸಂಸಾರವೆನ್ನುವುದು ದೇಶಸೇವಾಸಕ್ತಿಗೆ ಕಾಲ್ತೊಡಕೇ ಎನ್ನುವ ಸಾಂಪ್ರದಾಯಿಕ ದೃಷ್ಟಿಕೋನದಿಂದ ನಿಯಂತ್ರಿತವಾಗಿದೆ. ಒಟ್ಟಿನಲ್ಲಿ ನವೋದಯ ಸತ್ವದ ಮಧ್ಯಮ ತರಗತಿಯ ಕಾದಂಬರಿಯಾಗಿ ಇದನ್ನು ಪರಿಗಣಿಸಬಹುದೆಂದು ಅಭಿಪ್ರಾಯಕ್ಕೆ ಬರುತ್ತಾರೆ ಈ ಹೇಳಿಕೆಗಳನ್ನು ಒಪ್ಪಬಹುದಾಗಿದೆ.

## ಆಕರ ಗ್ರಂಥಗಳು


- **ಎಚ್. ಎಸ್. ರಾಘವೇಂದ್ರ ರಾವ್ :** 2013 ರಂ.ಶ್ರೀ ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ ಕತೆಗಳು., ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಪುಟ ಭಾಗ 1–2).
- **ತಾಳ್ತಜೆ ವಸಂತಕುಮಾರ :** 2011 ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ. ಶ್ರೀ. ಮುಗಳಿ,


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬಸವಣ್ಣನವರ ಸಮಾಜ ರಚನೆ

✍ **ಡಾ. ಅಮೃತೇಶ್ವರ ಬಿ. ಜಿ.** ಕನ್ನಡ ಸಹಾಯಕ ಪ್ರಾಧ್ಯಾಪಕರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ.

ಕನ್ನಡನಾಡಿನಲ್ಲಿ ವೀರಶೈವಮತ ತಲೆಯೆತ್ತಿದಾಗ ಸಮಾಜ ವ್ಯವಸ್ಥೆಯಲ್ಲಿ ಒಂದು ದೊಡ್ಡ ಕ್ರಾಂತಿಯೇ ಉಂಟಾಯಿತು. ಈ ಕ್ರಾಂತಿಗೆ ನಾಯಕರಾಗಿ ನಿಂತವರು ಕಲ್ಯಾಣದ ಬಸವಣ್ಣನವರು. ಅವರು ನಂದೀಶ್ವರಾವತಾರವೆಂದು ಪುರಾಣಗಳಲ್ಲಿ ಪ್ರಸಿದ್ಧರಾಗಿದ್ದಾರೆ. ನಮ್ಮ ಭರತಖಂಡದಲ್ಲಿ ಕ್ರಾಂತಿಗಳನ್ನುಂಟುಮಾಡತಕ್ಕವರು ಬಹುಮಟ್ಟಿಗೆ ಆಸ್ತಿಕರು, ದೈವಭಕ್ತರು, ಒಳ ಬೆಳಕನ್ನು ಕಂಡವರು. ಅವರ ಹೋರಾಟ ಮೊದಲಿನಲ್ಲಿ ತಮ್ಮ ಆತ್ಮದೊಂದಿಗೆ, ಪರಮಾತ್ಮನೊಂದಿಗೆ; ಬಳಿಕ ಪೂರ್ವ ಸಂಪ್ರದಾಯದವರೊಂದಿಗೆ; ಅನಂತರ ತಮ್ಮ ಅನುಯಾಯಿಗಳೊಂದಿಗೆ ನಡೆಯುತ್ತದೆ. ಬಸವಣ್ಣನವರ ವಿಚಾರದಲ್ಲೂ ಹಾಗೆಯೇ. ಅವರು ಈಗಿನ ಬಾಗಲಕೋಟೆ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಿಗೆ ಮಗನಾಗಿ ಹುಟ್ಟಿದರು. ಬಹುಶಃ ಮನೆತನದ ಸಂಪ್ರದಾಯದಂತೆ ಉಪನಯನವೂ ಆಯಿತು. ಆದರೆ ಕಾರಣ ಪುರುಷರಾದ ಆ ಮಹಾತ್ಮರು 'ಶಿವಭಕ್ತಿಯುಂ ಕರ್ಮಮುಂ ಎಂದೂಮೊಂದಾಗಿರದು–ಎಂದೊಲ್ಲದೆ ಪರಮವೈರಾಗ್ಯಯುಕ್ತಂ ಶಿವಲಿಂಗಾರ್ಚನಾಯುತ್ತ ಚಿತ್ತಂ ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು ನವ್ಯದುಕೂಲಮಂ ತೆಗೆದುಟ್ಟು ದಿವ್ಯ ವಸ್ತ್ರಮಂ ಪೊದೆದು ಮನೆ ನೆಳಲಂ ನೆನೆಯದೆ ಅರ್ಥಮಂ ಲೆಕ್ಕಿಸದೆ ವೃತ್ತಿಯಂ ವಿಚಾರಿಸದೆ ಹರಭಕ್ತಿಯೊಳಾತುರದಿಂ ಬಾಗೆವಾಡಿಯುಂ ಪೊರಮಟ್ಟು' ಕೂಡಲಸಂಗಮ ಕ್ಷೇತ್ರವನ್ನು ಸೇರಿದರು. ಈ ಸಂಗಮ ಕ್ಷೇತ್ರ ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಾನದಲ್ಲಿದೆ.

ಬಹುಕಾಲದಿಂದ ಬಂದ ಒಂದು ಮತವನ್ನು ತಿರಸ್ಕರಿಸಿ, ಬಂಧು ಬಳಗಗಳನ್ನು ನಿರಾಕರಿಸಿ ಅತ್ಮಸಾಕ್ಷಿಗನುಸಾರವಾಗಿ ಆ ಮಹಾತ್ಮರು ನಡೆದರು. ಇದಕ್ಕಾಗಿ ಎಷ್ಟು ವರ್ಷಗಳ ಕಾಲ ಒಳಗೊಳಗೇ ಬೇಗುದಿಗೊಂಡರೋ ಅಂತೂ ಜನಿವಾರವನ್ನು ತೆಗೆದುಹಾಕಿ ಹೊರಟುಬಿಟ್ಟರು. ಅಂಥವರನ್ನು ನಾಸ್ತಿಕರೆಂದೋ ಪಾಷಂಡಿಗಳೊಂದೋ ಲೋಕ ಜರೆಯಬಹುದು. ಆದರೆ

**ಅಯ್ಯಾ ಅಯ್ಯಾ ಎಂದು ಕರೆಯುತ್ತಲಿದ್ದೇನೆ**
**ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ**
**ಓ ಎನ್ನಲಾಗದೆ ಅಯ್ಯಾ ?**
**ಆವಾಗಲೂ ನಿಮ್ಮ ಕರೆವುತ್ತಲಿದ್ದೇನೆ**
**ಓ ಎನ್ನದೆ ಮೌನವೇ ಕೂಡಲಸಂಗಮದೇವಾ.**

ಎಂದು ಅಂಗಲಾಚುವ ಮನುಷ್ಯರನ್ನು ಪಾಷಂಡಿಯೆಂದು ಜರೆಯುವುದು ಹೇಗೆ ? ವಿಚಾರಪರರಾದ ಆ ಮಹಾತ್ಮರು,

**ಶಾಸ್ತ್ರಘನವೆಂಬೆನೆ ? ಕರ್ಮವ ಭಜಿಸುತ್ತಿದೆ**
**ವೇದ ಘನವೆಂಬೆನೆ ? ಪ್ರಾಣಿವಧೆಯ ಹೇಳುತ್ತಿದೆ**
**ಸ್ಮೃತಿ ಘನವೆಂಬೆನೆ ? ಮುಂದಿಟ್ಟು ಅರಿಸುತ್ತಿದೆ**
**ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು**
**– ಕೂಡಲಸಂಗಮದೇವ**

ಎಂಬುದಾಗಿ ಪೂರ್ವಮತಗಳ ವಿಷಯದಲ್ಲಿ ತಮ್ಮ ಅಸಂತುಷ್ಟಿಯನ್ನು ತೋರಿಸಿದರೆ ಅವರನ್ನು ಜರೆಯುವುದು ಹೇಗೆ ? ವಿಚಾರಸ್ವಾತಂತ್ರ್ಯವನ್ನು ಅವರು ಪಡೆದಿಲ್ಲವೆ ? ಮನುಷ್ಯನಿಗಿರುವ ಹಕ್ಕುಗಳಲ್ಲಿ ವಿಚಾರಸ್ವಾತಂತ್ರ್ಯವೇ ಮುಖ್ಯವಾದುದು. ಆ ವಿಚಾರದ ಸ್ವಾತಂತ್ರ್ಯದಿಂದಲೇ ತತ್ತ್ವಶಾಸ್ತ್ರಗಳು, ವಿಜ್ಞಾನಾದಿಶಾಸ್ತ್ರಗಳೂ, ಸಂಶೋಧನಾದಿಗಳು ಪ್ರಪಂಚದಲ್ಲಿ ಬೆಳಕನ್ನು ಕಂಡಿವೆ. ಮೋಕ್ಷಸಂಪಾದನೆಗೆ ವಿವಿಧ ಮಾರ್ಗಗಳನ್ನು ಆಚಾರ್ಯರಾದವರು ತಿಳಿಸಿದ್ದಾರೆ. ಬಸವಣ್ಣನವರು ಭಕ್ತಮಾರ್ಗವೇ ಸರ್ವೋತ್ಕೃಷ್ಟವಾದುದೆಂದು ಅದನ್ನು ಕೈ ಹಿಡಿದರು, ಎಲ್ಲರಿಗೂ ಬೋಧಿಸಿದರು, ಭಕ್ತ ಮಾರ್ಗಗಟ್ಟಿಯಾದುದು ಎಂಬುದಕ್ಕೆ ಬಸವಣ್ಣನವರು, "ವೇದಪ್ರಿಯನಲ್ಲ ನಾದಪ್ರಿಯನಲ್ಲ ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ" ಎಂದು ಪ್ರಚಾರಮಾಡಿದ್ದರಲ್ಲಿ ಸಮಾಜಕ್ರಾಂತಿಯ ಬೀಜಗಳನ್ನು ಬಿತ್ತಿದರು. ಸ್ತ್ರೀಶೂದ್ರಾದಿಗಳಿಗೆ ವೇದಾಧಿಕಾರವಿಲ್ಲ, ಆದರೆ ಅವರು ಭಕ್ತಿಯಿಂದಲೂ ಪ್ರಪತ್ತಿಯಿಂದಲೂ ಉದ್ಧಾರವಾಗಬಹುದು ಎಂದು ಶ್ರೀರಾಮಾನುಜಾಚಾರ್ಯರು ಔದಾರ್ಯದಿಂದ ಬೋಧಿಸಿದರು; ಹುಟ್ಟು ಮುಖ್ಯವಲ್ಲ ಗುಣವೇ ಮುಖ್ಯ ಎಂದು ತಮ್ಮ ಪ್ರಿಯಶಿಷ್ಯನಾದ ಧನುರ್ಧಾಸನ ಉದಾಹರಣೆಯಿಂದ ಲೋಕಕ್ಕೆ ತೋರಿಸಿದರು. ಕೀಳು ಜಾತಿಯವರೆಂದು ಪರಿಗಣಿತರಾದ ಶ್ವಪಚಾದಿಗಳಿಗೂ ದೇವಾಲಯ ಪ್ರವೇಶದ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಆದರೆ ಸಮಾಜದಲ್ಲಿ ಆ ಭಕ್ತರ ಸ್ಥಾನಮಾನಗಳನ್ನು ಉತ್ತಮಗೊಳಿಸಲಿಲ್ಲ. ಬಸವಣ್ಣನವರು ವರ್ಣವ್ಯವಸ್ಥೆಯನ್ನೇ ಮೂಲೋಚ್ಚಾಟನೆ ಮಾಡಿ ವರ್ಣಾತೀತ ಸಮಾಜವನ್ನು ರಚನೆಮಾಡಲು ಕೈ ಹಾಕಿದರು. ಭಕ್ತರೆಲ್ಲ ಒಂದೇ ಜಾತಿ; ಪೂರ್ವಜಾತಿ ಯಾವುದೇ ಆಗಿರಲಿ ಪರಮೇಶ್ವರನ ಭಕ್ತರಾಗಿ ಲಿಂಗಧಾರಣ ಮಾಡಿಕೊಂಡವರು ಹರಜನ್ಮವನ್ನು ಪಡೆದವರಾಗಿರುತ್ತಾರೆ. "ವರ್ಣಾನಾಂಬ್ರಾಹ್ಮಣೋ ಗುರುಃ" ಎಂಬುದು ಹುಸಿ. "ವರ್ಣಾನಾಂ ಗುರು" ನಮ್ಮ ಕೂಡಲಸಂಗನ ಮಹಾಶರಣರು. ಭಕ್ತರ ಜಾತಿ ಶಿವಜಾತಿ. ನಾವು ಎಲ್ಲ ಜನರಿಗೂ ನಮ್ಮಲ್ಲಿ ಅವಕಾಶ ಕೊಡುತ್ತೇವೆ. ನಾವು ಎಲ್ಲರಲ್ಲಿಯೂ ಹೊಕ್ಕು ಬಳಸುತ್ತೇವೆ. ಹೆಚ್ಚು ಕಡಮೆಗಳನ್ನು ಲೆಕ್ಕಿಸುವುದಿಲ್ಲ, ಜಾತಿಭೇದಗಳನ್ನು ಪುರಸ್ಕರಿಸುವುದಿಲ್ಲ. ಪರಮೇಶ್ವರನನ್ನು ಕೈ ಹಿಡಿದವರು ಪರಮೇಶ್ವರನ ಜಾತಿಯೇ. ಪರಮೇಶ್ವರನದು ಯಾವ ಜಾತಿ ?

**ಜಾತಿವಿಡಿದು ಸೂತಕವನರಿಸುವೆ**
**ಜ್ಯೋತಿವಿಡಿದು ಕತ್ತಲೆಯನರಿಸುವೆ**
**ಇದೆಂತೋ ಮರಳು ಮಾನವಾ ?**
**ಜಾತಿಯಲ್ಲಿ ಅಧಿಕನೆಂಬೆ ವಿಪ್ರಶತಕೋಟಿಗಳಿದ್ದು ಫಲವೇನು ?**
**ಭಕ್ತಶಿಖಾಮಣಿ ಎಂದುದು ವಚನ**

ಎಂದು ಸಮಾಜಕ್ಕೆ ಸವಾಲ್ ಹಾಕಿದರು. ಲಿಂಗವಂತರಾದ ಶ್ವಪಚಾದಿಗಳನ್ನು ಆದರಿಸಿದರು. ಲಿಂಗವಂತರಾದ ಬ್ರಾಹ್ಮಣಾದಿಗಳನ್ನೂ ಸ್ವಾಗತಿಸಿದರು. ಎಲ್ಲರೂ ಸಹಪಂಕ್ತಿ ಭೋಜನಗಳಲ್ಲಿ ಮಿಳಿತರಾದರು

ಮನುಷ್ಯ ಮನುಷ್ಯರ ನಡುವೆ ಜಾತಿಯ ವಿಷಬೀಜವನ್ನು ಬಿತ್ತುವ ಇಂದಿನ ಕೋಮುವಾದಿತನದ ಹುಚ್ಚಿಗೆ ಪೂರಕವಾಗಿ ವರ್ಗ ವರ್ಣಾಬೇಧಕ್ಕೆ ಬಸವಣ್ಣ ಕೆಳಗಿನ ವಚನದಲ್ಲಿ ವೈಜ್ಞಾನಿಕ ಸ್ಪರ್ಶವನ್ನು ನೀಡಿದ್ದಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವ**
**ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ** ಎಂದಿದ್ದಾರೆ.

ಇನ್ನು ಪುರೋಹಿತಶಾಯಿ, ಧರ್ಮದ ಹೆಸರಲ್ಲಿ ಬಡಜನರ ರಕ್ತ ಹೀರುವವರನ್ನು ಕುರಿತು ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯ ಕೂಡಲಸಂಗಮದೇವ.

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎನ್ನುತ್ತಾರೆ, ಹೀಗೆ ಬಸವಣ್ಣನವರು ತಮ್ಮ ವಚನಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದರು.

ಬಸವಣ್ಣನವರ ತತ್ವ ಆದರ್ಶಗಳು ಸಮಾಜ ಮುಖಿಯಾಗಿದ್ದು ಜಗತ್ತಿನ ಪ್ರತಿಯೊಂದು ಪ್ರಾಣಿಗಳಲ್ಲಿಯೂ ಕರುಣೆ, ಅನುಕಂಪ ದಯೆ ಇರಬೇಕು. ಎಲ್ಲರನ್ನು ಸಮಾನತೆಯಿಂದ ಕಾಣಬೇಕು. ಹಿಂಸೆ ಕ್ರೌರ್ಯ ಧರ್ಮದ ಮೂಲವಲ್ಲ ಎಂಬುದನ್ನು ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ದಯವಿಲ್ಲದ ಧರ್ಮವಾವುದಯ್ಯ ದಯಬೇಕು ಸಕಲ ಪ್ರಾಣಿಗಳೆಲ್ಲದರಲ್ಲಿಯೂ

**ದಯವೇ ಧರ್ಮದ ಮೂಲವಯ್ಯ**
**ಕೂಡಲ ಸಂಗಯ್ಯ ನಂತಲ್ಲದೊಲ್ಲನಯ್ಯ** ಎಂದಿದ್ದಾರೆ.

ಈಗ ಪ್ರಜಾರಾಜ್ಯಗಳ ಕಾಲ. ಹಕ್ಕುಗಳನ್ನು ಗೌರವಿಸಬೇಕೆಂದು ವಾದಿಸುವ ಕಾಲ. ರಾಜಕೀಯ ಕಾರಣಗಳಿಂದಲೋ ಮತ್ತೆ ಯಾವ ಕಾರಣಗಳಿಂದಲೋ ಈ ಸರ್ವಸಮಾನತೆಯನ್ನೂ ವರ್ಣಾತೀತ ರಾಷ್ಟ್ರವನ್ನೂ ಸ್ಥಾಪಿಸಬೇಕೆಂದು ರಾಷ್ಟ್ರಮುಖಂಡರು ಹೊರಟಿರುವ ಕಾಲ ರಾಷ್ಟ್ರಘಟನೆಯಲ್ಲಿ ಅವುಗಳನ್ನು ಒತ್ತಿ ಹೇಳಿರುವುದಲ್ಲದೆ, ಹಿಂದೂ ಕೋಡ್‌ಬಿಲ್ ಮೊದಲಾದುವುಗಳ ಮೂಲಕವೂ ಸಮಾಜ ವ್ಯವಸ್ಥೆಯನ್ನು ಮಾರ್ಪಡಿಸಲು ಪ್ರಯತ್ನಪಡುತ್ತಿದ್ದಾರೆ. ಹಿಂದೆ ಭಕ್ತರಾದ ಬಸವಣ್ಣನವರು ಭಕ್ತಿ ಕಾರಣದಿಂದಲೇ ಈ ವ್ಯವಸ್ಥೆಯನ್ನು ಏರ್ಪಡಿಸಲು ಪ್ರಯತ್ನಪಟ್ಟರು. ಒಂದು ಕಡೆ.

**ಹೊಲಬುಗೊಂಡರಿಸಬೇಡ ಬಲಿತು ತರಬೇಡ**
**ಒಲಿದೊಮ್ಮೆ ಶಿವಶರಣು ಎನ್ನಿರಯ್ಯ**
**ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ ಕೂಡಲಸಂಗಮದೇವ ಭಕ್ತಿಲಂಪಟನಾಗಿ**

ಎಂದು ಭಕ್ತಿಯ ತಿರುಳನ್ನು ಒಂದೇ ಮಾತಿನಲ್ಲಿಯೂ,

**ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ**
**ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ ಇದಿರಹಳಿಯಲು ಬೇಡ**
**ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.**

ಎಂದು ಅಂತರಂಗ ಬಹಿರಂಗ ಶುದ್ಧಿಗಳ ತಿರುಳನ್ನು ಒಂದೇ ವಚನದಲ್ಲಿಯೂ ಜನತೆಗೆ ಬೋಧಿಸಿದರು. ಹೀಗೆ ಆಸ್ತಿಕ್ಯವುಳ್ಳ ಸಮಾಜ, ನೀತಿಯುಕ್ತವಾದ ಸಮಾಜ, ಪರಸ್ಪರ ಸಮಾನಭಾವದಿಂದ ಭೋಜನ ವಿವಾಹಾದಿಗಳ ವ್ಯವಹಾರಗಳನ್ನುಳ್ಳ ಸಮಾಜ ಇದನ್ನು ಕಟ್ಟುವುದೇ ಬಸವಣ್ಣನವರ ಉದ್ದೇಶವಾಗಿತ್ತು. ಮೋಕ್ಷಕ್ಕೆ ಸುಲಭೋಪಾಯವೋ ಭಕ್ತಿಯೇ. ಸಮಾಜದ ಐಕಮತ್ಯಕ್ಕೂ ಭದ್ರತೆಗೂ ಸುಲಭೋಪಾಯ ಭಕ್ತಿಯೇ. ಈ ಭಕ್ತಿಯ ಆಚರಣೆಯಿಂದ ಐಹಿಕ ಮತ್ತು ಅಮುಷ್ಮಿಕ ಫಲಗಳು ಸಿದ್ಧಿಸುತ್ತವೆಯೆಂದು ಅವರು ತೋರಿಸಿಕೊಟ್ಟರು. ಸಮಾಜಸುಧಾರಣೆ ಮಾಡುತ್ತೇವೆಂದು, ಮಾನವನ ಹಕ್ಕುಗಳನ್ನು ಸ್ಥಾಪಿಸುತ್ತೇವೆಂದು ಅವರು ನಿರ್ದೈವವಾದವನ್ನು ಪ್ರಚಾರ ಮಾಡಲಿಲ್ಲ. ಜನತೆಯನ್ನು ದುರ್ನೀತಿಗೆಳೆಯಲಿಲ್ಲ. ಈಗ ಹೇಳಿದ ಅಂಶಗಳನ್ನು ವೀರಶೈವ ಪರಿಭಾಷೆಯಲ್ಲಿ ಲಿಂಗಾಚಾರ ಶಿವಾಚಾರಗಳೆಂದು ಕರೆಯಬಹುದು. ಅವು ಸಮಾಜದ ಅಸ್ತಿಭಾರಗಳು.

ಇಂತರ ಸವಾಜದಲ್ಲಿ ಪ್ರತಿಯೊಬ್ಬರೂ ದುಡಿಮೆಯ ಗೌರವವನ್ನು ತಿಳಿದಿರಬೇಕು ಮತ್ತು ಅದನ್ನು ಪಾಲಿಸಬೇಕು ಎಂದು ಬಸವಣ್ಣನವರು ಹೇಳಿದರು. ಆರ್ಥಿಕದೃಷ್ಟಿಯಿಂದ ಸಮಾಜದ ಪ್ರತಿಯೊಬ್ಬ ಮನುಷ್ಯನೂ ಉತ್ಪಾದಕನಾಗಿರಬೇಕು. ದೇಶದ ಸಂಪತ್ತನ್ನು ಹೆಚ್ಚಿಸಬೇಕು. ಜೀವನೋಪಾಯವಾಗಿ ಕೈಕೊಂಡ ವೃತ್ತಿಯನ್ನು ಕಾಯಕವೆಂದು ಕರೆಯುತ್ತಾರೆ. ಆದರೆ ಕಾಯಕವೆನ್ನುವುದು ಬರಿ ಉದರಂಭರ 'ಣೋಧ್ಯೋಗವಲ್ಲ. ಕಾಯಕವೆನ್ನುವುದು ಶಿವಪೂಜೆ. ಲಿಂಗಪೂಜ 'ಯನ್ನಾದರೂ ಮರೆಯಬಹುದು, ಕಾಯಕವನ್ನು ಮರೆಯಬಾರದು. ಕಾಯಕವನ್ನು ಶ್ರದ್ಧೆಯಿಂದ ನಡೆಸಿದವನಿಗೆ ಕೈಲಾಸ ಅಂಗೈಯಲ್ಲಿದೆ. ಕಾಯಕವನ್ನು ನಡೆಸುವಾತನೇ ಸದ್ಭಕ್ತ, ಅವನ ಮನೆಯೇ ಕಾಶಿ, ಎಂದು ಬಸವಣ್ಣನವರು ಪರಮಾರ್ಥವನ್ನು ಕಾಯಕಕ್ಕೆ ಕಲ್ಪಿಸಿಕೊಟ್ಟು ಅದರ ಗೌರವವನ್ನು ಗೌರೀಶಂಕರಕ್ಕೆ ಏರಿಸಿದರು.

ಕೃಷಿಕೃತ್ಯ ಕಾಯಕದಿಂದಾದಡೇನು ? ತನು ಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮಸದ್ಭಕ್ತನ ಪಾದವ ತೋರಯ್ಯ ಎನಗೆ. ಅಂದೆಂತೆನೆ ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ ಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶ ಮಾಡಿದಾತನೇ ಪರಮಸದ್ಗುರು. ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪವರ ನಾನು ನೆರೆನಂಬಿ ನಮೋ ನಮೋ ಎಂಬೆನಯ್ಯ ಕೂಡಲಸಂಗಮದೇವಾ ಎಂದು ಬಸವಣ್ಣನವರು ಹೇಳಿರುವುದನ್ನು ನಾವು ಗಮನಿಸಬೇಕು.

ಭಕ್ತರಲ್ಲಿ ಹೇಗೆ ಹೆಚ್ಚು ಕಡಿಮೆಗಳಿಲ್ಲವೋ ಹಾಗೆಯೇ ಕಾಯಕಗಳಲ್ಲಿ ಹೆಚ್ಚು ಕಡಮೆಗಳಿಲ್ಲ. ಯಾವ ಕಾಯಕವಾಗಿರಲಿ ಶಿವನು ಒಲಿಯುತ್ತಾನೆ. ಬೇಡನಿಗೆ, ಜೇಡನಿಗೆ, ಡೋಹರನಿಗೆ ಹೊಲೆಯನಿಗೆ ಎಲ್ಲರಿಗೂ ಶಿವನು ಒಲಿದಿದ್ದಾನೆ. ಈ ವೃತ್ತಿಗಳಿಂದ ಜಾತಿಗಳು ಏರ್ಪಡುವುದಿಲ್ಲ. ಜಾತಿಗಳು ನೂರಹದಿನೆಂಟು ಇಲ್ಲ. ಲಿಂಗವನ್ನು ಮುಟ್ಟಿದವರೆಲ್ಲ ಒಂದು ಜಾತಿ; ಲಿಂಗವನ್ನು ಮುಟ್ಟದವರೆಲ್ಲ ಇನ್ನೊಂದು ಜಾತಿ – ಹೀಗೆ ಆಸ್ತಕರು ನಾಸ್ತಕರು ಎಂದು ಎರಡೇ ಜಾತಿ – ಎಂದು ಹೇಳಿದರು. ಬಸವಣ್ಣನವರು. ನೂರಾರು ಜಾತಿಗಳು ಕೃತಕವಾಗಿ ಏರ್ಪಟ್ಟು ಬಹುಮುಖವಾಗಿ ಒಡೆದಿದ್ದ ಸಮಾಜವನ್ನು ಏಕಮುಖವಾಗಿ ಮಾರ್ಪಡುವಂತೆ ಕೃತಕ ವ್ಯತ್ಯಾಸಗಳನ್ನು ತೊಡೆದುಹಾಕಿದರು. ರಾಷ್ಟ್ರ ಕೆಲಸಗಾರರಿಗೆ ಸೇರಿದ್ದು ಎಂಬ ಸವಾಜವಾದದ ಅಥವಾ ಸಮಷ್ಟಿ ಸ್ವಾಮ್ಯವಾದದ ತಿರುಳನ್ನು ಬಸವಣ್ಣನವರ ಕಾಯಕಪ್ರಧಾನವಾದ ಸಮಾಜದಲ್ಲಿ ಕಾಣಬಹುದಾಗಿದೆ. ಅವರ ಸಮಾಜದಲ್ಲಿ ಸೋಮಾರಿಗಳಿಗೆ ಎಡೆಯಿಲ್ಲ. ಭಿಕ್ಷುಕರಿಗೆ ಮೊದಲೇ ಎಡೆಯಿಲ್ಲ. ಈ ಸದಾಚಾರದ ಮೂಲಮಂತ್ರವನ್ನು ಬಸವಣ್ಣನವರು ನಾಡಿಗೆ ಉಪದೇಶಿಸಿದ್ದಾರೆ.

ಸಮಾಜದಲ್ಲಿ ವ್ಯಕ್ತಿ ಹೇಗೆ ನಡೆದುಕೊಳ್ಳಬೇಕು ? ಸಮಾಜಕ್ಕಿಂತ ವ್ಯಕ್ತಿ ಹೆಚ್ಚೇ ? ಎಂಬುದಕ್ಕೂ ಬಸವಣ್ಣನವರ ಬೋಧೆಯಲ್ಲಿ ಉತ್ತರಗಳು ದೊರೆಯುತ್ತವೆ. ಸಮಾಜಕ್ಕೆ ಭೃತ್ಯನಂತೆ ನಡೆದುಕೊಳ್ಳಬೇಕು. ಸ್ವಾಮಿ ಭೃತ್ಯನ್ಯಾಯ ಶಿವನಿಗೂ ಭಕ್ತನಿಗೂ ಮಾತ್ರವಲ್ಲ. ಅದು ಸಮಾಜಕ್ಕೂ

–14ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು

✍ **ಡಾ. ಸಂಜೀವ ಆರ್. ನಾಯಕ,** ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ.ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ.

1. **ಸಮುದ್ರ ತೀರಗಳು**
2. **ಜಲಪಾತಗಳು**
3. **ಘಟ್ಟಗಳ ವಿಶೇಷತೆ**
4. **ಪರ್ವತಗಳು**
5. **ಅಭಯಾ ಅರಣ್ಯಗಳು ಹಾಗೂ ಪಕ್ಷಿಧಾಮಗಳು**
6. **ಪ್ರವಾಸಿ ಕೇಂದ್ರಗಳು**
7. **ಐತಿಹಾಸಿಕ ನೆಲೆಗಳು**

## ಪ್ರೇಕ್ಷಣೀಯ ಸ್ಥಳಗಳು

ಈ ಜಿಲ್ಲೆಯಲ್ಲಿ ಕಂಡು ಬರುವಷ್ಟು ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕದ ಬೇರೆ ಯಾವು ಜಿಲ್ಲೆಗಳಲ್ಲಿ ಕಾಣಲಾರವು. ಸಮುದ್ರ ಮತ್ತು ನದಿ ತೀರಗಳು, ಜಲಪಾತಗಳು, ಘಟ್ಟಗಳು, ಪರ್ವತಗಳು (ಗಿರಿಧಾಮಗಳು) ಅಭಯಾರಣ್ಯಗಳು ಹಾಗೂ ಪ್ರಾಣಿ ಪಕ್ಷಿಧಾಮಗಳು, ಪ್ರವಾಸಿ ಕೇಂದ್ರಗಳು, ಐತಿಹಾಸಿಕ ಸ್ಥಳಗಳು ಅನನ್ಯತೆಯಿಂದ ಕೂಡಿದೆ.

## 1. ಸಮುದ್ರ ತೀರಗಳು (ಬೀಚ್)

ಉತ್ತರ ಕನ್ನಡ ಜಿಲ್ಲೆಯಲ್ಲಿ ಬೀಚುಗಳು ಪ್ರವಾಸಿಗರ ಮನ ತಣಿಸುವಷ್ಟು ಸುಂದರವಾದ ಬೀಚುಗಳಿವೆ ಅವುಗಳಲ್ಲಿ ಪ್ರಮುಖವಾಗಿ ಕಾರವಾರದ ಠಾಗೋರ ಬೀಚು, ದೇವಭಾಗ ಬೀಚು, ಲೇಡಿಸ್ ಬೀಚು, ತೀಳಮಡಿ ಬೀಚು ಅತಿ ಸುಂದರ ಬೀಚುಗಳಾಗಿವೆ. ಅಂಕೋಲಾದ ಶೇಡಿಗುಳಿ ಬೀಚು, ಕೇಣಿ ಬೀಚು, ಹೋನ್ನೆ ಬೈಲ ಬೀಚು, ನದಿ ಬಾಗ್ ಬೀಚು, ಬೇಲೆಕೇರಿ ಬೀಚು ಪ್ರಮುಖವಾಗಿವೆ. ಹೊನ್ನಾವರದ ರಾಮನ ಗಿಂಡಿ ಬೀಚ್, ಅಪ್ಸರ ಕೊಂಡ ಬೀಚ್, ಮೋಗ್ಗಿಲಿ ಬೀಚ್ ಸುಂದರವಾಗಿದೆ, ಕುಮಟಾದ ಕೊಡ್ಲಿಲಿ ಬೀಚ್, ಧಾರೇಶ್ವವರ ಬೀಚ್, ಗೋಕರ್ಣ ಬೀಚ್, ಓಂ ಬೀಚ್, ಬಾಡ ಬೀಚ್ ಮನಸೆಳೆಯುತ್ತವೆ. ಭಟ್ಕಳದ ಹುಳಿಮಡ್ಡಿ ಬಿಚ್, ಮುರಡೇಶ್ವರ ಬೀಚ್, ಜಾಲಿ ಬೀಚ್‌ಗಳ ಸೌಂದರ್ಯ ಕಣ್ಣು ಕುಕ್ಕುತ್ತದೆ.

## 2. ಜಲಪಾತಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿ ಚಿಕ್ಕ ದೊಡ್ಡ ಜಲಪಾತಗಳು ಮಳೆಗಾಲದಲ್ಲಿ ಮಾತ್ರಗೋಚರಿಸುವ ಜಲಪಾತಗಳು ನೂರಾರು. ಯಲ್ಲಾಪುರ ತಾಲೂಕು ಒಂದರಲ್ಲೆ ಹೆಸರಿಸಬಹುದಾದ ಹದಿನೆಂಟುಕ್ಕೂ ಹೆಚ್ಚು ಜಲಪಾತಗಳಿರಬಹುದು. ಅನೇಕ ಜಲಪಾತಗಳನ್ನು ಕಾಣಬೇಕಾದರೆ ದಟ್ಟಕಾಡಿನಲ್ಲಿ ಕಾಲು ನಡಿಗೆಯಲ್ಲಿ ಹೋಗಬೇಕು. ಸುಸುಬ್ಬಿ ಜಲಪಾತ, ಕಕ್ಕಳ್ಳಿಹಳ್ಳ (ಬಿಳಿಹೊಳೆ), ಮಿಂಚೊಳ್ಳಿ ಜಲಪಾತ, ಜೋಗದ ಜಲಪಾತ,ಸಾತೊಡ್ಡಿ ಜಲಪಾತ,ಅಂಬೆಹೊಳೆ ಜಲಪಾತ, ಮಾಗೋಡ ಜಲಪಾತ, ಲಾಲಗುಳಿ ಜಲಪಾತ, ಉಂಚಳ್ಳಿ ಜಲಪಾತಗಳು ಸುಂದರವಾಗಿದೆ. ನಿಸರ್ಗ ರಮಣೀಯ ಸ್ಥಳಗಳಲ್ಲಿ ಶಿವಂಗಂಗೆ ಜಲಪಾತವೂ ಒಂದು. ಹಸೆಹಳ್ಳ ಜಲಪಾತ ಶಿರಸಿಂದ 40 ಕಿ.ಮೀ.ದೂರದಲ್ಲಿದೆ. ಅಣಶಿ ಜಲಪಾತ ಮಲೆಮನೆ ಜಲಪಾತ, ಬುರುಡೆ ಜೋಗ ಜಲಪಾತ ಹೀಗೆ ಅನೇಕ ಹಿರಿ ಕಿರಿ ಜಲಪಾತಗಳನ್ನು ಬೆಟ್ಟದ ಸಾಲುಗಳಲ್ಲಿ ಜಿಲ್ಲೆಯಲ್ಲಿ ನೋಡುತ್ತಾ ಹೋಗಬಹುದು.

## 3. ಘಟ್ಟಗಳವಿಶೇಷತೆ

ಉತ್ತರ ಕನ್ನಡ ಜಿಲ್ಲೆಯಲ್ಲಿ "ಬ್ರಿಟಿಶ್ ಆಳ್ವಿಕೆಯ ಸಂದರ್ಭದಲ್ಲಿ ಹಲವಾರು ಘಟ್ಟ ರಸ್ತೆಗಳಿದ್ದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅಣಸಿ, ಅರಬೈಲ್, ದೇವಿಮನೆ, ಮಾವಿನಗುಂಡಿ, ಚೋರ್ಲಾ, ಅಂಬೋಲಿ, ರಾಮಘಟ್ಟ, ತಿನಯಾ ಮುಂತಾದವು. ಹೀಗೆ ಉತ್ತರ ಕನ್ನಡವು ಭೌಗೋಳಿಕವಾಗಿ ವೈಶಿಷ್ಟ್ಯತೆಗಳಿಂದ ಕೂಡಿದ್ದು, ಕರ್ನಾಟಕ ರಾಜ್ಯದಲ್ಲಿಯೇ ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿದೆ"[1] ಕರಾವಳಿ ಪ್ರದೇಶಕ್ಕೆ ಬರುವಾಗ ದೊಡ್ಡ ದೊಡ್ಡ ಬೆಟ್ಟಗಳ ಸಾಲುಗಳನ್ನು ದಾಟಿ ಇಳಿದು ಬರಬೇಕಾಗುತ್ತದೆ. ಈ ಮಾರ್ಗದಲ್ಲಿ ಸಾಗಿ ಬರುವಾಗ ಕಾಣುವ ಪರ್ವತ ಶ್ರೇಣಿ, ಕಣ್ಣು ತಿರುಗುವ ಕಡಿದಾದ ಕಂದಕ ಈ ಘಟ್ಟದ ರಸ್ತೆಗಳ ಪ್ರಯಾಣದಲ್ಲಿ ಕಂಡು ಬರುತ್ತದೆ. ಉತ್ತರ ಕನ್ನಡದಲ್ಲಿ ಅಲ್ಲಲ್ಲಿ ಘಟ್ಟಗಳು ನೂರಾರು ಇದ್ದು ಅವುಗಳಲ್ಲಿ ದೊಡ್ಡವೂ ಪ್ರಾಮುಖ್ಯ ವಾದವುಗಳೆಂದರೆ ಅರಬೈಲು, ದೇವಿಮನೆ, ಮಲಮನೆ,

ದೊಡ್ಡಮನೆ, ಮತ್ತಿ, ವಡ್ಡಿ, ಹೈದರ, ಕುಂಡಾಲ, ನೀಲಕುಂದ, ಹೊಗೆವಾಡಿ, ದೋಕರ್ಪ, ತಿನ್ನೆ, ಡಿಗ್ಗಿ, ಅಣಶಿ, ಕುವೇಶಿ. ಈ ಘಟ್ಟಗಳಲ್ಲಿ ಒಂದೊಂದು ತಿರುವಿಗೂ ಕಾಣುವ ಭಯಾನಕತೆ ಜೊತೆಯಲ್ಲಿ ಅಕ್ಕ ಪಕ್ಕದ ನಿರ್ಸಗದ. ಘಟ್ಟವನ್ನು ಇಳಿದು ಕರಾವಳಿಯ ಬೈಲು ಪ್ರದೇಶಕ್ಕೆ ಕಾಲಿಟ್ಟೂಡನೆ ಅಡಿಕೆ-ತೆಂಗು-ಹಲಸು-ಮಾವು-ಬಾಳೆಗಳಿಂದ ಶೋಭಿಸುವ ಚಿಕ್ಕ ಚಿಕ್ಕ ಹಳ್ಳಿಗಳು ಹೊಲ-ಗದ್ದೆಗಳು ಕಂಡು ಬರುತ್ತದೆ.

## 4. ಪರ್ವತಗಳು (ಗಿರಿಧಾಮಗಳು)

ಗಿರಿಧಾಮಗಳಿಗೆ ಈ ಜಿಲ್ಲೆಯಲ್ಲಿ ಕೊರತೆಯಿಲ್ಲ. ಶಿರ್ವೆಗುಡ್ಡ ಕಾರವಾರದ ಶಿವೇಹಳ್ಳಿಯಲ್ಲಿರುವ ಉತ್ತಮ ಪರ್ವತವಾಗಿದೆ. ಗುಡ್ಡದ ಮೇಲೆ ಬಸವನ ಮಂದಿರ ಹಾಗೂ ಬಾಮಿದ್ದು ಪ್ರತಿವರ್ಷ ಇಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಗೆ ಹೋಗುವವರು ಏಣಿ ಇಲ್ಲವೇ ಹಗ್ಗದ ಸಹಾಯದಿಂದ ಮೇಲೆ ಏರಿ ಹೋಗಬೇಕಾಗುತ್ತದೆ. ಕಳ್ಳಿಗುಡ್ಡ ಅತಿಎತ್ತರದ ಈ ಸ್ಥಳವು ಕುಮಟಾದಿಂದ ಸುಮಾರು 17 ಕಿ.ಮೀ ದೂರದಲ್ಲಿದೆ. ಗುಡ್ಡೆ ಹಳ್ಳಿ ಕಾರವಾರದಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ ಮೋತಿಗುಡ್ಡ ಅಂಕೋಲೆ ರಸ್ತೆಯಲ್ಲಿರುವ ಅವರ್ಸಾಬಳಿ ಕೆಳಗಿನ ಬೆಣ ಮತ್ತು ಮೇಲಿನ ಬೆಣ ಎಂಬ ಎತ್ತರದ ಜಾಗವಿದೆ. ಅಂಕೋಲೆಯ ಬಳಿ ಹುಬ್ಬಳಿರಸ್ತೆಯ ಪಕ್ಕದಲ್ಲಿ ತುಳಸಿಗುಡ್ಡವು ಸಹ ಉತ್ತಮ ಗಿರಿಧಾಮವಾಗಿದೆ. ಮೇದಿನಿ ಕೋಟೆ ಕುಮಟೆ ತಾಲೂಕಿನದ್ದು ಸಸ್ಯ ರಾಶಿಯಿಂದ ಗಿಡ ಮೂಲಿಕೆಗಳಿಂದ ಹಿಂದೆ ಬಹು ಪ್ರಸಿದ್ದಿ ಪಡೆದಿದೆ. ದರ್ಶನಗುಡ್ಡ ಜಿಲ್ಲೆಯ ಉತ್ತರ ಭಾಗದಲ್ಲಿ ಸೂಪಾ ತಾಲೂಕಿನಲ್ಲಿ ಈ ಪರ್ವತ ಪ್ರದೇಶವಿದೆ. ನಿಶಾನ ಗುಡ್ಡ ಶಿರಸಿಯ ಹೆಗ್ಗರಣಿ ರಸ್ತೆಯಲ್ಲಿದೆ. ಮುಂಡಗೋಡ ತಾಲೂಕಿನಲ್ಲಿ ಬೆಡಸಗಾಂವ ಗುಡ್ಡದ ತುದಿಯಲ್ಲಿ ವಿಶಾಲವಾದ ಸಮತಟ್ಟಾದ ನೆಲ ಹರಡಿಕೊಂಡಿದೆ. ಈ ಮೇಲೆ ಹೇಳಿದ ರಸ್ತೆಗಳ ಪ್ರಯಾಣದಲ್ಲಿ ಕಂಡು ಬರುತ್ತದೆ.ಉತ್ತರ ಕನ್ನಡದಲ್ಲಿ ಅಲ್ಲಲ್ಲಿ ಘಟ್ಟಗಳು ನೂರಾರು ಇದ್ದು ಅವುಗಳಲ್ಲಿ ಸ್ಥಳಗಳಲ್ಲದೆ ಈ ಜಿಲ್ಲೆಯಲ್ಲಿ ಕಳಸಗುಡ್ಡ, ಮೆಣಸಿಗುಡ್ಡ, ಸಿದ್ದಾಪುರ ತಾಲೂಕಿನಲ್ಲಿ ರಾಕ್ಷಸಗುಡ್ಡ, ಹಕಲಿಗುಡ್ಡ, ಮಾವಿನಗುಡ್ಡ ಹಾಗೂ ಇನ್ನಿತರ ತಾಲೂಕುಗಳಲ್ಲಿ ಈಗಲೂ ಪರ್ವತಗಳನ್ನು ನೋಡಬಹುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## 5. ಅಭಯಾರಣ್ಯಗಳು ಹಾಗೂ ಪ್ರಾಣಿಪಕ್ಷಿಗಳು

ನದಿ. ಸಮುದ್ರ ಕಾಡುಗಳಿಂದ ತುಂಬಿರುವ ಈ ಜಿಲ್ಲೆಯ ಬಹು ಪ್ರದೇಶವು ಪ್ರಾಣಿ ಪಕ್ಷಿಗಳಿಗೆ ಆಶ್ರಯ ತಾಣವಾಗಿದೆ.ಸಾರಂಗ, ಚಿಗರೆ, ಕಾಡುಕೋಣ, ಹಂದಿ, ಹುಲಿ, ಚಿರತೆ, ಆನೆಗಳಾದಿ ಪ್ರಾಣಿಗಳು ನವಿಲು ಗೊರವಂಕ ಕಾಜಾಣ, ಗಿಳಿ, ಕೋಗಿಲೆ, ಬೆಳ್ಳಕ್ಕಿ ಕಾಡುಕೋಳಿ ಮೊದಲಾದ ಪಕ್ಷಿಗಳು ನೂರಾರು ಜಾತಿಯ ವೃಕ್ಷಗಳು ಕಂಡು ಬರುತ್ತವೆ. ಗಣೇಶ ಗುಡಿ, ರಾಮನಗುಳಿ, ದಾಂಡೇಲಿ, ಕಿಳಗಿ, ಅಣಶಿ ಮೊದಲಾದ ಎಡೆಗಳಲ್ಲಿರುವ ಅಭಯಾರಣ್ಯಗಳಿವೆ. ಹೆಚ್ಚು ಪಕ್ಷಿ ಪ್ರಬೇಧಗಳಿರುವ ಹಲವು ಬಗೆಯ ಕಾಡು ಪ್ರಾಣಿಗಳು ಸುರಕ್ಷಿತವಾಗಿ ಓಡಾಡಿಕೊಂಡಿರುವ ಸ್ಥಳವಾಗಿದೆ. ಭಾರತದಲ್ಲಿ ಸುಮಾರು ಹೆಚ್ಚು ಪಕ್ಷಿ ಪ್ರಭೇದಗಳಿದ್ದು ಅವುಗಳಲ್ಲಿ ಸುಮಾರು ಪ್ರಭೇದಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಇವುಗಳಲ್ಲಿ ಹೆಚ್ಚಿನವು ಉತ್ತರಕನ್ನಡದಲ್ಲಿ ಕಾಣಬಹುದು.

## 6. ಪ್ರವಾಸಿ ಕೇಂದ್ರಗಳು

ಈ ಜಿಲ್ಲೆಯ ಸಾಕಷ್ಟು ಪ್ರವಾಸಿ ಕೇಂದ್ರಗಳು ಮನಸೆಳೆಯುತ್ತವೆ. ಈಗಾಗಲೇ ವಿವರಿಸಿರುವ ಎಲ್ಲಾ ಪ್ರೇಕ್ಷಣಿಯ ಸ್ಥಳಗಳು ಪ್ರವಾಸಿ ಕೇಂದ್ರಗಳಾಗಿವೆ. ಇನ್ನೂ ಉತ್ತರಕನ್ನಡ ಜಿಲ್ಲೆಯ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ, ವೆಂಕಟಾಪುರ, ವರದಾ ಮೊದಲಾದ ನದಿಗಳ ಜೊತೆಗೆ ಅಂಕೋಲೆ ಹೊಳೆ, ಕುಮಟೆ ಹೊಳೆ, ಬಡಗಣಿ, ಶರಾಬಿ, ಗೊರೆಗದ್ದೆ ಹಳ್ಳ (ಬೆಳಸೆ ಹತ್ತಿರ) ಮೊದಲಾದ ಹಲವು ಕಿರಿ ಹೊಳೆಗಳು ಈ ಜಿಲ್ಲೆಯಲ್ಲಿ ದೋಣಿವಿಹಾರಕ್ಕೆ, ಈಜಾಡಲು ಅನೂಕೂಲವಾಗಿವೆ. ಈ ನದಿಗಳ ನಡುವೆ ಕೂರ್ವೆಗಳು (ನಡುಗಡ್ಡೆಗಳು) ಆಕರ್ಷಣೀಯ ವಾಗಿದೆ. ಗಂಗಾವಳಿ ನದಿಯಲ್ಲಿ ಹಿಚ್ಕಡ ಮತ್ತು ಬಮೋಟದ ಕೂರ್ವೆಗಳು, ಅಘನಾಶಿನಿ, ಮಾಸೂರ, ಮಲ್ಲ, ಹಳಕಾರ ಐಗಳ ಕೂರ್ವೆಗಳು, ಶರಾವತಿ ನದಿಯಲ್ಲಿ ಮಾವಿನ ಕೂರ್ವೆ, ಮಾಳ್ಕೊಡ ಹೈಗೂಂದ ಉಪ್ಪಿನ ಕೂರ್ವಗಳೆಲ್ಲಾ ಸುಂದರವಾಗಿವೆ. ಇವಲ್ಲದೇ ಸಮುದ್ರ ದಂಡೆಯಲ್ಲಿ ಅಂಜದೀವ, ದೇವಗಡ, ಮಧ್ಯಂಗಡ, ಕೂರ್ವಗಡ, ಕಾಂಗಗಡ, ಬಸವರಾಜ ದುರ್ಗ, ನೇತ್ರಾಣಿ, ಜಾಲಿದ್ವೀಪಗಳು ಚೆನ್ನಾಗಿವೆ. ಇಲ್ಲಿ ನೌಕಾವಿಹಾರ, ಈಜಾಟ, ಮೀನು ಹಿಡಿಯವದು ಮುಂತಾದವುಗಳಿಂದ ನಲಿಯಬಹುದು. ಆಣೆಕಟ್ಟನ್ನು ನಿರ್ಮಿಸಿದ ಜಲಾಶಯಗಳಲ್ಲಿ ನೌಕಾವಿಹಾರದ ವ್ಯವಸ್ಥೆ ಮಾಡಬಹುದು. ಒಟ್ಟಿನಲ್ಲಿ ಎಲ್ಲಾ ದೃಷ್ಟಿಯಿಂದಲೂ ಉತ್ತರ ಕನ್ನಡ ಸುಂದರ ಸ್ಥಳ. ಸಮುದ್ರ ತೀರದ ನಡುಗಡ್ಡೆ ಮತ್ತು ಕೂರ್ವೆಗಳಾದ "ಸದಾಶಿವಘಡ, ದೇವಭಾಗ, ಕೂರ್ಮಗಡ, ದೇವಗಡ, ಬೈತಕೋಲ್, ಅಂಜದೀವ, ನೇತ್ರಾಣಿ ಇವುಗಳು ಸಮುದ್ರದಲ್ಲಿರುವ ನಡುಗಡ್ಡೆಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ನದಿಗಳು ಹರಿಯುತ್ತವೆ. ಕಾಳಿ, ಗಂಗಾವಳಿ, ಅಘನಾಶಿನಿ, ಬೇಡ್ತಿ, ಶರಾವತಿ, ವೆಂಕಟಾಪುರ, ವರದಾ, ಮುಂತಾದವು ಪ್ರಮುಖವಾದ ನದಿಗಳು ಇವೆಲ್ಲವೂ ಕರಾವಳಿಯಲ್ಲಿ ಸಮುದ್ರವನ್ನು ಸೇರುತ್ತವೆ. ನದಿಗಳು ಸಮುದ್ರವನ್ನು ಸೇರುವ ಜಾಗವನ್ನು ಅಳಿವೆಗಳೆಂದು ಕರೆಯಲಾಗಿದೆ. ನದಿಯ ನಡುವೆ ಕೆಲವು ನಡುಗಡ್ಡೆಗಳಿವೆ. ಅವುಗಳನ್ನು ಕೂರ್ವೆಗಳೆಂದು ಕರೆಯಲಾಗುತ್ತದೆ. ಉದಾಹರಣೆಗೆ ಕಾಳಿನದಿಯ ದೇವಭಾಗ ಕೂರ್ವೆ, ಗಂಗಾವಳಿ ನದಿಯ ಹಿಚ್ಕಡ ಕೂರ್ವೆ, ಮೋಟಿನ ಕೊರ್ವೆ, ಅಘನಾಶಿನಿ ನದಿಯ ಮಾಸೂರ ಕೂರ್ವೆ, ಹಳಕಾರ ಕೂರ್ವೆ, ಮುಂತಾದವು ಇವೆಲ್ಲವೂ ದೊಡ್ಡ ಕೂರ್ವೆಗಳಾಗಿದ್ದು ಇವುಗಳಲ್ಲಿ ಜನವಸತಿ ಇದೆ".[2]

ಈ ಜಿಲ್ಲೆಯಲ್ಲಿ ಕಾರವಾರ, ಕುಮಟಾ, ಶಿರಸಿ, ಯಲ್ಲಾಪುರ, ದಾಂಡೇಲಿಗಳಲ್ಲಿ ಪ್ರವಾಸಿಕೇಂದ್ರಗಳನ್ನು ಸ್ಥಾಪಿಸಬೇಕು. ಕಡಲ ತೀರದ ಬಂದರುಗಳಿಗೆ ಹಡಗು ಸಾರಿಗೆಯ ವ್ಯವಸ್ಥೆಯಾಗಬೇಕು. ಕೊಂಕಣರೇಲ್ವೆ ಪ್ರವಾಸೋದ್ಯಮಕ್ಕೆ ವರದಾನವಾಗಿದೆ. ಪ್ರೇಕ್ಷಣೀಯ ಸ್ಥಳಗಳಿಗೆ ಕೇಂದ್ರ ಪ್ರದೇಶಗಳಿಂದ ಹೋಗಿ ಬರಲು ಉತ್ತಮ ರಸ್ತೆ–ಸಾರಿಗೆ ವ್ಯವಸ್ಥೆ, ಹೋಟೆಲಗಳು, ಸರಿಯಾದ ವಸತಿಗೃಹಗಳು, ವಿವರಣಾ ಪುಸ್ತಕಗಳು, ಚಿತ್ರಗಳು, ಪ್ರಚಾರ ಪ್ರಕಟನೆಗಳು, ಸರಿಯಾದ ಮಾರ್ಗದರ್ಶಕರು, ಮನರಂಜನಾ ಮಂದಿರಗಳು, ಪ್ರಾಮಾಣಿಕ ವ್ಯಾಪಾರಿಗಳು, ಪೋಲಿಸ ವ್ಯವಸ್ಥೆ ಇವೆಲ್ಲ ದೊರೆತಲ್ಲಿ ಉತ್ತಮ ಪ್ರೇಕ್ಷಣಿಯ ಸ್ಥಳವಾಗಬಹುದು.

## 7. ಐತಿಹಾಸಿಕ ನೆಲೆ (ಸ್ಥಳಗಳು)

ಈ ಜಿಲ್ಲೆಯಲ್ಲಿ ಐತಿಹಾಸಿಕ ಸ್ಥಳಗಳು ಬಹಳಷ್ಟು ಇದ್ದೂ ಅವುಗಳಲ್ಲಿ ಪ್ರಮುಖವಾದ ಕೆಲವು ವಿವರಿಸಿದ್ದೇನೆ. ಅಂಕೋಲಾದ ಕೋಟೆಬೇಣದ ಕೋಟೆ ಬಹು ಪ್ರಾಚೀನ ಕೋಟೆಯಾಗಿರಬಹುದು. ಅಲ್ಲಿ ಕೋಟೆ (ಹನುಮಂತ, ಈಶ್ವರ) ದೇವಾಲಯವಿದ್ದು, ಈ ಕೋಟೆಯಲ್ಲಿ ಬೃಹತ್ ಬಾವಿಯಿದ್ದು ಕುದುರೆಗಳು ನೀರುಕುಡಿಯಲು ಹೋಗುವಂತೆ ಮೆಟ್ಟಲುಗಳಿವೆ. ಸುತ್ತಲೂ ಸುರಂಗ ಮಾರ್ಗಗಳನ್ನು ಅಲ್ಲಿ ನೋಡಬಹುದು. ಆದರೆ ಈಗ ಕೆ. ಎಲ್. ಸಂಸ್ಥೆಯ ಅಧೀನದಲ್ಲಿದ್ದು ಅಲ್ಲಿ ಎಲ್ಲಾ ಅವಶೇಷಗಳನ್ನು ಮುಚ್ಚಿ ಹೊಸ ಕಟ್ಟಡಗಳು ನಿರ್ಮಾಣವಾಗುತ್ತಿವೆ. ಮಿರ್ಜಾನ ಕೋಟೆಯ ಕುಮಟಾ ತಾಲೂಕಿನಲ್ಲಿ ಮಿರ್ಜಾನದಲ್ಲಿ ಕಂಡು ಬರುತ್ತದೆ. ಕುಮಟೆಯಿಂದ 10 ಕಿ.ಮೀ. ಅಂತರದಲ್ಲಿ ಪ್ರಸಿದ್ಧ ಮಿರ್ಜಾನ ಇದೆ, ಈ ಕೋಟೆಗೆ ನಾಲ್ಕು ಪ್ರವೇಶ ಮಾರ್ಗಗಳಿದ್ದು ಅಗಲವಾದ ಮೆಟ್ಟಲುಗಳಿವೆ. 9 ಬಾವಿಗಳು ಸುರಂಗ ಮಾರ್ಗವಿದ್ದು ಪಕ್ಕದಲ್ಲಿ ಮಲ್ಲಿಕೇಶ್ವರ, ಲಕ್ಷೀ ನಾರಾಯಣ ದೇವಾಲಯಗಳಿವೆ. ಪಾರ್ಶ್ವನಾಥನ ಮುರಿದ ವಿಗ್ರಹ ಹಾಗೂ ಊರ ಹೊರಗೆ ಆರು ವೀರಗಲ್ಲುಗಳಿವೆ. ಹಿಂದೆ ಪ್ರಮುಖ ನೌಕಾ ವ್ಯಾಪಾರ ಕೇಂದ್ರವಾಗಿರಬಹುದು.

ಕಾರವಾರದ ಸದಾಶಿವಗಡದಲ್ಲಿ ಸದಾಶಿವಗಡ ಕೋಟೆಯಿದೆ. ಕಾರವಾರದ ಕಾಳಿನದಿಯ ಇನ್ನೊಂದು ತೀರದಲ್ಲಿ ಸದಾಶಿವಗಡವಿದೆ. (ಸದಾಶಿವಗಡ) ಎತ್ತರ ಗುಡ್ಡದಲ್ಲಿದ್ದು. ಕೋಟೆಯ ಪಕ್ಕದಿಂದಲೇ ಈಗ ಕಾಳಿ ಸೇತುವೆಯ ರಸ್ತೆ ಹೋಗಿದೆ. ಕೋಟೆಯಲ್ಲಿ ಕೊತ್ತಳ, ಕಿಂಡಿ, ತೋಪುಗಳನ್ನು ಅವಶೇಷಗಳನ್ನು ಕಾಣಬಹುದು. ಊರಲ್ಲಿ ಅನೇಕ ದೇವಾಲಯಗಳಿವೆ. "ಪೀರ ಕರಿಮದ್ದಿನ ಮಸೀದೆ" ಎಂಬ ದೊಡ್ಡ ಸುಂದರ ಮಸೀದೆ ಇದೆ. ಶಿರಶಿ ತಾಲೂಕಿನ ಬನವಾಸಿಯಲ್ಲಿ ಬನವಾಸಿ ಕೋಟೆಯಿದೆ. ಈ ಕೋಟೆಯ ಬನವಾಸಿಯಲ್ಲಿ ಕದಂಬ ಕಾಲದಾಗಿದ್ದು ಇಲ್ಲಿಯ ಮಧುಕೇಶ್ವರ ದೇವಾಲಯ ವಿಶಾಲವಾಗಿದ್ದು ಶಿಲ್ಪಕಲೆ. ಗರ್ಭ ಮಂಟಪ, ಅಂತರಾಳ ಮಂಟಪ, ಘಂಟಾ ಮಂಟಪ, ಸಭಾ ಮಂಟಪ, ನೃತ್ಯ ಮಂಟಪ ಎಂಬ ಮಂಟಪಗಳು ಗುಡಿಯಲ್ಲಿದ್ದು ಬಹಳ ಸುಂದರವಾಗಿ ಕಂಗೊಳಿಸುತ್ತವೆ. ಪ್ರತಿವರ್ಷ ಸರಕಾರವು ಕಂದಬ ಉತ್ಸವ ನಡೆಸುತ್ತದೆ. ಶಿರಸಿ, ಬನವಾಸಿ, ರಸ್ತೆಯಲ್ಲಿ ಗುಡ್ನಾಪುರ ಕೆರೆ ಐತಿಹಾಸಿಕವಾಗಿ ಪ್ರಸಿದ್ಧವಿದ್ದು ಕೆರೆಯ ಪಕ್ಕದಲ್ಲಿ ಕರಿಯಮ್ಮ, ಮರಿಯಮ್ಮ, ಬಂಗಾರೇಶ್ವರ ಮೊದಲಾದ ಗುಡಿಗಳನ್ನು ಹೊಂದಿವೆ. ಒಟ್ಟಿನಲ್ಲಿ ಬನವಾಸಿ ಪ್ರದೇಶವನ್ನು ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕು ಎನ್ನಿಸುತ್ತದೆ.

ಮಂಜಗುಣಿಯ ಈ ಪ್ರದೇಶವು ಶಿರಸಿಯಿಂದ 26 ಕಿ. ಮೀಟರ ಹತ್ತಿರದಲ್ಲಿದ್ದು ಇಲ್ಲಿ ವೆಂಕಟರಮಣ ದೇವಾಲಯವಿದ್ದು ಎರಡು ಕೈಗಳಲ್ಲಿ ಬಿಲ್ಲು ಬಾಣಗಳಿದ್ದು, ಇನ್ನೆರಡು ಕೈಯಲ್ಲಿ ಶಂಕ ಚಕ್ರಗಳಿದ್ದು ಕಪ್ಪು ಶಿಲೆಯ ಮೂರ್ತಿಯಾಗಿದ್ದು ಪ್ರಸಿದ್ಧ ಕ್ಷೇತ್ರವಾಗಿದೆ. ಮಂಜುಗುಣಿಯ ರಥದಷ್ಟು ಕಲಾತ್ಮಕ ಹಾಗೂ ದೊಡ್ಡದಾದ ರಥ ಇನ್ನೊಂದಿಲ್ಲ.

– 49ನೇ ಪುಟಕ್ಕೆ ಮುಂದುವರೆದುದು

SHIKSHAN SOUDHA 7th September 2016 Volume-VI Issue-II
ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಖಂಡಕಾವ್ಯ ಮತ್ತು ಮಹಾಕಾವ್ಯ : ಒಂದು ತೌಲನಿಕ ಟಿಪ್ಪಣಿ

✍ **ಪ್ರೊ. ಮಲ್ಲಪ್ಪ ಬಂಡಿ,** ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಕೆರಿಮತ್ತಿಹಳ್ಳಿ, ಹಾವೇರಿ.

ಕಾವ್ಯದ ವಿವಿಧ ಪ್ರಕಾರಗಳನ್ನು ಶಾಸ್ತ್ರೀಯವಾಗಿ ವರ್ಗೀಕರಿಸುವುದು ಅಷ್ಟು ಸರಳವಾದ ಕೆಲಸವೇನು ಅಲ್ಲ. ಕಾವ್ಯದ ಎರಡು ಪ್ರಧಾನರೂಪಗಳೆನಿಸಿರುವ ಮಹಾಕಾವ್ಯ ಮತ್ತು ಭಾವಗೀತೆಗಳನ್ನು ಅವುಗಳ ಗಾತ್ರಬಲದಿಂದ ಸುಲಭವಾಗಿ ವರ್ಗೀಕರಿಸಬಹುದಾದಂತೆ ಕಥನಕಾವ್ಯ ಜಾತಿಗೆ ಸೇರುವ ಕಾವ್ಯರೂಪಗಳನ್ನು ಗೆರೆ ಎಳೆದು ತೋರಿಸುವುದು ಕಷ್ಟಕರವೆಂದು ತೋರತ್ತದೆ. ಈ ಕಷ್ಟಕರವಾದ ಕೆಲಸವನ್ನು ಟಿ.ಎಸ್.ಇಲಿಯಟ್ ಕೆಲವು ವಿಶಿಷ್ಟ ಮಾನದಂಡಗಳನ್ನು ಅನುಸರಿಸಿ ವಿಂಗಡಿಸಲು ಯತ್ನಿಸಿದ್ದಾನೆ. "ಮೊದಲನೇಯದು, ಯಾವ ಅಭಿವ್ಯಕ್ತಿ ಪ್ರಕಾರ ಕವಿ ತನಗೆ ತಾನೆ ಮಾತನಾಡಿಕೊಂಡಂತೆ ಇರುತ್ತದೆಯೋ ಅಥವಾ ಯಾರನ್ನೂ ಉದ್ದೇಶಿಸಿದಂತೆ ತೋರುವುದಿಲ್ಲವೋ ಅದು. ಎರಡನೇಯದು ಯಾವ ಅಭಿವ್ಯಕ್ತಿ ಪ್ರಕಾರ ಸಣ್ಣದೋ, ದೊಡ್ಡದೋ ಆದ ಸಹೃದಯ ಸಮೂಹವೊಂದನ್ನು ಉದ್ದೇಶಿಸಿ ಮಾತನಾಡಿದಂತೆ ಇರುತ್ತದೆಯೋ ಅದು. ಮೂರನೇಯದು, ಯಾವ ಒಂದು ಪ್ರಕಾರದಲ್ಲಿ ಒಂದು ಕಲ್ಪಿತ ಪಾತ್ರ ಮತ್ತೊಂದು ಕಲ್ಪಿತ ಪಾತ್ರದೊಂದಿಗೆ ಸಂವಾದ ನಡೆಸುವ ಚೌಕಟ್ಟಿನಲ್ಲಿ ಕವಿ ಮಾತನಾಡುತ್ತಾನೋ ಅದು. ಮೊದಲನೆಯದು ಭಾವಗೀತೆ, ಎರಡನೇಯದು ಮಹಾಕಾವ್ಯ, ಮೂರನೇಯದು ನಾಟಕ."[1] ಇವನ ಈ ವರ್ಗೀಕರಣಕ್ಕೆ ಆಧಾರಬೂತವಾದ ಅಂಶಗಳೆಂದರೆ ಅ)ಕಾವ್ಯವು ವ್ಯಕ್ತಿ ನಿಷ್ಠವೊ, ವಸ್ತುನಿಷ್ಠವೊ ಎಂಬುದು. ಆ)ಅದು ಸಂವಹನಗೊಳ್ಳುವ ವಿಧಾನ. ಇಲಿಯಟ್‌ನ ಈ ವರ್ಗಿಕರಣ ಸ್ಥೂಲವಾದುದೇ ಹೊರತು ಕಾವ್ಯ ಪ್ರಕಾರಗಳ ನಡುವಿನ ಸೂಕ್ಷ್ಮ ಬೇದಗಳನ್ನು ಆಧರಿಸಿದ್ದಲ್ಲ. ಅವನು ವರ್ಗೀಕರಿಸಿದ ಪ್ರತಿಯೊಂದು ಪ್ರಕಾರದಲ್ಲಿಯೂ ಇಂದು ಅಂತರ್‌ಪ್ರಭೇದಗಳು ರೂಪುತಳೆದು ಅವು ಒಂದೂಂದು ಪ್ರತ್ಯೇಕ ಸ್ವತಂತ್ರ ಸ್ವಯಂಪೂರ್ಣ ಪ್ರಕಾರಗಳಾಗಿ ಬೆಳೆದು ನಿಂತಿವೆ. ಇಲಿಯಟ್‌ನ ವರ್ಗೀಕರಣದ ಎರಡನೇ ಗುಂಪಿಗೆ ಸೇರುವ ಮಹಾಕಾವ್ಯ ಮತ್ತು ಅದರಂತಹ ಇನ್ನೂ ಅನೇಕ ಕಥಾನಕಾವ್ಯ ಪ್ರಕಾರಗಳಿದ್ದು ಅವುಗಳನ್ನು ಸಮರ್ಪಕವಾಗಿ ವರ್ಗೀಕರಿಸುವುದು ಅಗತ್ಯವಾಗಿದೆ. ಆದರೆ ಕಥನಕಾವ್ಯ ಪ್ರಕಾರಗಳಲ್ಲಿ ಪ್ರಧಾನವಾದ ಮಹಾಕಾವ್ಯವನ್ನು ಅದೇ ಗುಂಪಿಗೆ ಸೇರುವ ಉಳಿದ ಕಾವ್ಯ ರೂಪಗಳಿಂದ ವರ್ಗೀಕರಿಸುವುದು ಜಟಿಲವಾದ ಕಾರ್ಯ. ಮಹಾಕಾವ್ಯವಲ್ಲದ ನೀಳ್ಗವಿತೆ (Nagrative Verse) ದೀರ್ಘಕಾವ್ಯ (Long Poem) ಮತ್ತು ಖಂಡಕಾವ್ಯ ಈ ರೂಪಗಳ ನಡುವಿನ ಅಂತರದ ಗೆರೆ ಬಹಳ ತೆಳುವಾದುದೇ ಇದಕ್ಕೆ ಕಾರಣ. ಅನೇಕ ಬಾರಿ ಈ ಕಾವ್ಯ ಪ್ರಕಾರಗಳ ಗುಂಪಿಗೆ ಸೇರುವ ಕೃತಿಗಳನ್ನು ಒಂದು ಪ್ರಕಾರಕ್ಕೆ ಸೇರುವ ಕೃತಿಯನ್ನು ಇನ್ನೊಂದು ಪ್ರಕಾರದ ಕೃತಿ ಎಂಬಂತೆ ಅರ್ಥಸಿದ ಸಂದರ್ಭಗಳಿವೆ. ಉದಾಹರಣೆಗೆ; ಕಡೆಂಗೋಡ್ಲು ಶಂಕರಭಟ್ಟರ **'ಮಾದ್ರಿಯ ಚಿತೆ'** ಎಂಬ ಖಂಡಕಾವ್ಯವನ್ನು ಡಾ. ಎಸ್. ಅನಂತನಾರಯಣರವರು ಕಥನಕವನವೆಂದು[2], ಬೇಂದ್ರೆಯವರ **ಸಖೀಗೀತ** ಖಂಡಕಾವ್ಯವನ್ನು ನೀಳ್ಗವಿತೆಯೆಂದು ಡಾ.ಎಚ್.ಎಸ್.ವೆಂಕಟೇಶ್ ಮೂರ್ತಿಯವರು ಗುರ್ತಿಸುತ್ತಾರೆ[3]. ಮಾಸ್ತಿವೆಂಕಟೇಶ್ ಅಯ್ಯಂಗಾರ್‌ರವರ **'ಶ್ರೀ ರಾಮ ಪಟ್ಟಾಭಿಷೇಕ'** ಪು.ತಿ.ನ ರವರ **'ಶ್ರೀ ಹರಿಚರಿತೆ'** ಇವುಗಳನ್ನು ಕೆಲವು ವಿದ್ವಾಂಸರು ಮಹಾಕಾವ್ಯಗಳೆಂದು ಮತ್ತೆ ಕೆಲವರು ಖಂಡಕಾವ್ಯವೆಂದು ಗುರುತಿಸುತ್ತಾರೆ. ಹೀಗೆ ಕಾವ್ಯ ಪ್ರಕಾರಗಳನ್ನು ಕುರಿತು ಕೈಗೊಂಡ ಅಭ್ಯಾಸಗಳಲ್ಲಿ ಒಂದೇ ಕಾವ್ಯ ಬೇರೆ ಬೇರೆ ಕಾವ್ಯಪ್ರಕಾರಗಳಿಗೆ ನಿರ್ದಶನವಾಗಿ ಕೊಡಲಾಗಿದೆ. ಇದಕ್ಕೆಲ್ಲ ಈ ಕಾವ್ಯ ಪ್ರಕಾರಗಳ ಸ್ವರೂಪ ಮತ್ತು ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸುವುದರಲ್ಲಿನ ತೊಡಕಷ್ಟೇ ಕಾರಣವಲ್ಲ, ಇವುಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸಗಳನ್ನು ಕುರಿತ ಹೋಲಿಕಾತ್ಮಕ ಅಧ್ಯಯನಗಳು ನಡೆಯದಿರುವುದು ಇನ್ನೊಂದು ಕಾರಣ. "ಪಾಶ್ಚಾತ್ಯರಲ್ಲಿನಂತೆ ಭಾರತೀಯ ಲಾಕ್ಷಣಿಕರು, ಮಹಾಕಾವ್ಯವನ್ನು ಕುರಿತು ಚರ್ಚಿಸುವಾಗ ಮಹಾಕಾವ್ಯಕ್ಕೂ ಇನ್ನುಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ಸಂಬಂಧ ಹಾಗೂ ವ್ಯತ್ಯಾಸಗಳನ್ನು ತೌಲನಿಕವಾಗಿ ವಿಚಾರ ಮಾಡಿದಂತೆ ತೋರುವುದಿಲ್ಲ."[4]. ಎಂಬ ಡಾ.ಜಿ.ಎಸ್. ಶಿವರುದ್ರಪ್ಪನವರ ಮಾತುಗಳು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಅದೆಂದರೆ ಸಂಸ್ಕೃತ ಸಾಹಿತ್ಯ ಮೀಮಾಂಸೆಯಲ್ಲಾಗಲಿ, ಕನ್ನಡ ಕಾವ್ಯ ಚಿಂತನೆಯ ಸಂದರ್ಭದಲ್ಲಿಯಾಗಲಿ, ಖಂಡಕಾವ್ಯದಂತಹ ಲಘುಕಾವ್ಯ ಪ್ರಕಾರಕ್ಕೂ ಸುಧೀರ್ಘವಾದ ಮಹಾಕಾವ್ಯ ಪ್ರಕಾರಕ್ಕೂ ಇರುವ ಸಂಬಂಧಾಂತರಗಳ ತೌಲನಿಕ ವಿವೇಚನೆ ನಡೆಯಲಿಲ್ಲ ಎನ್ನುವುದು. ಇದರ ಪರಿಣಾಮವಾಗಿ "ಖಂಡಕಾವ್ಯ ಮಹಾಕಾವ್ಯದ ಯಾವುದೋ ಒಂದು ಸರ್ಗದ ಭಾಗ ಮಾತ್ರವೆ ಆಗಿರುತ್ತದೆ."[5] ಎಂಬಂತಹ ನಿಲುವುಗಳು ವ್ಯಕ್ತವಾದವು. ಇನ್ನೂ ಮುಂದುವರೆದು, ಯಾವುದು ಮಹಾಕಾವ್ಯವಲ್ಲವೋ ಅದು ಖಂಡಕಾವ್ಯ, ಅಥವಾ ಅಸಫಲ ಮಹಾಕಾವ್ಯಗಳೆಲ್ಲ ಖಂಡಕಾವ್ಯಗಳು ಎಂಬಂತಹ ಸರಳೀಕೃತ ತೀರ್ಮಾನಗಳು ಬಂದಿವೆ. ಇವುಗಳನ್ನು ಸಾಧ್ಯಂತವಾಗಿ ಪರಿಶೀಲಿಸಿ ಖಂಡಕಾವ್ಯ ಮತ್ತು ಮಹಾಕಾವ್ಯಗಳ ನಡುವೆ ಇರುವ ಸಂಭಂದ ಮತ್ತು ವ್ಯತ್ಯಾಸಗಳ ತೌಲನಿಕ ವಿವೇಚನೆ ನಡೆಸಿ ಅವೆರಡೂ ಪ್ರತ್ಯೇಕ ಮತ್ತು ಸ್ವಯಂಪೂರ್ಣ ಕಾವ್ಯಪ್ರಕಾರಗಳೆಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಖಂಡಕಾವ್ಯ ಮತ್ತು ಮಹಾಕಾವ್ಯಗಳೆರೆಡು ವಸ್ತುನಿಷ್ಠ ಕಾವ್ಯಭಿವ್ಯಕ್ತಿಯ ಎರಡು ವಿಶಿಷ್ಟ ಮಾದರಿಗಳು. ಪ್ರಬಂಧಕಾವ್ಯ ಜಾತಿಗೆ ಸೇರುವ ಈ ರೂಪಗಳ ನಡುವೆ ಹಲವು ಸಾಮ್ಯತೆಗಳಿವೆ. ಇವೆರಡೂ ವಸ್ತುನಿಷ್ಟ ಕಾವ್ಯದ ಮಾದರಿಗಳು. ಸಣ್ಣದೋ, ದೊಡ್ಡದೋ ಆದ ಶ್ರಾವಕ ಸಮುದಾಯದ ಸಮ್ಮುಖದಲ್ಲಿ ವಾಚಿಸಲ್ಪಡುತ್ತಿದ್ದವುಗಳು, ಒಂದು ಇಲ್ಲವೇ ಅನೇಕ ಬಗೆಯ ಶ್ರವ್ಯವೃತ್ತಗಳಿಂದ ಕೂಡಿದ ರಸ ನಿರಂತರವಾದ ಕಥೆಯೊಂದನ್ನು ನಿರೂಪಿಸುವ ಕಥನಕಾವ್ಯಗಳು, ಗೇಯತೆ ಎರಡೂ ಪ್ರಕಾರದ ಕಾವ್ಯಗಳಿಗೆ ಅನ್ವಯವಾಗುವ ಸಮಾನ ಲಕ್ಷಣ. ಪುಣ್ಯ ಸಂಪಾದನಾರ್ಥಿಗಳಾದ ಶ್ರಾವಕ ಸಮುದಾಯದ ಸಮ್ಮುಖದಲ್ಲಿ, ಗಮಕ ರೂಪದಲ್ಲಿ ವಾಚಿಸಲ್ಪಡುವಂತಹುಗಳು. ಹಾಗೆಯೇ ಕಾವ್ಯಾರಾಂಭದಲ್ಲಿ ಕಾಣಿಸಿಕೊಳ್ಳುವ ದೇವತಾಸ್ತುತಿ, ನಮಸ್ಕಾರ ಇಲ್ಲವೇ ಹಾರೈಕೆ, ಕಥಾವಸ್ತುವಿನ ನಿರ್ದೇಶನ, ಕಾವ್ಯಾಂತ್ಯದಲ್ಲಿ ಬರುವ ಮಂಗಳ ಚರಣಗಳು ಮಹಾಕಾವ್ಯ ಸಂಪ್ರಾದಯದಂತೆ ಎರಡರಲ್ಲಿಯೂ ಸಮಾನವಾಗಿರುವುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಶೇಷ. ಇವೆಲ್ಲ ಲಕ್ಷಣಗಳು ಖಂಡಕಾವ್ಯಕ್ಕೂ, ಮಹಾಕಾವ್ಯಕ್ಕೂ ಇರುವ ಸಂಭಂದವನ್ನು ಸೂಚಿಸುತ್ತವೆ.

ಖಂಡಕಾವ್ಯ ಮಹಾಕಾವ್ಯ ಎಂಬ ಪದಗಳ ಮೇಲೆ ಪ್ರಯೋಗವಾಗಿರುವ 'ಖಂಡ' ಮತ್ತು 'ಮಹಾ' ಎಂಬ ವಿಶೇಷಣಗಳೇ ಅವರೆಡೂ ಕಾವ್ಯ ಪ್ರಕಾರಗಳ ಗಾತ್ರ, ವಿಸ್ತಾರ ಮತ್ತು ಅವುಗಳ ಆಂತರಿಕ ಸತ್ವಾತಿಶಯವನ್ನು ಸಂಕೇತಿಸುತ್ತವೆ. ಮಹಾಕಾವ್ಯ ಗಾತ್ರದಲ್ಲಿ ದೊಡ್ಡದು ವಿಸ್ತಾರದಲ್ಲಿ ವಿಶಾಲ, ಖಂಡಕಾವ್ಯಕ್ಕೆ ಈ ಯುಕ್ತಿಯಿಲ್ಲ. ಮಹಾಕಾವ್ಯ ಮಹಾಸರೋವರವಾದರೆ ಖಂಡಕಾವ್ಯ ಕಿರುಸರೋವರ, ಮಹಾಕಾವ್ಯ ಒಂದು ಮಹಾರಣ್ಯವಾದರೆ ಖಂಡಕಾವ್ಯ ಒಂದು ಉದ್ಯಾನವನ ಎನ್ನಬಹುದು. ಈ ರೂಪಕಗಳು ಮಹಾಕಾವ್ಯ ಭೂಮಾನೂಭೂತಿಯಲ್ಲಿ ಎತ್ತರ-ಬಿತ್ತರಗಳಲ್ಲಿ ಖಂಡಕಾವ್ಯಕ್ಕಿಂತ ಹೆಚ್ಚಿನ ಹಿರಿಮೆಯುಳ್ಳದ್ದು ಎಂಬುದನ್ನು ಧ್ವನಿಸುತ್ತವೆ. ಇಷ್ಟು ಹೇಳುವುದರಿಂದ ಈ ಕಾವ್ಯ ಪ್ರಕಾರಗಳ ನಡುವಿನ ಸಂಬಂಧಾಂತರಗಳ ವಿಶ್ಲೇಷಣೆ ಸ್ಪಷ್ಟವಾಗಲಾರದು. ಈ ಎರಡು ಕಾವ್ಯಪ್ರಕಾರಗಳ ಸ್ವರೂಪ ಲಕ್ಷಣಗಳನ್ನು ಕುರಿತಂತೆ ಲಾಕ್ಷಣೀಕರು ಕೈಗೊಂಡ ಚರ್ಚೆಯನ್ನು ಗಮನಿಸುವುದು ಸೂಕ್ತ. ಖಂಡಕಾವ್ಯ ಮತ್ತು ಮಹಾಕಾವ್ಯಗಳ ಸಂಬಂಧಾಂತರಗಳ ವಿವೇಚನೆಯನ್ನು ಶಾಸ್ತ್ರೀಯವಾಗಿ ಮಾಡುವುದಕ್ಕೆ ಈ ಪ್ರಕಾರಗಳನ್ನು ಕುರಿತ ಭಾರತೀಯ ಲಾಕ್ಷಣೀಕರ ಕಾವ್ಯ ಸೂತ್ರಗಳ ಪರಿಗಣನೆ ಬಹು ಮುಖ್ಯವಾದುದು. ಭಾಮಹ ಮಹಾಕಾವ್ಯದ ಲಕ್ಷಣವನ್ನು ಹೇಳಿದ ಮೊದಲಿಗ "ಅನೇಕ ಸರ್ಗಗಳು ಕೂಡಿ ಆದುದಕ್ಕೆ ಮಹಾಕಾವ್ಯವೆಂದು ಹೆಸರು. ಅದು ಮಹಾಪುರುಷರನ್ನು ಕುರಿತಿರುವುದಲ್ಲದೆ ಪರಿಮಾಣದಲ್ಲಿಯೂ ಮಹತ್ತಾಗಿರುವುದು.ಅದರ ಶಬ್ದಗಳಲ್ಲಿ ಗ್ರಾಮ್ಯ ಅಥವಾ ಅಶ್ಲೀಲ ದೋಷವಿರುವುದಿಲ್ಲ; ಅರ್ಥದಲ್ಲಿ ಗೌರವವಿರುತ್ತದೆ. ಅಲಂಕಾರಗಳಿಂದ ಭೂಷಿತವಾಗಿರುವುದಲ್ಲದೆ ಉತ್ತಮವಾಗಿ ವಸ್ತುವನ್ನಾಶ್ರಯಿಸಿರುತ್ತದೆ. ಮಂತ್ರಾಲೋಚನೆ, ದೂತರು, ಯುದ್ದ, ನಾಯಕಾಭ್ಯುದಯಗಳಿಂದಲೂ ಪಂಚಸಂಧಿಗಳಿಂದಲೂ ಸಮನ್ವಿತವಾಗಿರುತ್ತದೆ. ಕಷ್ಟಪಟ್ಟು ಅರ್ಥಮಾಡುವಂತಿರುವುದಿಲ್ಲ. ಎಲ್ಲ ರೀತಿಯಿಂದ ಸಮೃದ್ಧವಾಗಿರುತ್ತದೆ. ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪ್ರತಿಪಾದಿಸುತ್ತಿದ್ದರೂ, ವಿಶೇಷವಾಗಿ ಐಹಿಕವಾದ ಅರ್ಥದ ಉಪದೇಶಕ್ಕೆ ಪ್ರಾಧಾನ್ಯವಿರುತ್ತದೆ. ಲೋಕಸ್ವಭಾವವನ್ನು ಚಿತ್ರಿಸುವುದಲ್ಲದೆ ಬೇರೆ ಬೇರೆ ರಸಗಳೆಲ್ಲವನ್ನೂ ಒಳಗೊಂಡಿರುತ್ತದೆ."[6]. ಭಾಮಹನ ಈ ಸೂತ್ರ ವ್ಯಾಪಕವಾದುದು. ಇದು ಮಹಾಕಾವ್ಯದ ಸಮಗ್ರ ಲಕ್ಷಣಗಳನ್ನೆಲ್ಲ ಗರ್ಭೀಕರಿಸಿಕೊಂಡಿದೆ. ಮುಂದೆ ಬಂದ ಲಾಕ್ಷಣೀಕರೆಲ್ಲ ಭಾಮಹನ ಮಾತುಗಳನ್ನು ಪುನರುತ್ಪತ್ತಿ ಮಾಡಿದರೆ ಹೊರತು ಹೊಸದೇನನ್ನು ಹೇಳಲಿಲ್ಲ, ಈ ವಿಶಿಷ್ಟ ಲಕ್ಷಣಗಳೆಲ್ಲ ಖಂಡಕಾವ್ಯದಲ್ಲಿ ಕಾಣಸಿಗುವುದಿಲ್ಲ. ಕೆಲವು ಲಕ್ಷಣಗಳು ಮಾತ್ರ ನ್ಯೂನ ರೂಪದಲ್ಲಿ ಮೈದೋರುತ್ತವೆ. ಮೊದಲ ಬಾರಿಗೆ ಖಂಡಕಾವ್ಯದ ಲಕ್ಷಣವನ್ನು ಹೇಳಿದ ವಿಶ್ವನಾಥ **"ಖಂಡಕಾವ್ಯಂ ಭವೇತ್ಕಾವ್ಯಸ್ಯೈ ಕದೇಶಾನು ಸಾರಿಚಯಥಾ ಮೇಘಾದೂತಾದಿ"**[7] ಎಂಬುದು ಇವನ ಸೂತ್ರ. ವಿಶ್ವನಾಥನ ಈ ಸೂತ್ರ ಖಂಡಕಾವ್ಯದ ಸಕಲ ಲಕ್ಷಣಗಳನ್ನು ಹೇಳಲಿಲ್ಲ. ಖಂಡಕಾವ್ಯ ಎನ್ನುವುದು ಒಂದು ನಿರ್ದಿಷ್ಟ ಉದ್ದೇಶಾನುಸಾರಿಯಾದುದು ಎಂದು ಹೇಳಿದ ಮಾತ್ರಕ್ಕೆ ಆದರ ಪೂರ್ಣ ಸ್ವರೂಪ ಸ್ಪಷ್ಟವಾಗಲಿಲ್ಲ. ಮುಂದೆ ಬಂದ ಯಾವ ಮೀಮಾಂಸಕರು ಖಂಡಕಾವ್ಯದ ಸ್ವರೂಪ ಲಕ್ಷಣಗಳನ್ನು ಸೂತ್ರೀಕರಿಸುವುದಕ್ಕೆ ಹೋಗಲಿಲ್ಲ. ಇದರಿಂದಾಗಿ ಖಂಡಕಾವ್ಯವು ಮಹಾಕಾವ್ಯದಿಂದ ಎತ್ತಿ ತೆಗೆದ ಒಂದು ಭಾಗ ಎಂಬತಹ ಅಭಿಪ್ರಾಯಗಳು ಮೂಡಿದವು. ಅಷ್ಟು ಮಾತ್ರವಲ್ಲ ಖಂಡಕಾವ್ಯದ ವಸ್ತು ಮಹಾಕಾವ್ಯಾಶ್ರಿತವಾದುದು. ಅವುಗಳು "ಯಾವುದೋ ಮಹಾಕಾವ್ಯ ಸಂದರ್ಭದಲ್ಲಿ ಬರುವ ಸನ್ನಿವೇಶವನ್ನೋ, ಪಾತ್ರವನ್ನೊ, ತತ್ವವನ್ನೊ ಪ್ರತ್ಯೇಕವಾಗಿ ಎತ್ತಿಕೊಂಡು, ಆ ವಿಶಿಷ್ಟ ರೀತಿಯಲ್ಲಿ ರಚಿಸಿ ಅದರದೇ ಆದ ಮುಕ್ತಾಯ ನೀಡುವುದು."[8] ಎಂಬಂತಹ ಅಭಿಪ್ರಾಯ ವ್ಯಕ್ತವಾಯಿತು. "ಖಂಡಕಾವ್ಯ ಮಹಾಕಾವ್ಯದ ಯಾವುದೋ ಒಂದು ಸರ್ಗದ ಭಾಗ ಮಾತ್ರವೇ ಆಗಿರುತ್ತದೆ."[9] ಈ ಬಗೆಯ ವ್ಯಾಖ್ಯಾನಗಳಿಂದಾಗಿ ಖಂಡಕಾವ್ಯ ಮಹಾಕಾವ್ಯದ ಪಡಿನೆಡಲು ಎಂಬರ್ಥವನ್ನು ಹೊರಡಿಸಿದವು. ನಿಜವಾಗಿ ನೋಡಿದರೆ ಖಂಡಕಾವ್ಯ ಮಹಾಕಾವ್ಯದ ಭಾಗವಲ್ಲ. ಅದರಿಂದ ಎತ್ತಿತೆಗೆದ ತುಣುಕೂ ಅಲ್ಲ, ಅದೊಂದು ಸರ್ವತಂತ್ರ ಸ್ವತಂತ್ರ ವಾದ, ಸ್ವಯಂಪೂರ್ಣ ಕಾವ್ಯ. ಆದರ ವಸ್ತು ಮಹಾಕಾವ್ಯದಿಂದಲೇ ತೆಗೆದುಕೊಂಡಿರಬೇಕಾದುದಿಲ್ಲ ಪುರಾಣ, ಇತಿಹಾಸ, ಮಾನವ ಸ್ವಭಾವ ಮತ್ತು ಲೋಕಸ್ವಭಾವ ಹೀಗೆ ಎಲ್ಲ ಸಂಗತಿಗಳು ಅದರ ವಸ್ತುವಾಗಬಹದು. ಹಾಗೆಯೇ ಅಪೂರ್ಣ ಮಹಾಕಾವ್ಯಗಳನ್ನು ಖಂಡಕಾವ್ಯಗಳೆಂದು ಕರೆಯಲುಬಾರದು. ಅಪೂರ್ಣತೆ ಖಂಡಕಾವ್ಯದ ಲಕ್ಷಣವಲ್ಲ. ಖಂಡಕಾವ್ಯವು ನಿರ್ದಿಷ್ಟವಾದ ಆರಂಭ, ಮಧ್ಯ, ಅಂತ್ಯ ಈ ಕಥಾವಿನ್ಯಾಸವನ್ನು ಒಳಗೊಂಡಿರುವಂತಹದು. ಅದು ಇನ್ನೊಂದರ ಖಂಡ ಅಥವಾ ಭಾಗವಲ್ಲ, ಚೂರಲ್ಲ, ಹೋಳಲ್ಲ, ಮುರುಕಲ್ಲ. ಅದಕ್ಕೆ ತನ್ನದೇ ಅದ ವಿಶೀಷ್ಟ ರೂಪವಿದೆ.ಸ್ವರೂಪವಿದೆ, ಆತ್ಮವಿದೆ ಸೌಂದರ್ಯವಿದೆ. ಆದರೆ ಗಮನಿಸಬಹುದಾದ ಒಂದು ಮುಖ್ಯ ಸಂಗತಿ ಅಂದರೆ ರೂಪ ಮತ್ತು ಶೈಲಿಯಲ್ಲಿ ಖಂಡಕಾವ್ಯಕ್ಕೂ ಮಹಾಕಾವ್ಯಕ್ಕೂ ಹೋಲಿಕೆ ಉಂಟು. ಅದರ ಭವ್ಯತೆ ಇದಕ್ಕೆ ದಕ್ಕಿಲ್ಲ ಅಲ್ಲದೆ ಮಹಾಕಾವ್ಯ ಒಳಗೊಳ್ಳುವ ರಾಷ್ಟ್ರೀಯ ಪ್ರಜ್ಞೆ ಮತ್ತು ಜನಾಂಗೀಕ ಸ್ಮೃತಿಗಳಿಂದ ಹರಳುಗಟ್ಟಿದ ವಿಶಾಲ ಸಂಸ್ಕೃತಿಯೊಂದರ ದರ್ಶನ ಖಂಡಕಾವ್ಯದಲ್ಲಿ ಪ್ರತಿಪಾದಿತವಾಗುವುದಿಲ್ಲ.

ಮಹಾಕಾವ್ಯ ತಾನು ರಚನೆಯಾದ ಕಾಲದ ಮತ್ತು ಜನಾಂಗದ ಯುಗ ಮೌಲ್ಯಗಳನ್ನು, ಸಮಷ್ಟಿ ಪ್ರಜ್ಞೆಯನ್ನು ತನ್ನೊಳಗೆ ಅಂತರ್ಗತಗೊಳಿಸಿಕೊಂಡಿರುತ್ತದೆ. ಈ ಸಾಧ್ಯತೆ ಖಂಡಕಾವ್ಯಕ್ಕೆ ಇಲ್ಲ. ಯುಗ ಯುಗಾಂತರಗಳವರೆಗೆ ತನ್ನ ಪ್ರಭಾವವನ್ನು ಬೀರುವ ಶಕ್ತಿ ಮಹಾಕಾವ್ಯಕ್ಕೆ ಇರುವಂತೆ ಖಂಡಕಾವ್ಯಕ್ಕೆ ಇರಲಾರದು. ಮಹಾಕಾವ್ಯ ಮಾನವ ಬದುಕಿನ ಚಿರಂತನ ಮೌಲ್ಯಗಳ ಅಭಿವ್ಯಕ್ತಿಯಾದರೆ, ಖಂಡಕಾವ್ಯ ಯಾವುದಾದರೊಂದು ಉಪದೇಶ ಸಾರುವ ಸೀಮಿತ ವ್ಯಾಪ್ತಿಯುಳ್ಳ ಒಂದು ರಚನಾ ವಿಶೇಷ. ಆದ್ದರಿಂದ "ಮಹಾಕಾವ್ಯ ಪ್ರಬಂಧಕಾವ್ಯ ಜಾತಿಯಲ್ಲಿ ಶ್ರೇಷ್ಠವಾದುದಾದರೆ ಖಂಡಕಾವ್ಯ ಕನಿಷ್ಠವಾದುದು"[10] ಎಂಬ ಅಭಿಪ್ರಾಯ ಮೌಲಿಕವಾಗಿದೆ.

ವಸ್ತುವಿನ ದೃಷ್ಟಿಯಿಂದಲೂ ಈ ಕಾವ್ಯಪ್ರಕಾರಗಳ ನಡುವೆ ಸಮಾನಾಂಶಗಳು ಇರುವಂತೆ ಕೆಲವು ಭಿನ್ನಾಂಶಗಳೂ ಇವೆ. ಸಾಮಾನ್ಯವಾಗಿ ಚರಿತ್ರೆ, ಪುರಾಣ, ಮನುಷ್ಯ ಸ್ವಭಾವ ಮತ್ತು ಲೋಕ ಸ್ವಭಾವಗಳು ಯಾವುದೇ ಪ್ರಕಾರದ ಕಾವ್ಯಕ್ಕೂ ವಸ್ತುವಾಗಿರುವಂತೆ, ಖಂಡಕಾವ್ಯ ಮತ್ತು ಮಹಾಕಾವ್ಯಗಳೆರಡಕ್ಕೂ ವಸ್ತುವನ್ನು ಇಲ್ಲವೆ ಪ್ರೇರಣೆಯನ್ನು ಒದಗಿಸಿವೆ. ವಸ್ತುವನ್ನು ನಿರೂಪಿಸಲು ಇವು ಕಥನವಿಧಾನವನ್ನು ಅನುಸರಿಸುತ್ತವೆ. ಮಹಾಕಾವ್ಯದ ವಸ್ತು ಮಹತ್‌ಸ್ವರೂಪದ್ದಾದರೆ ಖಂಡಕಾವ್ಯದ ವಸ್ತು ಲಘುತರವಾದದ್ದು. ಈ ಭಿನ್ನತೆಗೆ ಕಾರಣ ಆ ಎರಡೂ ಕಾವ್ಯ ಪ್ರಕಾರಗಳ ಆವರಣ. "ಮಹಾಕಾವ್ಯದ ವಸ್ತು ಗಂಭೀರವಾದದ್ದಾಗಿಯೂ, ಮಹಾಕಾರಣಗಳನ್ನು ಮೂಲಮಾನವನ್ನಾಗಿ ಉಳ್ಳ ಮಹದ್ ಘಟನೆಗಳಿಂದ ಕೂಡಿರಬೇಕು."[11] "ಅದು ಒಂದು ಜನಾಂಗದ ಪೌರಾಣಿಕ ವೀರರ ಕಾರ್ಯಗಳನ್ನು ಕುರಿತದ್ದು"[12] "ಅದು ಮಹಾಪುರುಷರನ್ನು ಕುರಿತದ್ದಾಗಿರುತ್ತದೆ."[13] ಮೇಲಿನ ಲಕ್ಷಣಗಳನ್ನೆಲ್ಲ ಗಮನಿಸಿದರೆ ಮಹಾಕಾವ್ಯದ ವಸ್ತು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಉದಾತ್ತವಾದುದ್ದು, ಗಂಭೀರವಾದುದು, ಮಹಾಪುರಷರ ಬದುಕನ್ನು ಕುರಿತಾದುದು, ವೀರವ್ಯಕ್ತಿ ಪ್ರಧಾನವಾದದ್ದು ಎಂಬ ಸಂಗತಿಗಳು ಸ್ಪಷ್ಟವಾಗುತ್ತವೆ.

ಖಂಡಕಾವ್ಯದ ವಸ್ತು ಮಹಾಪುರುಷರನ್ನು ಕುರಿತದ್ದು ಇರಬಹುದು ಸಾಮಾನ್ಯ ಮನುಷ್ಯನ ಬದುಕನ್ನಾದರೂ ಆದರಿಸಿದ್ದಿರಬಹುದು.ಆದರೆ ಆ ಬದುಕಿನ ಸಮಗ್ರ ಅನುಭವಗಳ ಅನಂತಮುಖಗಳ ದರ್ಶನ ಇಲ್ಲಿ ಇರಲಾರದು. ಯಾವುದಾದರೊಂದು ಘಟನೆಯ ಯಾವುದೋ ಒಂದು ಮುಖದ ಅನಾವರಣ ಇಲ್ಲಿ ಮೂಡಬಹುದಷ್ಟೇ.

ಮಹಾಕಾವ್ಯಕ್ಕೆ ಹೋಲಿಸಿದರೆ ಖಂಡಕಾವ್ಯದಲ್ಲಿ ಪಾತ್ರಗಳ ಸಂಖ್ಯೆ ತುಂಬಾ ಕಡಿಮೆ. ಹೆಚ್ಚೆಂದರೆ ಮೂರು ನಾಲ್ಕು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಅಲ್ಲದೆ ಪಾತ್ರಗಳು ಕ್ರಮಕ್ರಮವಾಗಿ ವಿಕಾಸ ಹೊಂದುವುದಕ್ಕೆ ಪೂರಕವಾದ ಆವರಣವಿರುವುದಿಲ್ಲ. ಮಹಾಕಾವ್ಯಕ್ಕೆ ಹೋಲಿಸಿದರೆ ಖಂಡಕಾವ್ಯದ ಶರೀರ ಬಹಳ ಸಣ್ಣದಾಗಿರುವುದೇ ಇದಕ್ಕೆ ಕಾರಣ. ಮಹಾಕಾವ್ಯದ ನಾಯಕ ಉದಾತ್ತವ್ಯಕ್ತಿ, ಅವನು ಪರಮಸದ್ಗುಣ ಮೂರ್ತಿ. ಅವನು ವೀರನು, ಧೀರೋದ್ಧಾತನು, ಚತುರನು ಆಗಿರುವುದು ಸಾಮಾನ್ಯ. ಅಲ್ಲಿ ಅವನ ಬದುಕಿನ ಸಾಹಸ ಅದ್ಭುತಗಳ ವೀರ ಕಾರ್ಯಗಳ ನಿರೂಪಣೆ ಕಂಡುಬರುತ್ತದೆ. ಆದರೆ ಖಂಡಕಾವ್ಯದಲ್ಲಿ ಹೀಗಾಗುವುದಿಲ್ಲ. ಅವನು ಉದಾತ್ತನು, ದೀರನು, ಚತುರನು, ಆಗಿರುವಂತೆ ಉದಾತ್ತನೂ, ಲಲಿತ, ಶಾಂತ, ಗಾಂಭೀರ ಹೀಗೆ ಯಾವ ಸ್ವಭಾವದವನು ಆಗಿರಬಹುದು. ಮಹಾಕಾವ್ಯದ ನಾಯಕ ಪಾತ್ರವು ಸಿದ್ಧ ಪ್ರಸಿದ್ಧ, ಇತಿಹಾಸ ಅಥವ ಪುರಾಣದ ವೀರ ವ್ಯಕ್ತಿತ್ವವೇ ಆಗಿರುತ್ತದೆ. ಆದರೆ ಖಂಡಕಾವ್ಯದ ನಾಯಕಪಾತ್ರ ಮಹಾಕಾವ್ಯದಂತೆ ಸಿದ್ದ ಪಡಿಯಚ್ಚಿನ ಸ್ವರೂಪದ್ದಲ್ಲ. ಅಲ್ಲದೆ ಬಹುತೇಕ ಭಾರತೀಯ ಮಹಾಕಾವ್ಯಗಳಲ್ಲಿ ಕಂಡು ಬರುವ ಪ್ರತಿನಾಯಕನ ಕಲ್ಪನೆ ಖಂಡಕಾವ್ಯಕ್ಕೆ ಅನಿವಾರ್ಯವಾದುದಲ್ಲ.

ಖಂಡಕಾವ್ಯದ ಕಥಾನಕ ಮಹಾಕಾವ್ಯದಷ್ಟೂ ಸುಧೀರ್ಘವಾಗಿ ಇರಲಾರದು. ಏಕೆಂದರೆ ಮಹಾಕಾವ್ಯ ಶರೀರದ ವಿಸ್ತಾರಕ್ಕೆ ಕಾರಣವಾಗಿರುವ ಮುಖ, ಪ್ರತಿಮುಖ, ಪ್ರತಿಮುಖಕಲ್ಪ, ವಿಮರ್ಶೆ ಮತ್ತು ನಿರ್ವಹಣ ಎಂದು ನಾಟ್ಯಶಾಸ್ತ್ರದಲ್ಲಿ ಹೇಳಲಾಗಿರುವ ಪಂಚಸಂಧಿಗಳು,ಅಷ್ಟದಶ ವರ್ಣನೆಗಳು, ಮಂತ್ರದೂತಾದಿ ಪಂಚಕಗಳು ಖಂಡಕಾವ್ಯದಲ್ಲಿ ಕಾಣಬರುವುದಿಲ್ಲ. ಅಷ್ಟೇ ಅಲ್ಲದೆ ಮಹಾಕಾವ್ಯದಲ್ಲಿ ಇರುವಷ್ಟು ಸಂಖ್ಯೆಯ ಸರ್ಗಗಳನ್ನು ಖಂಡಕಾವ್ಯದಲ್ಲಿ ಕಲ್ಪಿಸಲಾಗದು.

ಖಂಡಕಾವ್ಯ ಗಾತ್ರದಲ್ಲಿಯೂ ವಿಸ್ತಾರದಲ್ಲಿಯೂ ಮಹಾಕಾವ್ಯಕ್ಕೆ ಹೋಲಿಸಿದರೆ ಸಂಕ್ಷಿಪ್ತವಾಗಿರುದಕ್ಕೆ ಇನ್ನೊಂದು ಕಾರಣವೆಂದರೆ ಅದರ ಕಥನ ನಿರೂಪಣೆಯ ಕ್ರಮ. ಸಾಮಾನ್ಯವಾಗಿ ಮಹಾಕಾವ್ಯದಲ್ಲಿ ನಿರೂಪಣೆಯು ಪ್ರಧಾನತೆಯನ್ನು ಕೇಂದ್ರವಾಗಿರಿಸಿಕೊಂಡಿರುತ್ತದೆ. ಅದನ್ನು ಉಜ್ವಲಗೊಳಿಸಲು ಪ್ರಾಸಂಗಿಕ ಕಥೆಗಳು, ಉಪಕಥೆಗಳು, ಅಖ್ಯಾನ, ಉಪಖ್ಯಾನ, ಪ್ರತ್ಯಾಖ್ಯಾನಗಳು ನಿಭೀಡವಾಗಿ ಬರುತ್ತವೆ. ಆದರೆ ಖಂಡಕಾವ್ಯದಲ್ಲಿ ಪ್ರಧಾನಕಥೆಗೆ ಉಪಸ್ಕಾರಕವಾಗಿ ಉಪಕಥೆಗಳಾಗಲಿ, ಪ್ರಾಸಗಿಕ ಕಥೆಗಳಾಗಲಿ, ಆಖ್ಯಾನ ಉಪಖ್ಯಾನಗಳಾಗಲಿ ಬರುವುದಿಲ್ಲ. ಕಥೆಯ ಓಟ ಯಾವ ಬಳಸುದಾರಿಗಳನ್ನು ಹಿಡಿಯದೆ ನೇರವಾಗಿ ಮುಂಬರಿಯುತ್ತದೆ.

ಖಂಡಕಾವ್ಯದ ಪ್ರಧಾನಕಥೆಯಲ್ಲಿನ ಕ್ರಿಯೆಗಳು ಮತ್ತು ಘಟನೆಗಳು, ಆಂತರಿಕವಾದ ಸಾವಯವ ಸಮನ್ವಯದಿಂದ ಕೂಡಿ ಸಂಯೋಜಿತ ವಾಗಿರುತ್ತವೆ. ಮಹಾಕಾವ್ಯದಲ್ಲಿರುವಂತೆ ಕಥೆಯೊಳಗೊಂದು ಕಥೆ (Story inside a story) ಎಂಬ ಕಥನತಂತ್ರ ಖಂಡಕಾವ್ಯದಲ್ಲಿ ಕಾಣಲಾರದು. ಒಂದು ವೇಳೆ ಕವಿಗೆ ಉಪಕಥೆಗಳನ್ನು ಪ್ರಾಸಂಗಿಕ ಕಥೆಗಳನ್ನು ತರಲೇಬೇಕೆಂದಿದ್ದಲ್ಲಿ ಪ್ರಧಾನ ಕಥೆಯ ಶರೀರದೊಳಗೆ ಸಂಗ್ರಹವಾಗಿ, ಅಡಕವಾಗಿ ಬರುವಂತೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಅವು ಕಾವ್ಯದ ಕಥಾ ಹಂದರದಿಂದ ಪ್ರತ್ಯೇಕವೆಂಬಂತೆ ತೋರಬಾರದು. ಕನ್ನಡದ ಮೊದಲ ಖಂಡಕಾವ್ಯವೆಂದು ಕರೆಯಿಸಿಕೊಳ್ಳಲು ಅರ್ಹವಾಗಿರುವ ರನ್ನನ **ಗದಾಯುದ್ಧ**ದಲ್ಲಿ ಅದೆಷ್ಟೋ ಉಪಕಥೆಗಳು, ಪ್ರಾಸಂಗಿಕಕಥೆಗಳು ಸಂಗ್ರಹವಾಗಿ ಅಡಕವಾಗಿ ಪ್ರದಾನಕಥೆಯ ಮೈಯೊಳಗೆ ಅಭಿನ್ನವೆಂಬಂತೆ ಸಾಂದ್ರವಾಗಿ ಮಿಳಿತವಾಗಿರುವುದನ್ನು ನಿದರ್ಶಿಸಬಹದು. ಹಾಗೇಯೇ ಆಧುನಿಕ ಕನ್ನಡ ಸಂದರ್ಭದ ಕುವೆಂಪುರವರ **'ಸಮುದ್ರಲಂಘನ'** ಖಂಡಕಾವ್ಯದಲ್ಲಿ ಬರುವ ಸಂಪಾತಿಯ ಶಾಪದ ಪ್ರಸಂಗ, ಗವಾಯನಿಗೆ ಋಷಿಗಳಿಂದ ಒದಗಿದ ಶಾಪ ಪ್ರಸಂಗಗಳು ಮುಖ್ಯ ಕಥೆಯೊಳಗೆ ಸೇರಿಹೋಗಿರುವುದನ್ನು ಗಮನಿಸಬಹುದು. ಮಹಾಕಾವ್ಯದ ಕಥನದ ಗತಿ ಸಾವಕಾಶವಾದದ್ದು, ಖಂಡಕಾವ್ಯದ ಕಥನದ ಗತಿ ಸವೇಗವಾದದ್ದು ಆದರೆ ಎರಡರಲ್ಲೂ ಕಥೆಯ ನಡಿಗೆ ಗಂಭೀರವಾಗಿರುತ್ತದೆ. ಈ ಎರಡೂ ಕಾವ್ಯಪ್ರಕಾರಗಳ ಸಂಬಂಧಾಂತರಗಳ ಈ ಚರ್ಚೆಯಿಂದ ಹೊರಡುವ ಒಂದು ಮುಖ್ಯ ತೀರ್ಮಾನವೆಂದರೆ ಮಹತ್ ಎನ್ನುವುದು ಮಹಾಕಾವ್ಯದ ವೈಶಿಷ್ಟ್ಯವಾದರೆ, ಲಘುತ್ವ ಖಂಡಕಾವ್ಯದ ವಿಶೇಷತೆ. ಇದರಿಂದಾಗಿ ಮಹತ್ ಲಕ್ಷಣವುಳ್ಳ ಮಹಾಕಾವ್ಯ ಶ್ರೇಷ್ಠ, ಲಘುತ್ವ ಸ್ವರೂಪದ ಖಂಡಕಾವ್ಯ ಕನಿಷ್ಟ ಎಂದೇನೂ ಭಾವಿಸಬೇಕಾಗಿಲ್ಲ. ಎರಡಕ್ಕೂ ಅನ್ವಯವಾಗುವ ಸಮಾನ ಗುಣಗಳಿರುವಂತೆ ಭಿನ್ನ ಲಕ್ಷಣಗಳು ಅವುಗಳ ಪ್ರತ್ಯೇಕತೆಯನ್ನು, ವೈಶಿಷ್ಟ್ಯವನ್ನು ಶೃತ ಪಡಿಸಿವೆ.

ಇದುವರೆಗಿನ ನಮ್ಮ ತೌಲನಿಕ ವಿವೇಚನೆಯ ಬೆಳಕಿನಲ್ಲಿ ಕನ್ನಡ ಸಾಹಿತ್ಯ ಪರಂಪರೆಯನ್ನು ಪುನರಾವಲೋಕನಕ್ಕೆ ಒಳಪಡಿಸಿದರೆ, ಕೆಲವು ಹೊಸ ಸಂಗತಿಗಳು ಗೋಚರಿಸುತ್ತವೆ. 10 ರಿಂದ 19 ಶತಮಾನದವರೆಗಿನ ಕಾವ್ಯಕೃತಿಗಳು ಸುದೀರ್ಘವಾದ ಕಥನಕಾವ್ಯ ಪರಂಪರೆಗೆ ಸೇರಿದವುಗಳು. (ವಚನಗಳು ಮತ್ತು ಕೀರ್ತನೆಗಳನ್ನು ಹೊರತುಪಡಿಸಿ) "ಹಿಂದಿನ ಕನ್ನಡ ಸಾಹಿತ್ಯದ ಮಟ್ಟಿಗಂತೂ ಹೇಳುವುದಾದರೆ, ಬರೆಯುವ ಕವಿಗಳೆಲ್ಲ 'ಮಹಾಕಾವ್ಯ'ವನ್ನೆ ಬರೆಯಬೇಕೆಂಬ ಉದ್ದೇಶ ಉಳ್ಳವರಾಗಿದ್ದರು. ಹೀಗಾಗಿ ಪ್ರತಿಯೊಬ್ಬರೂ ತಾವು ಬರೆದದ್ದೆ ಮಹಾಕಾವ್ಯ ಎಂದು ತಮ್ಮ ಕಾವ್ಯದ ಪೀಠಿಕಾಪ್ರಕರಣಗಳಲ್ಲಿ ಹೇಳಿಕೊಳ್ಳುವುದು ಅಭ್ಯಾಸವಾಯಿತು. ಓದುಗರೂ ಸಹ, ಕನ್ನಡದ ಬಹುತೇಕ ಕಾವ್ಯಗಳನ್ನು ಮಹಾ ಕಾವ್ಯಗಳೆಂದೂ, ಅದನ್ನು ಬರೆದವರನ್ನು ಮಹಾಕವಿಗಳೆಂದೂ ಕರೆಯುವುದನ್ನು ಅಭ್ಯಾಸಮಾಡಿಕೊಂಡರು. ಮಹಾಕಾವ್ಯ ಎಂದರೆ ಏನು, ಅದನ್ನು ಉಳಿದೆಲ್ಲ ಬಗೆಯ ಕಾವ್ಯಗಳಿಂದ ಪ್ರತ್ಯೇಕಿಸಿ ನೋಡುವುದು ಹೇಗೆ ಎನ್ನುವ ಕಡೆಗೆ ಲಕ್ಷ್ಯವನ್ನೇ ಕೊಟ್ಟಂತೆ ಕಾಣಿಸುವುದಿಲ್ಲ.ಒಂದು ಪುರಾಣಕತೆಯನ್ನು ಕೆಲವು ಲಕ್ಷಣಗಳಿಗೆ ಅನುಗುಣವಾಗಿ ಹೇಳಿದರೆ ಅದು 'ಮಹಾಕಾವ್ಯ'ವಾಯಿತು– ಎಂದು ಬಹುಮಂದಿ ಭಾವಿಸಿದಂತೆ ತೋರುತ್ತದೆ."[14] ಹೀಗಾಗಿ ಕನ್ನಡದ ಅನೇಕ ಕಾವ್ಯಗಳು ಮಹಾಕಾವ್ಯವೆಂಬ ಗೌರವಕ್ಕೆ ಪಾತ್ರವಾಗುವ ಸತ್ವ ಶಕ್ತಿಗಳನ್ನು ಪಡೆಯಲ್ಲಿಲ್ಲ. ಅಲ್ಲೆಲ್ಲ ಗತಾನುಗತಿಕವಾದ ವರ್ಣನೆಗಳು, ಅಷ್ಟದಶಸ್ಥಳಗಳು ಜಡ್ಡುಗಟ್ಟಿದ ಮತಾಂಶಗಳು ಕವಿಯ ಮಾಹೋಜ್ವಲ ಪ್ರತಿಭೆಗೂ, ಕಾವ್ಯಗಳ ಮಹೋನ್ನತ ಶಕ್ತಿಗೂ ರಾಹುಹಿಡಿಸಿಬಿಟ್ಟವು. ಹೀಗಿರುವುದರಿಂದ ಕನ್ನಡದಲ್ಲಿ ಮಹಾಕಾವ್ಯದ ಎತ್ತರಕ್ಕೆ ತಲುಪವ ಕೃತಿಗಳು ಕೆಲವೇ ಕೆಲವು. ಪಂಪ, ನಾರಣಪ್ಪ, ರತ್ನಾಕರವರ್ಣಿ, ಲಕ್ಷ್ಮೀಶರನ್ನು ಉಳಿದು ಬೇರಾವ ಕವಿಗಳ ಕಾವ್ಯಗಳು ಆ ಅರ್ಹತೆಗೆ ಪಾತ್ರವಾಗಲಾರವು. ಆದರೆ ಕೆಲವು ಕೃತಿಗಳು ಖಂಡಕಾವ್ಯದ ರೂಪ ಲಕ್ಷಣಗಳಿಗೆ ಸರಿಯಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೊಂದುವಂತೆ ಇರುವುದನ್ನು ಗಮನಿಸಬಹುದು. ರನ್ನನ **ಗದಾಯುದ್ಧ,** ಜನ್ನನ **ಯಶೋದರ ಚರಿತೆ,** ಆಡಂಯ್ಯನ **ಕಬ್ಬಿಗರ ಕಾವಂ,** ಷಡಕ್ಷರ ದೇವನ **ಶಬರಶಂಕರ ವಿಳಾಸಂ,** ಕನಕದಾಸರ **ನಳಚರಿತೆ** ಮತ್ತು **ರಾಮಧಾನ್ಯ ಚರಿತೆ,** ಹೆಳವನಕಟ್ಟೆ ಗಿರಿಯಮ್ಮನ **ಚಂದ್ರಹಾಸನ ಕಥೆ,** ನಂದಳಿಕೆ ಲಕ್ಷ್ಮೀನಾರಾಯಣಪ್ಪನ **ರಾಮಪಟ್ಟಾಭಿಷೇಕ** ಮತ್ತು **ರಾಮಾಶ್ವಮೇದಂ**. ಇವೆಲ್ಲವಾಸ್ತವಾಗಿ ಖಂಡಕಾವ್ಯಗಳೇ ಆಗಿವೆ. ಆದರೆ ಇಂದು ಕಥನಕಾವ್ಯ ಪ್ರಕಾರಗಳನ್ನು ಶಾಸ್ತ್ರೀಯವಾಗಿ ವರ್ಗೀಕರಿಸದ ಕಾರಣದಿಂದಾಗಿ ಇವು ಮಹಾಕಾವ್ಯಗಳೆಂದು ಪರಿಗಣಿತವಾಗಿವೆ.

ಖಂಡಕಾವ್ಯ ಮತ್ತು ಮಹಾಕಾವ್ಯ ಈ ಎರಡೂ ವರ್ಗೀಕರಣಗಳ ಪರಿಧಿಗೆ ಸೇರದ ಅನೇಕ ಕಾವ್ಯಗಳಿವೆ. ಉದಾಹರಣೆಗೆ:- ಹರಿಹರನ **ಗಿರಿಜಕಲ್ಯಾಣ,** ರಾಘವಂಕನ **ಸೋಮನಾಥ ಚರಿತೆ,** ನಯಸೈನನ **ಧರ್ಮಾಮೃತ,** ಭೀಮಕವಿಯ **ಬಸವಪುರಾಣ,** ವಿರುಪಾಕ್ಷಪಂಡಿತನ **ಚೆನ್ನಬಸವಪುರಾಣ** ಮೊದಲಾದ ಕೃತಿಗಳನ್ನು ದೀರ್ಘ ಕಥನಕಾವ್ಯಗಳು (Long narrative poems) ಎಂದು ವಿಂಗಡಿಸಬಹುದಷ್ಟೇ. ಇವು ಮಹಾಕಾವ್ಯ ಸಂಪ್ರದಾಯದ ಅನೇಕ ಲಕ್ಷಣಗಳನ್ನು ಹೊಂದಿವೆಯಾದರು ಭವ್ಯತೆ, ಅನುಭವದ ಅಭಿವ್ಯಕ್ತಿಯಲ್ಲಿ, ಮಾನವ ಬದುಕಿನ ಅನಂತಮುಖಗಳ ದರ್ಶನದಲ್ಲಿ ಮಹಾಕಾವ್ಯದ ಎತ್ತರಕ್ಕೆ ಎರಲಾರವು.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೂ ಮಹಾಕಾವ್ಯಗಳ ರಚನೆ ನಿರಂತರವಾಗಿ ಸಾಗಿ ಬಂದಿದೆಯಾದರೂ ಕಿರುಕಾವ್ಯ ಪ್ರಕಾರಗಳು ಕವಿಗಳಿಂದಲೂ, ಸಹೃದಯರಿಂದಲೂ ಹೆಚ್ಚು ಮನ್ನಣೆಗೆ ಪಾತ್ರವಾಗಿವೆ. ಹೀಗಾಗಿ ಭಾವಗೀತೆಯಂತಹ ಹೃಸ್ವರಚನೆಗೂ, ಖಂಡಕಾವ್ಯದಂತಹ ತುಸು ದೀರ್ಘರಚನೆಗೂ ಹಿಂದೆದಿಗಿಂತಲೂ ಇಂದು ಪ್ರಾಧಾನ್ಯತೆ ಪ್ರಾಪ್ತವಾಗಿದೆ. ಪ್ರಾಚೀನಕಾಲದ ವಿಕಾಸಶೀಲ ಮಹಾಕಾವ್ಯಗಳು ರೂಪುಗೊಳ್ಳುವ ಪ್ರಕ್ರಿಯೆಯ ಹಿಂದೆ ಲಾವಣಿ ಪ್ರಧಾನ (Balled) ಪಾತ್ರವಹಿಸಿದಂತೆ, ಇಂದಿನ ಆಧುನಿಕ ಶಿಷ್ಟ ಮಹಾಕಾವ್ಯಗಳು ರೂಪಗೊಳ್ಳುವ ಪ್ರಕ್ರಿಯೆ ಸಂದರ್ಭದಲ್ಲಿ ನಮ್ಮ ಕವಿಗಳಿಂದ ಖಂಡಕಾವ್ಯಗಳು ರಚನೆಯಾದವು. ಕುವೆಂಪು, ಮಾಸ್ತಿ, ಗೋಕಾಕ್ ತಮ್ಮ ಮಹಾಕಾವ್ಯ ರಚನೆಗೆ ನಡೆಸಿದ ಪ್ರಯತ್ನದ ಪೂರ್ವ ಪ್ರಯೋಗಗಳೆಂಬಂತೆ ಅವರ ಖಂಡಕಾವ್ಯಗಳು ಇವೆ. ಅವು ಸುಧೀರ್ಘವಾದ ಕಥನಕಾವ್ಯ ಮಾರ್ಗದಲ್ಲಿ ನಡೆಯುವುದಕ್ಕೆ ಬೇಕಾದ ಪ್ರಾಥಮಿಕ ಅನುಭವವನ್ನು ಒದಗಿಸಿ ಕೊಟ್ಟಿರುವುದರ ಪೂರ್ವ ಸೂಚನೆಗಳನ್ನು ಅವರ ಮಹಾಕಾವ್ಯಗಳಲ್ಲಿ ಕಾಣಬಹುದು. ಆದ್ದರಿಂದಲೇ ಖಂಡಕಾವ್ಯವನ್ನು "ಮಹಾಕಾವ್ಯದ ಹಸ್ತ ರೂಪ"[15] ಎಂದು ವಾಖ್ಯಾನಿಸಲಾಗಿದೆ.

## ಆಕರ ಗ್ರಂಥಗಳು


- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ ಪುಟ-4.
- **ಎಸ್.ಅನಂತನಾರಯಣ :** ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ, ಪುಟ-315-316.
- **ಎಚ್.ಎಸ್. ವೆಂಕಟೇಶ್‌ಮೂರ್ತಿ:** ಹೊಸಗನ್ನಡ ಕಥಾನಕವನ ಪುಟ-194-195.
- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ, ಪುಟ-6.
- **ಎಂ.ಎಸ್. ಶೇಖರ :** 'ಕನ್ನಡ ಖಂಡ ಕಾವ್ಯದ ಸ್ವರೂಪ' ಸಂಕ್ರಮಣ, ಸಂಚಿಕೆ 3-4, ಪುಟ-60.
- **ಕೆ. ಕೃಷ್ಣಮೂರ್ತಿ :** 'ಕನ್ನಡಕಾವ್ಯಾಲಂಕಾರ' ಪುಟ-9-10.
- **ವಿಶ್ವನಾಥ :** ಸಾಹಿತ್ಯ ದರ್ಪಣ, ಪುಟ-371.
- **ಸಾ. ಶಿ. ಮರುಳಯ್ಯ :** ಸಾ.ಶಿ.ಮ ವಿಮರ್ಶೆ, ಪುಟ-238.
- **ಎಮ್.ಎಸ್. ಶೇಖರ್ :** ಕನ್ನಡ ಖಂಡಕಾವ್ಯದ ಸ್ವರೂಪ, ಸಂಕ್ರಮಣ ಸಂಚಿಕೆ, ಪುಟ-60.
- **ಸಾ.ಶಿ.ಮರುಳಯ್ಯ :** ಸಾ.ಶಿ.ಮ ವಿಮರ್ಶೆ, ಪುಟ-237.
- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ. ಪುಟ-54.
- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ, ಪುಟ-54.
- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ, ಪುಟ-54.
- **ಜಿ.ಎಸ್.ಶಿವರುದ್ರಪ್ಪ :** ಮಹಾಕಾವ್ಯ ಸ್ವರೂಪ, ಪುಟ-111-112.
- **ಎಚ್.ಎಸ್.ವೆಂಕಟೇಶ ಮೂರ್ತಿ:** ಕಥನ ಕವನ, ಪುಟ-7.


■■

– 8ನೇ ಪುಟದಿಂದ ಮುಂದುವರೆದುದು

ವ್ಯಕ್ತಿಗೂ ಇರುವ ಸಂಬಂಧ ; ಆದ್ದರಿಂದ ಸಮಾಜ ಸೇವೆಯೇ ಈಶಸೇವೆಯಾಗುತ್ತದೆ. ದೇಶ ಸಮಾಜಭರಿತವಾದದ್ದು ; ದೇಶಸೇವೆಯೇ ಈಶಸೇವೆಯಾಗುತ್ತದೆ. ಹಮ್ಮುಬಿಮ್ಮುಗಳು ಭಕ್ತನಿಗೆ ಇರಬಾರದು. ಮೃದುವಚನ, ವಿನಯ-ಇವು ಸಮಾಜವನ್ನು ಕಟ್ಟತಕ್ಕಗುಣಗಳೂ. ವ್ಯಕ್ತಿಯ ಉದ್ಧಾರವೂ ಆ ಗುಣಗಳಿಂದಲೇ.

**.......ಮೃದುವಚನವೇ ಸಕಲ ತಪಂಗಳಯ್ಯ**
**ಮೃದುವಚನವೇ ಸಕಲ ಜಪಂಗಳಯ್ಯಾ**
**ಸದುವಿನಯವೇ ಸದಾಶಿವನ ಒಲುಮೆಯಯ್ಯ**
**ಕೂಡಲಸಂಗಮದೇವನಂತಲ್ಲದೊಲ್ಲನಯ್ಯಾ**
**ಪುಣ್ಯ ಪಾಪಂಗಳೆಂಬುವು ತಮ್ಮ ಇಷ್ಟವು ಕಂಡಿರೇ**
**ಅಯ್ಯಾ ಎಂದರೆ ಸ್ವರ್ಗ, ಎಲ್ಲವೋ ಎಂದರೆ ನರಕ**

ಎಂದು ಅವರು ಹೇಳಿದ್ದಾರೆ. ಜೀವಾತ್ಮ ಪರಮಾತ್ಮನಲ್ಲಿ ಐಕ್ಯವನ್ನು ಪಡೆಯಲು ಪ್ರಯತ್ನಿಸುವಂತೆಯೇ ವ್ಯಕ್ತಿ ಸಮಾಜದಲ್ಲಿ ಐಕ್ಯವನ್ನು ಪಡೆಯಲು ಪ್ರಯತ್ನಿಸಬೇಕು. "ಯತ್ರ ಜೀವಂ ತತ್ರ ಶಿವಃ" ಎಂಬ ಭಾವ ಬಲಿತು ಶಿವನನ್ನು ಎಲ್ಲ ಕಡೆಯೂ ಕಾಣುತ್ತ ಸೇವೆ ನಡಸಿದರೆ ತಾನೂ ಏಳ್ಗೆ ಪಡೆಯಬಹುದು. ರಾಷ್ಟ್ರವೂ ಏಳ್ಗೆ ಪಡೆಯಬಹುದು. ಹಾಗೆಯೇ ರಾಷ್ಟ್ರವು ಪ್ರಗತಿ ಪಥದತ್ತ ಸಾಗುತ್ತದೆ.

ಕೋಮುವಾದ ಮತ್ತು ಜಾತಿವಾದದಿಂದ ತುಂಬಿ ಹೋಗಿರುವ ಈ ಸಂದರ್ಭದಲ್ಲಿ ರಾಷ್ಟ್ರದಲ್ಲಿ ರಾಷ್ಟ್ರೀಯವಾದ ಮೂಡುವಂತಾಗಬೇಕು. ನಿರ್ಭಯವಾದ ವಾತಾವರಣ ಉದಯವಾಗಬೇಕು. ವಿವಿಧತೆಯಲ್ಲಿ ಏಕತೆಯನ್ನು ಸಾರುವ ನಾವೆಲ್ಲರೂ ಸುಭದ್ರ ಭಾರತವನ್ನು ನಿರ್ಮಾಣ ಮಾಡುವ ಸಂಕಲ್ಪವನ್ನು ಇಂದು ಮಾಡಬೇಕಿದೆ.

ಸ್ವತಂತ್ರ ಭಾರತದಲ್ಲಿ ಬಸವಣ್ಣನವರ ಉಪದೇಶ ಸಂದೇಶಗಳು ಬೆಳಕಿಗೆ ಬರಲಿ. ಎಲ್ಲರೂ ನಿರ್ಭೀತಿಯಿಂದ, ಸರ್ವಸಮಾನತಾಭಾವದಿಂದ ತಲೆಯೆತ್ತಿಕೊಂಡು ಸ್ವಾಭಿಮಾನದಿಂದ ನಡೆಯುವಂತಾಗಲಿ. ಕೃತಕವಾಗಿ ಏರ್ಪಟ್ಟಿರುವ ನೂರಾರು ಜಾತಿಗಳು ತೊಡೆದುಹೋಗಿ ಐಕಮತ್ಯವು ಬೆಳೆಯಲಿ. ದುಡಿಮೆಯ ಗೌರವವನ್ನು ಪ್ರತಿಯೊಬ್ಬರೂ ಕಂಡುಕೊಂಡು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಉದ್ಯೋಗಗಳಲ್ಲಿ ನಿರತವಾಗಲಿ. ದೈವಭಕ್ತಿಯುಳ್ಳ ನೀತಿವಂತ ತುಷ್ಟ ಪುಷ್ಟ ಸಮಾಜ ಬೆಳೆಯುತ್ತ ಬರಲಿ- ಎಂದು ಈ ಜನ್ಮದಿನೋತ್ಸವದಲ್ಲಿ ಆಶಿಸೋಣ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕಲಚೂರಿಯರು ಮತ್ತು ರಾಷ್ಟ್ರಕೂಟ ಸಂಬಂಧ

✍ **ಶ್ರೀಮತಿ ಶೈಲಜಾ. ಎಸ್. ಕರಡಿ,** ಉಪನ್ಯಾಸಕಿ, ಶ್ರೀ ಎಲ್. ಕೆ. ಖೋತ, ಕಲಾ ಪದವಿ ಮಹಾವಿದ್ಯಾಲಯ. ಹೆಬ್ಬಾಳ

ಕಲಚೂರಿ ಅರಸು ಮನೆತನದವರು ಕ್ರಿ.ಶ.6 ರಿಂದ 16 ನೆ ಶತಮಾನದವರೆಗೆ ಸುಮಾರು 1000 ವರ್ಷಗಳ ಕಾಲ ಭಾರತದ ಚರಿತ್ರೆಯಲ್ಲಿ ಪ್ರಮುಖ ಪಾತ್ರವಹಿಸಿದ್ದು, ಬೇರೆ ಬೇರೆ ರಾಜಧಾನಿಗಳನ್ನು ಮಾಡಿಕೊಂಡು ಆಳ್ವಿಕೆ ನಡೆಸಿದರು. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಕಲಚೂರಿ ಮನೆತನಗಳೆಂದರೆ ಮಹಿಷ್ಮಾತಿಯ ಕಲಚೂರಿಗಳು, ತ್ರಿಪುರಿಯ ಕಲಚೂರಿಗಳು, ಸರಿಯೂಪಾರದ ಕಲಚೂರಿಗಳು, ರತ್ನಾಪುರದ ಕಲಚೂರಿಗಳು (ದಕ್ಷಿಣ ಕೊಸಲದ ಕಲಚೂರಿಗಳು), ಮತ್ತು ಕಲ್ಯಾಣದ ಕಲಚೂರಿಗಳು. ಮಹಿಷ್ಮಾತಿಯ ಕಲಚೂರಿಗಳು ಕ್ರಿ.ಶ.6 ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಮಹಾರಾಷ್ಟ್ರ, ಗುಜರಾತ ಮತ್ತು ಮಾಳ್ವದ ಕೆಲವು ಭಾಗಗಳಲ್ಲಿದ್ದರು. ಇವರು ಮಹಿಷ್ಮಾತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡಿದ್ದರಿಂದ ಇವರಿಗೆ ಮಹಿಷ್ಮಾತಿಯ ಕಲಚೂರಿಗಳೆಂಬ ಹೆಸರು ಬಂದಿತೆಂದು ರಾಜಶೇಖರನ ಬಾಲರಾಮಾಯಣ ಮತ್ತು ಮುರಾರಿಯ ಅವಗ್ರರಾಘದ ಕೃತಿಗಳಿಂದ ತಿಳಿದುಬರುತ್ತದೆ.[1] ಅನಂತರದ ಹೈಹಯ ಮನೆತನದವರ ಶಾಸನಗಳಿಂದ ಮಹಿಷ್ಮಾತಿಯು ಅವರ ರಾಜಧಾನಿಯಾಗಿದ್ದು ತಿಳಿದುಬರುತ್ತದೆ. ಅವರನ್ನು 'ಮಹಿಷ್ಮಾತಿ ಪುರವರೇಶ್ವರರು' ಎಂದು ಕರೆಯಲಾಗಿದೆ.[2] ಕೃಷ್ಣರಾಜ (ಕ್ರಿ.ಶ. 550–575) ಈ ಮನೆತನದ ಸ್ಥಾಪಕನಾಗಿದ್ದು, ನಂತರದಲ್ಲಿ ಶರಣಗ ಮತ್ತು ಬುದ್ಧರಾಜರು ಆಳಿದರು. ಬಾದಾಮಿ ಚಾಲುಕ್ಯ ಮಂಗಳೇಶನು ಕಟ್ಟಚೂರಿ ಬುದ್ಧರಾಜನನ್ನು ಸೋಲಿಸಿ ಅವನಿಂದ ಸಂಪತ್ತನ್ನು ದೋಚಿ ತಂದನೆಂದು ಮಹಾಕೂಟ ಶಾಸನ ಉಲ್ಲೇಖಿಸುತ್ತದೆ.[3] ಅನಂತರದ ವಿನಯಾದಿತ್ಯನ ಮೂರು ಶಾಸನಗಳಲ್ಲಿ ಅವನು ಹೈಹಯರನ್ನು ಸೋಲಿಸಿದ್ದಾಗಿ ಹೇಳಿರುವದರಿಂದ ಬುದ್ಧರಾಜನ ನಂತರವೂ ಕೆಲವರು ಆಳುತ್ತಿದ್ದಿರಬೇಕು. ಚಾಲುಕ್ಯ ಎರಡನೆಯ ವಿಕ್ರಮಾದಿತ್ಯನು ಹೈಹಯ ಮನೆತನದ ರಾಜಕುಮಾರಿಯರಾದ ಲೋಕಮಹದೇವಿ ಮತ್ತು ತ್ರೈಲೋಕ್ಯಮಹದೇವಿಯರನ್ನು ಮದುವೆಯಾಗಿದ್ದನು.[4]

## ತ್ರಿಪುರಿಯ ಕಲಚೂರಿಗಳು

ಇವರನ್ನು ಕೆಲವೊಮ್ಮೆ ಡಾಹಲಮಂಡಲದ ಕಲಚೂರಿಗಳೆಂದು ಕರೆಯಲಾಗಿದೆ. ಅವರ ರಾಜಧಾನಿ ತ್ರಿಪುರಿ ಈಗ ಮಧ್ಯಪ್ರದೇಶದ ಜಬ್ಬಲಪುರದ ಪಶ್ಚಿಮಕ್ಕೆ ಆರು ಮೈಲಿ ದೂರದಲ್ಲಿದೆ. ಏಳನೆಯ ಶತಮಾನದ ಉತ್ತರಾರ್ಧದಿಂದ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದವರೆಗೆ ಆಳ್ವಿಕೆಯನ್ನು ಮಾಡಿದರು. ಈ ಮನೆತನದಲ್ಲಿ ಒಟ್ಟು 19 ಜನ ಅರಸರು ಆಳಿದರು. ಇವರಲ್ಲಿ ಪ್ರಮುಖರೆಂದರೆ ವಾಮರಾಜದೇವ, ಒಂದನೆಯ ಶಂಕರಗಣ, ಲಕ್ಷ್ಮಣರಾಜ, ಒಂದನೆಯ ಕೊಕ್ಕಲ, ಎರಡನೆಯ ಶಂಕರಗಣ, ಬಾಲಹರ್ಷ, ಒಂದನೆಯ ಯುವರಾಜ, ಎರಡನೆಯ ಲಕ್ಷ್ಮಣರಾಜ, ಮೂರನೆಯ ಶಂಕರಗಣ, ಎರಡನೆಯ ಯುವರಾಜ, ಎರಡನೆಯ ಕೊಕ್ಕಲ ಪ್ರಾರಂಭದಲ್ಲಿ ಆಳಿದರೆ ಅನಂತರದ ಆಳ್ವಿಕೆಯನ್ನು ಮಾಡಿದ ಗಾಂಗೇಯದೇವ, ಕರ್ಣರ ಕಾಲದಲ್ಲಿ ಕಲಚೂರಿ ಸಾಮ್ರಾಜ್ಯವು ಉತ್ತರ ಮತ್ತು ಮಧ್ಯಭಾರತದಲ್ಲಿ ಅತ್ಯಂತ ಉತ್ತುಂಗಕ್ಕೆ ಏರಿತ್ತಲ್ಲದೇ, ಹೆಚ್ಚಿನ ಅಧಿಕಾರ ಹಾಗೂ ಪ್ರತಿಷ್ಠೆಯನ್ನು ಹೊಂದಿತ್ತು. ವಿಜಯಸಿಂಹ, ಪ್ರತಾಪಮಲ್ಲರ ಕಾಲದಲ್ಲಿ ಅದು ಅವನತಿಯತ್ತ ಸಾಗಿ ಕೊನೆಗೆ ಕ್ರಿ.ಶ. 1320ರಲ್ಲಿ ಭಾರತ ಇತಿಹಾಸ ಪುಟದಿಂದ ಮರೆಯಾಯಿತು.[5]

ಈ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಕಲಚೂರಿಗಳಿಗೂ ರಾಷ್ಟ್ರಕೂಟರಿಗೂ ಸಂಘರ್ಷದ ಸಂಬಂಧಗಳು ಉಂಟಾಗಿರುವದಲ್ಲದೇ, ವೈವಾಹಿಕ ಸಂಬಂಧಗಳು ಸಹ ಏರ್ಪಟ್ಟಿರುವದು ಶಾಸನಗಳಿಂದ ತಿಳಿದುಬರುತ್ತದೆ. ಲಕ್ಷ್ಮಣರಾಜ (ಕ್ರಿ.ಶ. 825–850) ನ ಆಳ್ವಿಕೆಯ ಸಂದರ್ಭದಲ್ಲಿ ಉತ್ತರಭಾರತದ ರಾಜಕೀಯದಲ್ಲಿ ಪ್ರತಿಹಾರ ಎರಡನೆಯ ನಾಗಭಟ ಮತ್ತು ಪಾಲದೊರೆ ಧರ್ಮಪಾಲರ ಮಧ್ಯದಲ್ಲಿ ಕನೋಜಿನ ಅಧಿಪತ್ಯಕ್ಕಾಗಿ ಯುದ್ಧ ನಡೆಯುತ್ತಿತ್ತು. ಅದೇ ಅವಧಿಯಲ್ಲಿ ದಕ್ಷಿಣದಿಂದ ಮೂರನೆಯ ಗೋವಿಂದ ರಂಗಪ್ರವೇಶ ಮಾಡಿ ಅವರಿಬ್ಬರನ್ನೂ ಸೋಲಿಸಿ ಹಿಮಾಲಯದವರೆಗೆ ಸೈನ್ಯವನ್ನು ನಡೆಸಿಕೊಂಡು ಹೋಗಿರುವದನ್ನು ಒಂದನೆಯ ಅಮೋಘವರ್ಷನ ಸಂಜಾನ ತಾಮ್ರಶಾಸನವು ಉಲ್ಲೇಖಿಸುತ್ತದೆ.[6]

ಮೂರನೆಯ ಗೋವಿಂದನು ಡಾಹಲಪ್ರದೇಶವನ್ನು ಗೆದ್ದು ತನ್ನ ಸೇವಕರಲ್ಲಿ ಒಬ್ಬನನ್ನು ಇರಿಸಿದನು. ಪ್ರಾಂತಾಧಿಪತಿಯಾಗಿ ನೇಮಿತವಾದ ಈ ರಾಷ್ಟ್ರಕೂಟ ಅಧಿಕಾರಿಯು ಬಹುಶ: ಲಕ್ಷ್ಮಣರಾಜ ಅಥವಾ ಅವನ ಹಿಂದಿನವನಾಗಿರಬೇಕು.[7]

ಲಕ್ಷ್ಮಣರಾಜನ ನಂತರದ ಕಾಲದಲ್ಲಿ ಕಲಚೂರಿಗಳಿಗೂ ರಾಷ್ಟ್ರಕೂಟರಿಗೂ ವೈವಾಹಿಕ ಸಂಬಂಧಗಳು ಒಡಮೂಡಿದವು. ಅಲ್ಲದೇ ಕಲಚೂರಿಯರು ರಾಷ್ಟ್ರಕೂಟ ಸಾಮ್ರಾಜ್ಯದ ನರ್ಮದಾನದಿಯ ಉತ್ತರಭಾಗದಿಂದ ಬರುತ್ತಿದ್ದ ದಂಡಯಾತ್ರೆಗಳನ್ನು ತಡೆಗಟ್ಟಿದರು. ಅಲ್ಲದೇ ರಾಷ್ಟ್ರಕೂಟರ ಹಲವಾರು ದಂಡಯಾತ್ರೆಗಳಿಗೆ ಸಹಾಯ ಸಹಕಾರವನ್ನು ನೀಡಿದರು.

ಒಂದನೆಯ ಕೊಕ್ಕಲನು (ಕ್ರಿ.ಶ.850–890) ಅಧಿಕಾರಕ್ಕೆ ಬಂದಾಗ ತನ್ನ ಸಾಮ್ರಾಜ್ಯದ ಉತ್ತರಭಾಗದಲ್ಲಿ ಇದ್ದ ದಖನ್ನಿನ ರಾಷ್ಟ್ರಕೂಟರೊಂದಿಗೆ ಹೋರಾಟ ಮಾಡಬೇಕಾಯ್ತು. ತನ್ನ ಅಳಿಯನೇ ಆಗಿದ್ದ ರಾಷ್ಟ್ರಕೂಟ ರಾಜ ಎರಡನೆಯ ಕೃಷ್ಣನನ್ನು ಸೋಲಿಸಿ ಉತ್ತರಕೊಂಕಣದ ಮೇಲೆ ದಾಳಿ ಮಾಡಿದನು. ಆ ಸಮಯದಲ್ಲಿ ಕೊಂಕಣವನ್ನು ರಾಷ್ಟ್ರಕೂಟರ ಸಾಮಂತರಾದ ಶಿಲಾಹಾರವಂಶದ ಎರಡನೆಯ ಕಪದಿನ ಎಂಬುವವನು ಆಳುತ್ತಿದ್ದನು. ಅವನು ಕಲಚೂರಿ ಸೈನ್ಯದೆದುರು ಶರಣಾಗತನಾದನು. ಕೊನೆಗೆ ಎರಡನೆಯ ಕೃಷ್ಣನು ಕೊಕ್ಕಲನೊಡನೆ ಸ್ನೇಹ ಬೆಳೆಸಿ ಅವನ ಮಗಳನ್ನು ಮದುವೆಯಾದನು.[8]

ಒಂದನೆಯ ಕೊಕ್ಕಲನ ನಂತರ ಎರಡನೆಯ ಶಂಕರಗಣನು (ಕ್ರಿ. ಶ. 890–910) ಅಧಿಕಾರಕ್ಕೆ ಬಂದನು. ಇವನು ಸೋಮವಂಶೀ ರಾಜನೊಬ್ಬನೊಂದಿಗೆ ಹೋರಾಟ ಮಾಡಿ ಅವನಿಂದ ಮಧ್ಯಪ್ರದೇಶದ ಬಿಲಾಸಪುರ ಜಿಲ್ಲೆಯಲ್ಲಿ ರತಸಪುರದ ವಾಯುವ್ಯಕ್ಕೆ 12 ಮೈಲು ದೂರದಲ್ಲಿರುವ ಪಾಲಿಯನ್ನು ಗೆದ್ದುಕೊಂಡನು. ಇನ್ನಷ್ಟು ವಿಜಯಯಾತ್ರೆಗಳನ್ನು ನಡೆಸಲು ಅವನ ಪೂರ್ವ ಚಾಲುಕ್ಯ ಮೂರನೆಯ ವಿಜಯಾದಿತ್ಯನ ವಿರುದ್ಧ ತನಗೆ ಸಹಾಯ ಮಾಡಬೇಕೆಂದು ಭಾವಮೈದುನನಾದ ರಾಷ್ಟ್ರಕೂಟ ರಾಜ ಎರಡನೆಯ ಕೃಷ್ಣನನ್ನು ಕೇಳಿದನು. ಕೃಷ್ಣನು ಅದಕ್ಕೆ ಒಪ್ಪಿ ಸೈನ್ಯದೊಂದಿಗೆ ಸೇರಿಕೊಂಡನು. ಆದರೆ ಯುದ್ಧದಲ್ಲಿ ರಾಷ್ಟ್ರಕೂಟ ಮತ್ತು ಕಲಚೂರಿಯರ ಸೈನ್ಯಕ್ಕೆ ಸೋಲಾಯಿತು. ಚಾಲುಕ್ಯ ಸೇನಾಪತಿ ಪಾಂಡುರಂಗನು ಕಿರಣಪ್ಪರವನ್ನು ಸುಟ್ಟುಹಾಕಿದನು.[9]

– 21ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ : ಲಿಂಗ ಸಂಬಂಧಿ ವಿಶ್ಲೇಷಣೆ

✍ **ಭೀಮೇಶ,** ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಗ್ರಾಮೀಣ ಭಾಗದ ಜನರ ಜೀವನ ಮಟ್ಟವನ್ನು ಸುಧಾರಿಸುವ ಸಲುವಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಲೇ ಬರಲಾಗಿದೆ. ಮುಖ್ಯವಾಗಿ ಪಂಚವಾರ್ಷಿಕ ಯೋಜನೆಗಳು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಭಾರತವು ಹಳ್ಳಿಗಳ ದೇಶವಾಗಿರುವುದರಿಂದ ಇಲ್ಲಿನ ಬಹಳಷ್ಟು ಜನರು ಉದ್ಯೋಗವಿಲ್ಲದೇ ನಿರುದ್ಯೋಗಿಗಳಾಗಿದ್ದಾರೆ. ತಮ್ಮ ಉಪ ಜೀವನವನ್ನೂ ಕೂಡ ಮುಂದುವರೆಸಲೂ ಆಗದಿರುವಂತ ಸ್ಥಿತಿಯನ್ನು ಹೊಂದಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಜನರು ಕೆಲಸವನ್ನರಸಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ಸಹಜವಾಗಿದೆ. ಆದರೆ ವಲಸೆ ಹೋದಂತಹ ಸ್ಥಳಗಳಲ್ಲಿಯೂ ಇವರು ಸುರಕ್ಷಿತರಲ್ಲ. ಅಲ್ಲಿಯೂ ಕೂಡ ಹಲವಾರು ಸಂಕಷ್ಟಗಳಿಗೆ ಒಳಗಾಗುತ್ತಿದ್ದಾರೆ. ಆದರೂ ತಮಗೆ ಒದಗಬಹುದಾದ ಎಲ್ಲಾ ಕಷ್ಟಗಳನ್ನು ಎದುರಿಸುತ್ತಲೇ ಜೀವನವನ್ನು ಸಾಗಿಸುತ್ತಿದ್ದಾರೆ. ಕರ್ನಾಟಕದ ಒಂದು ಭಾಗವಾದ ಹೈದರಾಬಾದ್ ಕರ್ನಾಟಕದಲ್ಲಿಯಂತೂ ಈ ವಲಸೆಯ ಪ್ರಮಾಣ ಅಧಿಕವಾಗಿದೆ. ವಲಸೆಯನ್ನು ತಪ್ಪಿಸುವ ಸಲುವಾಗಿ ಮತ್ತು ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿಗಳು ಸುಧಾರಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳು ಕಾಲಕಾಲಕ್ಕೆ ಜಾರಿಯಾಗುತ್ತಲೇ ಇವೆ. ಆದರೆ ಈ ಯೋಜನೆಗಳಾವುವೂ ಸಂಪೂರ್ಣವಾಗಿ ಯಶಸ್ವಿಯನ್ನು ಪಡೆಯದೆ ವಿಫಲತೆಯನ್ನು ಅನುಭವಿಸುತ್ತಿವೆ. ಆ ಕಾರಣಕ್ಕಾಗಿ ಗ್ರಾಮೀಣ ಜನರ ಅಭಿವೃದ್ಧಿಯ ಕುರಿತಂತೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಚರ್ಚೆಗಳೂ ನಡೆಯುತ್ತಿವೆ. ಗ್ರಾಮೀಣ ಅಭಿವೃದ್ಧಿ ಎಂದರೆ ಕೇವಲ ಭೌಗೋಳಿಕ ವಿಸ್ತೀರ್ಣವನ್ನು ಹೆಚ್ಚಿಸುವುದಲ್ಲ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನು ವೃದ್ಧಿಸುವುದಾಗಿದೆ ಮತ್ತು ಲಿಂಗ ಸಮಾನತೆಯ ನೆಲೆಗಳನ್ನು ಸ್ಥಾಪಿಸುವುದಾಗಿದೆ.

ಗ್ರಾಮೀಣ ಜನರನ್ನು ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮತ್ತು ಆ ಮೂಲಕ ಅವರ ಬದುಕನ್ನು ಉತ್ತಮಗೊಳಿಸಿಕೊಳ್ಳುವ ಸಲುವಾಗಿ ಕೇಂದ್ರ ಸರಕಾರಗಳು ಹಲವಾರು ಯೋಜನೆಗಳನ್ನು ರೂಪಿಸುತ್ತಾ, ಜಾರಿಗೆ ತಂದಿವೆ. ಆದರೆ ಈ ಯೋಜನೆಗಳ ನಿಯಮಗಳಲ್ಲಿ ಲಿಂಗ ಸಮಾನತೆಯ ಅಂಶಗಳು ಮತ್ತು ಅನುಷ್ಠಾನದಲ್ಲಿ ಪಾರದರ್ಶಕತೆ ಇಲ್ಲದೇ ಇರುವುದರಿಂದ ಮೇಲ್ವಿಚಾರಣೆಯ ಕೊರತೆಯನ್ನು ಅನುಭವಿಸ ಬೇಕಾಯಿತು. ಹಾಗಾಗಿ ಯೋಜನೆಗಳು ವಿಫಲಗೊಳ್ಳಲು ಪ್ರಾರಂಭಿಸಿದವು. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಭಾಗದ ಜನರಲ್ಲಿ ಬಡತನದ ತೀವ್ರತೆ ಹೆಚ್ಚಾಗತೊಡಗಿತ್ತು. ಈ ಬಡತನವನ್ನು ಹೋಗಲಾಡಿಸಿಕೊಳ್ಳಲು ಜನರು ವಲಸೆ ಹೋಗುವುದನ್ನು ಆರಂಭಿಸಿದರು. ಇದು ದೇಶದ ಅಭಿವೃದ್ಧಿಗೆ ತುಂಬಾ ಮಾರಕವಾದ ಸಂಗತಿಯಾಗಿತ್ತು. ಹಾಗಾಗಿ ಬಡತನದ ತೀವ್ರತೆಯನ್ನು ಕಡಿಮೆ ಮಾಡಲು ಮತ್ತು ವಲಸೆ ಹೋಗುವುದನ್ನು ತಪ್ಪಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯನ್ನು 2005ರಲ್ಲಿ ಜಾರಿಗೆ ತರಲಾಯಿತು. ದಿನಾಂಕ 7-9-2005ರಂದು ವಿಧ್ಯುಕ್ತವಾಗಿ ಚಾಲ್ತಿಗೆ ಬಂದ ಈ ಕಾಯ್ದೆಯು ಮೊದಲು ದೇಶದ 200 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ 1-4-2006ರಲ್ಲಿ ಮೊದಲ ಹಂತದಲ್ಲಿ ಬೀದರ್, ಕಲಬುರ್ಗಿ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಈ ಐದು ಜಿಲ್ಲೆಗಳಲ್ಲಿ ಜಾರಿಗೆ ಬಂದಿತು. ನಂತರ 1-4-2007ರಿಂದ ಎರಡನೇ ಹಂತದಲ್ಲಿ ರಾಜ್ಯದ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳಿಗೆ ವಿಸ್ತರಿಸಿತು. ಹೀಗೆ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಜಾರಿಯಾದ ಎಲ್ಲಾ ಪ್ರದೇಶಗಳಲ್ಲಿಯೂ ಕೂಡ ಈ ಕಾಯ್ದೆ ಜನಪ್ರಿಯತೆಯನ್ನು ಗಳಿಸಿತು. ಇದರಿಂದಾಗಿ ದಿನಾಂಕ 1-4-2008ರಿಂದ ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಹೀಗೆ ವಿಸ್ತಾರಗೊಂಡಿರುವ ಈ ಕಾಯ್ದೆ ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಜಾರಿಯಲ್ಲಿರುವುದು ಕಂಡು ಬಂದಿದೆ. 2005ರಲ್ಲಿ ಜಾರಿಗೆ ಬಂದಂತಹ ಈ ಕಾಯಿದೆ ಹಲವು ಬದಲಾವಣೆಗಳಿಗೆ ಒಳಗಾಗುತ್ತಾ ಬಂದಿದೆ. ಅಂದರೆ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-2005" ಎಂದು ನಾಮಾಂಕಿತಗೊಂಡು ಜಾರಿಗೆ ಬಂದ ಈ ಕಾಯ್ದೆ, ದಿನಾಂಕ 2 ಅಕ್ಟೋಬರ್ 2009ರಂದು "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ" ಎಂದು ಮರುನಾಮಾಂಕಿತಗೊಂಡಿತು. ಈ ದಿನ ಗಾಂಧೀಜಿಯವರ ಹುಟ್ಟಿದ ದಿನವಾಗಿದೆ. ದೇಶದ ಜನತೆ ಗಾಂಧಿ ಜಯಂತಿಯನ್ನು ಆಚರಿಸುವಂತಹ ದಿನವಾಗಿದೆ. ಹೀಗೆ ಕಾಯಿದೆಯ ಹೆಸರನ್ನು ಬದಲಾಯಿಸಿದುದರ ಹಿಂದೆ ಮಹಾತ್ಮ ಗಾಂಧೀಜಿಯವರು ಕಂಡ "ಗ್ರಾಮ ಸ್ವರಾಜ್ಯದ" ಕನಸಿನ ಒತ್ತಾಸೆ ಇತ್ತೇನೋ ಎಂದೆನಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಗಾಂಧೀಜಿಯವರು "ಈಗಲಾದರೋ ಭಾರತಕ್ಕೆ ಕೇವಲ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆ. ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಸ್ವಾತಂತ್ರ್ಯವು ಈ ದೇಶಕ್ಕೆ ಇನ್ನೂ ಸಿಕ್ಕಿಲ್ಲ" ಎಂದಿದ್ದರು. ಅಂದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯ ನೆಲೆಸಿದಾಗ ಮಾತ್ರ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಬಂದಂತಾಗುತ್ತದೆ ಎಂಬುದು ಅವರ ವಾದವಾಗಿತ್ತು. ಮತ್ತು ಸ್ವಾತಂತ್ರ್ಯ ಎಂಬುದು ಕಡೆಯ ಹಳ್ಳಿಯಿಂದ ಪ್ರಾರಂಭವಾಗಬೇಕು ಎಂಬುದು ಅವರ ಒತ್ತಾಸೆಯಾಗಿತ್ತು. ಹಾಗಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯು ಈ ಹಿನ್ನೆಲೆಯಲ್ಲಿಯೇ ಹಳ್ಳಿಗಳಲ್ಲಿನ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಮುಂದುವರೆಯುತ್ತಿರುವುದರಿಂದ ಇದು ಗಾಂಧೀಜಿಯವರ ಕನಸಿಗೆ ಪುಷ್ಠಿ ನೀಡುವಂತಾಗಿದ್ದರಿಂದಾಗಿ ಈ ಕಾಯಿದೆಗೆ ಗಾಂಧೀಜಿಯವರ ಹೆಸರನ್ನು ಸೇರಿಸಲು ಕಾರಣ ಇದ್ದಿರಬಹುದು ಎಂದು ಗುರುತಿಸ ಬಹುದಾಗಿದೆ. ಈ ಕಾಯಿದೆಯು ಹಲವಾರು ಲಿಂಗ ಸಮಾನತೆಯ ಅಂಶಗಳಿಂದ ಕೂಡಿದ್ದು ಸ್ತ್ರೀ ಪುರುಷರಲ್ಲಿ ಯಾವುದೇ ಬಗೆಯ ಭಿನ್ನಾಭಿಪ್ರಾಯಗಳನ್ನು ಉಲ್ಲಂಘಿಸದಂತೆ ರೂಪಿತವಾಗಿದೆ. ಆದರೆ ಈ ನಿಯಮಗಳು ಕೇವಲ ಕಾಯಿದೆಯಲ್ಲಿವೆಯೇ ಹೊರತು ಈ ಯೋಜನೆಯ ಜಾರಿಯ ಸಂದರ್ಭದಲ್ಲಿ ಪಾಲಿತಗೊಳ್ಳುತ್ತಿಲ್ಲ. ಹಾಗಾಗಿ ಮಹಿಳೆಯರು ಹಲವು ಬಗೆಯ ಸಂಕಷ್ಟಗಳನ್ನು ಎದುರಿಸಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾರೆ. ಅಂದರೆ ಕಾಯಿದೆಯ ಜಾರಿಯಲ್ಲಿ ಹಲವು ತೊಡಕುಗಳು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಂಡುಬರುತ್ತಿರುವುದು ವಾಸ್ತವ ಸತ್ಯವಾಗಿದೆ. ಆ ಕಾರಣಕ್ಕಾಗಿ ಮುಖ್ಯವಾಗಿ ಈ ಲಿಂಗ ಅಸಮಾನತೆಯ ಅಂಶಗಳನ್ನು ಗುರುತಿಸುವ ಸಲುವಾಗಿ ಕೆಲವು ಭಾಗಗಳನ್ನಾಗಿ ಗುರುತಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

1. ಯೋಜನೆಯ ರೂಪಿಸುವ ಹಂತ
2. ಯೋಜನೆಯ ಅನುಷ್ಠಾನದ ಹಂತ
3. ಯೋಜನೆಯ ಕಾಮಗಾರಿಗಳ ಮುಕ್ತಾಯದ ಹಂತ

## 1. ಯೋಜನೆಯ ರೂಪಿಸುವ ಹಂತ

ಉದ್ಯೋಗ ಖಾತರಿ ಯೋಜನೆಯನ್ನು ಪ್ರತೀ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರೂಪಿಸಲಾಗುತ್ತದೆ. ಕಾಮಗಾರಿಗಳನ್ನು ಗುರುತಿಸುವ ಮತ್ತು ರೂಪುರೇಷೆಯನ್ನು ಸಿದ್ಧಪಡಿಸುವ ಹಂತದಲ್ಲಿ ಗ್ರಾಮಗಳಲ್ಲಿನ ಜನರ, ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರ ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿ ವರ್ಗದವರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಅದರಲ್ಲಿಯೂ ಗ್ರಾಮದ ಜನರ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಗ್ರಾಮ ಸಭೆಗಳನ್ನು ಮಾಡುವುದರ ಮೂಲಕ ಕಾಮಗಾರಿಗಳನ್ನು ಗುರುತಿಸಿಕೊಳ್ಳುವುದು ಯೋಜನೆಯ ಮುಖ್ಯ ಉದ್ದೇಶ. ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಮಾಡಬೇಕೆಂದು ಉದ್ಯೋಗ ಖಾತರಿ ಕಾಯಿದೆಯೇ ಸೂಚಿಸುತ್ತದೆ. ಹಾಗಾಗಿ ಈ ಯೋಜನೆಯು ಜನ ಯೋಜನೆಯೆಂದೇ ಕರೆಯಲ್ಪಟ್ಟಿದೆ. ಅಂದರೆ ಜನರಿಗಾಗಿ ಜನರೇ ಸಿದ್ಧಪಡಿಸಿ ಕಾರ್ಯರೂಪಕ್ಕೆ ತರುವ ಯೋಜನೆಯೇ ಜನ ಯೋಜನೆಯಾಗಿದೆ. ಹೀಗೆ ಜನರೇ ಯೋಜನೆಯ ರೂಪಿಸುವಿಕೆಯಲ್ಲಿ ನೇರವಾಗಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣವೂ ಇದೆ. ಏನೆಂದರೆ ಈ ಹಿಂದಿನ ಯೋಜನೆಗಳೆಲ್ಲಾ ರೂಪಿತವಾಗಿರುವುದು ಗ್ರಾಮದಿಂದ ಆಚೆ ದೂರದ ಪ್ರದೇಶಗಳಲ್ಲಿ ಅಂದರೆ ಯೋಜನೆಯನ್ನು ರೂಪಿಸುವವರು ಗ್ರಾಮಗಳಲ್ಲಿನ ಸಮಸ್ಯೆಗಳ ಬಗ್ಗೆಯಾಗಲೀ ಅಥವಾ ಬೇಕುಬೇಡುಗಳ ಬಗ್ಗೆಯಾಗಲೀ ಗಮನಹರಿಸುತ್ತಿರಲಿಲ್ಲ. ಆ ಕಾರಣಕ್ಕಾಗಿ ಇವರಿಗೆ ಗ್ರಾಮಗಳ ಸಮಸ್ಯೆಗಳ ಬಗ್ಗೆ ಸಂಪೂರ್ಣವಾದ ಅರಿವು ಇಲ್ಲದಾಗಿತ್ತು. ಹಾಗಾಗಿ ಯೋಜನೆಗಳು ಸಂಪೂರ್ಣವಾಗಿ ಫಲಕಾರಿಯಾಗುತ್ತಿರಲಿಲ್ಲ. ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಜನರ ಅಗತ್ಯಗಳು, ಸಮಸ್ಯೆಗಳು ಬೇರೆ ಬೇರೆಯಾಗಿರುತ್ತವೆ ಆದ್ದರಿಂದ ಒಂದೇ ರೀತಿಯ ಯೋಜನೆಯನ್ನು ರೂಪಿಸಿ ಅದನ್ನು ಎಲ್ಲಾ ಗ್ರಾಮಗಳಿಗೆ ವಿಸ್ತರಿಸುವಂತೆ ಮಾಡುವುದರಿಂದಾಗಿ ಗ್ರಾಮದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಈ ಕಾರಣಗಳಿಗಾಗಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಇದಕ್ಕೆ ಅವಕಾಶ ಮಾಡಿಕೊಡದೇ ಯೋಜನೆಯ ರೂಪಿಸುವಿಕೆಯಲ್ಲಿ ಗ್ರಾಮದ ಜನರು ನೇರವಾಗಿ ಪಾಲ್ಗೊಳ್ಳುವ ಮತ್ತು ಯೋಜನೆಯನ್ನು ರೂಪಿಸುವ ಅವಕಾಶವನ್ನು ಮಾಡಿಕೊಟ್ಟಿದೆ. ಆದರೆ ವಾಸ್ತವದಲ್ಲಿ ಈ ಯೋಜನೆಯ ಕಾಮಗಾರಿಗಳನ್ನು ರೂಪಿಸುವ ಹಂತದಲ್ಲಿ ಲಿಂಗ ಅಸಮಾನತೆಯ ಅಂಶಗಳು ಗೋಚರಿಸುತ್ತಿವೆ. ಸ್ತ್ರೀಯರನ್ನು ಕಡೆಗಣಿಸುವಂತಹ, ಅವರು ಪಾಲ್ಗೊಳ್ಳದ ಹಾಗೆ ನೋಡಿಕೊಳ್ಳುವ ಕೆಲಸ ಈ ಗ್ರಾಮ ಸಭೆಗಳಲ್ಲಿ ನಡೆಯುತ್ತಿವೆ. ಹಲವು ವೇಳೆ ಗ್ರಾಮಸಭೆಗಳನ್ನು ಮಾಡದೆಯೇ ಕಾಮಗಾರಿಗಳನ್ನು ರೂಪಿಸುವ ಕೆಲಸವೂ ಕೂಡ ನಡೆಯುತ್ತಿವೆ. ಇವುಗಳು ಯೋಜನೆಯ ಅನುಷ್ಠಾನದ ತೊಡಕುಗಳಾಗಿಯೂ ಮಾರ್ಪಟ್ಟಿವೆ. ಇದಕ್ಕೆ ಮೂಲ ಕಾರಣ ಗ್ರಾಮಗಳಲ್ಲಿನ ಪಿತೃಪ್ರಧಾನ ವ್ಯವಸ್ಥೆ.

ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರಬೇಕಾದರೆ ಪ್ರತಿಯೊಂದು ಗ್ರಾಮದ ಜನರು ಈ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಊರಿನ ಕೊರತೆಗಳ ಬಗ್ಗೆ ಮತ್ತು ಊರಲ್ಲಿ ಯಾವ ಕಾಮಗಾರಿಗಳು ನಡೆಯಬೇಕು ಎಂಬುದರ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕಾಗುತ್ತದೆ. ಸಭೆಯಲ್ಲಿ ಮಹಿಳೆಯರೂ ಸಹ ಪುರುಷರಷ್ಟೇ ಸಮನಾಗಿ ಭಾಗವಹಿಸುವುದರ ಮೂಲಕ ಚರ್ಚೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪಡೆದುಕೊಂಡಿದ್ದಾರೆ. ವಾಸ್ತವದಲ್ಲಿ ಗ್ರಾಮಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ತುಂಬಾ ಕಡಿಮೆ ಇರುವುದು ಕಂಡುಬಂದಿದೆ. ಒಂದು ಹಂತದಲ್ಲಿ ಪಾಲ್ಗೊಳ್ಳುವಿಕೆ ಇಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣ ಇಲ್ಲದಿಲ್ಲ. ಮುಖ್ಯವಾಗಿ ಪುರುಷಶಾಹಿ ಮೌಲ್ಯಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ನಿರ್ಭಂಧಿಸುತ್ತಿವೆ. ಹಾಗೆಯೇ ಜಾತಿ ಶ್ರೇಣೀಕರಣದ ನೆಲೆಗಳೂ ಸಹ ದಲಿತ ಮಹಿಳೆಯರ ಪಾಲ್ಗೊಳ್ಳುವಿಕೆಯ ಹಕ್ಕನ್ನು ಕಿತ್ತುಕೊಂಡಿರುವುದು ಕಂಡುಬಂದಿದೆ. ಮುಖ್ಯವಾಗಿ ಈ ಜಾತಿ ಶ್ರೇಣೀಕರಣದ ನೆಲೆಗಳು ಉದ್ಯೋಗ ಖಾತರಿ ಯೋಜನೆಯ ರೂಪಿಸುವಿಕೆಯ ಹಂತದಿಂದ ಹಿಡಿದು ಕಾಮಗಾರಿಗಳ ಮುಕ್ತಾಯದ ಹಂತದವರೆಗೂ ದಲಿತ ಮಹಿಳೆಯರನ್ನು ಶೋಷಿಸುತ್ತಲೇ ಇವೆ. ಇದರ ನೇರ ಪರಿಣಾಮ ಮಾತ್ರ ಮಹಿಳೆಯರ ಮೇಲಾಗುತ್ತಿದೆ. ಜಾತಿಯ ಕಾರಣವಾಗಿ ಮತ್ತು ಮಹಿಳೆ ಎಂಬ ಕಾರಣಕ್ಕಾಗಿ ಹಲವು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ಸಾಬಮ್ಮ ಇವರು ಹೇಳುವಂತೆ " ನಮ್ಮ ಊರಾಗ ಗ್ರಾಮ ಸಭೆ ನಡಿಲಾರದಂಗ ಪಂಚಾಯ್ತಿಯವರು ಮಾಡ್ತಾರ. ಅದನ್ನ ಮೀರಿ ಏನಾದ್ರೆ ಗ್ರಾಮಸಭೆ ಮಾಡಿದ್ರೆ ನಮ್ಮೂರಾಗ ಯಾವ ಹೆಣ್ಮುಕ್ಕಳು ಬರಾದಿಲ್ಲ. ಯಾಕಂದ್ರೆ ಗಂಡ್ಸರು ಮನ್ಯಾಗ ಹೆಣ್ಮಕ್ಕಳನ್ನ ಕಳ್ಸಾದಿಲ್ಲ. ನಮ್ಮಂತವರು ಹೋಗಿ ಗ್ರಾಮ ಸಭೆಗೆ ಬರ್ರೀ ಅಂತ ಕರದ್ರೆ ಅವರ ಮನ್ಯಾಗಿನ ಗಂಡ್ಸೂರು ಮತ್ತೆ ನಮ್ಗೆ ಬೈದು ಕಳಸ್ತಾರ. ಅದಕ್ಕ ಬುದ್ದಿ ಇಲ್ಲ. ನಿಮ್ಗೆ ಬುದ್ದಿ ಇಲ್ಲೇನು? ಬುದ್ದಿ ಇಲ್ಲದ ಹೆಂಗಸು ಗ್ರಾಮ ಸಭೆಗೆ ಕರಿಯಾಕ ಬಂದಾಳಂತೇಳಿ ನೀವು ಕುಡಾ ಹೋಗ್ತೀವಿ ಅಂತ ಕುಣಿತೀರೇನು ? ಯಾವ ಗ್ರಾಮ ಸಭಿಗೂ ಹೋಗ್ಬೇಡಿ ಅಂತಂದು ಅವರ ಮನ್ಯಾಗಿನ ಗಂಡ್ಸೂರು ಜಬರಸ್ತಾರ. ನಾನು ಮೆಂಬರ್ ಆಗಿದ್ರೂ ಮೀಟಿಂಗ್‌ಗೆ ಬರ್ರಿ ಅಂತ ಮನಿ ಮನಿಗೆ ಹೋಗಿ ಕರಿತೀನಿ. ಆದ್ರ ಜನ ನಮ್ಮನ್ನೇ ಬೈತಾರ, ತಲಿ ಕೆಟ್ಟೋರು ಅಂತಾರ, ಬುದ್ಧಿ ಇಲ್ಲದೋರು ಅಂತಾರ. ಹಿಂಗ ಬೈದು ಕಳಸ್ತಾರ. ಹಂಗಾಗಿ ನಮ್ಮಂತ ನಿಯತ್ತಿನಿಂದ ಇರವರಿಗೆ ಕಾಲನೇ ಇಲ್ಲ". ಎಂದು ಹೇಳುತ್ತಾಳೆ.

ಇದು ಕುಟುಂಬದಲ್ಲಿನ ಪುರುಷಶಾಹಿ ಚಿಂತನೆಗೆ ಹಿಡಿದ ಕನ್ನಡಿಯಂತಿದೆ. ಮುಖ್ಯವಾಗಿ ಬುದ್ದಿ ಇಲ್ಲದ ಹೆಣ್ಣುಮಕ್ಕಳು ಮಾತ್ರ ಗ್ರಾಮ ಸಭೆಗಳಿಗೆ ಹೋಗ್ತಾರೆ ಎನ್ನುವ ಮನೋಭಾವ ಪುರುಷರಲ್ಲಿದೆ. ಇವರ ಪ್ರಕಾರ ಬುದ್ದಿ ಇಲ್ಲದವರು ಎಂದರೆ ಅವರು ಕುಟುಂಬದ ಮತ್ತು ಸಮಾಜದ ಕಟ್ಟುಪಾಡುಗಳನ್ನು ಮೀರಿದವರು ಎಂದೇ ಭಾವಿಸಿಕೊಂಡಿರುತ್ತಾರೆ. ಹಾಗಾಗಿ ಕುಟುಂಬದಿಂದ ಆಚೆ ಬಂದು ಮಾತನಾಡುವ ಮಹಿಳೆಯರನ್ನು ಬುದ್ದಿ ಇಲ್ಲದವರು ಎಂದು ಕರೆಯಲ್ಪಟ್ಟಿದ್ದಾರೆ. ಇದು ಪುರುಷಶಾಹಿ ವ್ಯವಸ್ಥೆಯ ಮೂಲ ಆಲೋಚನೆಯಾಗಿದೆ. ಬುದ್ದಿ ಇಲ್ಲದವಳು ಎಂದು ಕರೆಯುವುದರ ಮೂಲಕ ಅವಳ ಬೌದ್ಧಿಕತೆಯನ್ನು ಪ್ರಶ್ನಿಸುವಂತಹ ಕೆಲಸಕ್ಕೆ ಕೈ ಹಾಕುತ್ತಾರೆ. ಆ ಮೂಲಕ ಮಹಿಳೆಯರನ್ನು ಕಡೆಗಣಿಸುತ್ತಾರೆ. ಅದರ ಜೊತೆಗೆ ಮಹಿಳೆಯರು ಗ್ರಾಮ ಪಂಚಾಯತಿ ಸಭೆಗಳಿಗೆ ಹಾಜರಾದರೆ ಸಮಾಜದಲ್ಲಿ ಮತ್ತು ಕುಟುಂಬದಲ್ಲಿ ತಮ್ಮ ಗೌರವ ಎಲ್ಲಿ ಕಡಿಮೆಯಾಗುತ್ತದೆಯೋ ಎಂಬ ಭಯ ಪುರುಷನಲ್ಲಿ ಕಾಡತೊಡಗಿರುತ್ತದೆ. ವ್ಯವಸ್ಥೆಯಲ್ಲಿ ಮಹಿಳೆಯನ್ನು ಎರಡನೇ ದರ್ಜೆಯವಳಾಗಿಯೇ ಬಿಂಬಿಸಲಾಗಿದೆ. ಪುರುಷ ತನ್ನ ಅನುಕೂಲಕ್ಕೆ ತಕ್ಕಂತೆ ಮಹಿಳೆಯನ್ನು ಬಿಂಬಿಸುತ್ತಿರುತ್ತಾನೆ. ಏಕೆಂದರೆ ಯಾವಾಗಲೂ ಅವಳು ಪುರುಷನ ಅಡಿಯಲ್ಲಿಯೇ ಜೀವಿಸಬೇಕು ಎಂಬ ನಿಯಮಗಳು ಬಲಿಷ್ಠವಾಗಿ ಬೇರೂರಿಬಿಟ್ಟಿವೆ. ಆ ಕಾರಣಕ್ಕಾಗಿ ಮಹಿಳೆಯರನ್ನು ಕುಟುಂಬದಲ್ಲಿಯೇ ಕಟ್ಟಿ ಹಾಕುವಂತಹ ಕಾರ್ಯ ನಡೆಯುತ್ತಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇನ್ನು ಗ್ರಾಮಗಳಲ್ಲಿನ ಪುರುಷರನ್ನು ಭೇಟಿಯಾದಾಗ ಅವರೂ ಸಹ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸಬಾರದು ಎಂದೇ ಹೇಳಿರುವುದು ಕಂಡುಬಂದಿದೆ. ಪುರುಷರು ಒಂದು ವೇಳೆ ಮಹಿಳೆಯರನ್ನು ಗ್ರಾಮ ಸಭೆಗಳಿಗೆ ಭಾಗವಹಿಸಲು ಕಳುಹಿಸಿದರೆ ಅಂತಹ ಸಂದರ್ಭದಲ್ಲಿ ವ್ಯವಸ್ಥೆ ತಮ್ಮನ್ನು ನೋಡುವ ಬಗೆ ಹೇಗಿರುತ್ತದೆ ಎಂಬುದನ್ನು ಹೀಗೆ ಹೇಳುತ್ತಾರೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ರುಕ್ಕಪ್ಪ ಎಂಬುವವರು ಹೇಳುವಂತೆ "ಸಾರ್ ಇಲ್ಲಿತನ ನಮ್ ಮನೆ ಹೆಣ್ಮಕ್ಕಳ್ನ ಗ್ರಾಮ ಸಭೆಗೆ ಆಗಲಿ, ಯಾವುದೇ ಸಭೆ ಸಮಾರಂಭಗಳಿಗೆ ಕಳಿಸಿಲ್ಲ. ನಾವು ಇರಾತನಕ ಅವರದೇನು ಕೆಲ್ಸ. ನಾವಿಲ್ಲಂದ್ರೆ ಆ ಮಾತು ಬ್ಯಾರೆ. ಹಂಗಾಗಿ ನಾವು ನಮ್ ಮನೆ ಹೆಣ್ಣು ಮಕ್ಕಳನ್ನು ಮನೆ ಬುಟ್ಟು ಹೊರಾಗ ಕಳಸಾದಿಲ್ಲ. ನಾನಂತ ಅಲ್ಲ ಇಡೀ ಊರಾಗ ಯಾರ ಮನೆ ಹೆಣ್ಣು ಮಕ್ಕಳು ಗ್ರಾಮ ಸಭೆಗೆ ನಮ್ಮಲ್ಲಿ ಬರಾದಿಲ್ಲ. ನಾವೇನಾದ್ರೆ ಗ್ರಾಮ ಸಭೆ ಮತ್ತೆ ಸಭೆ ಸಮಾರಂಭಗಳಿಗೆ ಅಂತೇಳಿ ಹೆಣ್ಮಕ್ಳನ್ನ ಕಳಿಸಿದ್ರೆ ಜನ ನಮ್ಮನ್ನ ಸಂಶಯದಿಂದ ನೋಡ್ತಾರ. ಯಾಕಂದ್ರೆ ನಮ್ ತಾತ ಮುತ್ತಾತನವರ ಕಾಲದಿಂದ ಇಲ್ಲಿತನ ನಮ್ ಹಳ್ಳಿಯಾಗ ಯಾರಾದ್ರೆ ಮನೆ ಬುಟ್ಟು ಹೊರಗಡೆ ಕಳಿಸ್ಯಾರೇನು? ಇಲ್ಲ. ಹಂಗಾಗಿ ನಾವೇನಾದ್ರೆ ಹೋಗ್ಲಿ ಬುಡು ಅಂತ ಕಳಿಸಿದ್ರೆ ಇವನಲ್ಲಿ ಹೆಂಗಸಿನ್ನ ಹದ್ದುಬಸ್ತಿನಲ್ಲಿ ಇಟಗಂಬ ಯೋಗಿತೆ ಇಲ್ಲ ನೋಡು ಅಂತ ಜನ ಆಡಿಕೆಂತಾರ. ಮತ್ತೆ ಇವನು ಯಾ ಸೀಮೆ ಗಂಡ್ಸಲೇ ಅಂತಾರ". ಎಂದು ಹೇಳಿದರು.

ಮಹಿಳೆಯರ ಮೇಲೆ ಹಕ್ಕನ್ನು ಚಲಾಯಿಸುವ ಸ್ವಾತಂತ್ರ್ಯ ಕೇವಲ ಪುರುಷರದ್ದೇ ಎಂಬ ಆಲೋಚನೆ ಇಂದು ನಿನ್ನೆಯದಲ್ಲ. ಈ ಆಲೋಚನೆ ಹಲವು ವರ್ಷಗಳಿಂದಲೂ ಒಂದು ಘೋಷಿತ/ಅಘೋಷಿತ ನಿಯಮವಾಗಿ ರೂಪಿತಗೊಂಡು ಅದು ವ್ಯವಸ್ಥೆಯಲ್ಲಿ ಬಲಿಷ್ಠಗೊಂಡುಬಿಟ್ಟಿದೆ. ಆ ಕಾರಣಕ್ಕಾಗಿ ರುಕ್ಕಪ್ಪ ತನ್ನ ಮಾತುಗಳಲ್ಲಿ ಅದನ್ನು ವ್ಯಕ್ತಪಡಿಸುತ್ತಿದ್ದಾನೆ. ಅಂದರೆ ಗ್ರಾಮದಲ್ಲಿನ ಪಿತೃ ಪ್ರಧಾನತೆಯು ಮಹಿಳೆಯರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತಲೇ ಇರುತ್ತದೆ. ಇದರ ನೇರ ಪರಿಣಾಮ ಮಹಿಳೆಯರ ಮೇಲೆಯೇ ಆಗುತ್ತಿರುತ್ತದೆ. ಒಂದು ವೇಳೆ ಪುರುಷರೇನಾದರೂ ಮಹಿಳೆಯರನ್ನು ಗ್ರಾಮ ಸಭೆಗಳಿಗೆ ಭಾಗವಹಿಸಲು ಕಳುಹಿಸಿದ್ದೇ ಆದರೆ ಆ ಸಂದರ್ಭದಲ್ಲಿಯೂ ಸಹ ಗ್ರಾಮದ ಪಿತೃ ಪ್ರಧಾನ ವ್ಯವಸ್ಥೆಯು ಪುರುಷರ ಪುರುಷತ್ವವನ್ನೇ ಪ್ರಶ್ನಿಸುವಂತಹ ಕೆಲಸಕ್ಕೆ ಮುಂದಾಗುತ್ತದೆ. ಹಾಗೆ ಹೇಳುವ ಮೂಲಕ ಮಹಿಳೆಯರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವಂತೆ, ತಮ್ಮ ಒಡೆತನದಲ್ಲಿಯೇ ಇಟ್ಟುಕೊಳ್ಳುವಂತೆ ಸೂಚ್ಯವಾಗಿ ತಿಳಿಸುತ್ತಿರುತ್ತದೆ. ಪುರುಷರನ್ನು ಹೀಯಾಳಿಸುವದರ ಹಿಂದಿನ ಉದ್ದೇಶ ಇದೇ ಆಗಿರುತ್ತದೆ. ಹಾಗಾಗಿ ಇದನ್ನು ಎದುರಿಸಿ ಬದುಕುವುದು ಸಾಧ್ಯವಿಲ್ಲವೇನೋ ಎನ್ನುವಂತೆ ಪುರುಷರು ನಡೆದುಕೊಳ್ಳುತ್ತಾರೆ. ಇಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಷಯವೇನೆಂದರೆ ರುಕ್ಕಪ್ಪ ಜಾತಿಯಿಂದ ಎಸ್.ಸಿ. ಸಮುದಾಯಕ್ಕೆ ಸೇರಿದವರು. ಇವರು ಗ್ರಾಮದಲ್ಲಿ ಜಾತಿಯ ಕಾರಣಕ್ಕೆ ಹಲವಾರು ಹಂತದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಈ ಜಾತಿಯ ಪುರುಷರೂ ಸಹ ಅದೇ ಗ್ರಾಮದ ಉನ್ನತ ಜಾತಿಯವರ ಮುಂದೆ ನಿಂತು ಮಾತನಾಡುವುದೂ ಕಷ್ಟಕರವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮಹಿಳೆಯರೇನಾದರೂ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದಾಗಲೀ ಅಥವಾ ಉನ್ನತ ಜಾತಿಯವರ ಎದುರಿಗೆ ನಿಂತು ಮಾತನಾಡುವುದನ್ನಾಗಲೀ ಮಾಡಿದರೆ ಆ ಊರಿನ ಇತರ ಜಾತಿಯವರು ಸಹಿಸುವುದಿಲ್ಲ. ಆ ಕಾರಣಕ್ಕಾಗಿ ಗ್ರಾಮದ ಪಿತೃ ಪ್ರಧಾನ ಮೌಲ್ಯಗಳು ಪುರುಷನನ್ನು ತೆಗಳುವುದರ ಮೂಲಕ ಮಹಿಳೆಯನ್ನು ಈ ಗ್ರಾಮ ಸಭೆಗಳಿಂದ ದೂರವಿರುವಂತೆ ಮಾಡುತ್ತವೆ. ಹಾಗಾಗಿ ಗ್ರಾಮ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ತುಂಬಾ ಕಡಿಮೆ ಇರುವುದನ್ನು ಮತ್ತು ಕೆಲವು ಸಂದರ್ಭಗಳಲ್ಲಿ ಭಾಗವಹಿಸುವಿಕೆಯೇ ಇಲ್ಲದಿರುವುದು ಕಂಡುಬರುತ್ತಿದೆ.

ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಸಂಘಗಳು ಭಾಗವಹಿಸಿ ತಮ್ಮ ಹಕ್ಕನ್ನು ಚಲಾಯಿಸಿರುವಂತಹ ಪ್ರಕರಣಗಳೂ ಅಲ್ಲಲ್ಲಿ ಕಂಡುಬಂದಿವೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಪೋತ್ನಾಳು ಗ್ರಾಮ ಪಂಚಾಯತಿಯಲ್ಲಿ 'ಜಾಗೃತಿ ಮಹಿಳಾ ಸಂಘಟನೆ'ಯವರು ತಮ್ಮ ಹಕ್ಕುಗಳನ್ನು ಚಲಾಯಿಸುವಲ್ಲಿ ಮತ್ತು ಯೋಜನೆಯ ಲಾಭವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿರುವ ಮಲ್ಲಯ್ಯನವರು ಹೇಳುವಂತೆ "ನಮ್ಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹೆಚ್ಚು ಜನ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾರೆ. ಯಾಕಂದ್ರೆ ನಮ್ಮಲ್ಲಿ ಮಹಿಳಾ ಜಾಗೃತಿ ಸಂಘ ಅಂತೇಳಿ ಇದೆ. ಈ ಸಂಘದಲ್ಲಿರುವಂತ ಮಹಿಳೆಯರು ತುಂಬಾ ಸ್ಟ್ರಾಂಗ್ ಆಗಿದ್ದಾರೆ. ಹಾಗೆಯೇ ಗ್ರಾಮ ಪಂಚಾಯ್ತಿಯಲ್ಲಿ ನಡೆಯುವ ಪ್ರತಿಯೊಂದು ಕೆಲಸ ಕಾರ್ಯಗಳ ಕುರಿತು ಪ್ರಶ್ನೆ ಮಾಡುತ್ತಾರೆ. ಇವರು ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಾಗಿದ್ದಾರೆ. ಯಾಕಂದ್ರೆ ಇವತ್ತು ಕೂಲಿ ಮಾಡಿ ಜೀವನ ಸಾಗಿಸುವಂತವರು ಇವರೇ ಆಗಿದ್ರಿಂದ ಇವರು ಜಾಸ್ತಿ ಪಾಲ್ಗೊಳ್ಳುತ್ತಾರೆ. ಆದರೆ ಉನ್ನತ ವರ್ಗದವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವುದರಿಂದ ಅವರಿಗೆ ಈ ಯೋಜನೆಯ ಅವಶ್ಯಕತೆ ಅಷ್ಟಾಗಿ ಇರುವುದಿಲ್ಲ. ಮುಖ್ಯವಾಗಿ ಹೇಳಬೇಕಂದ್ರೆ ಎಲ್ಲಿ ಮಹಿಳೆಯರು ಸಂಘಟಿತರಾಗಿದ್ದಾರೋ ಆ ಪಂಚಾಯ್ತಿ ವ್ಯಾಪ್ತಿಯಲ್ಲಿ ಈ ಯೋಜನೆ ಸಕ್ಸಸ್‌ಫುಲ್ ಆಗಿ ನಡೆಯೋದಕ್ಕೆ ಸಾಧ್ಯ ಆಗಿದೆ. ಮಹಿಳೆಯರು ಎಲ್ಲಿ ಸಂಘಟಿತರಾಗಿಲ್ವೋ ಅಲ್ಲಿ ಈ ಯೋಜನೆ ಸಕ್ಸಸ್ ಆಗಿಲ್ಲ ಎಂದು ಹೇಳುತ್ತಾರೆ. ಅಂದರೆ ಮಹಿಳೆಯರು ಸಂಘಟಿತರಾಗಿ ಯಾವುದೇ ಒತ್ತಡಗಳಿಗೆ ಮಣಿಯದೆ ಇದ್ದಾಗ ಮಾತ್ರ ಈ ಬಗೆಯ ಪ್ರತಿಫಲಗಳನ್ನು ಪಡೆಯುತ್ತಾರೆ.

## 2. ಯೋಜನೆಯ ಅನುಷ್ಠಾನದ ಹಂತ

ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿಯೂ ಲಿಂಗ ಅಸಮಾನತೆಯ ಅಂಶಗಳು ಹೆಚ್ಚಾಗಿ ಕಂಡುಬರುತ್ತಿವೆ. ಮುಖ್ಯವಾಗಿ ಉದ್ಯೋಗ ಚೀಟಿಗಳನ್ನು ರೂಪಿಸುವ ಹಂತದಿಂದ ಹಿಡಿದು ಕಾಮಗಾರಿ ಸ್ಥಳಗಳಲ್ಲಿನ ಕೆಲಸ ನಿರ್ವಹಿಸುವ ಹಂತದವರೆಗೆ ಮಹಿಳೆಯರು ಹಲವಾರು ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಗಂಡು ಹೆಣ್ಣಿನ ಲಿಂಗ ಸೂಕ್ಷ್ಮದ ಕಾರಣಕ್ಕೆ ಯೋಜನೆಯ ಕೆಲಸದ ಸ್ವರೂಪದಲ್ಲಿ ಕೆಲವು ಮಾನವೀಯ ಅಂಶಗಳಿವೆ. ಆದರೆ ಅನುಷ್ಠಾನದ ಸಂದರ್ಭದಲ್ಲಿ ಈ ಅಂಶಗಳು ಗೌಣವಾಗುವುದು ಅಥವಾ ಈ ಅಂಶಗಳನ್ನು ಪರಿಗಣಿಸದೆ ಇರುವುದು ವ್ಯಾಪಕವಾಗಿ ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿನ ಲಿಂಗ ಅಸಮಾನತೆಯ ನೆಲೆಗಳನ್ನು ಮುಂದಿನ ಹಂತದಲ್ಲಿ ಗುರುತಿಸುವ ಕಾರ್ಯ ಮಾಡಲಾಗಿದೆ.

ಉದ್ಯೋಗ ಚೀಟಿಗಳನ್ನು ಮಾಡಿಸುವಾಗ ಯೋಜನೆಯಲ್ಲಿ ತಿಳಿಸಿರುವಂತೆ ಫಾರಂ ನಂಬರ್ 3ರ ಅಡಿಯಲ್ಲಿ ಅರ್ಜಿಯನ್ನು ತುಂಬುವುದರ ಮೂಲಕ ಕೆಲಸಕ್ಕೆ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಆದರೆ ಗ್ರಾಮೀಣ ಭಾಗದ ಜನರು ಶಿಕ್ಷಣದಿಂದ ವಂಚಿತರಾಗಿರುವ ಕಾರಣಕ್ಕೆ ಅವರಿಗೆ ಇದರ ಕುರಿತಂತೆ ಸಂಪೂರ್ಣವಾದ ಜ್ಞಾನ ಇಲ್ಲದಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಪುರುಷರನ್ನು ಅವಲಂಬಿಸಿರುತ್ತಾರೆ. ಈ ವೇಳೆಯಲ್ಲಿ ಗ್ರಾಮೀಣ ಭಾಗಗಳಲ್ಲಿ ಪುರುಷರು ಒಂದು ಅರ್ಜಿಯನ್ನು ತುಂಬಿಕೊಡುವುದಕ್ಕಾಗಿ ಇಂತಿಷ್ಟು ಹಣವೆಂದು ತೆಗೆದುಕೊಳ್ಳುವ ಉದಾಹರಣೆಗಳು ಕಂಡುಬರುತ್ತವೆ. ಕೆಲವು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂದರ್ಭಗಳಲ್ಲಿ ಗ್ರಾಮ ಪಂಚಾಯತಿ ಸದಸ್ಯರೇ ಈ ಅರ್ಜಿ ನಮೂನೆಗಳನ್ನು ಜನರ ಬಳಿಗೆ ತಂದು ತಾವೇ ಅರ್ಜಿಯನ್ನು ಭರ್ತಿ ಮಾಡಿಕೊಂಡು ತೆಗೆದುಕೊಂಡು ಹೋಗುವಂತಹ ಉದಾಹರಣೆಗಳೂ ಕಾಣಸಿಗುತ್ತವೆ. ಇವರು ಉದ್ಯೋಗಕ್ಕಾಗಿ ಅರ್ಜಿಯನ್ನು ಭರ್ತಿ ಮಾಡಲು ಹಣವನ್ನೇನೂ ತೆಗೆದುಕೊಳ್ಳುವುದಿಲ್ಲ. ಬದಲಾಗಿ ಉದ್ಯೋಗ ಕಾರ್ಡ್‌ಗಳನ್ನೇ ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆ. ಹೀಗೆ ಮಾಡುವುದು ಕಾಯಿದೆಯ ವಿರುದ್ಧವಾದ ಸಂಗತಿಯಾಗಿದೆ. ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗಲು ಉದ್ಯೋಗ ಚೀಟಿಯು ಯಾರ ಹೆಸರಲ್ಲಿ ನೀಡಲಾಗಿರುತ್ತದೆಯೋ ಅದು ಅವರ ಬಳಿಯೇ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಗ್ರಾಮ ಪಂಚಾಯತಿ ಸದಸ್ಯರ ಹತ್ತಿರವಾಗಲೀ ಅಥವಾ ಎಮ್.ಜಿ.ಎನ್. ಆರ್.ಇ.ಜಿ.ಎ. ಅನುಷ್ಠಾನ ಸಿಬ್ಬಂಧಿಗಳ ಬಳಿಯಲ್ಲಿ ಉದ್ಯೋಗ ಚೀಟಿಯನ್ನು ಬಿಡುವಂತಿಲ್ಲ. ಇದನ್ನು ಕಾಯ್ದೆಯ ಪ್ರಕರಣ 25ರ ಅನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದರೆ ಇವುಗಳೆಲ್ಲವನ್ನು ಲೆಕ್ಕಿಸದೇ ಗ್ರಾಮದಲ್ಲಿನ ಗ್ರಾಮ ಪಂಚಾಯತಿ ಸದಸ್ಯರು ಉದ್ಯೋಗ ಚೀಟಿಗಳನ್ನು ಮಾಡಿಸಿ ತಮ್ಮ ಬಳಿಯೇ ಇಟ್ಟುಕೊಂಡಿರುವಂತಹ ಹಲವು ಉದಾಹರಣೆಗಳು ಕಂಡುಬಂದಿವೆ. ಹಾಗೂ ಇವರು ಉದ್ಯೋಗ ಚೀಟಿಗಳನ್ನು ಹೆಚ್ಚಾಗಿ ಮಹಿಳೆಯರ ಹೆಸರಲ್ಲಿಯೇ ಮಾಡಿಸುವುದು ಕಂಡುಬರುತ್ತಿದೆ. ಇದಕ್ಕೆ ಕಾರಣವೂ ಇದೆ. ಉದ್ಯೋಗ ಚೀಟಿಗಳನ್ನು ಮಹಿಳೆಯರ ಹೆಸರಲ್ಲಿ ಮಾಡಿಸಿದ ನಂತರ ಅವರಿಗೆ ಕೆಲಸ ಕೊಡಿಸುವ ಬದಲಾಗಿ ಅವರ ಹೆಸರಿನಲ್ಲಿ ಯಂತ್ರಗಳನ್ನು ಬಳಸಿ ಕೆಲಸಗಳನ್ನು ನಿರ್ವಹಿಸುತ್ತಾರೆ. ಇದನ್ನು ಪ್ರಶ್ನಿಸುವ ಗೋಜಿಗೆ ಮಹಿಳೆಯರು ಬರುವುದಿಲ್ಲ ಎಂಬ ಕಾರಣಕ್ಕಾಗಿ ಮಹಿಳೆಯರ ಹೆಸರಿನಲ್ಲಿ ಕಾರ್ಡುಗಳನ್ನು ಮಾಡಿಸುವುದನ್ನು ಕಾಣಲಾಗಿದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ನಿರ್ವಹಿಸುವಂತಹ ಕೆಲಸಗಳ ಸ್ವರೂಪದಲ್ಲಿಯೂ ಲಿಂಗ ಅಸಮಾನತೆಯ ಅಂಶಗಳು ಕಂಡುಬರುತ್ತಿವೆ. ಕೆಲಸಗಳನ್ನು ನಿರ್ವಹಣೆಯ ಸಂದರ್ಭದಲ್ಲಿ, ಕೆಲಸಗಳನ್ನು ಹಂಚಿಕೆ ಮಾಡುವ ಸಂದರ್ಭಗಳಲ್ಲಿ, ಕೆಲಸದ ಸ್ಥಳಗಳಲ್ಲಿನ ಸೌಲಭ್ಯಗಳ ಕಾರಣವಾಗಿ ಮಹಿಳೆಯರು ಹಲವಾರು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳ ಜೊತೆ ಜೊತೆಗೆ ಜಾತಿ ಕಾರಣಕ್ಕಾಗಿ, ಶಿಕ್ಷಣದ ಕೊರತೆಯ ಕಾರಣಕ್ಕಾಗಿಯೂ ಅಸಮಾತೆಗೆ ಒಳಗಾಗಿದ್ದಾರೆ.

ವ್ಯವಸ್ಥೆಯಲ್ಲಿ ದುಡಿಮೆಗೆ ಸಂಬಂಧಿಸಿದಂತೆ ಸ್ತ್ರೀ ಪುರುಷರಿಬ್ಬರಿಗೂ ಹಲವು ಬಗೆಯ ಕೆಲಸಗಳನ್ನು ವರ್ಗೀಕರಣ ಮಾಡಲಾಗಿದೆ. ಸ್ತ್ರೀ–ಪುರುಷರಿಬ್ಬರೂ ಸಹ ಇಂತಹದ್ದೇ ಕೆಲಸಗಳನ್ನು ಮಾಡಬೇಕು ಎಂದು ವ್ಯವಸ್ಥೆ ಈಗಾಗಲೇ ರೂಪಿಸಿಬಿಟ್ಟಿದೆ. ವ್ಯವಸ್ಥೆಯಲ್ಲಿ ಸ್ತ್ರೀಯರು ಮಾಡುವಂತಹ ಎಷ್ಟೋ ಕೆಲಸಗಳನ್ನು ಪುರುಷರು ಮಾಡಲು ಆಗುವುದಿಲ್ಲ. ಹಾಗೆಂದು ಅವರು ಸ್ತ್ರೀಯರಿಗಿಂತ ಅಸಮರ್ಥರು ಎಂದು ಹೇಳಲಾಗುವುದಿಲ್ಲ. ಇಲ್ಲಿ ಸಾಮರ್ಥ್ಯದ ವಿಷಯ ಮುಖ್ಯವಾಗುತ್ತದೆ ಎಂದುಕೊಂಡರೆ ತಪ್ಪಾಗುತ್ತದೆ. ಏಕೆಂದರೆ ಸ್ತ್ರೀಯರಾಗಲೀ ಪುರುಷರಾಗಲೀ ತಾವು ಯಾವ ಯಾವ ಕೆಲಸಗಳನ್ನು ರೂಢಿಸಿಕೊಂಡು ಬಂದಿರುತ್ತಾರೋ ಆ ಕೆಲಸಗಳನ್ನು ಸುಲಭವಾಗಿ ಮಾಡಬಲ್ಲರು. ಆದರೆ ತಮ್ಮ ಜೀವನದಲ್ಲಿ ರೂಢಿಸಿಕೊಳ್ಳದೇ ಇರುವಂತಹ ಕೆಲಸಗಳನ್ನು ಯಾರೂ ಮಾಡುವುದಿಲ್ಲ. ಒಂದು ವೇಳೆ ಮಾಡಲು ಮುಂದಾದರೆ ಅದು ಅವರಿಗೆ ಕಷ್ಟವೆನಿಸುತ್ತದೆ. ಹೀಗೆ ಕಷ್ಟವೆನಿಸುವಂತಹ ಕಾರ್ಯಗಳು ಈ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ಮಹಿಳೆಯರು ಎದುರಿಸುತ್ತಿದ್ದಾರೆ. ಏಕೆಂದರೆ ಈ ಯೋಜನೆಯಲ್ಲಿ ಕೂಲಿಯು ಸ್ತ್ರೀಪುರುಷರಿಗೆ ಸಮಾನವಾಗಿದೆ ಹಾಗಾಗಿ ಹೇಳಿದ ಕೆಲಸಗಳನ್ನು ಮಾಡಬೇಕು ಎಂಬಂತಹ ಒತ್ತಡಗಳಿಗೆ ಮಹಿಳೆಯರು ಒಳಗಾಗುತ್ತಿದ್ದಾರೆ.

ಇನ್ನು ಜಾತಿಯ ಕಾರಣಕ್ಕೆ ದಲಿತ ಮಹಿಳೆಯರಿಗೆ ಮತ್ತು ಉನ್ನತ ವರ್ಗದವೆಂದು ಗುತಿಸಲ್ಪಟ್ಟಂತಹ ಮಹಿಳೆಯರಿಗೆ ಕೆಲಸಗಳ ಹಂಚಿಕೆಯ ಸಂದರ್ಭದಲ್ಲಿ ಅಸಮಾನತೆ ಇರುವುದು ಕಂಡುಬರುತ್ತಿದೆ. ಇಲ್ಲಿ ಮುಖ್ಯವಾಗಿ ದಲಿತ ಮಹಿಳೆಯರಿಗೆ ಗುರುತಿಸುವಂತಹ ಕೆಲಸಗಳ ಸ್ವರೂಪವೇ ಬೇರೆಯಾಗಿರುತ್ತದೆ. ಅಂದರೆ ಅವರ ಜಾತಿಯು ವಂಶಪಾರಂಪರ್ಯವಾಗಿ ಯಾವ ಕೆಲಸಗಳನ್ನು ಮಾಡಿಕೊಂಡು ಬರಬೇಕೆಂದು ನಿಯಮವನ್ನು ರೂಪಿಸಲಾಗಿದೆಯೋ ಆ ಪ್ರಕಾರವಾಗಿ ಉದ್ಯೋಗ ಖಾತರಿ ಯೋಜನೆಯ ಕೆಲಸಗಳಲ್ಲಿಯೂ ವರ್ಗೀಕರಿಸಿರುವುದನ್ನು ಕಂಡುಬರುತ್ತಿದೆ. ಅಂದರೆ ಚರಂಡಿ ಸ್ವಚ್ಛಗೊಳಿಸುವುದು, ಊರ ಹೊರಗಿನ ಕೆಲಸಗಳನ್ನು ಮಾಡುವಂತೆ ಹೇಳುವುದು, ಸ್ಮಶಾನವನ್ನು ಸ್ವಚ್ಛಗೊಳಿಸುವದು ಈ ರೀತಿಯಲ್ಲಿ ಮಾಡಲಾಗುತ್ತಿದೆ. ಆದರೆ ಇದು ತಪ್ಪೆಂದು ಹೇಳುತ್ತಿಲ್ಲ. ಬದಲಾಗಿ ಈ ಕೆಲಸಗಳನ್ನು ಕೇವಲ ದಲಿತ ಮಹಿಳೆಯರು ಮಾತ್ರ ಮಾಡಬೇಕು ಎಂದು ಒತ್ತಡಗಳನ್ನು ಹಾಕುವುದು ತಪ್ಪು ಎಂಬುದು ಇಲ್ಲಿನ ಅಂಶವಾಗಿದೆ. ಹೀಗೆ ಮಾಡುವ ಮೂಲಕ ಜಾತಿ ಪದ್ಧತಿಯು ವ್ಯವಸ್ಥೆಯಲ್ಲಿ ಗಟ್ಟಿಗೊಳ್ಳುವಂತೆ ಮಾಡಲಾಗುತ್ತಿದೆ. ಈ ಅಸಮಾನತೆಗೆ ದಲಿತ ಮಹಿಳೆಯರೇ ಹೆಚ್ಚಾಗಿ ಸಮಸ್ಯೆಗಳಿಗೆ ಸಿಲುಕಿಕೊಂಡಿರುವುದನ್ನು ಕಾಣಲಾಗುತ್ತದೆ.

ಇನ್ನು ಕೆಲಸಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿಯೂ ಋತುಮಾನಗಳಿಗನುಗುಣವಾಗಿ ಜಾರಿಗೆ ತರುತ್ತಿದ್ದಾರೆ. ಈ ಸಂದರ್ಭದಲ್ಲಿ ಸ್ಥಳೀಯ ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಅಧಿಕಾರಿ ವರ್ಗದವರು ತುಂಬಾ ನಾಜೂಕಾಗಿ ಪರಿಸ್ಥಿತಿಯನ್ನು ನಿಭಾಯಿಸುತ್ತಾರೆ. ಅಂದರೆ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆ ತನ್ನ ಸ್ವಾರ್ಥಕ್ಕಾಗಿ ಈ ಯೋಜನೆಯನ್ನು ಬಳಸಿಕೊಳ್ಳುತ್ತಿದೆ. ಮುಖ್ಯವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬೇಸಿಗೆ ತುಂಬಾ ಇರುತ್ತದೆ. ಮತ್ತು ಬೇಸಿಗೆ ಕಾಲದಲ್ಲಿಯಂತೂ ಇಲ್ಲಿನ ಜನರ ಪರಿಸ್ಥಿತಿಯನ್ನು ನೋಡಲಾಗುವುದಿಲ್ಲ. ಈ ಕಾಲದಲ್ಲಿ ಗ್ರಾಮೀಣ ಭಾಗದ ಜನರಿಗೆ ಯಾವುದೇ ಕೆಲಸಗಳನ್ನು ಕೊಡಲು ಗ್ರಾಮ ಪಂಚಾಯತಿಗಳು ಮುಂದಾಗುತ್ತಿಲ್ಲ. ಹಾಗಾಗಿ ಇಲ್ಲಿನ ಜನರು ಕೆಲಸವನ್ನರಸಿ ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಾರೆ. ಆದರೆ ಮಳೆಗಾಲದ ಸಂದರ್ಭದಲ್ಲಿ ತಮ್ಮ ತಮ್ಮ ಊರುಗಳಲ್ಲಿಯೇ ಸಾಕಷ್ಟು ಕೆಲಸಗಳು ಇರುತ್ತವೆ. ಗ್ರಾಮದ ಜನರು ಊರಿನ ಹೊಲ ಗದ್ದೆಗಳಲ್ಲಿನ ಕೆಲಸಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಇಂತಹ ಸಮಯದಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರಲು ಮುಂದಾಗುತ್ತಾರೆ. ಇವರಿಗೆ ತಮ್ಮ ಗ್ರಾಮದ ನೈಜ ಸ್ಥಿತಿ ಗೊತ್ತಿರುತ್ತದೆ. ಹಾಗಾಗಿ ಗ್ರಾಮಗಳಲ್ಲಿನ ಕೆಲಸಗಳ ಸೀಜನ್ ಇದ್ದಾಗಲೇ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರುತ್ತದೆ. ಆದರೆ ಜನರು ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿರುತ್ತಾರಾದ್ದರಿಂದ ಉದ್ಯೋಗ ಖಾತರಿ ಯೋಜನೆಗೆ ತೆರಳುವುದಿಲ್ಲ. ಹೀಗೆ ಮಾಡುವುದರಿಂದ ಭ್ರಷ್ಟಾಚಾರಕ್ಕೆ ಎಡೆಮಾಡಿ ಕೊಟ್ಟಂತಾಗುತ್ತದೆ. ಇನ್ನು ಕೆಲಸದ ಸ್ಥಳಗಳಲ್ಲಿನ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಹಲವಾರು ರೀತಿಯಲ್ಲಿ ಸಮಸ್ಯೆಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಮುಖ್ಯವಾಗಿ ದಲಿತ ಮಹಿಳೆಯರಿಗೆ ಮತ್ತು ಉನ್ನತ ವರ್ಗದ ಮಹಿಳೆಯರಿಗೆ ಕುಡಿಯುವ ನೀರನ್ನು ಪ್ರತ್ಯೇಕವಾಗಿರಿಸಿರುವಂತಹ ಸಂದರ್ಭಗಳೂ ಸಹ ಕಂಡುಬಂದಿವೆ. ಇವುಗಳೆಲ್ಲವೂ ಕೂಡ ಪಿತೃಪ್ರಧಾನ ಮೌಲ್ಯಗಳಿಗೆ ಹಿಡಿದ ಕನ್ನಡಿಯಂತಿವೆ.

### 3. ಯೋಜನೆಯ ಕಾಮಗಾರಿಗಳ ಮುಕ್ತಾಯದ ಹಂತ

ಉದ್ಯೋಗ ಖಾತರಿ ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳು ಮುಕ್ತಾಯಗೊಂಡ ನಂತರ ಈ ಕಾಮಗಾರಿಗಳಲ್ಲಿ

ಭಾಗವಹಿಸಿದಂತಹ ಕೂಲಿಕಾರರಿಗೆ ದುಡಿದ ಹಣವನ್ನು ಕೊಡಬೇಕು. ಅಂದರೆ ಕೂಲಿಕಾರರು ಮಾಡಿದ ಕೆಲಸದ ಸ್ಥಳವನ್ನು ಗ್ರಾಮ ಪಂಚಾಯತಿ ಅಧಿಕಾರಿಗಳು ಪರಿಶೀಲಿಸಬೇಕು ನಂತರ ದುಡಿದಂತಹ ಕೂಲಿಹಣವನ್ನು ಕೊಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಹಲವಾರು ಬಗೆಯಲ್ಲಿ ಕಿರುಕುಳಗಳನ್ನು ನೀಡುತ್ತಾರೆ. ಮತ್ತು ಕೇವಲ ಜಾಬ್‌ಕಾರ್ಡ್‌ಗಳನ್ನು ಮಾಡಿಸಿ ಅವರಿಗೆ ಕೆಲಸಗಳನ್ನು ಕೊಡದೇ ಯಂತ್ರಗಳನ್ನು ಬಳಸಿಕೊಂಡು ಕೆಲಸಗಳನ್ನು ಪೂರ್ಣಗೊಳಿಸಿದ ನಂತರ ಜಾಬ್ ಕಾರ್ಡ್‌ದಾರರಿಂದ ಹಣವನ್ನು ವಸೂಲಿ ಮಾಡುತ್ತಿರುವಂತಹ ಪ್ರಕರಣಗಳು, ಇನ್ನು ತಾವು ದುಡಿದಂತಹ ಕೂಲಿಹಣವನ್ನು ಸರಿಯಾದ ಸಮಯಕ್ಕೆ ಕೊಡದೇ ಹೋದಾಗ ಮಹಿಳೆಯರು ಗ್ರಾಮ ಪಂಚಾಯತಿಯ ವಿರುದ್ಧ ಧಂಗೆಯೆದ್ದಂತಹ ಸಂದರ್ಭಗಳು ಮತ್ತು ಹಾಗೆ ಮಾಡಿದ ಕಾರಣಕ್ಕಾಗಿ ತಾವು ದುಡಿದಂತಹ ಕೂಲಿ ಹಣವನ್ನು ಪಡೆದುಕೊಂಡಂತಹ ಸಂದರ್ಭಗಳು ಹಲವು ಅಂಶಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಹಲವಾರು ತೊಡಕುಗಳಿದ್ದು ಅವುಗಳಿಂದ ಮಹಿಳೆಯರಿಗೆ ಹೆಚ್ಚಿನ ರೀತಿಯಲ್ಲಿ ಹಿಂಸೆಗಳು ಸಂಭವಿಸುತ್ತಿರುವುದನ್ನು ಪ್ರಕರಣಗಳ ಮೂಲಕ ತಿಳಿದುಕೊಳ್ಳಲಾಗಿದೆ. ಅಂದರೆ ಯೋಜನೆಯ ಪ್ರತೀ ಹಂತದಲ್ಲಿಯೂ ಮಹಿಳೆಯರನ್ನು ಕಡೆಗಣಿಸಿರುವುದು ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಪುರುಷರು ಕೆಲಸವನ್ನು ಮಹಿಳೆಯರಿಗೆ ಹಂಚಿದ್ದಾರಾದರೂ ಅದರಿಂದ ಬಂದಂತಹ ಪ್ರತಿಫಲಕ್ಕೆ ಪುರುಷರೇ ಫಲಾನುಭವಿಗಳಾಗಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ಇರುವಂತೆ ದುಡಿಮೆಯ ಕ್ಷೇತ್ರದಲ್ಲಿಯೂ ಕೂಡ ಸಮಕಾಲೀನ ಪಿತೃ ಪ್ರಧಾನತೆಯು ಮಹಿಳೆಯರ ವಿಚಾರದಲ್ಲಿ ತನ್ನದೇ ಆದಂತಹ ಒಂದು ರಕ್ಷಣಾತ್ಮಕ ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ಮಹಿಳೆಯರು ಉದ್ಯೋಗಗಳಲ್ಲಿ ತೊಡಗಬೇಕು ಆ ಮೂಲಕ ಅವರು ಸಬಲರಾಗಬೇಕು ಎಂದು ಹೇಳಿಕೊಳ್ಳುತ್ತಲೇ ತನ್ನ ಯಾಜಮಾನ್ಯದ ಬೇರುಗಳನ್ನು ಬಲಪಡಿಸಿಕೊಳ್ಳುತ್ತಿರುತ್ತದೆ. ಉದ್ಯೋಗದ ಸಂದರ್ಭದಲ್ಲಿ ತನ್ನ ಪ್ರತಿನಿಧಿಯಾಗಿ ಮಹಿಳೆಯನ್ನು ಪ್ರತಿಷ್ಠಾಪಿಸುವುದರ ಮೂಲಕ ತನ್ನ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುತ್ತಿರುತ್ತದೆ. ಇದಕ್ಕೆ ಮಹಿಳೆಯರು ಬಹಳ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಾಗಲೀ, ಯೋಜನೆಯನ್ನು ರೂಪಿಸುವ ಹಂತದಲ್ಲಾಗಲೀ ಹಾಗೆಯೇ ಕಾಮಗಾರಿ ಸ್ಥಳಗಳಲ್ಲಾಗಲೀ ಮಹಿಳೆಯರನ್ನು ತುಂಬಾ ಕೀಳಾಗಿ ಕಾಣುತ್ತಿರುವುದು ಕಂಡುಬಂದಿದೆ. ಹಾಗೆಯೇ ದಲಿತ ಸಮುದಾಯದ ಮಹಿಳೆಯರ ವಿಚಾರದಲ್ಲಂತೂ ಈ ಅಸಮಾನತೆ ಎಂಬುದು ತುಂಬಾ ತೀವ್ರತೆಯನ್ನು ಪಡೆದುಕೊಂಡಿದೆ. ಪ್ರತೀ ಹಂತದಲ್ಲಿಯೂ ಪುರುಷಶಾಹಿ ಚಿಂತನೆಗಳು ಮಹಿಳೆಯರನ್ನು ಸದಾಕಾಲ ನಿರ್ದೇಶಿಸುತ್ತಾ ಬರಲಾಗಿದ್ದು ಅವರ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸುತ್ತಲೇ ಬಂದಿದೆ.

ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ, ಮಹಿಳೆಯರ ದುಡಿಮೆಗೆ ಸಂಬಂಧಿಸಿದಂತೆ ಹಲವಾರು ಬಗೆಯ ಚರ್ಚೆಗಳು ನಡೆಯುತ್ತಲೇ ಇವೆ. ಮುಖ್ಯವಾಗಿ ಇನ್ನೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಈ ಯೋಜನೆಯ ಕೆಲಸ ಅಸಂಘಟಿತ ವಲಯಕ್ಕೆ ಸೇರಿದುದಾಗಿದೆ. ಹಾಗಾಗಿ ಇಲ್ಲಿ ಉದ್ಯೋಗಿಗಳಿಗೆ ಭದ್ರತೆಯ ಪ್ರಶ್ನೆ ಎದುರಾಗುವುದಿಲ್ಲ ಮತ್ತು ಈ ವಲಯದಲ್ಲಿ ಸಂಘಟಿತರಾಗಲೂ ವ್ಯವಸ್ಥೆ ಬಿಡುವುದಿಲ್ಲ. ಇದು ಕೆಲಸಗಳನ್ನು ರೂಪಿಸುವ ಹಂತದಿಂದ ಹಿಡಿದು ಸಮಾನ ಅವಕಾಶ, ಸಮಾನ ವೇತನ, ಸಮಾನ ಸೌಲಭ್ಯಗಳು ಹೀಗೆ ಎಲ್ಲ ಕಡೆಯೂ ಹರಡಿದೆ. ಹಾಗಾಗಿ ಮಹಿಳೆಯರು ಸಂಘಟಿತರಾದರೂ ಸಹ ಅದು ಶಾಶ್ವತವಾಗಿ ನಿಲ್ಲುವಂತಹದ್ದಲ್ಲ. ಏಕೆಂದರೆ ಈ ಸಂಘಟಿತತೆಯನ್ನೂ ಸಹ ಒಡೆಯುವಂತಹ ಆಲೋಚನೆಗಳು ಸುತ್ತಮುತ್ತಲಿನಲ್ಲಿಯೇ ಇವೆ. ಇನ್ನೊಂದು ಅಂಶವೇನೆಂದರೆ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಮಹಿಳೆಯರಿಗೆ ಸರಿಯಾದ ಸೌಲಭ್ಯಗಳು ದೊರೆಯದೇ ಇರುವುದನ್ನು ಮತ್ತು ಆ ಸೌಲಭ್ಯಗಳನ್ನು ಪಡೆಯುವಲ್ಲಿ ಮಹಿಳೆಯರೇ ಮುಂದಿರುವುದನ್ನು ಗಮನಿಸಬಹುದಾಗಿದೆ. ಅಂದರೆ ಸೌಲಭ್ಯಗಳು ದೊರೆಯದಿದ್ದಾಗ ಗ್ರಾಮ ಪಂಚಾಯತಿಯ ವಿರುದ್ಧ ಹೋರಾಟಕ್ಕಿಳಿದವರು ಮಹಿಳೆಯರು ಮಾತ್ರ. ಅದು ಸಂಘಟಿತ ನೆಲೆಯಲ್ಲಿ. ಇದು ಗಮನಾರ್ಹವಾದ ಸಂಗತಿಯಾಗಿದೆ.

ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ಮಹಿಳೆಯರ ಜೈವಿಕತೆಯನ್ನೇ ಪರಿಗಣನೆಗೆ ತೆಗೆದುಕೊಳ್ಳದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸರಕಾರದ ಕಾಯಿದೆಯಲ್ಲಿ ಗರ್ಭಿಣಿ ಮಹಿಳೆಯರಿಗೆ ಪ್ರತ್ಯೇಕವಾದಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳುತ್ತದೆ. ಆದರೆ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆ ಇದಾವುದನ್ನೂ ಗಮನಕ್ಕೆ ತಂದುಕೊಳ್ಳದೇ ತನ್ನ ಅಧಿಕಾರವನ್ನು ಚಲಾಯಿಸುತ್ತಿರುತ್ತದೆ. ಹಾಗಾಗಿ ಮಹಿಳೆಯರು ಈ ಸಂದರ್ಭದಲ್ಲಿ ಹಲವು ಬಗೆಯ ಸಮಸ್ಯೆಗಳಿಗೆ ಒಳಗಾಗುವುದನ್ನು ಕಾಣಬಹುದಾಗಿದೆ. ಕೃಷಿ ಪ್ರಧಾನ ಸಮಾಜಗಳಲ್ಲಿ ಹಾಗೂ ಅದಕ್ಕೂ ಪೂರ್ವದಲ್ಲಿ ಹಿಂದೆ ಅಲೆಮಾರಿ ಗುಂಪುಗಳಾಗಿದ್ದ ಸಂದರ್ಭದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನವಾಗಿ ಭಾಗವಹಿಸುತ್ತಿದ್ದರು. ಆ ಸಂದರ್ಭದಲ್ಲಿ ಮೇಲು ಕೀಳುಗಳಿಗೆ ಆಸ್ಪದವಿರಲಿಲ್ಲ. ತದನಂತರದಲ್ಲಿ ಮಹಿಳೆ ತನ್ನ ಜೈವಿಕ ಕಾರಣವಾಗಿ ಒಂದು ಸ್ಥಳದಲ್ಲಿ ನೆಲೆ ನಿಂತಿದ್ದರಿಂದ ಮನೆಗೆ ಮಾತ್ರ ಸೀಮಿತಳಾದಳು. ಕಾಲಾನಂತರದಲ್ಲಿ ಮಡಿ, ಮೈಲಿಗೆಗಳ ಪರಿಕಲ್ಪನೆಗಳು ಹುಟ್ಟಿದ್ದರಿಂದಾಗಿ ಮಹಿಳೆಯರು ಕೃಷಿ ಉಪಕರಣಗಳನ್ನೂ ಸಹ ಮುಟ್ಟದಂತೆ ಮತ್ತು ಭೂಮಿಯನ್ನು ಉಳುಮೆ ಮಾಡದಂತೆ ನಿರ್ಬಂಧಿಸಲಾಯಿತು. ಹೀಗೆ ಮುಂದುವರೆದ ನಿರ್ಬಂಧಗಳು ಆರ್ಥಿಕ ಕ್ಷೇತ್ರಕ್ಕೂ ಕಾಲಿಟ್ಟಿತು. ದುಡಿಮೆ ಎಂಬ ಕ್ಷೇತ್ರದಲ್ಲಿಯೂ ಲಿಂಗ ತಾರತಮ್ಯಗಳು ಹೆಚ್ಚಾಗತೊಡಗಿದವು. ಇಲ್ಲಿ ಮಹಿಳೆಯರು ಅಧಿಕಾರವನ್ನು ಚಲಾಯಿಸುವಂತಹ ಮತ್ತು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಜವಾಬ್ದಾರಿ ಹುದ್ದೆಗಳಿಂದ ದೂರವಿರಿಸಲಾಯಿತು. ಆ ಕಾರಣಕ್ಕಾಗಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯರು ಇದ್ದಾಗ್ಯೂ ಕೂಡ ಅವರು ತಮ್ಮ ಹಕ್ಕು ಚಲಾವಣೆಯಿಂದ ಮತ್ತು ಅಧಿಕಾರದಿಂದ ದೂರವಿರುತ್ತಾರೆ. ಮತ್ತು ಪ್ರಮುಖವಾದ ನಿರ್ಣಯಗಳನ್ನೂ ಸಹ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಮಹಿಳೆಯರು ಜವಾಬ್ದಾರರಲ್ಲ. ಬದಲಾಗಿ ಮಹಿಳೆಯರನ್ನು ಈ ಪಿತೃಪ್ರಧಾನ ಚಿಂತನೆಗಳು ಕಟ್ಟಿಹಾಕಲ್ಪಟ್ಟಿವೆ. ಆ ಕಾರಣಕ್ಕಾಗಿ ಮಹಿಳೆಯರು ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೂ ಪುರುಷರನ್ನು ಅವಲಂಬಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಗಾಗಿ ಸರಕಾರದ ಯಾವುದೇ ಯೋಜನೆಗಳು ಜಾರಿಯಾದರೂ ಮಹಿಳೆಯರು ಆ ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡುಬರುತ್ತಿದೆ.

ಶೈಲಜ ಹಿರೇಮಠರವರು ತಮ್ಮ 'ಮಹಿಳೆ ದುಡಿಮೆ, ಉತ್ಪಾದನೆ, ಆರ್ಥಿಕ, ಸ್ವಾವಲಂಬನೆ ಇತ್ಯಾದಿ' ಎಂಬ ಲೇಖನದಲ್ಲಿ ಮಹಿಳೆಯರ ದುಡಿಮೆಗೆ ಮತ್ತು ಆ ದುಡಿಮೆಯ ಪ್ರತಿಫಲದ ಹಕ್ಕಿನ ಕುರಿತಂತೆ ಅಂದರೆ ಮಹಿಳೆಯರ ಹಣಕಾಸಿನ ಭಾಷೆಗೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ಮಂಡಿಸಿದ್ದಾರೆ.

ಇದರಲ್ಲಿ ಮುಖ್ಯವಾಗಿ ಮಹಿಳೆಯರು ಹಣಕಾಸಿನ ಭಾಷೆಯಿಂದ ದೂರವಿರುವುದನ್ನು ಮತ್ತು ಅದಕ್ಕೆ ಇರುವಂತಹ ಕಾರಣಗಳ ಕುರಿತಾಗಿ ಚರ್ಚಿಸಬೇಕಾದ ಜರೂರಿದೆಯೆಂದು ತಿಳಿಸುತ್ತಾರೆ. ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರು ಈ ಹಣಕಾಸಿನ ಭಾಷೆಯಿಂದ ಅಥವಾ ಹಣಕಾಸಿನ ವ್ಯವಹಾರಗಳಿಂದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೇಗೆ ಮತ್ತು ಏಕೆ ದೂರ ಸರಿದಿದ್ದಾರೆ ಎಂಬುದನ್ನು ತಿಳಿಯುವುದು ಮುಖ್ಯವಾಗುತ್ತದೆ. ಉದ್ಯೋಗ ಖಾತರಿ ಯೋಜನೆಯು ಮುಖ್ಯವಾಗಿ ಮಹಿಳೆಯರಿಗೆ ಹಣಕಾಸಿನ ಭಾಷೆಯನ್ನು ಕಲಿಸಿಕೊಡುವುದರ ಮೂಲಕ ಅವರು ಸಬಲರಾಗುವುದರತ್ತ ಕೊಂಡುಯ್ಯುತ್ತದೆ. ಅಂದರೆ ಗ್ರಾಮೀಣ ಭಾಗಗಳಲ್ಲಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುತ್ತಾರೆ ಹಾಗಾಗಿ ಇವರಿಗೆ ಹಣಕಾಸಿನ ಭಾಷೆಯಾದಂತಹ ಬ್ಯಾಂಕು, ಪಾಸ್‌ಬುಕ್ಕು, ಅಕೌಂಟು ಹೀಗೆ ಮುಂತಾದ ಭಾಷಿಕ ಪದಗಳ ಪರಿಚಯವೇ ಇಲ್ಲದಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯು ಮಹಿಳೆಯರ ಹೆಸರಲ್ಲಿ ಅಕೌಂಟನ್ನು ಮಾಡಿಸಲು ಮತ್ತು ಅವರ ಖಾತೆಗೆ ಬರುವಂತಹ ಹಣದ ಮೇಲೆ ಅವರಿಗೆ ಮಾತ್ರ ಅಧಿಕಾರ ಮತ್ತು ಹಕ್ಕು ಇರುವಂತೆ ಮಾಡಿದೆ. ಆದರೆ ಈ ಬಗೆಯ ಅಧಿಕಾರ ಮತ್ತು ಹಕ್ಕನ್ನು ಕೊಡಲು ಪುರುಷಶಾಹಿ ವ್ಯವಸ್ಥೆ ಸಿದ್ಧವಿಲ್ಲ. ಹಾಗಾಗಿ ಅವರನ್ನು ಈ ಬಗೆಯ ಚಟುವಟಿಕೆಗಳಿಂದ ದೂರ ಇಡಲಾಗುತ್ತಿದೆ. ಇದಕ್ಕೂ ಮುನ್ನ ಗ್ರಾಮೀಣ ಭಾಗಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಮತ್ತು ಮಹಿಳಾ ಸಂಘಗಳು ಅಸ್ತಿತ್ವದಲ್ಲಿದ್ದವು ಹಾಗೆಯೇ ಇಂದಿಗೂ ಜಾರಿಯಲ್ಲಿವೆ. ಈ ಸಂಘಗಳಲ್ಲಿನ ಕೆಲವು ಮಹಿಳೆಯರು ಮಾತ್ರ ಈ ಬಗೆಯ ಹಣಕಾಸಿನ ಭಾಷೆಯನ್ನು ತಮ್ಮದಾಗಿಸಿಕೊಂಡಿರುತ್ತಾರೆ. ಮುಖ್ಯವಾಗಿ ಈ ಬಗೆಯ ಸಂಘಗಳಲ್ಲಿ ಸ್ವಲ್ಪ ಶಿಕ್ಷಣವನ್ನು ಪಡೆದಿರುವಂತಹ ಕೆಲವು ಮಹಿಳೆಯರು ಬ್ಯಾಂಕಿನ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಅವರೇ ಎಲ್ಲಾ ವಿಷಯಗಳಲ್ಲೂ ಮುಂದಿರುತ್ತಾರೆ. ಆದರೆ ಉಳಿದಂತಹ ಮಹಿಳೆಯರು ಈ ಬಗೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಿಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯು ಶಿಕ್ಷಣವನ್ನು ಪಡೆದಿರಲಿ ಅಥವಾ ಪಡೆಯದೇ ಇರಲಿ ಎಲ್ಲರಿಗೂ ಸರಿಸಮಾನವಾಗಿ ಬ್ಯಾಂಕಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದೆ. ಹಾಗಾಗಿ ಇದೊಂದು ವಿಶೇಷವಾಗಿ ಮಹಿಳೆಯರ ಆರ್ಥಿಕ ಭದ್ರತೆಯನ್ನು ಹೆಚ್ಚಿಸುವುದರತ್ತ ಗಮನಹರಿಸಿದೆ ಎಂದರೆ ತಪ್ಪಾಗಲಾರದು. ಈ ಬಗೆಯ ಹಣಕಾಸಿನ ಭಾಷೆ ಮತ್ತು ಹಣಕಾಸಿನ ವ್ಯವಹಾರಗಳಿಂದ ವಂಚಿತರನ್ನಾಗಿಸಿರುವುದು ಕೇವಲ ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮುಂದುವರೆದಂತಹ ದೇಶಗಳಲ್ಲಿಯೂ ಈ ಬಗೆಯ ಸಮಸ್ಯೆಗಳು ಇರುವುದು ಕಂಡುಬರುತ್ತದೆ.

ವಾಸ್ತವದಲ್ಲಿ ಉದ್ಯೋಗ ಖಾತರಿ ಯೋಜನೆಯು ಮಹಿಳೆಯರಿಗೆ ಹಲವು ಬಗೆಯಲ್ಲಿ ಉಪಯುಕ್ತವಾದ ಅಂಶಗಳನ್ನು ಒಳಗೊಂಡಿದೆ. ಮುಖ್ಯವಾಗಿ ಈ ಯೊಜನೆಯು ಮಹಿಳೆಯರಿಗೆ ಹಣದ ಭಾಷೆಯನ್ನು ಕಲ್ಪಿಸಿಕೊಡುತ್ತದೆ. ಆ ಮೂಲಕ ಮಹಿಳೆಯರು ಮುಖ್ಯವಾಹಿಗೆ ಬರುವಂತೆ ಮತ್ತು ಆರ್ಥಿಕವಾಗಿ ಮುಂದುವರೆಯುವಂತೆ ಮಾಡುತ್ತಿದೆ. ಇದು ಮಹಿಳೆಯರಿಗೆ ದೊರೆತದ್ದೇ ಆದರೆ ಅವರು ಸಬಲರಾಗಲು ಕಷ್ಟವೇನಲ್ಲ. ಆದರೆ ಇದನ್ನು ಸಹಿಸದ ಪುರುಷಶಾಹಿ ವ್ಯವಸ್ಥೆ ಮಹಿಳೆಯರನ್ನು ತನ್ನ ಅಧೀನದಲ್ಲಿರಿಸಿಕೊಳ್ಳಲು ತಂತ್ರಗಳನ್ನು ರೂಪಿಸಿಕೊಳ್ಳುತ್ತಲೇ ಇರುತ್ತದೆ. ಹಾಗಾಗಿ ಮಹಿಳೆಯರು ಈ ಹಣದ ಭಾಷೆಯಿಂದ ದೂರವಿರುವುದು ಕಂಡುಬರುತ್ತಿದೆ. ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯು ಹಲವು ಲಿಂಗ ಸಮಾನತೆಯ ಅಂಶಗಳನ್ನು ಒಳಗೊಂಡಿದೆಯಾದರೂ ಅದರ ಅನುಷ್ಠಾನದ ಸಂದರ್ಭದಲ್ಲಿ ಈ ಅಂಶಗಳು ಗೋಚರಿಸದೇ ಇರುವುದು ಕಂಡುಬರುತ್ತಿದೆ. ಈ ಸಂದರ್ಭದಲ್ಲಿ ಹಲವು ಸರಕಾರೇತರ ಸಂಘ ಸಂಸ್ಥೆಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಜಾಗೃತಿಯನ್ನು ಮೂಡಿಸುವಂತಹ ಕೆಲಸಗಳನ್ನು ಮಾಡುತ್ತಿವೆ. ಈ ಕಾರ್ಯಗಳು ಇನ್ನೂ ತ್ವರಿತಗತಿಯಲ್ಲಿ ಸಾಗಬೇಕು ಮತ್ತು ಜನರು ಈ ಯೋಜನೆಯ ಸಂಪೂರ್ಣವಾದ ಅರಿವನ್ನು ಹೊಂದಿ ಲಾಭವನ್ನು ಪಡೆಯುವಂತಾಗ ಬೇಕು. ಹಾಗೆಯೇ ಸರಕಾರಗಳು ಈ ಬಗೆಯ ತೊಡಕುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಅಂದಾಗ ಮಾತ್ರ ಈ ಯೋಜನೆಯು ಸಂಪೂರ್ಣವಾಗಿ ಸಫಲತೆಯನ್ನು ಪಡೆಯುತ್ತದೆ.

■■

– 15 ನೇ ಪುಟದಿಂದ ಮುಂದುವರೆದುದು

ಶಂಕರಗಣನ ನಂತರ ಬಾಲಹರ್ಷನು (ಕ್ರಿ.ಶ. 910–915) ಪಟ್ಟಕ್ಕೆ ಬಂದನು. ಅವನ ನಂತರ ಒಂದನೆಯ ಯುವರಾಜ (ಕ್ರಿ.ಶ. 915–945) ಸಿಂಹಾಸನವನ್ನು ಏರಿದನು. ಇವನು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ತನ್ನ ಮಗಳು ಕುಂದದೇವಿಯನ್ನು ಮೂರನೆಯ ಅಮೋಘವರ್ಷನಿಗೆ ವಿವಾಹಮಾಡಿಕೊಟ್ಟಿದ್ದನು. ಮೂರನೆಯ ಕೃಷ್ಣ ಈಕೆಯ ಮಗನಾದರೂ ತನ್ನ ಸೋದರಮಾವ ಯುವರಾಜನ ಮೇಲೆ ಯುದ್ಧಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿದನು. ಅಮೋಘ ವರ್ಷನ ಕರ್ಹಾಡ ಶಾಸನವು ಅವನು ಸಹಸ್ರಾರ್ಜುನನನ್ನು ಅಂದರೆ ಕಲಚೂರಿ ಅರಸನನ್ನು ಸೋಲಿಸಿದ್ದನ್ನು ಉಲ್ಲೇಖಿಸುತ್ತದೆ. ಇದನ್ನು ಮೂರನೆಯ ಕೃಷ್ಣನ ಜೂರಾಶಾಸನ ಸಮರ್ಥಿಸುತ್ತದೆ.[10]

ಇದರಿಂದ ಕಲಚೂರಿ ರಾಜ್ಯ ರಾಷ್ಟ್ರಕೂಟರ ರಾಜ್ಯದಲ್ಲಿ ಲೀನವಾಗಿ ಹೋಗುವ ಪರಿಸ್ಥಿತಿ ಬಂದೊದಗಿತು. ಅಷ್ಟರಲ್ಲಿ ಯುವರಾಜನು ಸೈನ್ಯವನ್ನು ಸಿದ್ಧಪಡಿಸಿಕೊಂಡು ರಾಷ್ಟ್ರಕೂಟರನ್ನು ಡಾಹಲದೇಶದಿಂದ ಓಡಿಸಿ, ಲಾವರ ಮೇಲೆ ಯುದ್ಧಮಾಡಿ ಜಯಗಳಿಸಿದನೆಂದು ತಿಳಿದುಬರುತ್ತದೆ.[11] ರಾಜಶೇಖರನು ತನ್ನ ವಿದ್ಧಶಾಲ ಭಂಜಿಕಾ ಎಂಬ ನಾಟಕದಲ್ಲಿ 'ಇತರ ರಾಜನೊಂದಿಗೆ ಒಕ್ಕೂಟ ರಚಿಸಿಕೊಂಡು ಬಂದ ವಲ್ಲಭನ ಮೇಲೆ ಯುವರಾಜನು ಜಯಗಳಿಸಿದನು' ಎಂದು ಹೇಳುವಾಗ ಅದು ರಾಷ್ಟ್ರಕೂಟರ ಮೇಲೆ ಗಳಿಸಿದ ಜಯವೇ ಆಗಿರಬೇಕು.

ಒಂದನೆಯ ಯುವರಾಜನ ನಂತರ ಅವನ ಮಗ ಎರಡನೆಯ ಲಕ್ಷ್ಮಣರಾಜ (ಕ್ರಿ. ಶ. 945–970) ಸಿಂಹಾಸನಕ್ಕೆ ಬಂದ ಇವನು ತನ್ನ ಮಗಳು ಬೊಂಥಾದೇವಿಯನ್ನು ಚಾಲುಕ್ಯ ನಾಲ್ಕನೆಯ ವಿಕ್ರಮಾದಿತ್ಯನಿಗೆ ವಿವಾಹ ಮಾಡಿಕೊಟ್ಟನು. ಈ ಬೊಂಥಾದೇವಿಯ ಮಗನೇ ಎರಡನೆಯ ತೈಲಪನು. ಇವನು ಕ್ರಿ. ಶ. 973ರಲ್ಲಿ ರಾಷ್ಟ್ರಕೂಟರ ಕೊನೆಗಾಣಿಸಿ ದಖನ್ನಿನಲ್ಲಿ ಮತ್ತೇ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ.[12]

ಹೀಗೆ ಕಲಚೂರಿ ಮತ್ತು ರಾಷ್ಟ್ರಕೂಟರ ಸಂಬಂಧವು ಕೆಲವು ಸಂದರ್ಭಗಳಲ್ಲಿ ಸಂಘರ್ಷದಿಂದ ಕೂಡಿದ್ದರೆ, ಇನ್ನೂ ಕೆಲವು ಸಲ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವದರ ಮೂಲಕ ಸ್ನೇಹಯುತವಾದ ಬಾಂದವ್ಯವನ್ನು ಪಡೆದುಕೊಂಡಿದ್ದರೆಂಬುದು ಮೇಲಿನ ಉದಾಹರಣೆಗಳಿಂದ ತಿಳಿದುಬರುತ್ತದೆ.

## ಆಕರ ಗ್ರಂಥಗಳು


1. Sharma R.K. *The Kalachuri and their Times* , p.3.
2. ಅದೇ
3. E.I. XIX, p. 64.
4. ಅಣ್ಣಿಗೇರಿ ಎ.ಎ. ಪಟ್ಟದಕಲ್ಲು ಗುಡಿಗಳು, ಪು–25.
5. ಕೆ.ಪಿ.ಈರಣ್ಣ, ಪೂರ್ವದ ಕಲಚೂರಿಗಳು ಲೇಖನದಿಂದ
6. EI. Vol. XVIII. No 28 p. 235-257. ff
7. ನರಸಿಂಹಮೂರ್ತಿ ಎ.ವ್ಹಿ.(ಸಂ.) ಕನೋಜಸಾಮ್ರಾಜ್ಯಯುಗ ಪು. 133.
8. ಸುಂದರ ಅ. (ಸಂ) ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪು–235)
9. ನರಸಿಂಹಮೂರ್ತಿ ಏ.ವ್ಹಿ. ಅದೇ ಪುಟ–135.
10. EI. Vol XIX. P. 287 ff
11. ನರಸಿಂಹಮೂರ್ತಿ ಎ. ವ್ಹಿ. ಅದೇ ಪುಟ–136.
12. ಸುಂದರ ಅ. (ಸಂ) ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪು–235.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೊರಗರ ಕುಲಕಸುಬುಗಳು

✍ **ರಾಘವೇಂದ್ರ ಎಲ್.,** ಸಮಾಜಶಾಸ್ತ್ರ ಉಪನ್ಯಾಸಕರು, ಪೂರ್ಣಪ್ರಜ್ಞೆ ಪದವಿ ಕಾಲೇಜು, ಉಡುಪಿ – 576101

## ಪೀಠಿಕೆ

ಕರ್ನಾಟಕದ ಆದಿಮ ಬುಡಕಟ್ಟುಗಳಲ್ಲಿ ಕೊರಗ ಬುಡಕಟ್ಟವೂ ಒಂದು. ಇವರು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದಾರೆ. ಕರ್ನಾಟಕದ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆ, ಕೇರಳದ ಕಾಸರಗೋಡಿನಲ್ಲಿ ಇವರು ಹೆಚ್ಚಾಗಿ ಕಾಣುತ್ತಾರೆ. ಕೊರಗರ ಸಾಂಸ್ಕೃತಿಕ ವೈಶಿಷ್ಟ್ಯತೆಯಿಂದಾಗಿ ಇಂದು ಅವರ ಬಗ್ಗೆ ಹಲವಾರು ಅಧ್ಯಯನಗಳು ನಡೆದಿವೆ. ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಅಭಿರುಚಿಗಳು ವಿಶೇಷಾಧ್ಯಯನಕ್ಕೆ ಸ್ಫೂರ್ತಿ ನೀಡುತ್ತದೆ.

ನಾಗರಿಕತೆಯು ಬೆಳೆಯುತ್ತಾ ಬಂದಂತೆ ಮಾನವನು ತನ್ನ ಅವಶ್ಯಕ ವಸ್ತುಗಳನ್ನು ಪ್ರಕೃತಿಯಿಂದಲೇ ಪಡೆಯುವುದನ್ನು ಕಾಣುತ್ತೇವೆ. ಪ್ರಾಕೃತಿಕ ವಸ್ತುಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ತಯಾರಿಸಿ ಪ್ರಾಣಿಗಳನ್ನು ಬೇಟೆಯಾಡುವುದು, ಗೆಡ್ಡೆಗೆಣಸುಗಳನ್ನು ಅಗೆದು ತೆಗೆಯುವುದು, ಇದಕ್ಕಾಗಿ ಹೀಗೆ ಒಂದಿಲ್ಲೊಂದು ವಸ್ತುಗಳನ್ನು ಉತ್ಪಾದಿಸುತ್ತಲೇ ಬಂದಿದ್ದಾರೆ.

ಕೊರಗರೂ ಸಹ ಅರಣ್ಯವಾಸಿಗಳು, ಅರಣ್ಯದಲ್ಲಿ ದೊರೆಯುವ ಗಿಡಮರ, ತೊಗಟೆ, ಬೇರು ಬಳ್ಳಿಗಳನ್ನು ಉಪಯೋಗಿಸಿಕೊಂಡು ತನಗೆ ಬೇಕಾದಂತಹ ವಸ್ತುಗಳನ್ನು ತಯಾರಿಸಿಕೊಳ್ಳುತ್ತಾರೆ. ಇವರ ಪ್ರಮುಖವಾದ ಕಸುಬು ಬುಟ್ಟಿ ಹೆಣೆಯುವುದು. ಅವರ ಉತ್ಪನ್ನಗಳನ್ನು ನೋಡಿದಾಗ ಅವರ ಕಲೆಗಾರಿಕೆ, ತಯಾರಿಸುವ ದೂರದೃಷ್ಟಿ ವಿಧಾನಗಳು ಆಧುನಿಕ ಯಂತ್ರಗಳನ್ನೂ ನಾಚಿಸುತ್ತದೆ.

## ಕೊರಗರ ಕುಲಕಸುಬಿಗೆ ಉಪಯೋಗಿಸುವ ಕಚ್ಚಾವಸ್ತುವಿನ ವಿಧಗಳು

1. ನಾರಿನಿಂದ ತಯಾರಿಸುವ ಉತ್ಪನ್ನಗಳು
2. ಬಿಳಿಲಿನಿಂದ ತಯಾರಿಸುವ ಉತ್ಪನ್ನಗಳು
3. ಮರದ ಭಾಗದಿಂದ ತಯಾರಿಸಿದ ಉತ್ಪನ್ನಗಳು
4. ಬೆತ್ತದಿಂದ ತಯಾರಿಸುವ ಉತ್ಪನ್ನಗಳು
5. ಓಟೆ ಮತ್ತು ಬಿದಿರಿನಿಂದ ತಯಾರಿಸುವ ಉತ್ಪನ್ನಗಳು
6. ಗಿಡಗಳಿಂದ ತಯಾರಿಸುವ ಉತ್ಪನ್ನಗಳು

## • ಉಪಯೋಗಿಸುವ ಪ್ರಮುಖವಾದ ಬಿಳಲುಗಳು

ಮಾದೇರಿ ಬಿಳಲು, ಇಲ್ಬೂರು, ಬಂಧದ ಬೂರು, ನುರ್ತಾಲ್ ಬೂರು, ಕೊಜೆಂಬೆ ಇತ್ಯಾದಿ ಅಷ್ಟೇ ಅಲ್ಲದೇ ಕಚ್ಚಾವಸ್ತುವಾಗಿ ಗಿಡಗಳು, ಮರದ ಭಾಗಗಳು , ಬೆತ್ತ ಬಿದಿರು, ನಾರುಗಳನ್ನು ಬಳಸುತ್ತಾರೆ.

## • ಪ್ರಮುಖವಾದ ಉತ್ಪನ್ನಗಳು

ಕುರುವೆ (ಸಣ್ಣಗಾತ್ರದ ಕುಕ್ಕೆಗಳು), ಕುಕ್ಕೆ (ಪುಡಾಯಿ), ತಡ್ಪೆ (ಗೆರೆಸೆ), ಸಾರಣಿ, ತೊಟ್ಟಿಲು, ಪೆಟ್ಟಿಗೆ, ಸಿಂಬಿ (ತೆರಿಯಾ) ಇತ್ಯಾದಿ

ಕೊರಗರು ವೈಜ್ಞಾನಿಕ ವಿಧಗಳಲ್ಲಿ ಸಾಮಗ್ರಿಗಳನ್ನು ತಯಾರಿಸುತ್ತಾರೆ ಇದು ಅವರ ಕೌಶಲ್ಯತೆಗೆ ಸಾಕ್ಷಿಯಾಗಿದೆ. ಇಂತಹ ಉತ್ಪಾದನಾ ತಯಾರಿಯಲ್ಲಿಯೇ ಅವರು ಸುಖವನ್ನು ಕಾಣುತ್ತಾರೆ.

## • ಕೊರಗರ ಕುಲಕಸುಬಿನಲ್ಲಿರುವ ಸಮಸ್ಯೆಗಳು

ಇಂದು ಕೊರಗರು ತಮ್ಮ ಮೂಲ ಕಸುಬುಗಳನ್ನು ಬಿಡಬೇಕಾದ ಪರಿಸ್ಥಿತಿಯಿದೆ. ಅದಕ್ಕೆ ಕಾರಣಗಳು ಹಲವಾರು.

1. ಇಂದು ಕಾಡುನಾಶದಿಂದಾಗಿ ಬಿಳಲುಗಳು, ಬಳ್ಳಿ, ಮರಗಿಡಗಳು ಸರಿಯಾಗಿ ದೊರೆಯುತ್ತಿಲ್ಲ.
2. ಕೊರಗರು ಉತ್ಪಾದಿಸಿದ ವಸ್ತುಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ಇಲ್ಲ.
3. ಮಧ್ಯವರ್ತಿಗಳು ಕೊರಗರಿಗೆ ಸುಲಭವಾಗಿ ಮೋಸ ಮಾಡುತ್ತಿದ್ದಾರೆ.
4. ಸರ್ಕಾರದಿಂದ ಉತ್ತಮ ಸ್ಪಂದನೆ ದೊರೆಯುತ್ತಿಲ್ಲ
5. ಇಂದು ಬೇಲಿಗಳ ಬದಲಾಗಿ ಮನೆಗಳ ಪಾಗರಗಳು ಕಾಂಕ್ರೀಟ್‌ಮಯವಾಗಿದೆ.
6. ಪ್ಲಾಸ್ಟಿಕ್ ಉತ್ಪಾದನೆಗಳ ಅತಿಯಾದ ಬಳಕೆ ಕೊಡ ಕೊರಗರ ಕುಲಕಸುಬಿನ ಮೇಲೆ ದೊಡ್ಡ ಹೊಡೆತ ನೀಡಿದೆ.

## ಪರಿಹಾರೋಪಾಯಗಳು

1. ಸರ್ಕಾರವು ಅರಣ್ಯ ಉತ್ಪನ್ನಗಳನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು.
2. ಕೊರಗರ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವುದು.
3. ಕೊರಗರ ಉತ್ಪನ್ನಗಳ ಉಪಯುಕ್ತತೆಯನ್ನು ಜನಜಾಗೃತಿ ಮೂಲಕ ತಿಳಿಸುವುದು
4. ಸುಂದರವಾದ ಕೌಶಲ್ಯಗಳು, ವಿನ್ಯಾಸಗಳನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ಇಳಿಯುವುದು.

## ಉಪಸಂಹಾರ

ಕೊರಗರ ಕುಲಕಸುಬುಗಳನ್ನು ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸ್ಪಂದಿಸಬೇಕಾಗಿದೆ. ಅವರ ಉತ್ಪನ್ನಗಳಿಗೆ ಉತ್ತಮವಾದ ಮಾರುಕಟ್ಟೆ ಬೆಲೆ ಪ್ರಾಚೀನ ಕುಲಕಸುಬುಗಳನ್ನು ಉಳಿಸಬೇಕಾಗಿದೆ. ಇದಕ್ಕೆ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ನಾಗರಿಕರು ಪ್ರಯತ್ನಿಸಬೇಕಾಗಿದೆ.

## ಆಕರ ಗ್ರಂಥಗಳು

1. Vasudevan C, : 1998 Koragas, The forgotten lot.
2. ಗುಣಪಾಲ್ ಶೆಟ್ಟಿ, : 2013, ''ಮೌನ ಮಾತಾದಾಗ''.
3. ಗಂಗಾಧರ ದೈವಜ್ಞ, ಕೊರಗರು ಸಮಕಾಲೀನ ಸ್ಪಂದನ 2012, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕಂಪಣ ಬಾಸವೂರಿನ ವೀರಗಲ್ಲುಗಳು

✍ **ಶಿವಯೋಗಿ ಕೋರಿಶೆಟ್ಟರ** ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕ. ವಿ. ವಿ. ಧಾರವಾಡ.

*ಸಾರಾಂಶ*

*ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ವೀರಗುಣ ಒಂದು ಸಾಮಾಜಿಕ ಮೌಲ್ಯವಾಗಿತ್ತು. ಅಂದಿನ ಸ್ಥಿತಿಗತಿಗಳು ವೀರತ್ವವನ್ನು ಪ್ರೋತ್ಸಾಹಿಸುತ್ತಿದ್ದವು. ಪ್ರಾಚೀನ ಕನ್ನಡ ಕಾವ್ಯಗಳು, ಶಾಸನಗಳು ವೀರಗುಣಕ್ಕೆ ಪ್ರಾಧಾನ್ಯತೆಯನ್ನು ನೀಡಿವೆ. ವಿವಿಧ ಕಾರಣಗಳಿಗಾಗಿ ವೀರತ್ವವನ್ನು ಪ್ರದರ್ಶಿಸಿಸಿ ಮರಣಹೊಂದಿದವರನ್ನು ಅತ್ಯಂತ ಭಕ್ತಿ, ಗೌರವಗಳಿಂದ ಕಾಣುತ್ತಿದ್ದರು. ಅಂತಹ ವೀರರ ಕುರಿತು ಹಾಡು ಕಥೆಗಳನ್ನು ಕಟ್ಟಲಾಗುತ್ತಿತ್ತು. ಅವರ ಸ್ಮರಣೆಗಾಗಿ ವೀರಗಲ್ಲುಗಳನ್ನು ನಿರ್ಮಿಸಲಾಗುತ್ತಿತ್ತು. ಪ್ರಾಚೀನ ಕುಂತಳ ದೇಶದ ಬನವಾಸಿ-12000 ಪ್ರಾಂತದ ಹಲವಾರು ಕಂಪಣಗಳಲ್ಲಿ ಬಾಸವೂರು-140 ಒಂದು. ಕ್ರಿ.ಶ. 8ನೇ ಶತಮಾನದಿಂದ 13ನೇ ಶತಮಾನದ ಅಂತ್ಯದ ವರೆಗೆ ಸುಮಾರು ಐದು ಶತಮಾನಗಳಿಗೂ ಹೆಚ್ಚು ಸುಧೀರ್ಘ ಇತಿಹಾಸವನ್ನು ಬಾಸವೂರು ಕಂಪಣ ಹೊಂದಿದೆ. ಬಾಸವೂರು ಕಂಪಣದ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯ ವೀರಗಲ್ಲುಗಳು ದೊರೆಕಿವೆ. ರಾಷ್ಟ್ರಕೂಟರ ಕಾಲದಿಂದ ಯಾದವ ಕಾಲದವರೆಗೆ ನಡೆದ ಅನೇಕ ಯುದ್ಧಗಳಲ್ಲಿ ಈ ಪರಿಸರದ ವೀರರು ಹೋರಾಡಿ ಮರಣಗೈಯುವುದರ ಮೂಲಕ ಹುತಾತ್ಮರಾಗಿದ್ದಾರೆ. ಬಾಸವೂರು ಕಂಪಣದ ಜನತೆ ವೀರರೂ, ಛಲದಂಕಮಲ್ಲರೂ ಆಗಿದ್ದು, ಸಂಪತ್ತು, ಮಾನರಕ್ಷಣೆ, ಒಡೆಯನ ರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಿದ್ದರು. ತ್ಯಾಗ ಬಲಿದಾನಗಳ ಮೂಲಕ ಆದರ್ಶವನ್ನು ಮೆರೆದ, ಅಂತಹ ವೀರರನ್ನು ಪರಿಚಯಿಸುವ ಯತ್ನವೇ ಲೇಖನದ ಉದ್ದೇಶವಾಗಿದೆ.*

*ಮುಖ್ಯಾಂಶಗಳು : ಕಂಪಣ ಬಾಸವೂರು, ಕಂಪಣ ಬಾಸವೂರು ಪರಿಸರದ ವೀರಗಲ್ಲುಗಳು, ತುರುಗಾಳಗ, ಉರಳಿವಿನೋಳ್ ಪೆಣ್ಬಿಯ್ಯಲೋಳ್, ಎರವೆಸದೋಳ್, ಗಡಿಕಾಳಗ, ಹುಲಿಬೇಟೆ ವೀರಗಲ್ಲು.*

## ಪ್ರಸ್ತಾವನೆ

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ವೀರಗುಣ ಒಂದು ಸಾಮಾಜಿಕ ಮೌಲ್ಯವಾಗಿತ್ತು. ಅಂದಿನ ಸ್ಥಿತಿಗತಿಗಳು ವೀರತ್ವವನ್ನು ಪ್ರೋತ್ಸಾಹಿಸುತ್ತಿದ್ದವು. ಪ್ರಾಚೀನ ಕನ್ನಡ ಕಾವ್ಯಗಳು, ಶಾಸನಗಳು ವೀರಗುಣಕ್ಕೆ ಪ್ರಾಧಾನ್ಯತೆಯನ್ನು ನೀಡಿವೆ. ಕವಿ ರನ್ನನು ತನ್ನ ಕೃತಿ ಗದಾಯುದ್ಧದಲ್ಲಿ ಎಂತಹ ಸಂದರ್ಭಗಳಲ್ಲಿ ಶೌರ್ಯವನ್ನು ಪ್ರದರ್ಶಿಸಬೇಕೆಂಬುದಕ್ಕೆ ಗೋವುಗಳನ್ನು ಅಪಹರಿಸಿದಾಗ, ಹೆಣ್ಣುಮಕ್ಕಳು ಉಯ್ಯಲಿಡುವಾಗ, ಒಡೆಯನು ಆಜ್ಞೆಮಾಡಿದಾಗ, ನೆಂಟನ ಕಷ್ಟದಲ್ಲಿ, ಊರಳಿವಿನಲ್ಲಿ ಗಂಡಸು ತನ್ನ ಶೌರ್ಯವನ್ನು ಪ್ರದರ್ಶಿಸಬೇಕು. ಇಲ್ಲದಿದ್ದರೆ ಆತ ಷಂಡ ಎಂಬುದಾಗಿ ಹೀಗಳೆಯುತ್ತಾನೆ. ಶಾಸನಗಳು "ಜಿತೇನ ಲಭ್ಯತೇ ಲಕ್ಷ್ಮೀ : ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನಿ ಕಾಯೇ ಕಾಚಿಂತಾ ಮರಣೇ ರಣೇ" (ಸೌ. ಇಂ. ಇನ್ಸ. ಸಂ. 20 ಶಾ ಸಂ. 169) ಎಂಬ ಶ್ಲೋಕದ ಮೂಲಕ ಹೋರಾಟದಲ್ಲಿ ಗೆದ್ದರೆ ಸಂಪತ್ತು, ಸತ್ತರೆ ಸುರಾಂಗನೆಯರೊಂದಿಗೆ ಸ್ವರ್ಗ ಎಂಬುದಾಗಿ ಆ ಕಾಲದ ಶಾಸನಗಳು ವೀರರನ್ನು ಪ್ರೋತ್ಸಾಹಿಸಿವೆ. ಹೀಗೆ ವಿವಿಧ ಕಾರಣಗಳಿಗಾಗಿ ವೀರತ್ವವನ್ನು ಪ್ರದರ್ಶಿಸಿಸಿ ಮರಣಹೊಂದಿದವರನ್ನು ಅತ್ಯಂತ ಭಕ್ತಿ, ಗೌರವಗಳಿಂದ ಕಾಣಲಾಗುತ್ತಿತ್ತು. ಅಂತಹ ವೀರರ ಕುರಿತು ಹಾಡು ಕಥೆಗಳನ್ನು ಕಟ್ಟಲಾಗುತ್ತಿತ್ತು. ಅವರ ಸ್ಮರಣೆಗಾಗಿ ವೀರಗಲ್ಲುಗಳನ್ನು ನಿರ್ಮಿಸಲಾಗುತ್ತಿತ್ತು. ಪ್ರಾಣಾರ್ಪಣೆಗೈದ ವೀರರ ಕುಟುಂಬದವರ ಜೀವನೋಪಾಯಕ್ಕಾಗಿ ಭೂಮಿಯನ್ನು ನೆತ್ತರುಗೆಯಾಗಿ ನೀಡಲಾಗುತ್ತಿತ್ತು. ಇಂತಹ ಭೂದಾನಗಳ ಮೂಲಕ ಹುತಾತ್ಮರನ್ನು ಗೌರವಿಸುವ, ಸ್ಥಳೀಯ ವೀರರನ್ನು ರಾಜ್ಯರಕ್ಷಣೆಗಾಗಿ ಉತ್ತೇಜಿಸುವ ಉದ್ದೇಶಗಳನ್ನು ಅಂದಿನ ರಾಜರು ರಾಜಪ್ರತಿನಿಧಿಗಳು ಹೊಂದಿರುತ್ತಿದ್ದರು. ವೀರಗಲ್ಲುಗಳು ಆಯಾ ಕಾಲದ ಸಾಂಸ್ಕೃತಿಕ ಪ್ರತೀಕಗಳಾಗಿವೆ.

## ಕಂಪಣ ಬಾಸವೂರು

ಪ್ರಾಚೀನ ಕುಂತಳ ದೇಶದ ಬನವಾಸಿ–12000 ಪ್ರಾಂತದ ಹಲವಾರು ಕಂಪಣಗಳಲ್ಲಿ ಬಾಸವೂರು–140 ಒಂದು. ಸಾರ್ವಭೌಮರಾದ ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಳಚೂರಿ, ಕೆಲಕಾಲ ಹೊಯ್ಸಳ ನಂತರದಲ್ಲಿ ಯಾದವ ಮನೆತನಗಳ ಆಳ್ವಿಕೆಗೆ ಈ ಕಂಪಣ ಒಳಪಟ್ಟಿತ್ತು. ಕ್ರಿ. ಶ. 8ನೇ ಶತಮಾನದಿಂದ 13ನೇ ಶತಮಾನದ ಅಂತ್ಯದವರೆಗೆ ಸುಮಾರು ಐದು ಶತಮಾನಗಳಿಗೂ ಹೆಚ್ಚು ಸುದೀರ್ಘ ಇತಿಹಾಸವನ್ನು ಬಾಸವೂರು ಕಂಪಣ ಹೊಂದಿದೆ. ಬಾಸವೂರು ಕಂಪಣವು ಇಂದಿನ ಹಾವೇರಿ ಜಿಲ್ಲೆಯ ಹಾವೇರಿ, ಹಾನಗಲ್ ಹಾಗೂ ಬ್ಯಾಡಗಿ ತಾಲೂಕಿನ ಪ್ರದೇಶಗಳನ್ನು ಒಳಗೊಂಡಿತ್ತು. ವರದಾ ನದಿಯು ಈ ಕಂಪಣದ ದಕ್ಷಿಣ ಹಾಗೂ ಉತ್ತರದ ಗಡಿಯಾಗಿತ್ತು. ಪ್ರಸ್ತುತ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಹಿರೇಬಾಸೂರು ಈ ಕಂಪಣದ ಕೇಂದ್ರಸ್ಥಳವಾಗಿತ್ತು. ಇದನ್ನು ರಾಜಧಾನಿಯನ್ನಾಗಿ ಹೊಂದಿ ಸೇನವಾರ ಹಾಗೂ ಖಚರ ವಂಶದ ದೊರೆಗಳು ರಾಜ್ಯಭಾರ ಮಾಡಿದರು. ಕಾಗಿನೆಲೆ–12 ಹಾಗೂ ಕಲಕೇರಿ ಎಂಬ ಎರಡು ಉಪವಿಭಾಗಗಳನ್ನು ಬಾಸವೂರು ಕಂಪಣ ಒಳಗೊಂಡಿತ್ತು. ಬಾಸವೂರು ಕಂಪಣದ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯ ವೀರಗಲ್ಲುಗಳು ದೊರೆಕಿವೆ. ರಾಷ್ಟ್ರಕೂಟರ ಕಾಲದಿಂದ ಯಾದವ ಕಾಲದವರೆಗೆ ನಡೆದ ಅನೇಕ ಯುದ್ಧಗಳಲ್ಲಿ ಈ ಪರಿಸರದ ವೀರರು ಹೋರಾಡಿ ಮರಣಗೈಯುವುದರ ಮೂಲಕ ಹುತಾತ್ಮರಾಗಿದ್ದಾರೆ. ಬಾಸವೂರು ಕಂಪಣದ ಜನತೆ ವೀರರೂ, ಛಲದಂಕಮಲ್ಲರೂ ಆಗಿದ್ದು, ಸಂಪತ್ತು, ಮಾನರಕ್ಷಣೆ, ಒಡೆಯನ ರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಿದ್ದರು. ತ್ಯಾಗ ಬಲಿದಾನಗಳ ಮೂಲಕ ಆದರ್ಶವನ್ನು ಮೆರೆದ, ಅಂತಹ ವೀರರನ್ನು ಪರಿಚಯಿಸುವ ಯತ್ನವೇ ಲೇಖನದ ಉದ್ದೇಶವಾಗಿದೆ.

## ಕಂಪಣ ಬಾಸವೂರು ಪರಿಸರದ ವೀರಗಲ್ಲುಗಳು

ಪ್ರಾಚೀನ ಕರ್ನಾಟಕದಲ್ಲಿ ಮಡಿದ ವೀರರ ಸ್ಮರಣೆಗಾಗಿ ವೀರಗಲ್ಲುಗಳನ್ನು ನೆಡುವ ಪದ್ಧತಿ ಬಾದಾಮಿ ಚಾಳುಕ್ಯರ ಕಾಲದಿಂದ ಜಾರಿಗೊಂಡಿತಾದರೂ, ಅದು ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರಚಲಿತಗೊಂಡು, ವಿನ್ಯಾಸದಲ್ಲಿ ನವೀನತೆಯನ್ನು ಪಡೆಯಿತು. ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ವೈಶಿಷ್ಟ್ಯವೆಂದರೆ, ಬೃಹದಾಕಾರ, ಅಂದರೆ 6ರಿಂದ 8 ಅಡಿಗಳವರೆಗೆ ಎತ್ತರ 3ರಿಂದ 5ಅಡಿ ಅಗಲ, 1ವರೆ ಅಡಿಗಳಷ್ಟು ದಪ್ಪವಾಗಿರುತ್ತವೆ. ಮೇಲ್ಭಾಗದಲ್ಲಿ ಅರಸೊತ್ತಿಗೆಯ ಲಾಛನವಾದ ನೇಗಿಲನ್ನು ಚಿತ್ರಿಸಲಾಗಿರುತ್ತದೆ. ಹೋರಾಟದ ಹಂತದಲ್ಲಿ ವೀರನ ಎದುರಾಳಿಯ ಜೊತೆಗೆ ಯೋಧರ ಸಂಖ್ಯೆಯೂ ಹೆಚ್ಚಾಗಿರುತ್ತದೆ. ನಂತರದ ಹಂತಗಳಲ್ಲಿ ಅಪ್ಸರೆಯರು, ವಾದ್ಯವೃಂದದವರು, ವೀರನು ಅಪ್ಸರೆಯರ ಹೆಗಲ ಮೇಲೆ ಕೈಹಾಕಿಕೊಂಡು ಮೋಡಗಳ ಮಧ್ಯ ಸ್ವರ್ಗಕ್ಕೆ ಹಾರುತ್ತಿರುವ ದೃಶ್ಯಗಳು ಆಕರ್ಷಕವಾಗಿರುತ್ತವೆ. *(ಡಿ.ವಿ. ಪರಮಶಿವಮೂರ್ತಿ. ಕನ್ನಡ ಶಾಸನ ಶಿಲ್ಪ ಹಂಪಿ, 1999 ಪು.33.)ಇಂತಹ ವಿಶಿಷ್ಠತೆಯನ್ನು ಹೊಂದಿರುವ ಹಲವು ವೀರಗಲ್ಲುಗಳನ್ನು ಬಾಸವೂರು ಕಂಪಣದ ಸಂಗೂರು, ಹಿರೆಹುಲ್ಲಾಳ, ಮಾಸಣಗಿ ಮುಂತಾದೆಡೆಗಳಲ್ಲಿ ಕಾಣಬಹುದು.*

*ಕಲ್ಯಾಣದ ಚಾಳುಕ್ಯ ಹಾಗೂ ಕಳಚೂರಿಗಳ ಕಾಲದಲ್ಲಿ ವೀರಗಲ್ಲುಗಳನ್ನು ನೆಡೆಸುವ ಪದ್ಧತಿ ಸರ್ವವ್ಯಾಪಿಯಾಯಿತು. ಆಡಳಿತ ವರ್ಗದವರಲ್ಲದೇ ಸಾಮಾನ್ಯರೂ ವೀರಗಲ್ಲುಗಳನ್ನು ನೆಡಲು ಮುಂದಾದರು. ಶಾಸನದ ಮೇಲ್ಭಾಗದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಮುನಿಯ ಚಿತ್ರ* ಸಾಮಾನ್ಯವಾಯಿತು. ವೀರಗಲ್ಲುಗಳು ಹೆಚ್ಚು ಕಲಾತ್ಮಕವಾಗಿ ರಚನೆಗೊಳ್ಳಲಾರಂಭಿಸಿದವು. ತುರುಗಳು, ಕುದುರೆಗಳು, ವೀರ ಮತ್ತು ಇತರೆ ಸೈನಿಕರ ಉಡುಪು, ಆಭರಣ, ಕೇಶಾಲಂಕಾರ, ಆಯುಧಗಳು ಇನ್ನಿತರ ವಿವರಗಳು ಆಕರ್ಷಕವಾಗಿ ಕಂಡರಿಸಲ್ಪಟ್ಟವು. ಬಾಸವೂರು ಕಂಪಣದ ಹಲವಾರು ಗ್ರಾಮಗಳಲ್ಲಿ ಶಾಸನ ಸಹಿತ ಇಲ್ಲವೇ ಶಾಸನ ರಹಿತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವೀರಗಲ್ಲುಗಳು ದೊರೆತಿವೆ. ಈ ಭಾಗದ ಕಲಕೇರಿ, ಹೇರೂರು, ದೇವಿಹೊಸೂರು, ದೇವಗೇರಿ, ಕಾಗಿನೆಲೆ, ಕಳ್ಳೀಹಾಳ ಮುಂತಾದ ಪ್ರದೇಶಗಳಲ್ಲಿ ಹೆಚ್ಚು ವೀರಗಲ್ಲುಗಳನ್ನು ಕಾಣಬಹುದು.

ಬಾಸವೂರು ಕಂಪಣದ ಪರಿಸರದಲ್ಲಿ ದೊರೆತ ವೀರಗಲ್ಲುಗಳಲ್ಲಿನ ವಿಷಯ ಮತ್ತು ಅವು ಒಳಗೊಂಡಿರುವ ಶಿಲ್ಪವನ್ನು ಆಧರಿಸಿ ಕೆಳಗಂಡಂತೆ ಅಧ್ಯಯನ ಮಾಡಬಹುದು. ತುರುಗಾಳಗ, ಊರಳಿವಿನೋಳ್ ಪೆಣ್ಬುಯ್ಯಲೋಳ್, ಎರವೆಸದೋಳ್, ಹುಲಿಬೇಟೆ ವೀರಗಲ್ಲುಗಳೆಂದು ವಿಭಾಗಿಸಬಹುದು. ಸಾಮಾನ್ಯವಾಗಿ ವೀರಗಲ್ಲುಗಳ ಕೆಳಪಟ್ಟಿಯಲ್ಲಿ ವೀರನು ಹೋರಾಡುವ ದೃಶ್ಯವನ್ನು ಕಂಡರಿಸಲಾಗುತ್ತದೆ. ಮಧ್ಯದ ಪಟ್ಟಿಕೆಯಲ್ಲಿ ಮರಣಿಸಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯವಿರುತ್ತದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಲಿಂಗದ ಸಮೀಪ ವೀರನು ಕುಳಿತಿರುವಂತೆ, ಆ ಮೂಲಕ ವೀರನು ಸ್ವರ್ಗವನ್ನು ಇಲ್ಲವೇ ಶಿವನ ಸಾಮಿಪ್ಯವನ್ನು ಪಡೆದಿದ್ದಂತೆ ಕಂಡರಿಸಲಾಗಿರುತ್ತದೆ. ಬಾಸವೂರು ಕಂಪಣದ ವೀರರು ವಿವಿಧ ಕಾರಣಗಳಿಂದಾಗಿ ತಮ್ಮ ಪ್ರಾಣ ತೆತ್ತಿದ್ದಾರೆ.

## ತುರುಗಾಳಗ

ಪ್ರಾಚೀನ ಕಾಲದಲ್ಲಿ ಹಸುಗಳು ಪೂಜ್ಯನೀಯವಾಗಿದ್ದವು. ಅವು ಸಂಪತ್ತೆನಿಸಿದ್ದು, ಹಸುಗಳನ್ನು ಕಳ್ಳತನದಿಂದ ಅಪಹರಿಸಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಗ್ರಾಮದ ಯುವಕರು ಹಸುವಿನ ರಕ್ಷಣೆ ಹಾಗೂ ಊರಿನ ಮಾನರಕ್ಷಣೆಗಾಗಿ ಜೀವನದ ಹಂಗು ತೊರೆದು ಹೋರಾಡುತ್ತಿದ್ದರು. ಬಾಸವೂರು ಕಂಪಣದ ಹಲವಾರು ವೀರರು ಇಂತಹ ತುರುಗಾಳಗಗಳಲ್ಲಿ ಹೋರಾಡಿ ಮರಣ್ಹೈಸಿದ್ದಾರೆ. ದಂಡನಾಯಕ ಕೇಶಿಮಯ್ಯ ಮತ್ತೂರಿನ ಮೇಲೆ ತುರುಗಳನ್ನು ಅಪಹರಿಸಲು ಬಂದಾಗ ತುರುಕಾಳಗದಲ್ಲಿ ಅಗಸರ ಕಾಳೇಯನೆಂಬವನು ಹೋರಾಡಿ ಸುರಲೋಕಪ್ರಾಪ್ತನದನು. ಈತನ ಕುಟುಂಬದವರಿಗೆ ಮತ್ತೂರಿನ ಸಮಸ್ತ ಪ್ರಜೆಗಳು ದೇವಗೆರೆಯ ಕೆರೆಯ ಕೆಳಗೆ 12 ಕಮ್ಮ ಗದ್ದೆ 12 ಕೈ ಅಳತೆಯ ಮನೆಯನ್ನು ನೀಡಿದ್ದನ್ನು ಇಲ್ಲಿನ ಶಾಸನವು ತಿಳಿಸುತ್ತದೆ. (ಕ. ಇನ್ಸ. ಸಂ. 4 ಶಾ. ಸಂ. 50 ಕ್ರಿ. ಶ. 1172) ಸಂಗೂರಿನ ಶಾಸನವು ಸಿಂದಗೋವಿಂದ ಈಶ್ವರದೇವನೆಂಬವನು ಸಂಗೂರನ ಮೇಲೆ ಧಾಳಿ ಇಟ್ಟು ತುರುಗಳನ್ನು ಅಪಹರಿಸಿಕೊಂಡು ಹೋಗುವಾಗ ಬಡಗಿ ಸಾತೋಜ ಹೋರಾಡಿ ತುರುಗಳನ್ನು ರಕ್ಷಿಸಿ ಮರಣ್ಹೈಸಿದ್ದಾನೆ. ಈತನ ನೆತ್ತುರುಗೆಯಾಗಿ ಸೋಗೌಡ ಮತ್ತು ಸಂಗೂರಿನ ಪ್ರಜೆಗಳು 20 ಕಮ್ಮ ಭೂಮಿಯನ್ನು ದಾನವಾಗಿ ನೀಡಿದ್ದನ್ನು ಕಾಣಬಹುದು. (ಸೌ.ಇಂ.ಇನ್ಸ. ಸಂ,18 ಸಂಗೂರು, ಶಾ.ಸಂ 213) ನಿಭಯದ ಬಳೆಗಾರ ಪೆರ್ಮಾಡಿ ನಾಯಿಗನ ಮಗ ಸರುವಯ್ಯಸೆಟ್ಟಿ ತುರುಗಾಳಗದಲ್ಲಿ ಹಲವರನ್ನು ಕೊಂದು ಮರಣಹೊಂದಿದ್ದಕ್ಕಾಗಿ ಈತನ ತಮ್ಮ ಚಿಕಸೆಟ್ಟಿ ಕಲ್ಲನ್ನು ನೆಡೆಸಿದ್ದನ್ನು ದೇವಿಹೊಸೂರು ಶಾಸನ ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,18 ದೇವಿಹೊಸೂರು, ಶಾ.ಸಂ 16) ಮಹಾಮಂಡಳೇಶ್ವರ ಕೀರ್ತಿದೇವರಸರು ಧಾಳಿ ಇಟ್ಟು ಗೋವುಗಳನ್ನು ಅಪಹರಿಸಿಕೊಂಡು ಹೋಗುವಾಗ ಆತನ ವಿರುದ್ಧ ಅಕ್ಕಸಾಲಿ ದಾಸೋಜನೆಂಬವನು ಮರಣಾಂತಿಕವಾಗಿ ಹೋರಾಡಿ ಸಾಸಿರ್ವರ ಪಾದ ಶೆರಣೆಂದು ಸುರಲೋಕಪ್ರಾಪ್ತನಾದದ್ದನ್ನು ದೇವೀಹೊಸೂರಿನ ಮತ್ತೊಂದು ಶಾಸನ ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,18 ದೇವಿಹೊಸೂರು, ಶಾ.ಸಂ 353) ದೇವಂಗೇರಿಯ ತೈಲಹದೇವನು ಕಲಕೇರಿಗೆ ಮುತ್ತುಗೆ ಹಾಕುತ್ತಾನೆ. ಕಲಕೇರಿಯ ನಾಳ್ಪ್ರಭು ಮಾದಿಶೆಟ್ಟಿಯ ಬಂಟನಾದ ಸೆಟ್ಟಿಮೆನಾಯ್ಕನು ಹೋರಾಡಿ ಈ ಯುದ್ಧದಲ್ಲಿ ಮರಣ ಹೊಂದಿದ್ದಾನೆ. ಇದೇ ಯುದ್ಧದಲ್ಲಿ ಬೋಪ್ಪಣನೆಂಬ ಇನ್ನೊಬ್ಬ ಬಂಟನು ಹೊರಾಡಿ ಯುದ್ಧದಲ್ಲಿ ಜಯ ಸಾಧಿಸಿ ವೀರಸ್ವರ್ಗವನ್ನೇರಿದುದನ್ನು ಶಾಸನ ತಿಳಿಸುತ್ತದೆ.

## ಊರಳಿವಿನೋಳ್ ಪೆಣ್ಬುಯ್ಯಲೊಳ್

ಆಕ್ರಮಣಕಾರರು ತುರುಗಳು ಮತ್ತು ಸಂಪತ್ತು ದೋಚಲು ಬಂದಾಗ ಹೆಣ್ಣುಮಕ್ಕಳ ಮಾನಭಂಗಕ್ಕೆ ಯತ್ನಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳು ಉಯ್ಯಲಿಡುತ್ತಿದ್ದರು. ಅವರು ಅಳುವ, ಕೂಗುವ ಧ್ವನಿ ಕೇಳಿದ ಗಂಡಸರು ಅವರ ಮಾನರಕ್ಷಣೆಗೆ ಧಾವಿಸಿ ಶತ್ರುಗಳೊಡನೆ ಹೋರಾಡುತ್ತಿದ್ದರು. ಸಂಗೂರಿನ ಊರಳಿವಿನಲ್ಲಿ ಬಳೀಯ ರೇಚಗಾಮುಂಡನೆಂಬವನು ಮರಣ್ಹೈಸಿದ್ದಕ್ಕಾಗಿ, ಗಾಮಿಲೆ ಎಂಬವಳು ಶಾಸನವನ್ನು ನಿಲ್ಲಿಸಿದ ಉಲ್ಲೇಖ ಕಾಣಬಹುದು. (ಸೌ.ಇಂ.ಇನ್ಸ. ಸಂ,18 ಸಂಗೂರು, ಶಾ.ಸಂ 10) ಬಂದಣಿಕೆಯ ನಾಳ್ಗಾವುಂಡನಾಗಿದ್ದ ಪಿಗ ಎಂಬವನು ಮೇಲೆ ಧಾಳಿಇಟ್ಟಾಗ ತೊರವರಗಳಿ ಬಿರುದಾಂಕಿತ ವೀರನೋರ್ವ(ಹೆಸರು ತೃಟಿತವಾಗಿದೆ) 48 ಜನ ವೈರಿಗಳನ್ನು ಕೊಂದು ತಾನೂ ಮರಣ ಹೊಂದಿದ ಸಂಗತಿಯನ್ನು ನೆಲೋಗಲ್ಲದ ಶಾಸನವು ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,18 ನೆಲೋಗಲ್, ಶಾ.ಸಂ 35) ಯಾದವ ದೊರೆ ರಾಮಚಂದ್ರ ದೇವನ ಕಾಲದ ಶಾಸನವು ದೇವಗೆರಿಯಲ್ಲಿ ನಡೆದ ಯುದ್ಧವೊಂದರಲ್ಲಿ ನಗೇಯ ರಾಹುತನ ಪುತ್ರ ತಲ್ಲಿಯನಾಯಕನು ವೈರಿಗಳನ್ನು ಇರಿದು ಜಯಿಸಿ ಮರಣ ಹೊಂದಿದ್ದನ್ನು ಉಲ್ಲೇಖಿಸಿದೆ. (ಸೌ.ಇಂ.ಇನ್ಸ. ಸಂ,18 ದೇವಗೆರಿ, ಶಾ.ಸಂ.256) ಕಲಕೇರಿಯ ಬಸವ ಎಂಬವನು ಬಳ್ಳರಬೀಡ ಗ್ರಾಮದ ಮತ್ತು ಆ ಗ್ರಾಮದ ಹೆಣ್ಣುಮಕ್ಕಳ ಮಾನ ರಕ್ಷಣೆಗಾಗಿ ಹೋರಾಡಿ ಸುರಲೋಕ ಪ್ರಾಪ್ತನಾಗುತ್ತಾನೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನರಯಂಗಲ್ಲಿನ ತೈಲಹದೇವನು ಹುರುಟಗಿಯ ನಾಡನ್ನು ಮುತ್ತಿ ಆ ಊರಿನ ಸ್ತ್ರೀಯರ ಮಾನಭಂಗಕ್ಕೆ ಪ್ರಯತ್ನಿಸಿದಾಗ ಅಲ್ಲಿನ ಸ್ತ್ರೀಯರು ಹುಯ್ಯಲಿಡುವುದನ್ನು ಕೇಳಿದ ಕಲುಕೇರಿಯ ಬಸವನು ಓಡಿಬಂದು ಹೇಬ್ಬಾಗಿಲಲ್ಲಿ ಆಳಂ ತರುಬಿ ಕಾದು ಸ್ವರ್ಗಕ್ಕೆ ಹೋಗುತ್ತಾನೆ. ಈತನ ಮಗ ಕಳಿಗ, ಬಮ್ಮನಗೌಡ, ಪ್ರಜೆಯು ಕಲಕೇರಿಯ ಮೂಡಲ್ಬೆರಿಯ ಕೆಳಗೆ ಗದ್ದೆ ಕಮ್ಮ 12 ಹಕ್ಕಲು ಗೌಡರುಂ ಬಳಿಯಲ್ಲಿ ಕಮ್ಮ 20 ಭೂಮಿಯನ್ನು ದಾನಬಿಟ್ಟಿದ್ದನ್ನು ಶಾಸನ ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,20 ಬಾಳಂಬೀಡ, ಶಾ.ಸಂ.250) ಕಳ್ಳೀಹಾಳದಲ್ಲಿ ದೊರೆತಿರುವ 5 ವೀರಗಲ್ಲುಗಳು ಒಂದೆ ಯುದ್ಧದಲ್ಲಿ ಮರಣ ಹೊಂದಿದ 5 ಜನ ವೀರರ ಸ್ಮರಣೆಗಾಗಿ ನಿಲ್ಲಿಸಿದ ಪ್ರತ್ಯೇಕ ವೀರಗಲ್ಲುಗಳಾಗಿವೆ. ಹಲವಾಗಿಲದ ಪಾಂಡ್ಯದೇವ ಅಜ್ಜಡಿಯ ಮೇಲೆ ದಾಳಿ ಇಟ್ಟಾಗ ಬಡಗಿ ಲಬ್ಬೋಜ, ಮಸಣಿ, ಸೇವಭೋವ, ಕರಗೆಯ ಸೇವಭೋವ ವೈರಿಗಳನ್ನು ಮಣಿಸಿ ಸುರಲೋಕಪ್ರಾಪ್ತರಾಗಿದ್ದನ್ನು ಇವು ಉಲ್ಲೇಖಿಸಿವೆ. ಕಬ್ಬೂರಿನಲ್ಲಿ ನಡೆದ ಯುದ್ಧವೊಂದರಲ್ಲಿ ಚೌಂಡಯ್ಯನಾಯಕನ ಮಗ ಸೋವೇಯ ನಾಯಕನು ಮರಣಿಸಿದ್ದಕ್ಕೆ ನೆತ್ತರುಗೆಯಾಗಿ 20 ಕಮ್ಮ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,18 ಕಬ್ಬೂರು, ಶಾ.ಸಂ.211, ಕ್ರಿ. ಶ. 1230) ಕಾಗಿನೆಲೆಯ ಶಾಸನವು ಮಹಾಮಂಡಳೇಶ್ವರ ಬಂದಣಿಕೆಯ ಸೋವಿದೇವನು ದಾಳಿ ಇಟ್ಟು ತರವೂರ ಮುತ್ತಿದಾಗ ಕಾಗಿನೆಲೆಯ ಬುಗುಡರ ಸಿದ್ದಯ್ಯ ವೈರಿಗಳನ್ನು ಸೋಲಿಸಿ. ಕೊಂದು ಗೆದ್ದು, ಸುರಲೋಕಪ್ರಾಪ್ತನಾದ ವಿಷಯವನ್ನು ಒಳಗೊಂಡಿದೆ. (ಸೌ.ಇಂ.ಇನ್ಸ. ಸಂ,18 ಕಾಗಿನೆಲೆ, ಶಾ.ಸಂ.259, ಕ್ರಿ. ಶ. 1282) ಹೊಮ್ಮರಡಿಯಲ್ಲಿನ ವೀರಗಲ್ಲು ಬಹಳಷ್ಟು ತೃಟಿತವಾಗಿದ್ದು ಯುದ್ಧವೊಂದರಲ್ಲಿ ವಸುದೇವ ನಾಯ್ಕನ ಮಗ (ಹೆಸರು ತೃಟಿತ) ನಾಯ್ಕನು ಮರಣ ಹೊಂದಿದ್ದನ್ನು ಉಲ್ಲೇಖಿಸಿದೆ. (ಸೌ.ಇಂ.ಇನ್ಸ. ಸಂ,18 ಹೊಮ್ಮರಡಿ, ಶಾ.ಸಂ.266, ಕ್ರಿ. ಶ. 1289)

## ಎರವೆಸದೋಳ್

ಒಡೆಯನ ಅನ್ನ ತಿಂದವನು ಅವನ ಆಜ್ಞೆಗನುಗುಣವಾಗಿ ವೈರಿಗಳ ವಿರುದ್ಧ ಹೋರಾಡಬೇಕಿತ್ತು. ಇಂತಹ ಹೋರಾಟದಲ್ಲಿ ವೀರರು ಮರಣ ಹೊಂದುತ್ತಿದ್ದರು. ಇದನ್ನೇ ಶಾಸನಗಳು 'ಜೋಳವಾಳಿ' ಎಂಬುದಾಗಿ ಕರೆದಿವೆ. ಲೆಂಕರು, ಗರುಡರು, ವೇಳೆವಡಿಚ ಎಂಬುದಾಗಿ ಈ ವೀರರನ್ನು ಕರೆಯಲಾಗುತ್ತಿತ್ತು. ಬಾಸವೂರು ಮತ್ತು ಉಪವಿಭಾಗಗಳ ಪ್ರಭುಗಳ ಬಂಟರು ತಮ್ಮ ಒಡೆಯನಲ್ಲಿ ನಿಷ್ಠೆ ಇಟ್ಟು ಆತನ ಆಜ್ಞೆಯ ಮೇರೆಗೆ, ಮೆಚ್ಚುವ ರೀತಿಯಲ್ಲಿ ಹೋರಾಡಿ ವೀರಮರಣವನ್ನು ಅಪ್ಪಿದ್ದಾರೆ. ಕಲಕೇರಿಯ ನಾಳ್ಪ್ರಭು ಕೇತಿಶೆಟ್ಟಿಯು ಕಾಗಿನೆಲೆಯವರೊಡನೆ ಹೋರಾಡಿ ವೀರಮರಣ ಹೊಂದುತ್ತಾನೆ. ಈ ಕೇತಿಶೆಟ್ಟಿಯ ಬಂಟನಾದ ಕಮ್ಮಾರ ಸಾಂತೋಜನು ಜಗಮೆಚ್ಚುವಂತೆ ಹೋರಾಡಿ ವೀರಮರಣ ಅಪ್ಪುತ್ತಾನೆ(ಸೌ.ಇಂ.ಇನ್ಸ. ಸಂ,20 ಕಲಕೇರಿ, ಶಾ.ಸಂ.113, ಕ್ರಿ.ಶ.1146). ಇಲ್ಲಿನ ಮತ್ತೊಂದು ವೀರಗಲ್ಲಿನಲ್ಲಿ ಕೇತಿಶೆಟ್ಟಿಯ ಇನ್ನೊಬ್ಬ ಬಂಟ ಸೇಣಿಗಜಕೇಯ ಮರಣ ಹೊಂದುತ್ತಾನೆ (ಅದೆ, ಶಾ.ಸಂ.114) ಬಾಸವೂರಿನ ಮನ್ನೇಯ ಕಲಿಯಮ್ಮರಸನಿಗಾಗಿ ಪ್ರಾಣತೆತ್ತ ಬಸವ ಎಂಬವನ ಕುಟುಂಬಕ್ಕೆ ಕೋಳೂರಿನ ಗೌಡಿಕೆ ಹೊಂದಿದ್ದ ಜಿಮೂತವಾಹನ ವಂಶದ ಬಸವ, ಕೇತಿಸೆಟ್ಟಿ, ಇವರ ಅಜ್ಜಿ ಬಾಗಣಬ್ಬೆ ಸೇರಿ ದಾನ ನೀಡಿದ್ದನ್ನು ಕಾಣಬಹುದು. (ಎ.ಇಂ.ಸಂ.19. ಕೋಳೂರು) ಹಾಹನೂರಿನ ಮಲ್ಲಿಕಾರ್ಜುನ ಅಗ್ರಹಾರದ ಮೇಲೆ ಮಹಾಮಂಡಳೇಶ್ವರ ಬಿಟ್ಟಿಯರಸರು ದಾಳಿ ಮಾಡಿದಾಗ ಇವರ ಪರವಾಗಿ ಜಿಡಗೂರು ಮಲ್ಲೇಯ ನಾಯಕನ ತಮ್ಮ ರಾಜಣಯ ವೈರಿಗಳನ್ನು ಕೊಂದುಮಡಿದ ಉಲ್ಲೇಖವನ್ನು ಕಾಗಿನೆಲೆ ವೀರಗಲ್ಲಿನಲ್ಲಿ ಕಾಣಬಹುದು. (ಸೌ.ಇಂ.ಇನ್ಸ. ಸಂ. 18 ಕಾಗಿನೆಲೆ, ಶಾ.ಸಂ. 169 ಕ್ರಿ. ಶ. 1135) ಇಲ್ಲಿನ ಮತ್ತೊಂದು ಶಾಸನವು ಬಾಚಣ್ಣನೆಂಬವನು ಯುದ್ಧವೊಂದರಲ್ಲಿ ಹೋರಾಡುತ್ತ ಹಲವರನ್ನು ಕೊಂದು ನಂತರ ತಾನು ಸುರಲೋಕ ಪ್ರಾಪ್ತನಾದದ್ದಕ್ಕೆ ಪರೋಕ್ಷ ವಿನಯವಾಗಿ ಕಾಗಿನೆಲೆಯ ಜತ್ತಗಾವುಂಡ ಭೋಜಂಗರೈನೂರಾ ನಾಲ್ವರು ಕೊತ್ತಳಿಯಾಳ ಭಾಗವಂ ಸಲ್ಲಿಸಿದ್ದಾರೆ. (ಸೌ.ಇಂ.ಇನ್ಸ. ಸಂ.18 ಕಾಗಿನೆಲೆ, ಶಾ. ಸಂ. 171, ಕ್ರಿ. ಶ. 1145)

## ಗಡಿಕಾಳಗ

ಒಂದು ಊರು ಅಥವಾ ಸೀಮೆಯ ಗಡಿಯ ವಿಷಯವಾಗಿ ಊರುಗಳ ಮಧ್ಯ ಹೋರಾಟಗಳು ಜರುಗುತ್ತಿದ್ದವು. ಆ ಕಾಲದಲ್ಲಿ ಒಂದೊಂದು ಗ್ರಾಮವೂ ಆಡಳಿತ ದೃಷ್ಠಿಯಿಂದ ಸ್ವತಂತ್ರ ಘಟಕವಾಗಿದ್ದುದರಿಂದ ಆಯಾ ಊರಿನ ಗಡಿಗಳಿಗೆ ಸ್ವಲ್ಪಮಟ್ಟಿಗೆ ಆಯಾ ಊರಿನ ಜನಗಳೇ ಹೋಣೆಗಾರರಾಗುತ್ತಿದ್ದರು.(ಎಂ.ಚಿದಾನಂದಮೂರ್ತಿ. ಕ.ಶಾ.ಸಾಂ.ಅ.ಪುಟ-286) ಇಂತಹ ಯುದ್ಧಗಳಲ್ಲಿ ಮಡಿದವರ ಬಗ್ಗೆಯೂ ಶಾಸನ ಉಲ್ಲೇಖಗಳಿವೆ. ಬಾಸವೂರು ಪ್ರದೇಶದಲ್ಲಿ ಕಾಗಿನೆಲೆಯ ಗಡಿಒಳಗೆ ಕಬ್ಬೂರಲಿ ನಡೆದ ಯುದ್ಧದಲ್ಲಿ ದೇವಿಯಹೊಸವೂರಿನ ಮಲ್ಲಿಭೋವನು ಲಾಯದಕೇರಿಯ ಮಲ್ಲಿಸೆಟ್ಟಿಯ ಮಗ ಸಾವಣನನ್ನು ಇರಿದು ಕೊಂದು ನಂತರದಲ್ಲಿ ತಾನೂ ಮರಣಹೊಂದಿದ್ದಕ್ಕಾಗಿ ಬ್ರಹ್ಮದೇವಸೆಟ್ಟಿ ಎಂಬವನು ಶಾಸನ ನಿಲ್ಲಿಸಿದ ಸಂಗತಿಯನ್ನು ದೇವಿಹೊಸೂರಿನ ವೀರಗಲ್ಲು ತಿಳಿಸುತ್ತದೆ. (ಸೌ.ಇಂ.ಇನ್ಸ. ಸಂ,18 ದೇವಿಹೊಸೂರು. ಶಾ.ಸಂ.275 ) ನಗರಖಂಡ ನಾಡಿನ ತಿಳವಳ್ಳಿ ಕೋಟೆಯಲ್ಲಿ ಸಮಸ್ತರ ಸಮ್ಮುಖದಲ್ಲಿ ವೈರಿಗಳನ್ನು ಇರಿದು ಮರಣ ಹೊಂದಿದ 18 ಸಮಯದ ಶಿಸು ಯಾಲೂರ ಮಲ್ಲಿಯನಾಯಕನ ಉಲ್ಲೇಖವನ್ನು ಹಿರೇಲಿಂಗದಹಳ್ಳಿ ವೀರಗಲ್ಲು ಹೊಂದಿದೆ.

## ಹುಲಿಬೇಟೆ ವೀರಗಲ್ಲು

ಪ್ರಾಚೀನ ಕಾಲದಲ್ಲಿ ದಟ್ಟಕಾಡುಗಳು ಸಾಮಾನ್ಯವಾಗಿದ್ದು, ನೆರೆಯ ಗ್ರಾಮಗಳು ಆಗಿಂದಾಗ್ಗೆ ಕಾಡುಪ್ರಾಣಿಗಳ ಧಾಳಿಗೆ ತುತ್ತಾಗುತ್ತಿದ್ದವು. ಇಂತಹ ಕಾಡುಪ್ರಾಣಿಗಳಲ್ಲಿ ಹುಲಿ, ಚಿರತೆ, ಕಾಡುಹಂದಿಗಳು ಪ್ರಮುಖವಾಗಿದ್ದವು. ಇಂತಹ ಕಾಡು ಪ್ರಾಣಿಗಳ ವಿರುದ್ಧ ಹೋರಾಡಿ ಗ್ರಾಮದ ಜನರನ್ನು ಆ ಕಾಲದ ವೀರರು ರಕ್ಷಿಸುತ್ತಿದ್ದರು. ಹುಲಿಯಂತಹ ಬಲಿಷ್ಠ ಪ್ರಾಣಿಗಳೊಂದಿಗೆ ಹೋರಾಡಿ ಹಲವು ವೀರರು ಮರಣ ಹೊಂದಿದ್ದಾರೆ. ಅಂತವರ ಸ್ಮರಣೆಗಾಗಿ ನಿಲ್ಲಿಸಿದ ಹಲವು ವೀರಗಲ್ಲುಗಳನ್ನು ಬಾಸವೂರು ಪ್ರದೇಶಗಳಲ್ಲಿ ಕಾಣಬಹುದು. ಕಲಕೇರಿಯಲ್ಲಿ ಎರಡು ಹುಲಿಬೇಟೆ ವೀರಗಲ್ಲುಗಳಿವೆ. ಕೆರೆಯಸೋಮೇಶ್ವರ ದೇವಾಲಯದ ಹತ್ತಿರದಲ್ಲಿ ಒಂದು, ಮತ್ತೊಂದು ಸೋಮೇಶ್ವರ ದೇವಾಲಯದ ಸರೋವರದ ಪಾವಟಿಗೆಗಳ ಹತ್ತಿರದಲ್ಲಿ ಕಾಣಬಹುದು. ಇವೆರಡರಲ್ಲಿ ಕೆಳಭಾಗದ ಪಟ್ಟಿಕೆಗಳಲ್ಲಿ ವೀರನು ಹುಲಿಯೊಂದಿಗೆ ಹೋರಾಡುತ್ತಿರುವ ಚಿತ್ರವಿದ್ದರೆ, ಮೇಲಿನ ಪಟ್ಟಿಕೆಯಲ್ಲಿ ವೀರನು ಸ್ವರ್ಗವನ್ನು ಹೊಂದಿದ ದೃಶ್ಯವಿದೆ. ಸಂಗೂರಿನಲ್ಲಿ ದೊರೆತಿರುವ ವೀರಗಲ್ಲು ವಿಶಿಷ್ಠವಾಗಿದೆ. ಶಾಸನ ಪಾಠದಲ್ಲಿ ಹುಲಿಯೊಡನೆ ಹೋರಾಡಿದ ವಿವರಣೆ ಇದ್ದರೂ, ಶಾಸನ ಶಿಲ್ಪದಲ್ಲಿ ಅದು ಹುಲಿಯಂತಿರದೆ, ಕೊರಳಸುತ್ತಲೂ ದಟ್ಟವಾದ ಕೂದಲನ್ನು ಹೊಂದಿರುವ ಸಿಂಹದ್ದಾಗಿದೆ. ಆದರೆ ಪ್ರಾಚೀನ ಕರ್ನಾಟಕದಲ್ಲಿ ಸಿಂಹಗಳಿದ್ದ ಬಗ್ಗೆ ಉಲ್ಲೇಖಗಳಿಲ್ಲ. ಬಹುಶಃ ವೀರನು

– 30ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಹಾವೇರಿ ನಗರದ ಗುತ್ತಿಗೆ ಪೌರಕಾರ್ಮಿಕರು : ಒಂದು ಅಧ್ಯಯನ

✍ **ಪ್ರಶಾಂತ ಹೆಚ್.ವೈ.** ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಕೆರಿಮತ್ತಿಹಳ್ಳಿ, ಹಾವೇರಿ.

✍ **ರಾಘವೇಂದ್ರ ಬಿ ಶಿರೂರು** ಸ್ನಾತಕೋತ್ತರ ವಿದ್ಯಾರ್ಥಿ, ಸಮಾಜಕಾರ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಕೆರಿಮತ್ತಿಹಳ್ಳಿ, ಹಾವೇರಿ.

## ಪ್ರಸ್ತಾವನೆ

ಭಾರತ ಸ್ವಾತಂತ್ರ್ಯ ಪಡೆದು 70ವರ್ಷ ಕಳೆದರೂ ಜಾತಿ ವ್ಯವಸ್ಥೆಯ ಕಡು ನೆರಳಿನಲ್ಲೇ ಸಾಮಾಜಿಕ ವ್ಯವಸ್ಥೆ ಜೀವಿಸತೊಡಗಿದೆ. ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವೆನಿಸಿಕೊಂಡಿರುವ ಭಾರತದಲ್ಲಿ ಇಂದಿಗೂ ಕೂಡ ಜಾತಿ ಪದ್ಧತಿಯ ಆಚರಣೆ ಹಾಸುಹೊಕ್ಕಾಗಿದೆ. ಕನಿಷ್ಟ ವೃತ್ತಿ ಮಾಡುವವರು ಹೀನ ಜಾತಿಯವರು ಎಂಬ ಸಾಮಾಜಿಕ ಆರೋಪಿತ ನಿಯಮಗಳನ್ನು ಇಂದಿಗೂ ಕಾಪಾಡಿಕೊಂಡು ಬರುತ್ತಿರುವುದು ಈ ದೇಶದ ಬಹು ದೊಡ್ಡ ದುರಂತ. ಜಲಗಾರ, ಜಾಡಮಾಲಿ, ಸಮಗಾರ, ಚಮ್ಮಾರ, ಭಂಗಿ, ಸಫಾಯಿ ಕರ್ಮಚಾರಿ, ಮಾದರ, ಚಾಂಡಾಲ, ಪಾಕಾನಾ, ಮಾರಿ, ಮೋಚಿ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಪೌರಕಾರ್ಮಿಕ ವೃತ್ತಿಯನ್ನು ಜಾತಿಯಿಂದಲೇ ಗುರುತಿಸಲಾಗುತ್ತದೆ.

ಭರತ ಭೂಮಿಯಲ್ಲಿ ಪೌರಕಾರ್ಮಿಕರಿಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಋಗ್ವೇದದ ಪ್ರಕಾರ ಕೆಳಮಟ್ಟದ ಸ್ಥಾನ ಪಡೆದ ಅಸ್ಪೃಶ್ಯರ ಕರ್ತವ್ಯಗಳೆಂದರೆ ಬೀದಿಗಳನ್ನು ಗುಡಿಸುವುದು, ಚರಂಡಿಗಳನ್ನು ಸ್ವಚ್ಛ ಮಾಡುವುದು, ಮಲ-ಮೂತ್ರ ಬಾಚುವುದು, ಸತ್ತ ಪ್ರಾಣಿಗಳ ದೇಹಗಳನ್ನು ಸಾಗಿಸುವುದು ಮುಂತಾದ ಅಮಾನವೀಯ ಕಸುಬುಗಳನ್ನು ಮಾಡುವುದಾಗಿದೆ. ಈ ರೀತಿಯ ವೃತ್ತಿಗಳನ್ನು ಬಹುಪಾಲು ದಲಿತ ವರ್ಗಕ್ಕೆ ಸೇರಿದ ಜನರೇ ಅನುವಂಶೀಯವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಆಧುನಿಕ ನಗರ-ಪಟ್ಟಣಗಳ ಪರಿಕಲ್ಪನೆ ಬೆಳೆದಾಗ ಅವುಗಳ ನೈರ್ಮಲ್ಯ, ಚರಂಡಿಗಳ ಸ್ವಚ್ಛತೆ, ಶೌಚಾಲಯಗಳ ನಿರ್ವಹಣೆಗಾಗಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲಾಯಿತು. ಈ ಪೌರಕಾರ್ಮಿಕರು ಬಹುಮುಖ್ಯವಾಗಿ ನಗರ ಪ್ರದೇಶಗಳು, ಬೃಹತ್ ಪಟ್ಟಣಗಳು, ಮಹಾನಗರ ಪಾಲಿಕೆಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಕಂಡುಬರುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ ಕನ್ನಡ ನಿಘಂಟುವಿನಲ್ಲಿ ಭಂಗಿ ಎಂದರೆ, ಬೀದಿಯ ಕಸ ಗುಡಿಸುವ ವೃತ್ತಿಯವನು; ಪಾಯಖಾನೆಗಳಲ್ಲಿನ ಮಲವನ್ನು ತೆಗೆದು ಸ್ವಚ್ಛ ಮಾಡುವವನು ಎಂದು ಉಲ್ಲೇಖಿಸಲಾಗಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು 2013ರಲ್ಲಿ ನಡೆಸಿರುವ ಸಮೀಕ್ಷೆಯ ಪ್ರಕಾರ ಭಾರತದಲ್ಲಿ 9,42,643 ಪೌರಕಾರ್ಮಿಕರು ನಗರ ಪ್ರದೇಶಗಳಲ್ಲಿ ಹಾಗೂ 3,72,009 ಪೌರಕಾರ್ಮಿಕರು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬಂದಿದ್ದಾರೆ. 1993ರಲ್ಲಿಯೇ The Employment of Manual Scavengers and Construction of Dry Latrines (Prohibition) Act. ಅನ್ನು ಜಾರಿಗೆ ತಂದು ಪೌರ ಕಾರ್ಮಿಕ ವೃತ್ತಿಯ ಆಚರಣೆಯನ್ನು ನಿಷೇಧಿಸಿದ್ದರೂ ಕೂಡ ಪ್ರಸ್ತುತ ಸಂದರ್ಭದಲ್ಲಿಯೂ ಪೌರಕಾರ್ಮಿಕ ವೃತ್ತಿಯ ಅಸ್ತಿತ್ವವನ್ನು ಕಾಣಬಹುದಾಗಿದೆ.

ಪೌರಕಾರ್ಮಿಕ ಅಥವಾ ಭಂಗಿ ವೃತ್ತಿಯು ಅತ್ಯಂತ ಅಮಾನವೀಯ ಮತ್ತು ದೌರ್ಜನ್ಯದಿಂದ ಕೂಡಿದ ವೃತ್ತಿಯಾಗಿದ್ದು, ಶತಮಾನಗಳಿಂದಲೂ ದಲಿತರು ಈ ವೃತ್ತಿಯ ಕಬಂದ ಬಾಹುಗಳಲ್ಲೇ ಕೊನೆಯುಸಿರೆಳೆದಿದ್ದಾರೆ. ಪೌರಕಾರ್ಮಿಕ ವೃತ್ತಿಯನ್ನು ಕೈಗೊಳ್ಳುವ ಸಮುದಾಯಗಳನ್ನು ಊರ ಹೊರಗಿನ ಕಾಲೋನಿಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ವಾಸಮಾಡುವಂತೆ ತಾರತಮ್ಯಕ್ಕೊಳಪಡಿಸಲಾಗಿದೆ. ಬಹುಪಾಲು ದಲಿತ ಮಹಿಳೆಯರು ಯಾವುದೇ ಸುರಕ್ಷಿತ ಉಪಕರಣಗಳಿಲ್ಲದೇ ಮಲ-ಮೂತ್ರ ಸ್ವಚ್ಛಗೊಳಿಸುವುದರಿಂದ ಅವರ ಆರೋಗ್ಯದ ಮೇಲೆ ಮಾರಕ ಪರಿಣಾಮಗಳುಂಟಾಗುತ್ತಿವೆ. ಚರ್ಮ, ಕೈ-ಕಾಲು, ಕಣ್ಣುಗಳು, ಉಸಿರಾಟ ಮೊದಲಾದ ಅನೇಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ಕರ್ನಾಟಕದ ಅನೇಕ ಮಹಾನಗರಗಳು, ನಗರ ಸಭೆಗಳಲ್ಲಿ ಗುತ್ತಿಗೆ ಪೌರಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. ಕಳೆದ ಸುಮಾರು ದಶಕಗಳಿಂದ ದಲಿತ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಜನರು ಗುತ್ತಿಗೆ ಪೌರಕಾರ್ಮಿಕರಾಗಿ ಅತ್ಯಂತ ಕಡಿಮೆ ಕೂಲಿಗೆ ದುಡಿಯುತ್ತಿದ್ದಾರೆ. ಅಭದ್ರ ದಿನಗೂಲಿಯ ನೌಕರಿಯನ್ನೇ ನಂಬಿ ತುತ್ತು ಅನ್ನಕ್ಕಾಗಿ ಪರದಾಡುತ್ತಿದ್ದಾರೆ. ಜಾತಿಯ ಕಾರಣಕ್ಕಾಗಿ, ವೃತ್ತಿಯ ಕಾರಣಕ್ಕಾಗಿ ತುಳಿತಕ್ಕೊಳಗಾದ ಪೌರಕಾರ್ಮಿಕರು ಗುತ್ತಿಗೆಯ ಯಜಮಾನನಿಂದಲೂ ಕೂಡ ಶೋಷಣೆಗೆ ಒಳಪಡುತ್ತಿದ್ದಾರೆ.

## ಸಂಶೋಧನೆಯ ವಿಧಾನ

ಪೌರಕಾರ್ಮಿಕ ವೃತ್ತಿ ಸಮಾಜದ ಕಡೆಗಣಿತ ವೃತ್ತಗಳಲ್ಲೊಂದು. ಸಾವಾಜಿಕ ಶ್ರೇಣೀ ವ್ಯವಸ್ಥೆಯ ಕೆಳವರ್ಗದ ಜನರಿಗಷ್ಟೇ ಸೀಮಿತಗೊಂಡಿರುವ ಈ ಪೌರಕಾರ್ಮಿಕ ವೃತ್ತಿಯು ಸಮಾಜ ಸೃಷ್ಟಿಸುವ ಹೊಲಸನ್ನು ಶುದ್ಧಗೊಳಿಸುವ, ಮಲವನ್ನು ಗುಡಿಸುವ, ಚರಂಡಿಗಳ ಕೊಳಕನ್ನು ತೆಗೆಯುವ, ರಸ್ತೆಗಳ ಕಸವನ್ನು ಶುಚಿಗೊಳಿಸುವ ಅಗತ್ಯ ಕೆಲಸಗಳನ್ನು ನಿರ್ವಹಿಸುತ್ತಿದೆ. ಆದರೂ ಪೌರಕಾರ್ಮಿಕ ವೃತ್ತಿಯನ್ನು ಸಮಾಜ ಮತ್ತು ಸರ್ಕಾರ ನಿಕೃಷ್ಟವಾಗಿ ಕಾಣುತ್ತಿವೆ. ಸರ್ಕಾರದ ನಕಾರಾತ್ಮಕ ಮನೋಭಾವ, ಸಮಾಜದ ತಿರಸ್ಕಾರ ಮತ್ತು ನಿರ್ಲಕ್ಷ್ಯತೆಗಳು ಗುತ್ತಿಗೆ ಪೌರಕಾರ್ಮಿಕರ ಬದುಕನ್ನು ಮತ್ತಷ್ಟು ಅಸಹನೀಯಗೊಳಿಸಿವೆ. ಈ ನಿಟ್ಟಿನಲ್ಲಿ ಪೌರಕಾರ್ಮಿಕರ ವೃತ್ತಿ ಸ್ವರೂಪ, ದುಡಿಮೆ, ಉಳಿತಾಯ, ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಸ್ಥಾನಮಾನ, ವೃತ್ತಿ ಸವಾಲುಗಳು, ಬೇಡಿಕೆಗಳು, ಸವಾಜ ಅವರನ್ನು ನೋಡುವ ದೃಷ್ಟಿಕೋನ ಮೊದಲಾದವುಗಳನ್ನು ಸಂಶೋಧನೆಗೊಳಪಡಿಸುವುದು ಪ್ರಸ್ತುತ ಅಧ್ಯಯನದ ಗುರಿಯಾಗಿದೆ.

## ಅಧ್ಯಯನದ ಜಗತ್ತು ಮತ್ತು ಮಾದರಿ ಆಯ್ಕೆ

ಪ್ರಸ್ತುತ ಅಧ್ಯಯನವು ಹಾವೇರಿ ನಗರಕ್ಕೆ ಮಾತ್ರ ಸೀಮಿತವಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹಾವೇರಿ ನಗರದ ನಗರಸಭೆಯಲ್ಲಿ ಕಾರ್ಯ ನಿರ್ವಹಿಸುವ ಗುತ್ತಿಗೆ ಪೌರಕಾರ್ಮಿಕರನ್ನು ಮಾತ್ರ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾವೇರಿ ನಗರಸಭೆಯಲ್ಲಿ ಕಾರ್ಯ ನಿರ್ವಹಿಸುವ ಒಟ್ಟು 62 ಗುತ್ತಿಗೆ ಪೌರಕಾರ್ಮಿಕರಲ್ಲಿ 40 ಮಂದಿ ಗುತ್ತಿಗೆ ಪೌರಕಾರ್ಮಿಕರನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಈ 40 ಮಂದಿ ಗುತ್ತಿಗೆ ಪೌರಕಾರ್ಮಿಕರಲ್ಲಿ 33 ಜನ ಪುರುಷ ಗುತ್ತಿಗೆ ಪೌರಕಾರ್ಮಿಕರು ಮತ್ತು 7 ಮಂದಿ ಮಹಿಳಾ ಗುತ್ತಿಗೆ ಪೌರಕಾರ್ಮಿಕರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಅನುಸರಿಸಿ ಆಯ್ಕೆ ಮಾಡಲಾಗಿದೆ. ಈ 40 ಮಂದಿ ಗುತ್ತಿಗೆ ಪೌರಕಾರ್ಮಿಕರು ಒಟ್ಟು ಗುತ್ತಿಗೆ ಪೌರಕಾರ್ಮಿಕರ ಶೇಕಡಾ 64.51% ರಷ್ಟನ್ನು ಪ್ರತಿನಿಧಿಸುತ್ತದೆ.

## ಮಾಹಿತಿ ಸಂಗ್ರಹಣೆ

ಸಂಶೋಧನೆಗೆ ಅವಶ್ಯವಾದ ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಿ ಅದನ್ನು ಬಳಸಿ ಸಂಗ್ರಹಿಸಲಾಗಿದೆ. ಸಂದರ್ಶನ ಪ್ರಶ್ನಾವಳಿಯು ಒಟ್ಟು 48 ಪ್ರಶ್ನೆಗಳನ್ನು ಒಳಗೊಂಡಿದೆ. ಈ ಪ್ರಶ್ನೆಗಳು ಗುತ್ತಿಗೆ ಪೌರಕಾರ್ಮಿಕರ ವೈಯಕ್ತಿಕ, ಕೌಟುಂಬಿಕ, ವೃತ್ತಿ ಸ್ವರೂಪ, ಆದಾಯ, ಉಳಿತಾಯ, ಶಿಕ್ಷಣ, ಆರೋಗ್ಯ, ಅವರ ಸಮಸ್ಯೆಗಳು, ಸುರಕ್ಷಾ ಉಪಕರಣಗಳ ಬಳಕೆ, ವೃತ್ತಿ ಬೇಡಿಕೆಗಳ ಕುರಿತಂತೆ ಹಲವು ಪ್ರಶ್ನೆಗಳನ್ನು ಒಳಗೊಂಡಿವೆ.

## ಅಧ್ಯಯನದ ಗುರಿ ಮತ್ತು ಉದ್ದೇಶಗಳು

1. ಹಾವೇರಿ ನಗರ ಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ.
2. ಗುತ್ತಿಗೆ ಪೌರಕಾರ್ಮಿಕರ ಶಿಕ್ಷಣ, ಆದಾಯ, ಉಳಿತಾಯ, ಆರೋಗ್ಯ ವಿಷಯಗಳ ಕುರಿತು ಮಾಹಿತಿ ಸಂಗ್ರಹಿಸುವುದು.
3. ಗುತ್ತಿಗೆ ಪೌರಕಾರ್ಮಿಕರ ಸಮಸ್ಯೆಗಳು, ಅವರ ವೃತ್ತಿ ಬೇಡಿಕೆಗಳು ಮತ್ತು ವೃತ್ತಿ ಸವಾಲುಗಳ ಬಗ್ಗೆ ತಿಳಿದುಕೊಳ್ಳುವುದು.


## ಸಂಶೋಧನಾ ವಿನ್ಯಾಸ

ಗುತ್ತಿಗೆ ಪೌರಕಾರ್ಮಿಕರ ಸಾಮಾಜಿಕ ಬದುಕನ್ನು, ವೃತ್ತಿ ಸಮಸ್ಯೆಗಳ ಸ್ವರೂಪವನ್ನು ತಿಳಿಯಲು ಪ್ರಯತ್ನಶೀಲವಾಗಿರುವ ಪ್ರಸ್ತುತ ಸಂಶೋಧನೆಯು "ವಿವರಣಾತ್ಮಕ ಸಂಶೋಧನಾ ಮಾದರಿಯನ್ನು" ಅದರ ರೂಪುರೇಷೆಗಳನ್ನು ಅಳವಡಿಸಿಕೊಂಡಿದೆ.

**ಕೋಷ್ಟಕ 1.1. : ಪ್ರತಿಕ್ರಿಯಿಸಿದವರ ಶಿಕ್ಷಣವನ್ನು ಸೂಚಿಸುವ ಕೋಷ್ಟಕ**

| ಕ್ರಸಂ. | ಶಿಕ್ಷಣ | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ಅನಕ್ಷರಸ್ಥರು | 09 | 22.5% |
| 2. | ಪ್ರಾಥಮಿಕ ಶಿಕ್ಷಣ | 24 | 60 % |
| 3. | ಮಾಧ್ಯಮಿಕ ಶಿಕ್ಷಣ | 03 | 7.5% |
| 4. | ಪ್ರೌಢಶಾಲೆ ಶಿಕ್ಷಣ | 04 | 10 % |
| | ಒಟ್ಟು | 40 | 100% |


ಸದರಿ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರ ಶಿಕ್ಷಣವನ್ನು ಗಮನಿಸಿದಾಗ ಶೇಕಡಾ 22.5ರಷ್ಟು ಗುತ್ತಿಗೆ ಪೌರಕಾರ್ಮಿಕರು




ಅನಕ್ಷರಸ್ಥರು, ಶೇಕಡಾ 60ರಷ್ಟು ಪ್ರಾಥಮಿಕ ಶಿಕ್ಷಣ, ಶೇಕಡಾ 7.5ರಷ್ಟು ಮಾಧ್ಯಮಿಕ ಶಿಕ್ಷಣ ಪಡೆದವರು ಹಾಗೂ ಶೇಕಡಾ 10ರಷ್ಟು ಗುತ್ತಿಗೆ ಪೌರಕಾರ್ಮಿಕರು ಪ್ರೌಢ ಶಿಕ್ಷಣ ಪಡೆದಿರುವುದು ಈ ಕೋಷ್ಟಕದ ಮುಖಾಂತರ ತಿಳಿದು ಬಂದಿದೆ. ಗುತ್ತಿಗೆ ಪೌರಕಾರ್ಮಿಕರಲ್ಲಿ ಬಹುಪಾಲು ಜನರು ಕೇಳದಂತಹ ಶಿಕ್ಷಣವನ್ನಷ್ಟೇ ಪಡೆದಿರುವುದು ಸಂಶೋಧನೆಯಲ್ಲಿ ಕಂಡು ಬಂದಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಅವರು ಶಿಕ್ಷಣವನ್ನು ತೊರೆದು ದುಡಿಮೆಯ ಹಾದಿಯಲ್ಲಿ ಸಾಗಿರುವುದು ದೃಢಪಟ್ಟಿದೆ.

**ಕೋಷ್ಟಕ 1.2. : ಗುತ್ತಿಗೆ ಪೌರಕಾರ್ಮಿಕರ ವೃತ್ತಿಯ ಸ್ವರೂಪವನ್ನು ಪ್ರತಿನಿಧಿಸುವ ಕೋಷ್ಟಕ**

| ಕ್ರಸಂ. | ವೃತ್ತಿಯ ಸ್ವರೂಪ | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ರಸ್ತೆ ಗುಡಿಸುವುದು | 08/ | 20 % |
| 2. | ಚರಂಡಿ ಶುಚಿಗೊಳಿಸುವುದು | 25 | 62.5 % |
| 3. | ಶೌಚಾಲಯ ಸ್ವಚ್ಛಗೊಳಿಸುವುದು | 01 | 2.5 % |
| 4. | ಮನೆಯಿಂದ ಕಸ ಸಂಗ್ರಹ | 06 | 15 % |
| | ಒಟ್ಟು | 40 | 100 % |





ಸದರಿ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರ ವೃತ್ತಿಯ ಸ್ವರೂಪವನ್ನು ಗಮನಿಸಿದಾಗ ರಸ್ತೆ ಗುಡಿಸುವ ಕಾರ್ಯದಲ್ಲಿ ಶೇಕಡಾ 20ರಷ್ಟು, ಚರಂಡಿ ಶುಚಿಗೊಳಿಸುವ ಕಾರ್ಯದಲ್ಲಿ ಶೇಕಡಾ 62.5ರಷ್ಟು, ಶೌಚಾಲಯ ಸ್ವಚ್ಛಗೊಳಿಸುವ ಕಾರ್ಯದಲ್ಲಿ ಶೇಕಡಾ 2.5ರಷ್ಟು, ಮನೆಯಿಂದ ಕಸ ಸಂಗ್ರಹ ಕಾರ್ಯದಲ್ಲಿ ಶೇಕಡಾ 15ರಷ್ಟು ಗುತ್ತಿಗೆ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿದೆ. ಬಹುಪಾಲು ಗುತ್ತಿಗೆ ಪೌರಕಾರ್ಮಿಕರು ನಗರದ ಚರಂಡಿಗಳನ್ನು ಶುಚಿಗೊಳಿಸುವ ವೃತ್ತಿಯಲ್ಲಿ ತೊಡಗಿದ್ದು, ಉಳಿದಂತೆ ರಸ್ತೆ ಗುಡಿಸುವುದು, ಮನೆಯಿಂದ ಕಸ ಸಂಗ್ರಹಿಸುವಂತಹ ಮತ್ತು ಶೌಚಾಲಯ ಶುಚಿಗೊಳಿಸುವ ಕಾರ್ಯದಲ್ಲಿ ಅವರು ಹಂಚಿಕೆಯಾಗಿರುವುದು ಸಂಶೋಧನೆಯಲ್ಲಿ ಕಂಡು ಬಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ 1.3. : ಸುರಕ್ಷಾ ಉಪಕರಣಗಳ ಬಳಕೆಯನ್ನು ಪ್ರತಿನಿಧಿಸುವ ಕೋಷ್ಟಕ**


| ಕ್ರ.ಸಂ. | ಉಪಕರಣಗಳು | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ಹ್ಯಾಂಡ್ ಗ್ಲೌಸ | 14 | 35% |
| 2. | ಫಮ್‌ಬೂಟ್ | 06 | 15% |
| 3. | ಮಾಸ್ಕ್ | 08 | 20% |
| 4. | ಉಪ್ರಾನ್ | 03 | 7.5% |
| 5. | ಇತರೆ | 09 | 22.5% |
| | ಒಟ್ಟು | 40 | 100% |




ಪ್ರಸ್ತುತ ಸದರಿ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರು ತಮ್ಮ ಕೆಲಸದ ಸಮಯದಲ್ಲಿ ಸುರಕ್ಷಾ ಉಪಕರಣಗಳ ಬಳಕೆಯನ್ನು ಗಮನಿಸಿದಾಗ ಶೇಕಡಾ 35ರಷ್ಟು ಗುತ್ತಿಗೆ ಪೌರಕಾರ್ಮಿಕರು ಹ್ಯಾಂಡ್ ಗ್ಲೌಸ್ ಸುರಕ್ಷಾ ಉಪಕರಣವನ್ನು, ಶೇಕಡಾ 15ರಷ್ಟು ಪ್ರತಿವಾದಿಗಳು ಫಮ್‌ಬೂಟ್ ಸುರಕ್ಷಾ ಉಪಕರಣವನ್ನು, ಶೇಕಡಾ 20ರಷ್ಟು ಪ್ರತಿವಾದಿಗಳು ಮಾಸ್ಕ್ ಉಪಕರಣವನ್ನು, ಶೇಕಡಾ 7.5ರಷ್ಟು ಪ್ರತಿವಾದಿಗಳು ಉಪ್ರಾನ್ ಉಪಕರಣವನ್ನು ಹಾಗೂ ಶೇಕಡಾ 22.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಇತರೆ ಉಪಕರಣಗಳನ್ನು ಬಳಸಿರುವುದಾಗಿ ತಿಳಿಸಿರುವುದು ಈ ಕೋಷ್ಟಕದ ಮೂಲಕ ತಿಳಿದು ಬಂದಿದೆ. ಗುತ್ತಿಗೆ ಪೌರಕಾರ್ಮಿಕರಿಗೆ ಈ ಕೋಷ್ಟಕದಲ್ಲಿ ಉಲ್ಲೇಖಿಸಿರುವ ಸುರಕ್ಷಾ ಉಪಕರಣಗಳನ್ನು ಬಳಸುವ ಅನಿವಾರ್ಯ ಇದ್ದು ಹಲವು ಸಂದರ್ಭಗಳಲ್ಲಿ ಅವುಗಳನ್ನು ಧರಿಸದೇ/ಬಳಸದೇ ಕಾರ್ಯ ನಿರ್ವಹಿಸುವುದು ಸಂಶೋಧನೆಯ ಸಂದರ್ಭದಲ್ಲಿ ಕಂಡು ಬಂದಿದೆ.

**ಕೋಷ್ಟಕ 1.4. : ಪ್ರತಿವಾದಿಗಳು ದುಡಿಯುವ ಸ್ಥಳದಲ್ಲಿ ಲಿಂಗ ತಾರತಮ್ಯ ಸೂಚಿಸುವ ಕೋಷ್ಟಕ**


| ಕ್ರ.ಸಂ. | ಲಿಂಗತಾರತಮ್ಯ | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ಹೌದು | 06 | 15 % |
| 2. | ಇಲ್ಲ | 34 | 85 % |
| | ಒಟ್ಟು | 40 | 100 % |




ಸದರಿ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರು ದುಡಿಯುವ ಸ್ಥಳದಲ್ಲಿ ಲಿಂಗ ತಾರತಮ್ಯವನ್ನು ಗಮನಿಸಿದಾಗ ಶೇಕಡಾ 15ರಷ್ಟು ಗುತ್ತಿಗೆ ಪೌರಕಾರ್ಮಿಕರು ಹೌದು ಎಂದೂ, ಶೇಕಡಾ 85ರಷ್ಟು ಗುತ್ತಿಗೆ ಪೌರಕಾರ್ಮಿಕರು ಯಾವುದೇ ಲಿಂಗ ತಾರತಮ್ಯವನ್ನು ಎದುರಿಸಿಲ್ಲ ಎಂದು ಪ್ರತಿಕ್ರಿಯಿಸಿರುವುದು ಸಂಶೋಧನೆಯಲ್ಲಿ ಕಂಡುಬಂದಿದೆ. ಬಹುಪಾಲು ಪ್ರತಿವಾದಿಗಳ ಅಭಿಪ್ರಾಯಗಳನ್ನು ಗಮನಿಸಿದಾಗ/ಅವಲೋಕಿಸಿದಾಗ ಅವರು ಒತ್ತಡದ ಪರಿಸ್ಥಿತಿಯೊಳಗೆ ಈ ಅಂಶವನ್ನು ಹೇಳಿದ್ದಾರೆಂಬುವುದು ಈ ಮೂಲಕ ತಿಳಿದು ಬಂದಿದೆ.

**ಕೋಷ್ಟಕ 1.5. : ಪ್ರತಿವಾದಿಗಳು ವೃತ್ತಿಯಿಂದ ಅನುಭವಿಸುವ ಕಾಯಿಲೆಗಳ ಸ್ವರೂಪವನ್ನು ಸೂಚಿಸುವ ಕೋಷ್ಟಕ.**

| ಕ್ರ.ಸಂ. | ಕಾಯಿಲೆಗಳ ಸ್ವರೂಪ | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ಅಸ್ತಮಾ | 04 | 10% |
| 2. | ಚರ್ಮರೋಗ | 06 | 15% |
| 3. | ಅಲರ್ಜಿ | 12 | 30% |
| 4. | ಬೆನ್ನುನೋವು | 13 | 32.5% |
| 5. | ಇತರೆ | 05 | 12.5% |
| | ಒಟ್ಟು | 40 | 100% |





ಪ್ರಸ್ತುತ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರು ವೃತ್ತಿಯಿಂದ ಅನುಭವಿಸುವ ಕಾಯಿಲೆಗಳ ಸ್ವರೂಪವನ್ನು ಅಧ್ಯಯನಕ್ಕೊಳಪಡಿಸಿದ್ದು, ಶೇಕಡಾ 10ರಷ್ಟು ಗುತ್ತಿಗೆ ಪೌರಕಾರ್ಮಿಕರು ಅಸ್ತಮಾ ಶೇಕಡಾ 15ರಷ್ಟು ಚರ್ಮರೋಗ, ಶೇಕಡಾ 30ರಷ್ಟು ಅಲರ್ಜಿ, ಶೇಕಡಾ 32.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಬೆನ್ನುನೋವು ಸಮಸ್ಯೆಯಿಂದ ಹಾಗೂ ಶೇಕಡಾ 12.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಇತರೆ ಕಾಯಿಲೆಗಳಿಗೆ ಗುರಿಯಾಗಿರುವುದನ್ನು ಗಮನಿಸಬಹುದಾಗಿದೆ. ಪೌರಕಾರ್ಮಿಕ ವೃತ್ತಿಯು ದೈಹಿಕ ಶ್ರಮವನ್ನು ಬೇಡುವ ವೃತ್ತಿಯಾಗಿದ್ದು, ಅಸುರಕ್ಷಿತ ಮತ್ತು ರೋಗಭರಿತ ಕೊಳಚೆ ವಾತಾವರಣದಲ್ಲಿಯೇ ಅವರು ಕಾರ್ಯನಿರ್ವಹಿಸುವುದರಿಂದ ಅನೇಕ ಕಾಯಿಲೆಗಳಿಗೆ ತುತ್ತಾಗುವ ಅಪಾಯವಿರುತ್ತದೆ.

**ಕೋಷ್ಟಕ 1.6. : ಪ್ರತಿವಾದಿಗಳ ಧೂಮಪಾನ, ಮದ್ಯಪಾನ ಹಾಗೂ ಮಾದಕ ವಸ್ತುಗಳ ಸೇವನೆ ಸೂಚಿಸುವ ಕೋಷ್ಟಕ**

| ಕ್ರ.ಸಂ. | ಮಾರಕ ಹವ್ಯಾಸಗಳ ಬಗ್ಗೆ ಮಾಹಿತಿ | ಪ್ರತಿವಾದಿಗಳ ಸಂಖ್ಯೆ | ಪ್ರತಿಶತ |
|---|---|---|---|
| 1. | ಹೌದು | 23 | 57 % |
| 2. | ಇಲ್ಲ | 17 | 42 % |
| | ಒಟ್ಟು | 40 | 100 % |

ಪ್ರಸ್ತುತ ಸಂಶೋಧನೆಯಲ್ಲಿ ಗುತ್ತಿಗೆ ಪೌರಕಾರ್ಮಿಕರು ಧೂಮಪಾನ, ಮದ್ಯಪಾನ, ತಂಬಾಕು ಮುಂತಾದ ಮಾದಕ ವಸ್ತುಗಳನ್ನು

ISSN : 2249-2429 ಸಂಶೋಧನೆ RNI REG.NO.KARKAN/2011/38712




ಸೇವಿಸುವ ಕುರಿತು ಕೂಡ ಮಾಹಿತಿ ಸಂಗ್ರಹಿಸಲಾಗಿದೆ. ಸೂಚಿಸುವ ಕೋಷ್ಟಕ ಗಮನಿಸಿದಾಗ ಗುತ್ತಿಗೆ ಪೌರಕಾರ್ಮಿಕರು ಶೇಕಡಾ 57.5ರಷ್ಟು ಕುಡಿತ ಹಾಗೂ ಇತರೆ ಸಮಸ್ಯೆಗಳಿಗೆ ಬಲಿಯಾಗಿದ್ದಾರೆ ಹಾಗೂ ಶೇಕಡಾ 42.5ರಷ್ಟು ಪ್ರತಿವಾದಿಗಳು ಕೆಟ್ಟ ಹವ್ಯಾಸಗಳಿಗೆ ಬಲಿಯಾಗದೇ ಇರುವುದು ಕಂಡು ಬಂದಿದೆ. ಪೌರಕಾರ್ಮಿಕ ವೃತ್ತಿ ದೈವಿಕ ಶ್ರಮದಿಂದ ಕೂಡಿದ್ದು, ಚರಂಡಿ, ಮಲ, ಮೂತ್ರದ ಕೆಟ್ಟ ವಾಸನೆಯಿಂದ ಮುಕ್ತಿ ಪಡೆಯಲು ಹಾಗೂ ದೈವಿಕ ಆಲಸ್ಯದಿಂದ ಮದ್ಯಪಾನ, ಧೂಮಪಾನ, ತಂಬಾಕು ಸೇವನೆಯಂತಹ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕೇವಲ ಪುರುಷರಷ್ಟೇ ಅಲ್ಲದೇ ಮಹಿಳೆಯರೂ ಕೂಡ ಕೆಲವೊಂದು ದುರಾಭ್ಯಾಸಗಳಿಗೆ ಬಲಿಯಾಗಿದ್ದು, ಮಾರಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಅರಿವಿದ್ದರೂ ಕೂಡ ಅವುಗಳನ್ನು ಸೇವಿಸುತ್ತಿರುವುದು ಕಂಡು ಬಂದಿದೆ.

## ಸಂಶೋಧನೆಯ ಫಲಿತಗಳು/ ಶೋಧನೆಗಳು

ಪ್ರಸ್ತುತ ಸಂಶೋಧನಾ ಅಧ್ಯಯನವು ಹಾವೇರಿ ನಗರದ ಗುತ್ತಿಗೆ ಪೌರಕಾರ್ಮಿಕರ ಕುರಿತಂತೆ ಸಮಗ್ರ ಅಧ್ಯಯನ ಕೈಗೊಂಡಿದ್ದು, ಹಲವು ಅಂಶಗಳನ್ನು ಮತ್ತು ಮಾಹಿತಿಗಳನ್ನು ಹೊರ ಹಾಕಿದೆ. ಈ ಸಂಶೋಧನೆಯ ಫಲಶೃತಿಗಳು ಗುತ್ತಿಗೆ ಪೌರಕಾರ್ಮಿಕರ ವಾಸ್ತವಿಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಂಶಗಳ ಜೊತೆಗೆ, ಅವರ ವೃತ್ತಿ ಸ್ವರೂಪದ ಬಗ್ಗೆಯೂ ವಿವರಣಾತ್ಮಕ ಮಾಹಿತಿಯನ್ನು ಕ್ರೋಢೀಕರಿಸಿದೆ. ಈ ಸಂಶೋಧನೆಯ ಮುಖ್ಯ ಫಲಶೃತಿಗಳು.

### ➲ ಸಾಮಾಜಿಕ ಜೀವನ

ಪೌರಕಾರ್ಮಿಕ ವೃತ್ತಿಯನ್ನು ಕೆಳವರ್ಗದ ದಲಿತರೇ ಹೆಚ್ಚಾಗಿ ಮಾಡುತ್ತಿರುವುದು ಕಂಡುಬಂದಿದೆ. ಶೇಕಡಾ 75ರಷ್ಟು ಗುತ್ತಿಗೆ ಪೌರಕಾರ್ಮಿಕರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಗುಡಿಸಲು, ಜೊಪಡಿ, ಆಶ್ರಯ ಮನೆಗಳಲ್ಲಿ ನೆಲೆಸಿದ್ದಾರೆ. ಶೇಕಡಾ 87ರಷ್ಟು ಗುತ್ತಿಗೆ ಪೌರಕಾರ್ಮಿಕರು ವಿಭಕ್ತ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿರುತ್ತಾರೆ. ಶೇಕಡಾ 30ರಷ್ಟು ಗುತ್ತಿಗೆ ಪೌರಕಾರ್ಮಿಕರು ಸಮಾಜದ ಇತರೆ ಜನರು ಪೌರಕಾರ್ಮಿಕ ವೃತ್ತಿಯನ್ನು ಕೆಟ್ಟ ದೃಷ್ಟಿಕೋನದಿಂದ ನೋಡುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

### ➲ ಶೈಕ್ಷಣಿಕ ಸ್ಥಿತಿಗತಿಗಳು

ಕಡಿಮೆ ವೇತನ ಮತ್ತು ಬಡತನದ ಕಾರಣದಿಂದ ಗುತ್ತಿಗೆ ಪೌರಕಾರ್ಮಿಕರ ಮಕ್ಕಳು ಶಿಕ್ಷಣ ಪಡೆಯುವುದರಿಂದ ವಂಚಿತರಾಗುತ್ತಿರುವುದು ಕಂಡುಬಂದಿದೆ. ಗುತ್ತಿಗೆ ಪೌರಕಾರ್ಮಿಕರು ತಮಗೆ ಬರುತ್ತಿರುವ ವೇತನವು ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ ಹಾಗಾಗಿ ತಮ್ಮ ಮಕ್ಕಳ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ವ್ಯಾಪಾರ, ಕೂಲಿ ಇತರೆ ಉದ್ಯೋಗಗಳಿಗೆ ಕಳಿಸುತ್ತಿರುವುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಶೇಕಡಾ 60ರಷ್ಟು ಗುತ್ತಿಗೆ ಪೌರಕಾರ್ಮಿಕರು ಕೆಳಹಂತದ ಶಿಕ್ಷಣ ಅಂದರೆ ಪ್ರಾಥಮಿಕ ಶಿಕ್ಷಣವನಷ್ಟೇ ಪಡೆದಿದ್ದು ಶೇಕಡಾ 10ರಷ್ಟು ಗುತ್ತಿಗೆ ಪೌರಕಾರ್ಮಿಕರು ಪ್ರೌಢಶಾಲಾ ಶಿಕ್ಷಣವನ್ನು ಪಡೆದಿರುವುದು ಸಂಶೋಧನೆಯಲ್ಲಿ ಕಂಡುಬಂದಿದೆ, ಆದರೆ ಉನ್ನತ ಶಿಕ್ಷಣ ಮುಂದುವರಿಸಲು ವಿಫಲರಾಗಿದ್ದಾರೆ.

### ➲ ಆರ್ಥಿಕ ಸ್ಥಿತಿಗತಿಗಳು ಮತ್ತು ವೃತ್ತಿ ಸ್ವರೂಪ

ಶೇಕಡಾ 47.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಹತ್ತು ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಇದೇ ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿದ್ದಾರೆ. ಈ ಸಂಶೋಧನೆಯಲ್ಲಿ ಶೇಕಡಾ 62.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಚರಂಡಿ ಶುಚಿಗೊಳಿಸುವ ಕಾರ್ಯವನ್ನು ಮಾಡುತ್ತಿದ್ದು, ಶೇಕಡಾ 57.5ರಷ್ಟು ಗುತ್ತಿಗೆ ಪೌರಕಾರ್ಮಿಕರ ಕೂಲಿ ಅತ್ಯಂತ ಕಡಿಮೆ ಇದ್ದು, ಜೀವನ ನಿರ್ವಹಣೆಗೆ ಸಾಕಾಗದಿರುವ ಕೂಲಿಯನ್ನೇ ನಂಬಿಕೊಂಡಿರುವ ಗುತ್ತಿಗೆ ಪೌರಕಾರ್ಮಿಕರು ಅನೇಕ ತೊಂದರೆಗಳ ನಡುವೆಯೂ ಉಳಿತಾಯ ಮಾಡುವ ಮನೋಭಾವವನ್ನು ಹೊಂದಿದ್ದಾರೆ. ಆದರೆ ಆ ಉಳಿತಾಯಗಳನ್ನು ಅಸುರಕ್ಷಿತ ಚೀಟಿ ವ್ಯವಹಾರ, ಪಿಗ್ಮಿಗಳಲ್ಲಿ ತೊಡಗಿಸಿದ್ದಾರೆ. ಶೇಕಡಾ 85ರಷ್ಟು ಗುತ್ತಿಗೆ ಪೌರಕಾರ್ಮಿಕರು 100 ರಿಂದ 500 ರೂಪಾಯಿಗಳವರೆಗೆ ಉಳಿತಾಯ ಮಾಡುತ್ತಿರುವುದು ಸಂಶೋಧನೆಯಿಂದ ತಿಳಿದುಬಂದಿದೆ.

### ➲ ಆರೋಗ್ಯ ಪರಿಸ್ಥಿತಿಗಳು

ಪ್ರಸ್ತುತ ಸಂಶೋಧನೆಯಲ್ಲಿ ಶೇಕಡಾ 75ರಷ್ಟು ಗುತ್ತಿಗೆ ಪೌರಕಾರ್ಮಿಕರು ತಮ್ಮ ಆರೋಗ್ಯ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿರುವುದು ಕಂಡುಬಂದಿದೆ. ಶೇಕಡಾ 22.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಸುರಕ್ಷಿತ ಉಪಕರಣಗಳನ್ನು ಬಳಸದೇ ತಮ್ಮ ವೃತ್ತಿಯನ್ನು ನಿರ್ವಹಣೆ ಮಾಡುತ್ತಿರುವುದು ಕಂಡುಬಂದಿದೆ. ಶೇಕಡಾ 32.5ರಷ್ಟು ಗುತ್ತಿಗೆ ಪೌರಕಾರ್ಮಿಕರು ಬೆನ್ನು ನೋವಿನ ಸಮಸ್ಯೆಗೆ ಮತ್ತು ಶೇಕಡಾ 30ರಷ್ಟು ಗುತ್ತಿಗೆ ಪೌರಕಾರ್ಮಿಕರು ಚರ್ಮದ ಸಣ್ಣ ಪುಟ್ಟ ಅಲರ್ಜಿಗಳಿಗೆ ಒಳಗಾಗಿರುವುದು ಸಂಶೋಧನೆಯಲ್ಲಿ ದಾಖಲಾಗಿದೆ. ವೃತ್ತಿ ಜನ್ಯ ಕಾಯಿಲೆಗಳ ಜೊತೆಗೆ ಗುತ್ತಿಗೆ ಪೌರಕಾರ್ಮಿಕರು ಅನೇಕ ಮಾರಕ ಮಾದಕ ವಸ್ತುಗಳ ಸೇವನೆ ಮಾಡುತ್ತಿದ್ದು ದೈಹಿಕವಾಗಿ ಮತ್ತು ಮಾನಸಿಕವಾಗಿ ಅವರ ಆರೋಗ್ಯ ಅಪಾಯದ ಅಂಚಿನಲ್ಲಿದೆ.

## ಉಪಸಂಹಾರ

ಗುತ್ತಿಗೆ ಪೌರಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿದ್ದು, ಪೌರಕಾರ್ಮಿಕ ವೃತ್ತಿ ಸಮಾಜದ ಕಡೆಗಣಿತ ವೃತ್ತಿಗಳಲ್ಲೊಂದಾಗಿದೆ. ಸರ್ಕಾರ ಅನೇಕ ಕಾಯಿದೆಗಳನ್ನು ತಂದು ಗುತ್ತಿಗೆ ಪೌರಕಾರ್ಮಿಕರ ಜೀವನ ಮಟ್ಟ ಸುಧಾರಿಸಲು ಪ್ರಯತ್ನ ಪಟ್ಟಿದ್ದರೂ ಗುತ್ತಿಗೆ ಪೌರಕಾರ್ಮಿಕರ ಸ್ಥಿತಿಗತಿಗಳು ಇನ್ನೂ ದುಸ್ಥಿತಿಯಲ್ಲಿರುವುದು ಕಟು ವಾಸ್ತವ. ಸಾಮಾಜಿಕವಾಗಿ ಅನಾದರಕ್ಕೆ ಗುರಿಯಾಗಿರುವ ಈ ಸಮುದಾಯವನ್ನು ಸಾಮಾಜಿಕ ನ್ಯಾಯ ತತ್ವದ ಮೇಲೆ ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕಿದೆ. ಸರ್ಕಾರ ಮತ್ತು ಸಮಾಜ ಗುತ್ತಿಗೆ ಪೌರಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗೆ ಒತ್ತಾಸೆಯಾಗಿ ನಿಂತು ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಅವಶ್ಯಕತೆ ಇದೆ. ಈ ಸಂಶೋಧನೆಯು ಗುತ್ತಿಗೆ ಪೌರಕಾರ್ಮಿಕರ ಬದುಕನ್ನು ವಿಶ್ಲೇಷಿಸುವ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ಆ ಸಮುದಾಯದ ವಾಸ್ತವ ಚಿತ್ರಣವನ್ನು ತೆರೆದಿಡುವ ಪ್ರಯತ್ನ ನಡೆಸಿದೆ. ಗುತ್ತಿಗೆ ಪೌರಕಾರ್ಮಿಕ ವೃತ್ತಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮೊದಲಾದ ಜೀವನ ಆಯಾಮಗಳನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಲಾಗಿದೆ. ಬಹುಪಾಲು ಗುತ್ತಿಗೆ ಪೌರಕಾರ್ಮಿಕರ ಕುಟುಂಬಗಳು ವಂಶಪಾರಂಪಾರ್ಯವಾಗಿ ಈ ವೃತ್ತಿಯನ್ನೇ ಅನುಸರಿಸಿಕೊಂಡು ಬಂದಿವೆ. ಮಕ್ಕಳ ಶಿಕ್ಷಣಕ್ಕೆ ಇತ್ತೀಚಿನ ದಿನಗಳಲ್ಲಿ ಆದ್ಯತೆ ನೀಡುತ್ತಿದ್ದು, ವೃತ್ತಿ ಪಲ್ಲಟದ ನೀರಿಕ್ಷೆ ಆರಂಭವಾಗಿದೆ.

ಗುತ್ತಿಗೆ ವೃತ್ತಿಯನ್ನು ಖಾಯಂಗೊಳಿಸಬೇಕೆಂಬ ಬೇಡಿಕೆ ಬಹುದಿನಗಳಿಂದ ಕೇಳಿಬರುತ್ತಿದ್ದು ಅದರ ಕಡೆ ಗಂಭೀರ ಚಿಂತನೆ ನಡೆಸುವ ಜರೂರು ಅವಶ್ಯಕತೆ ಇದೆ. ಜಾರಿಯಲ್ಲಿರುವ ಕಾನೂನು, ಕಾಯಿದೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಗುತ್ತಿಗೆ ಪೌರಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಬೇಕಾಗಿದೆ. ನಗರ ಸ್ವಚ್ಛತೆಯ ಹರಿಕಾರ ಎಂದು ಕರೆಯುವ ಪೌರಕಾರ್ಮಿಕರು ಎದುರಿಸುವ ಸವಾಲುಗಳು ಗಂಭೀರವಾದವು. ಶಿಕ್ಷಣ ಮತ್ತು ಆರೋಗ್ಯದ ವಿಷಯಗಳಲ್ಲಿ ಗುತ್ತಿಗೆ ಪೌರಕಾರ್ಮಿಕರ ಮನೋಭಾವ ಬದಲಿಸುವುದರ ಜೊತೆಗೆ ಅವರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಮೂರು ಹೊತ್ತಿನ ಗಂಜಿಗೂ ಪರದಾಡಬೇಕಾದ ಅನಿವಾರ್ಯತೆ ಗುತ್ತಿಗೆ ಪೌರಕಾರ್ಮಿಕರ ಕುಟುಂಬಗಳಿಗಿದ್ದು, ಸಾಮಾಜಿಕ ಭದ್ರತೆಯ ಯೋಜನೆಗಳು ಈ ಕುಟುಂಬಗಳಿಗೆ ತಲುಪುವಂತಾಗಬೇಕಿದೆ. ಹೊಟ್ಟೆ ತುಂಬಿಸಿಕೊಳ್ಳಲು ಹುಟ್ಟಿದ ಊರು ಬಿಟ್ಟು ಪಟ್ಟಣದ ಕೊಳಗೇರಿ ಸೇರಿ ಊರ ಮಲವನ್ನೆಲ್ಲ ಬಾಚಿ ಸಾಫು ಮಾಡುವ ಜೀವಕ್ಕೆ ತನ್ನದೇ ಜೋಪಡಿಯ ಮುಂದಿನ ಚರಂಡಿಯಲ್ಲಿ ತನ್ನ ಬದುಕು ಕೊಚ್ಚಿ ಹೋಗದಂತೆ ಅಂಗೈಚಾಚಿ ಬೇಡಿಕೊಳ್ಳುವ ಗುತ್ತಿಗೆ ಪೌರಕಾರ್ಮಿಕನ ಗೋಳು ಆರ್ತನಾದವಾಗುವ ಮುಂಚೆ ಸಮಾಜ ಪರಿಹಾರ ಕಂಡುಕೊಳ್ಳಬೇಕಿದೆ.

## ಆಕರ ಗ್ರಂಥಗಳು


- **ಕೆ. ಎಂ. ಸತೀಶ್‌ಕುಮಾರ್** (2015) ಪೌರಕಾರ್ಮಿಕ ಮಹಿಳೆಯರು: ಒಂದು ಅಧ್ಯಯನ, ಪಿ.ಹೆಚ್.ಡಿ ಮಹಾಪ್ರಬಂಧ, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.
- **ಬಿಂದೇಶ್ವರ ಪಾಠಕ್**(1991) ರೋಡ್ ಆಫ್ ಫ್ರೀಢಂ ಎ ಸೋಯಾ ಲಾಜಿಕಲ್ ಸ್ಟಡಿ ಆನ್ ದ ಒಬ್ಲಿಗೇಷನ್ ಆಫ್ ಸ್ಕ್ಯಾವೆಂಜಿಂಗ್ ಇನ್ ಇಂಡಿಯಾ, ನವದೆಹಲಿ, ಜೈನೇಂದ್ರ ಪ್ರೆಸ್.
- **ಐ.ಪಿ.ಡಿ ಸಾಲಪ್ಪ** ವರದಿ (1976) ರಿಪೋರ್ಟ್ ಆಫ್ ದ ಕಮಿಟಿ ಆನ್ ಇಂಪಾರ್ಟೆಂಟ್ ಆಫ್ ಲಿವಿಂಗ್ ಅಂಡ್ ರೈಟಿಂಗ್ ಕಂಡೀಷನ್ಸ್ ಆಫ್ ಸ್ವೀಫರ್ ಆಫ್ ಸ್ಕ್ಯಾವೆಂಜರ್ಸ್.
- **ಟಿ.ಎಂ. ಡಾಕ್ ಡ್ರಾಫ್ಟ್ ರಿಪೋರ್ಟ್** (2007) ಇಂಪ್ಯಾಕ್ಟ ಆಫ್ ಸ್ಕೀಮ್ಸ್ ಆಫ್ ಟ್ರೈನಿಂಗ್ ಅಂಡ್ ರಿಹ್ಯಾಬಿಲಿಟೇಶನ್ ಅನ್ ಸೋಯೋ ಎಕಾನಾಮಿಕ್ ಇಂಪ್ರೋಮೆಂಟ್ ಆಫ್ ಸ್ಕ್ಯಾವೆಂಜರ್ಸ್ ಇನ್ ರಾಜಸ್ಥಾನ್, ಇನ್ಸಟಿಟ್ಯೂಷನ್ ಆಫ್ ಸೋಯಲ್ ಡೆವಲಪ್‌ಮೆಂಟ್.
- **ಅಪರಾಜಿತ ಬುಹ್ರಾ** (2014) ದಿ ಪ್ರಾವಿಬಿಷನ್ ಆಫ್ ಎಂಪ್ಲಾಯ್‌ಮೆಂಟ್ ಆಫ್ ಮ್ಯಾನುವಲ್ ಸ್ಕ್ಯಾವೆಂಜರ್ಸ್ ಅಂಟ್ ದೇರ್ ರಿಹ್ಯಾಬಿಲಿಟೇಶನ್ ಆಕ್ಟ್–2013 : ಎ ರಿವ್ಯೂ.
- **ಜ್ಞಾನಮಿತ್ರಾ ಭಿಮಸಾ ಮತ್ತು ಚಂದ್ರಕುಮಾರ್ ಬಿ. ಸೆಡಂಕರ್** (2013) ಮೆಷ್ಯರ್ಸ್ ಅಂಡ್ ಬ್ಯಾರಿಯರ್ಸ್ ಟು ಎಲಿಮಿನೇಷನ್ ಆಫ್ ಮ್ಯಾನುವಲ್ ಸ್ಕ್ಯಾವೆಂಜಿಂಗ್ ಇನ್ ಇಂಡಿಯಾ.
- **ರವಿಚಂದ್ರನ್ ಬಿ.** (2011) ಸ್ಕ್ಯಾವೆಂಜಿಂಗ್ ಪ್ರೋಫೇಷನ್ : ಬಿಟ್ವೀನ್ ಕ್ಲಾಸ್ ಅಂಡ್ ಕಾಸ್ಟ್.


■■

– 25ನೇ ಪುಟದಿಂದ ಮುಂದುವರೆದುದು

ಹೆಚ್ಚು ಶೌರ್ಯವಂತ ಎಂದು ತೋರಿಸಲು ಶಿಲ್ಪಿಯು ಹುಲಿಯನ್ನು ಸಿಂಹದ ರೀತಿ ಚಿತ್ರಿಸಿರಬಹುದು. (ಡಿ.ವಿ.ಪರಮಶಿವಮೂರ್ತಿ, *ಕನ್ನಡ ಶಾಸನಶಿಲ್ಪ*, ಹಂಪಿ, 1999, ಪು. 101) ಕಳ್ಳೀಹಾಳದಲ್ಲಿ ದೊರೆತಿರುವ ಹುಲಿಬೇಟೆ ವೀರಗಲ್ಲು ಅಜ್ಜಡಿ ವೀರನೋರ್ವ (ಹೆಸರು ತೃಟೀತಗೊಂಡಿದೆ) ಹುಲಿಯ ಮೇಲೆರಗಿ ಕೊಂದು ಮರಣ ಹೊಂದಿದ್ದಕ್ಕಾಗಿ ಆತನ ಕುಟುಂಬದವರಿಗೆ ಅಲ್ಲಿನ ಗೌಡ, ಹೆಗ್ಗಡೆ ಹಾಗೂ ಸಮಸ್ತ ಪ್ರಜೆಗಳು ಭೂಮಿಯನ್ನು ನೀಡಿದ್ದರ ಬಗ್ಗೆ ಉಲ್ಲೇಖಿಸಿದೆ. (ಸೌ.ಇಂ.ಇನ್ಸ. ಸಂ,18 ಕಳ್ಳಿಹಾಳ. ಶಾ.ಸಂ.254. ಕ್ರಿ.ಶ.1269–70 ) ಅದೆ ರೀತಿಯಾಗಿ ದೇವಗಿರಿಯಲ್ಲಿಯೂ ಇಂತಹ ಹುಲಿಬೇಟೆ ವೀರಗಲ್ಲನ್ನು ಕಾಣಬಹುದು.

## ಉಪಸಂಹಾರ

ಸಾವನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ಒಡೆಯನ ಉಪ್ಪಿನ ಋಣ ತೀರಿಸುವುದಕ್ಕಾಗಿ, ಸಮಾಜದ ಇಲ್ಲವೇ ರಾಜ್ಯದ ರಕ್ಷಣೆಗಾಗಿ ಕೆಚ್ಚೆದೆಯ ಹೋರಾಟ ನಡೆಸಿ ಮರಣೈಸುತ್ತಿದ್ದ, ವೀರರ ಆತ್ಮ ಸ್ಥೈರ್ಯವನ್ನು ಮೆಚ್ಚಬೇಕಾದದ್ದೆ. ಇಂತಹ ಹುತಾತ್ಮರ ಸ್ಮರಣೆ ಮಾಡಬೇಕಾದದ್ದು ಸಮಾಜದ ಕರ್ತವ್ಯ. ಅಂತಹ ವೀರರ ಸ್ಮರಣಾರ್ಥವಾಗಿ ಅಸ್ಥಿತ್ವಕ್ಕೆ ಬಂದಿರಬಹುದಾದ ವೀರಗಲ್ಲುಗಳು, ಆಯಾ ಕಾಲದ ಸಾಂಸ್ಕೃತಿಕ ಪ್ರತೀಕಗಳು. ಪ್ರಸ್ತುತ ಬಾಸವೂರು ಕಂಪಣದ ಪರಿಸರದಲ್ಲಿಯೂ ಯಥೇಚ್ಛವಾಗಿ ಕಂಡು ಬರುವ, ಅನಾದರಕ್ಕೆ ಒಳಗಾಗಿರುವ ವೀರಗಲ್ಲುಗಳ ಬಗ್ಗೆ ಜನಸಾಮಾನ್ಯರಿಗೆ ಈ ಮೂಲಕ ತಿಳುವಳಿಕೆ ಅಗತ್ಯವಾಗಿದೆ. ಆಯಾ ಪ್ರದೇಶದ ವೀರಗಲ್ಲುಗಳ ಬಗ್ಗೆ ಮೂಡುವ ತಿಳುವಳಿಕೆಯಿಂದ, ಅಲ್ಲಿನ ಜನರಲ್ಲಿ ತಮ್ಮ ಪೂರ್ವಜರ ಬಗ್ಗೆ ಗೌರವ, ಅಭಿಮಾನ ಮೂಡಲು ಸಾಧ್ಯ. ಆ ಮೂಲಕ ಪ್ರಾಚೀನ ವೀರರ ಶೌರ್ಯ, ತ್ಯಾಗ, ಬಲಿದಾನಗಳು ಇಂದಿನ ಯುವ ಜನಾಂಗಕ್ಕೆ ಸ್ಫೂರ್ತಿ ನೀಡಬಲ್ಲವು.

## ಆಕರ ಗ್ರಂಥಗಳು


- ***ಸೌಥ ಇಂಡಿಯನ ಇನಸ್ಕ್ರಿಪ್ಷನ್ಸ : 1988, ಸಂ,*** XVIII, ನ್ಯೂಡೆಲ್ಲಿ, 1975. ಸಂ. XX. ಡೆಲ್ಲಿ.
- **ಎಪಿಗ್ರಾಫಿಯಾ ಇಂಡಿಕಾ.** ಸಂ. XVI , 1921–22, ಹಾಗೂ XXXIV. 1959–60.
- **ಕಲಬುರ್ಗಿ. ಎಂ. ಎಂ.** *1980, ಸಮಾದಿ ಬಲಿದಾನ ವೀರಮರಣ ಶಾಸನಗಳು*, ಬೆಂಗಳೂರು, ಐಬಿಎಚ್ ಪ್ರಕಾಶನ.
- **ನಾಗಯ್ಯ ಜೆ. ಎಂ.** *1995, ಕಲಕೇರಿ*, ಕಲಕೇರಿ.
- **ಚಿದಾನಂದಮೂರ್ತಿ ಎಂ.** *1979, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು.
- **ಅಲ್ತೇಕರ ಎ. ಎಸ್.** *1934, ದಿ ರಾಷ್ಟ್ರಕೂಟಾಸ್ ಆಂಡ್ ದೇರ್ ಟೈಮ್ಸ*, ಪುಣೆ.
- **ಪರಮಶಿವಮೂರ್ತಿ ಡಿ.ವಿ** *1999, ಕನ್ನಡ ಶಾಸನ ಶಿಲ್ಪ*, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ಶೇಷಶಾಸ್ತ್ರಿ ಆರ್.** *1982, ಕರ್ನಾಟಕದ ವೀರಗಲ್ಲುಗಳು* , ಬೆಂಗಳೂರು.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಹಾರೂಗೇರಿ ಗ್ರಾಮ ಪಂಚಾಯತ್ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆ : ಒಂದು ಸಮಾಜಶಾಸ್ತ್ರಿಯ ಅಧ್ಯಯನ

✍ **ಕೆ.ಎಸ್. ಕಾಂಬಳೆ,** ಸಂಶೋಧನಾ ವಿದ್ಯಾರ್ಥಿ ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
✍ **ಡಾ. ಡಿ.ಆರ್. ಅಲಬಾಳ,** ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಸಮಾಜಶಾಸ್ತ್ರ ವಿಭಾಗ ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

## ಪೀಠಿಕೆ

ಪಂಚಾಯತ್ ರಾಜ್ ಮತ್ತು ಸರಕಾರೇತರ ಸಂಘಟನೆಗಳು ಗ್ರಾಮೀಣ ಅಭಿವೃದ್ಧಿ ಯೋಜನೆಗಳ ವಿಶಿಷ್ಟ ಸಾಧನೆಗಳಾಗಿವೆ. ಗ್ರಾಮ ಪಂಚಾಯತಿಗಳು ಭಾರತೀಯ ಹಳ್ಳಿಗಳ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಆಧಾರ ಸ್ತಂಭವಾಗಿದೆ. ವೇದಗಳ ಕಾಲದಿಂದಲೂ ಪ್ರತಿಯೊಂದು ಗ್ರಾಮದಲ್ಲಿ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿ ಇರುವುದನ್ನು ಕಾಣಬಹುದು. ಅಂತೇಯೇ ಜನಪ್ರಿಯ ಸಮಾಜಶಾಸ್ತ್ರಜ್ಞರಾದ ಕೆ.ಎಂ. ಫಣಿಕ್ಕರವರು **"ಪಂಚಾಯತಿಗಳು ಪ್ರಾಚೀನ ಭಾರತ ಇತಿಹಾಸದ ಶಾಶ್ವತವಾದ ಆಧಾರಗಳಿವೆ "** ಎಂದು ಅಭಿಪ್ರಾಯಪಟ್ಟಿದ್ದಾರೆ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು 1959ರಲ್ಲಿ ಜಾರಿಗೊಳಿಸಲಾಗಿದೆ. ಇದು ಗ್ರಾಮ, ತಾಲೂಕಾ ಮತ್ತು ಜಿಲ್ಲಾ ಮಟ್ಟಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂರು ಹಂತಗಳ ಸ್ಥಳೀಯ ಸರಕಾರದ ರಚನೆಯಾಗಿದೆ. ಪಂಚಾಯತ ರಾಜ್ ವ್ಯವಸ್ಥೆ ಪ್ರಜಾ ಪ್ರಭುತ್ವ ಸಂಸ್ಥೆ ಕ್ರಿ.ಶ 1959 ರಲ್ಲಿ ಮೊಟ್ಟ ಮೊದಲ ಬಾರಿಗೆ ರಾಜಸ್ಥಾನ ಮತ್ತು ಆಂದ್ರ ಪ್ರದೇಶ ರಾಜ್ಯಗಳಲ್ಲಿ ಜಾರಿಗೆ ಬಂತು. ನಂತರ ಆರು ವರ್ಷಗಳ ತರುವಾಯ ಜಮ್ಮು ಕಾಶ್ಮೀರ ಮತ್ತು ಕೇರಳ ರಾಜ್ಯಗಳನ್ನು ಬಿಟ್ಟರೆ ಉಳಿದೆಲ್ಲಾ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ಬಂದಿರುತ್ತದೆ.

## ಪಂಚಾಯತ ಪದದ ಅರ್ಥ

ಪಂಚಾಯತ್ ಎಂಬ ಪದವು ಪಂಚ + ಯತ ಎಂಬ ಪದಗಳಿಂದ ಕೂಡಿದೆ. **'ಪಂಚ'** ಎಂದರೆ ಸಂಸ್ಕೃತದಲ್ಲಿ **ಐದು** ಎಂದರ್ಥ ಮತ್ತು **'ಯತ'** ಅಂದರೆ ಆಳ್ವಿಕೆ ಎಂದರ್ಥ ಒಟ್ಟಾರೆಯಾಗಿ ಐದು ಜನರನ್ನು ಒಳಗೊಂಡ ಒಂದು ಆಳ್ವಿಕೆ ಸಮಿತಿಗೆ ಪಂಚಾಯತ ಎಂದು ಕರೆಯಲಾಗಿದೆ.

## ಪ್ರಾಚೀನ ಕಾಲದಲ್ಲಿ ಪಂಚಾಯತ ವ್ಯವಸ್ಥೆ

ಭಾರತದಲ್ಲಿ ಪಂಚಾಯತ್ ರಾಜ್‌ಗಳು ಪುರಾತನ ಪದ್ಧತಿಯ ಆಡಳಿತ ಘಟಕಗಳಾಗಿದ್ದವು. ಪ್ರಾಚೀನ ಕಾಲದಲ್ಲಿ ಗ್ರಾಮದ ಜನ ಸ್ವತಂತ್ರ್ಯ ಸ್ಥಾನಿಕ ಸ್ವರಾಜ್‌ದ ಸೌಲಭ್ಯಗಳನ್ನು ಪಡೆದಿದ್ದರು. ಗ್ರಾಮ ಪಂಚಾಯತಿಗಳು ಐದು ಜನ ಪಂಚರಿಂದ ಕೂಡಿದ ಘಟಕಗಳಾಗಿದ್ದವು. ಋಗ್ವೇಧ, ಮನುಸ್ಮೃರ್ತಿ, ಮಹಾಭಾರತ ಇತ್ಯಾದಿಗಳಲ್ಲಿ ಗ್ರಾಮ ಪಂಚಾಯತಿಯ ಉಲ್ಲೇಖ ಕಂಡು ಬಂದಿದೆ. ಈ ಪಂಚಾಯತಿಯಲ್ಲಿ ಸಾರ್ವಜನಿಕರಿಂದ ಬಂದ ದೂರುಗಳನ್ನು ಚರ್ಚಿಸಿ ಸೂಕ್ತ ಪರಿಹಾರ ನೀಡಲಾಗುತ್ತಿತ್ತು. ವಾಲ್ಮಿಕಿ ರಾಮಾಯಣವು **"ಘೋಷ"** ಮತ್ತು **"ಗ್ರಾಮ"** ಎಂದು ಎರಡು ರೀತಿಯ ಗ್ರಾಮ ಪಂಚಾಯತಿಗಳ ಬಗ್ಗೆ ವಿವರಿಸುತ್ತದೆ. **"ಘೋಷೆ"** ಎಂದರೆ ಚಿಕ್ಕ ಪಂಚಾಯತಿ ಹಾಗೂ **"ಗ್ರಾಮ"** ಅಂದರೆ **"ದೊಡ್ಡ ಪಂಚಾಯತಿ"** ಅವುಗಳ ಅಧಿಕಾರಿಗಳಿಗೆ **ಘೋಷೆ** ಮಹತ್ತರ ಮತ್ತು ಗ್ರಾಮ ಮಹತ್ತರ ಎಂದು ಕರೆಯಲಾಗುತ್ತಿತ್ತು. ರಾಮಾಯಣದಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಿಗೆ **'ಗ್ರಾಮೀಣ'** ಆಳ್ವಿಕೆಯ ಎಂದು ಕರೆಯುತ್ತಿದ್ದರು.

## ಬ್ರಿಟಿಷರ ಕಾಲದಲ್ಲಿ ಪಂಚಾಯತ್ ವ್ಯವಸ್ಥೆ

ಭಾರತದಲ್ಲಿ ಬ್ರಿಟಿಷರ ಆಡಳಿತ ಪ್ರಾರಂಭವಾದ ನಂತರ ಅವರು ತಮ್ಮ ಆಡಳಿತದ ಹಿತದೃಷ್ಟಿಯಿಂದಾಗಿ ಬಲಿಷ್ಠವಾದ ಕೇಂದ್ರ ಸರಕಾರವನ್ನು ಸ್ಥಾಪಿಸಿ ಅಧಿಕಾರವನ್ನು ಕೇಂದ್ರಿಕರಿಸಿದರು. ಬ್ರಿಟಿಷರ ಆಡಳಿತಕ್ಕಿಂತ ಮೊದಲು ಗ್ರಾಮ ಪಂಚಾಯತಿಗಳು, ಸ್ಥಳೀಯ ನ್ಯಾಯ ಪಂಚಾಯತಿಗಳಲ್ಲಿ ಗ್ರಾಮೀಣ ವಿವಾದಗಳನ್ನು ತಿರ್ಮಾನ ಮಾಡುತ್ತಿದ್ದರು. ಆದರೆ ಇವುಗಳ ಬದಲಾಗಿ ತಾಲೂಕಾ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಬ್ರಿಟಿಷ ನ್ಯಾಯಾಲಯಗಳ ಜಾಲ ಹುಟ್ಟಿಕೊಂಡಿತು.

1935 ರಲ್ಲಿ ಭಾರತ ಸರಕಾರದ ಕಾಯ್ದೆಯ ಸ್ಥಳೀಯ ಆಡಳಿತ ಸಂಸ್ಥೆಯನ್ನು ಬಲಗೊಳಿಸಲು ಈ ಕಾಯ್ದೆಯ ಅನುಕೂಲಕರವಾಗಿದ್ದರೂ ಸಹ–ಪ್ರಾಂತೀಯ ಸರಕಾರಗಳ ನಿರ್ಲಕ್ಷದಿಂದಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಪಂಚಾಯತರಾಜ್ ವ್ಯವಸ್ಥೆ ನಿಧಾನಗತಿಯಿಂದ ಬೆಳೆಯಿತು ಎಂಬ ಅಭಿಪ್ರಾಯವಿದೆ.

ಪಂಚಾಯತ ರಾಜ್ ಚಳುವಳಿಯು ಬಲವಂತ ರಾಯ್ ಮೆಹತ್ ಸಮಿತಿಯ ವರದಿಯ ನಂತರ ಪ್ರಾರಂಭವಾಯಿತು.

## ಬಲವಂತರಾಯ್ ಮೆಹತ್ ಸಮಿತಿ 1957

ಶ್ರೀಯುತ ಬಲವಂತರಾಯ್ ಮೆಹತ್‌ರವರು ಗುಜರಾತಿನ ಮಾಜಿ ಮುಖ್ಯಮಂತ್ರಿಯಾಗಿದ್ದರು. ಭಾರತದ ಯೋಜನಾ ಆಯೋಗವು 1957 ರಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳ ಯಶಸ್ಸುನ್ನು ಹಾಗೂ ಕಾರ್ಯ ವಿಧಾನಗಳನ್ನು ಅಧ್ಯಯಿನಿಸಲು ಶ್ರೀ ಬಲವಂತರಾಯ್ ಮೆಹತ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದರು. 1958 ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ (National Development Council) ಬಲವಂತರಾಯ್ ಮೆಹತ್ ಸಮಿತಿಯ ಶಿಫಾರಸ್ಸುಗಳನ್ನು ಸರಕಾರ ಅನುಮೋದಿಸಿತು. ಹಾಗೂ ಕೇಂದ್ರ ಸರಕಾರವು ಮೆಹ್ತಾ ಸಮಿತಿಯ ವರದಿಯ ಸಲಹೆಗಳ ಬಗ್ಗೆ ಆಯಾ ರಾಜ್ಯಗಳಿಗೆ ಆದೇಶ ನೀಡಿತು. ಆಂಧ್ರ ಪ್ರದೇಶ ಹಾಗೂ ರಾಜ್ಯಸ್ಥಾನ ಸರಕಾರಗಳು 1959 ರಲ್ಲಿ ಪಂಚಾಯತ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದ ರಾಜ್ಯಗಳಲ್ಲಿ ಪ್ರಥಮ ರಾಜ್ಯಗಳೆಂಬ ಹೆಗ್ಗಳಿಕೆಗೆ ಪಾತ್ರವಾದವು. ತದನಂತರ ಕರ್ನಾಟಕ, ತಮಿಳುನಾಡು ಹಾಗೂ ಆಸ್ಸಾಂ ರಾಜ್ಯಗಳಲ್ಲಿ 1960, ಮಹಾರಾಷ್ಟ್ರ, 1962 ಗುಜರಾತ, 1963 ಹಾಗೂ ಪಶ್ಚಿಮ ಬಂಗಾಳದಲ್ಲಿ 1964 ರಲ್ಲಿ ಪಂಚಾಯತ ರಾಜ್ಯ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು.

## ಮೈಸೂರು ಸಂಸ್ಥಾನದಲ್ಲಿ ಪಂಚಾಯತ ರಾಜ್ ವ್ಯವಸ್ಥೆ

1850 ರಲ್ಲಿ ಭಾರತ ಸರಕಾರದ 25 ನೇಯ ಅಧಿನೀಯಮ ಅಡಿಯಲ್ಲಿ 1862 ಹಿಂದೆಯೇ ಮೈಸೂರು ರಾಜ್ಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪೌರ ಸಮಿತಿಗಳ ಮೊದಲ ಪ್ರಯೋಗ ನಡೆಯಿತು. ಈ ಪ್ರಯೋಗದ ಯಶಸ್ಸಿನಿಂದ ಉತ್ತೇಜಿತವಾಗಿ 1864–65 ರ ವೇಳೆಗೆ ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಪೌರ ಸಮಿತಿಗಳನ್ನು ರಚಿಸಲಾಗಿತ್ತು.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮೈಸೂರು ನಗರದ ಅಭಿವೃದ್ಧಿಗಾಗಿ 1903 ರಲ್ಲಿ ಮೈಸೂರ ನಗರಾಭಿವೃದ್ಧಿ ಮಂಡಳಿಯನ್ನು ರಚಿಸಲಾಯಿತು. ಮತ್ತು ಕಾಳೆ ಸಮಿತಿ 1939 ರಲ್ಲಿ ಹಾಗೂ ವೆಂಕಟಪ್ಪ ಸಮಿತಿ 1949, ಮತ್ತು 1952 ರಲ್ಲಿ ಚಂದ್ರ ಶೇಖರಯ್ಯ ಸಮಿತಿಗಳು ಪಂಚಾಯತ ರಾಜ್ ವ್ಯವಸ್ಥೆ ಜಾರಿಯಾಗಬೇಕೆಂದು ತಮ್ಮ ಶಿಫಾರಸ್ಸುಗಳನ್ನು ಮಾಡಿದವು.

## ಕರ್ನಾಟಕ ಏಕೀಕರಣದ ನಂತರ ಪಂಚಾಯತ್ ರಾಜ್‌ವ್ಯವಸ್ಥೆ

ಕರ್ನಾಟಕದಲ್ಲಿ 1957 ರ ಬಲವಂತರಾಯ ಮೆಹತ್ತ್ ಸಮಿತಿಯ ವರದಿಯ ಅನ್ವಯ ಪಂಚಾಯತ ರಾಜ್ ಪದ್ಧತಿಯನ್ನು ಜಾರಿಗೊಳಿಸಲಾಯಿತು. 1958 ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಬಲವಂತರಾಯ ಮೆಹತಾ ಸಮಿತಿಯ ಶಿಪಾರಸ್ಸುಗಳನ್ನು ಅನುಮೊದಿಸಿತ್ತು ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳಿಯ ಮಂಡಳಿಗಳ ಕಾಯ್ದೆ 1959ರಲ್ಲಿ ಮೂರು ಹಂತಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರೂಪಿಸಿತು.

1. ಗ್ರಾಮ ಪಂಚಾಯತಿಗಳು
2. ತಾಲೂಕಾ ಅಭಿವೃದ್ಧಿ ಮಂಡಳಿಗಳು
3. ಜಿಲ್ಲಾ ಅಭಿವೃದ್ಧಿ ಮಂಡಳಿಗಳು

## 1983ರ ಪಂಚಾಯತ್ ರಾಜ್ ಕಾಯ್ದೆ

ಅಧಿಕಾರ ಪ್ರಜಾ – ಸತ್ತಾತ್ಮಕ ವಿಕೇಂದ್ರಿಕರಣ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಹೊತ್ತಿರುವ ಪಂಚಾಯತ್ ರಾಜ್ ಸಂಸ್ಥೆಯು ತುಂಬಾ ಉಪಯುಕ್ತವಾದದ್ದು ಅಶೋಕ ಮೆಹ್ತಾ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಅಧಿಕಾರದ ವಿಕೇಂದ್ರಿಕರಣವನ್ನು ಮಾಡುವುದಕ್ಕಾಗಿ ಅಂದಿನ ಜನತಾ ಸರಕಾರದಲ್ಲಿ ಅಂದಿನ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ಗ್ರಾಮಾಭಿವೃದ್ಧಿಯ ಸಚಿವರಾಗಿದ್ದ ಅಬ್ದುಲ್ ನಜೀರಸಾಬ್ ಅವರು 1983ರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದರು. ಮೊದಲಿದ್ದ ಮೂರು ಸ್ತರಗಳ ಪಂಚಾಯತ್ ವ್ಯವಸ್ಥಯ ಬದಲಾಗಿ ಎರಡು ಸ್ತರದ ಅಂದರೆ ಮಂಡಲ ಪಂಚಾಯತ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಜಾರಿಗೆ ತಂದರು.

## 1993 ರ ಹೊಸ ಪಂಚಾಯತಿ ರಾಜ್ ಕಾಯ್ದೆ

1993ರ ಕರ್ನಾಟಕ ಪಂಚಾಯತ ರಾಜ್ ಅಧಿನಿಯಮವು ಪರಿಶಿಷ್ಠ ಜಾತಿ, ಪಂಗಡ ವರ್ಗ, ದುರ್ಬಲ ವರ್ಗ ಮತ್ತು ಮಹಿಳೆಯರ ಮಿಸಲಾತಿಯ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಪರಿಶಿಷ್ಟ\ಜಾತಿಗೆ ಶೇ.15 ರಷ್ಟು, ಪರಿಶಿಷ್ಟ ಪಂಗಡಕ್ಕೆ ಶೇ03% ರಷ್ಟು ಮತ್ತು ಮಹಿಳೆಯರಿಗೆ ಶೇ 25ರಷ್ಟು ಮೀಸಲಾತಿಯನ್ನು ರಾಷ್ಟ್ರ ಮಟ್ಟದಲ್ಲಿ ಮೊದಲ ಬಾರಿಗೆ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಅವಕಾಶವನ್ನು ಕಲ್ಪಿಸಲಾಯಿತು.

## ಅಧ್ಯಯನದ ಉದ್ದೇಶಗಳು

"ಗ್ರಾಮ ಪಂಚಾಯತ್ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯನ್ನು ತಿಳಿದುಕೊಳ್ಳವದು

## ಸಂಶೋಧನಾ ಅಧ್ಯಯನ ವಿಧಾನ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಾರೂಗೇರಿ ಗ್ರಾಮ ಪಂಚಾಯತ್ ಸದಸ್ಯರ ಅಧ್ಯಯನಕ್ಕಾಗಿ ಪೂರ್ವ ನಿಧಾರಿತ ಪ್ರಶ್ನೆ ಮಾಲಿಕೆಯ ಸಂದರ್ಶನ ಅನೂಸೂಚಿಯಲ್ಲಿ ಮಾಹಿತಿಯನ್ನು ಸಂಗ್ರಹ ಮಾಡುವುದಕ್ಕೆ ಉತ್ತಮವಾದ ಸಾಧನವೆಂದು ತಿರ್ಮಾನಿಸಲಾಯಿತು. ಇದು ಗ್ರಾಮ ಪಂಚಾಯತ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯನ್ನು ಕುರಿತಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಅಧ್ಯಯನ ಕ್ಷೇತ್ರದ ಆಯ್ಕೆ

ಬೆಳಗಾವಿ ಜಿಲ್ಲೆಯು ಒಟ್ಟು 10 ತಾಲೂಕುಗಳನ್ನು ಒಳಗೊಂಡ ಜಿಲ್ಲೆಯಾಗಿದೆ. ಈ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿ ಒಟ್ಟು 33 ಗ್ರಾಮ ಪಂಚಾಯತಿಗಳಿವೆ. ಹಾಗೂ ತಾಲೂಕಿನ ಒಟ್ಟು ಸದಸ್ಯರ ಸಂಖ್ಯೆ 795. ಇದ್ದು ಇದರಲ್ಲಿ ಹಾರೂಗೇರಿ ಗ್ರಾಮ ಪಂಚಾಯತಿಯನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡು ಈ ಪಂಚಾಯತಿಯು ಒಟ್ಟು 72 ಸದಸ್ಯರನ್ನು ಹೊಂದಿದ್ದು, ಈ ಒಂದು ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಇವರಿಂದ ಸಂಗ್ರಹಿಸಲಾಗಿದೆ.

## ಮಾಹಿತಿ ಮೂಲ ಆಧಾರ

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಗ್ರಾಮ ಪಂಚಾಯತ ಸದಸ್ಯರಿಂದ ಪಡೆದ ಮಾಹಿತಿಯ ಜೊತೆಗೆ ಅನುಷಂಗಿಕ ಮಾಹಿತಿಯನ್ನು ಗೆಝೆಟರಿಯನ್, ನಿಯತಕಾಲಿಕೆಯಿಂದ, ಪ್ರಬಂಧಗಳಿಂದ, ಪುಸ್ತಕಗಳಿಂದ, ಜನಗಣತಿ ವರದಿಗಳಿಂದ ಹಾಗೂ ವೃತ್ತ ಪತ್ರಿಕೆಗಳಿಂದ ಮತ್ತು ಅಂತರ್ಜಾಲದಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು

## ತಂತ್ರ ರಚಿತ ಸಂದರ್ಶನ ತಪಶೀಲು

ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಕಲೆಹಾಕಲು **"ರಚಿತ ಸಂದರ್ಶನ ತಪಶೀಲು"** ಪ್ರಮುಖ ತಂತ್ರವನ್ನಾಗಿ ಬಳಸಿಕೊಳ್ಳಲಾಯಿತು. ಸಂಗ್ರಹಿಸಿದಂತಹ ಮಾಹಿತಿಯು ಬಹಳಷ್ಟು ಸೂಕ್ತ ಹಾಗೂ ವಸ್ತುನಿಷ್ಠವಾಗಿರುವಂತೆ ರಚಿತ ಸಂದರ್ಶನ ತಪಶೀಲನ್ನು ತುಂಬಾ ಮುತುವರ್ಜಿಯಿಂದ ಸಿದ್ದಪಡಿಸಲಾಯಿತು.

## ಅಧ್ಯಯನದ ವ್ಯಾಪ್ತಿ ಮತ್ತು ಇತಿ – ಮಿತಿಗಳು

ಪ್ರಸ್ತುತ ಅಧ್ಯಯನವು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಾರೂಗೇರಿ ಗ್ರಾಮ ಪಂಚಾಯತಿಯ ಸದಸ್ಯರಿಗೆ ಮಾತ್ರ ಸೀಮಿತವಾಗಿದೆ. ಸದರಿ ಗ್ರಾಮ ಪಂಚಾಯತಿಯಲ್ಲಿ ಒಟ್ಟು 72 ಸದಸ್ಯರಿದ್ದು, ಅವರೆಲ್ಲರನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡು, ಸದರಿ ಸದಸ್ಯರನ್ನು ಬೇಟ್ಟಿಯಾಗಿ ಸಂದರ್ಶಿಸುವ ಮೂಲಕ ಅವರಿಂದ ಮಾಹಿತಿಯನ್ನು ಪಡೆಯಲಾಯಿತು.

## ಗ್ರಾಮ ಪಂಚಾಯತ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆ

ಸಮಾಜಶಾಸ್ತ್ರೀಯ ಸಂಶೋಧನೆ ಅಧ್ಯಯನದಲ್ಲಿ ಮಾಹಿತಿದಾರರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯು ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದವರ ಸಮಗ್ರ ಪರಿಚಯವಿಲ್ಲದೆ ಅವರ ಬಗ್ಗೆ ಯಾವುದೇ ರೀತಿಯಾದ ಹೇಳಿಕೆ ನೀಡಲು ಬರುವುದಿಲ್ಲ. ಸಾಮಾನ್ಯವಾಗಿ ಮಾಹಿತಿದಾರರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯು ಅವರ ಜೀವನ ಮಟ್ಟವನ್ನು ನಿರ್ಧರಿಸುತ್ತದೆ. ಅಂದರೆ ಮಾಹಿತಿದಾರರ ಆಚಾರ ವಿಚಾರಗಳು, ಉಡುಗೆ ತೊಡಗೆಗಳು ಅವರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯಿಂದ ನಿರ್ಧರಿಸುತ್ತದೆ. ಆದ್ದರಿಂದ ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಒಳಪಟ್ಟ ಮಾಹಿತಿದಾರರ ಸಾಮಾಜಿಕ ಆರ್ಥಿಕ ಹಿನ್ನಲೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ–01 : ಮಾಹಿತಿದಾರರ ಲಿಂಗಗಳ ವರ್ಗೀಕರಣ**

| ಕ್ರ.ಸಂ. | ಲಿಂಗಗಳು | ಒಟ್ಟು | ಶೇಕಡವಾರು |
|---|---|---|---|
| 01. | ಪುರುಷರು | 47 | 65.28% |
| 02. | ಮಹಿಳೆಯರು | 25 | 34.72% |
| | ಒಟ್ಟು | 72 | 100% |

ಗ್ರಾಮ ಪಂಚಾಯತ್ ಸದಸ್ಯರ ಲಿಂಗಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ. ಪ್ರತಿಶತ 65.28 ರಷ್ಟು ಗ್ರಾಮ ಪಂಚಾಯತ ಸದಸ್ಯರು ಪುರುಷರಾಗಿದ್ದಾರೆ. ಅದರಂತೆ 34.72% ರಷ್ಟು ಮಹಿಳಾ ಸದಸ್ಯರಾಗಿರುತ್ತಾರೆ.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೆನೆಂದರೆ, ಗ್ರಾಮ ಪಂಚಾಯತ್ ಸದಸ್ಯರಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸದಸ್ಯರು ಪುರುಷರಾಗಿದ್ದಾರೆ. ಅಂದರೆ ಇದರಿಂದ ನಮಗೆ ತಿಳಿದು ಬರುವ ವಿಶೇಷ ಸಂಗತಿ ಏನೆಂದರೆ, ಇಂದಿನ ಆಧುನಿಕ ಕಾಲದಲ್ಲಿಯೂ ಸಹ ಪುರುಷರೆ ಪ್ರತಿಯೊಂದು ಕ್ಷೇತ್ರದಲ್ಲಿಯು ಪ್ರಬಲರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

**ಕೋಷ್ಟಕ – 02 : ಮಾಹಿತಿದಾರರ ವಯಸ್ಸಿನ ವರ್ಗೀಕರಣ**

| ಕ್ರ.ಸಂ. | ವಯಸ್ಸು | ಒಟ್ಟು | ಶೇಕಡವಾರು |
|---|---|---|---|
| 1. | 21–30 | 21 | 29.16% |
| 2. | 31–40 | 30 | 41.66% |
| 3. | 41–50 | 15 | 20.84% |
| 4. | 50 ವರ್ಷ ಮೆಲ್ಪಟ್ಟವರು | 06 | 08.34% |
| | ಒಟ್ಟು | 72 | 100% |

**ಗ್ರಾಮ ಪಂಚಾಯತ್ ಸದಸ್ಯರ ವಯಸ್ಸಿನ ಬಗ್ಗೆ ವಿವರಣೆಯ ಬಗ್ಗೆ ವಿವರಣೆಯನ್ನು ನೀಡುತ್ತದೆ.**

ಗ್ರಾಮ ಪಂಚಾಯತ್ ಒಟ್ಟು ಸದಸ್ಯರಲ್ಲಿ ಪ್ರತಿಶತ 29.16 ರಷ್ಟು ಪಂಚಾಯತ ಸದಸ್ಯರು 21ರಿಂದ31 ವಯಸ್ಸಿನವರಾಗಿದ್ದಾರೆ. ಅದರಂತೆ 41.66 ರಷ್ಟು ಮಾಹಿತಿದಾರರು 31ರಿಂದ40 ವಯಸ್ಸಿನವರಾಗಿದ್ದಾರೆ. 20.84% ಮಾಹಿತಿದಾರರು 41ರಿಂದ50 ವಯಸ್ಸಿನವರಾಗಿದ್ದಾರೆ. ಹಾಗೆಯೇ ಪ್ರತಿಶತ 08.34 ರಷ್ಟು ಮಾಹಿತಿದಾರರು 50 ವರ್ಷ ಮೇಲ್ಪಟ್ಟವರು ವಯಸ್ಸಿನವರಾಗಿದ್ದಾರೆ ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಈ ಮೇಲಿನ ಅಂಕಿ – ಅಂಶಗಳ ವಿವರಣೆಯಿಂದ ತಿಳಿದು ಬರುವುದೇನೆಂದರೆ. ಸದರಿ ಗ್ರಾಮ ಪಂಚಾಯತ ಒಟ್ಟು ಸದಸ್ಯರಲ್ಲಿ ಪ್ರತಿಶತ 41.66 ರಷ್ಟು ಸದಸ್ಯರು 31ರಿಂದ 40 ವಯಸ್ಸಿನವರಾಗಿದ್ದಾರೆ ಎಂದು ತಿಳಿದು ಬಂದಿದೆ.

**ಕೋಷ್ಟಕ – 03 : ಮಾಹಿತಿದಾರರ ಜಾತಿಗಳ ವಿವರ**

| ಕ್ರ.ಸಂ. | ಜಾತಿಗಳ ವಿವರ | ಒಟ್ಟು | ಶೇಕಡವಾರು |
|---|---|---|---|
| 1. | ಕುರುಬರು | 20 | 27.79 % |
| 2. | ಜೈನರು | 13 | 18.05 % |
| 3. | ಲಿಂಗಾಯತರು | 17 | 23.62 % |
| 4. | ಪರಿಶಿಷ್ಟಜಾತಿ/ಜನಾಂಗ | 16 | 22.22 % |
| 5. | ಮುಸ್ಲಿಂರು | 04 | 5.55 % |
| 6. | ಇತರೆ | 02 | 2.77 % |
| | ಒಟ್ಟು | 72 | 100 % |

ಗ್ರಾಮ ಪಂಚಾಯತ ಸದಸ್ಯರ ವಿವಿಧ ಜಾತಿಗಳ ಬಗ್ಗೆ ವಿವರಣೆ ನೀಡುತ್ತದೆ. ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರ ಶೇ 27.79% ಸದಸ್ಯರು ಕುರುಬ ಜಾತಿಗೆ ಸೇರಿದ್ದಾರೆ. ಪ್ರತಿಶತ 18.05 ಸದಸ್ಯರು ಜೈನ ಸಮುದಾಯದವರು, ಶೇ 23.62 ರಷ್ಟು ಸದಸ್ಯರು ಲಿಂಗಾಯತರು, ಪ್ರತಿಶತ 22.22 ರಷ್ಟು ಸದಸ್ಯರು ಪರಿಶಿಷ್ಟ ಜಾತಿ ಜನಾಂಗದವರು, ಪ್ರತಿಶತ 05.55 ರಷ್ಟು ಸದಸ್ಯರು ಮುಸ್ಲಿಂರು, ಹಾಗೂ ಶೇ 02.77 ರಷ್ಟು ಇತರೆ ಜನಾಂಗಕ್ಕೆ ಸೇರಿದ್ದವರಾಗಿದ್ದಾರೆ.

ಈ ಮೇಲಿನ ಅಂಕಿ– ಅಂಶಗಳನ್ನು ಪರಿಶೀಲಿಸಿದಾಗ ಗ್ರಾಮ ಪಂಚಾಯತ ಸದಸ್ಯರಲ್ಲಿ ಕುರುಬ ಜನಾಂಗ ಮತ್ತು ಲಿಂಗಾಯತರು ಹಾಗೂ ಪರಿಶಿಷ್ಟ/ಜಾತಿ ಮತ್ತು ಜನಾಂಗದವರು ಹೆಚ್ಚು ಪ್ರಭಾವಶಾಲಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

**ಕೋಷ್ಟಕ – 04 : ಮಾಹಿತಿದಾರರ ವೈವಾಹಿಕ ಸ್ಥಾನ – ಮಾನಗಳ ವರ್ಗೀಕರಣ**

| ಕ್ರ.ಸಂ. | ವೈವಾಹಿಕ ಸ್ಥಾನ ಮಾನ | ಒಟ್ಟು | ಶೇಕಡವಾರು |
|---|---|---|---|
| 1. | ವಿವಾಹಿತರು | 55 | 76.38 % |
| 2. | ಅವಿವಾಹಿತರು | 09 | 12.51 % |
| 3. | ವಿಧವೆಯರು | 08 | 11.11 % |
| 4. | ಪ್ರತ್ಯೇಕತೆ | – | – |
| | ಒಟ್ಟು | 72 | 100 % |

ಗ್ರಾಮ ಪಂಚಾಯತ ಸದಸ್ಯರ ವೈವಾಹಿಕ ಸ್ಥಾನ ಮಾನಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ. ಗ್ರಾಮ ಪಂಚಾಯತಿಯ ಒಟ್ಟು **72** ಸದಸ್ಯರಲ್ಲಿ ಅಂದರೆ ಶೇಕಡಾವಾರು 76.38 ರಷ್ಟು ಸದಸ್ಯರು ವಿವಾಹಿತರಾಗಿದ್ದಾರೆ, ಆದರೆ ಪ್ರತಿಶತ 12.51 ರಷ್ಟು ಸದಸ್ಯರು ಅವಿವಾಹಿತರಾಗಿದ್ದಾರೆ. ಆದರೆ ಕೇವಲ ಅಂದರೆ ಪ್ರತಿಶತ 11.11 ರಷ್ಟು ಸದಸ್ಯರು ಮಾತ್ರ ವಿಧವೆಯರಾಗಿದ್ದಾರೆ ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಈ ಮೇಲಿನ ಅಂಕಿ – ಅಂಶಗಳನ್ನು ನೋಡಿದಾಗ ಕಡಿಮೆ ಪ್ರಮಾಣದ ಅವಿವಾಹಿತರು ಮತ್ತು ವಿಧವೆಯರು ಕಂಡು ಬಂದಿದ್ದು, ಇವರು ಸಮಾಜ ಸೇವೆಗಾಗಿ ಈ ಕ್ಷೇತ್ರವನ್ನು ಪ್ರವೇಶಿಸಿರುವುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮ ಪಂಚಾಯತ ಸದಸ್ಯರು ಹೆಚ್ಚಿನವರು ವಿವಾಹಿತವಾಗಿರುವುದು ಕಂಡು ಬಂದಿದೆ. ಕಾರಣ ಹಿಂದು ವಿವಾಹವು ಒಂದು ಪವಿತ್ರ ಬಂಧಿನವಾಗಿದ್ದು, ಮೋಕ್ಷ ಪಡೆಯಲು ಇದು ಸಹಕಾರಿಯಾಗಿದೆ ಎಂಬ ನಂಬಿಕೆ ಸದಸ್ಯರಲ್ಲಿ ಇದು ಅಚಲವಾಗಿದೆ.

**ಕೋಷ್ಟಕ – 05 : ಮಾಹಿತಿದಾರರ ಶೈಕ್ಷಣಿಕ ಮಟ್ಟದ ವರ್ಗೀಕರಣ**

| ಕ್ರ.ಸಂ. | ಶೈಕ್ಷಣಿಕ ವಿವರ | ಒಟ್ಟು | ಶೇಕಡವಾರು |
|---|---|---|---|
| 1. | ಅನಕ್ಷರಸ್ಥರು | 09 | 12.50 % |
| 2. | ಪ್ರಾಥಮಿಕ ಶಿಕ್ಷಣ | 20 | 27.77 % |
| 3. | ಪ್ರೌಢ ಶಿಕ್ಷಣ | 14 | 19.44 % |
| 4. | ಪ.ಪೂ. ಶಿಕ್ಷಣ | 15 | 20.84 % |
| 5. | ಪದವಿ ಶಿಕ್ಷಣ | 12 | 16.67 % |
| 6. | ಸ್ನಾತಕೋತ್ತರ ಪದವಿ | 02 | 02.78 % |
| 7. | ಇತರೆ | – | – |
| | ಒಟ್ಟು | 72 | 100 % |

ಗ್ರಾಮ ಪಂಚಾಯತ ಸದಸ್ಯರ ಶೈಕ್ಷಣಿಕ ಅರ್ಹತೆಯ ಬಗ್ಗೆ ವಿವರಣೆಯನ್ನು ನೀಡುತ್ತದೆ. ಗ್ರಾಮ ಪಂಚಾಯತಿಯು ಒಟ್ಟು 72

ಸದಸ್ಯರಲ್ಲಿ ಅಂದರೆ ಪ್ರತಿಶತ 12.50 ರಷ್ಟು ಸದಸ್ಯರು ಅನಕ್ಷರಸ್ಥರಾಗಿದ್ದಾರೆ. ಪ್ರತಿಶತ 27.77/– ರಷ್ಟು ಸದಸ್ಯರು ಪ್ರಾಥಮಿಕ ಶಿಕ್ಷಣ, ಪ್ರತಿಶತ 19.44 ರಷ್ಟು ಪ್ರೌಢ ಶಿಕ್ಷಣ ಪ್ರತಿಶತ 20.84 ರಷ್ಟು ಸದಸ್ಯರು ಪದವಿ ಪೂರ್ವ ಶಿಕ್ಷಣ, ಪ್ರತಿಶತ 16.67 ರಷ್ಟು ಸದಸ್ಯರು ಪದವಿ ಶಿಕ್ಷಣ, ಪ್ರತಿಶತ 02.78 ರಷ್ಟು ಸದಸ್ಯರು ಸ್ನಾತಕೋತ್ತರ ಶಿಕ್ಷಣ ಪಡೆದುಕೊಂಡಿದ್ದಾರೆ ಎಂಬುವುದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಈ ಅಂಕಿ – ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಸಂಖ್ಯೆಯ ಸದಸ್ಯರು ಪ್ರಾಥಮಿಕ ಶಿಕ್ಷಣವನ್ನು ಹೊಂದಿದವರಾಗಿದ್ದಾರೆ. ಏಕೆಂದರೆ, ಪ್ರಾಥಮಿಕ ಶಿಕ್ಷಣವು ಕಡ್ಡಾಯ ಮತ್ತು ಉಚಿತವಾಗಿರುವುದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದು ಈ ಅಧ್ಯಯನದಿಂದ ಸ್ಪಷ್ಟವಾಗಿದೆ.

**ಕೋಷ್ಟಕ – 06 : ಮಾಹಿತಿದಾರರ ವೃತ್ತಿಗಳ ವರ್ಗೀಕರಣ**

| ಕ್ರ.ಸಂ. | ವೃತ್ತಿಗಳು | ಒಟ್ಟು | ಶೇಕಡವಾರು |
|---|---|---|---|
| 1. | ರೈತರು | 17 | 23.61 % |
| 2. | ಕೃಷಿ ಕಾರ್ಮಿಕರು | 08 | 11.11 % |
| 3. | ವ್ಯಾಪಾರಸ್ಥರು | 21 | 29.16 % |
| 4. | ಮನೆಗೆಲಸ ಮತ್ತು ಕೂಲಿ | 15 | 20.85 % |
| 5. | ಗುಡಿ ಕೈಗಾರಿಕೆ | 05 | 06.94 % |
| 6. | ಸಮಾಜ ಸೇವೆ | 06 | 08.33 % |
| | ಒಟ್ಟು | 72 | 100 % |

ಈ ಮೇಲಿನ ಕೋಷ್ಟಕ ವಿಶ್ಲೇಷಣೆಯಿಂದ ತಿಳಿದು ಬರುವು ದೇನೆಂದರೆ, ಗ್ರಾಮ ಪಂಚಾಯತ ಸದಸ್ಯರಿಗೆ ಸಂಬಂಧಿಸಿದಂತೆ ಅಧಿಕ ಪ್ರಮಾಣದ ಸದಸ್ಯರು ಅಂದರೆ 29.16 ರಷ್ಟು ಸದಸ್ಯರು ವ್ಯಾಪಾರಸ್ಥರಿದ್ದಾರೆ. ನಂತರ ಅಂದರೆ ಶೇಕಡಾ 23.61 ರಷ್ಟು ಸದಸ್ಯರು ರೈತರಾಗಿದ್ದಾರೆ. ಹಾಗೆಯೇ ಶೇಕಡಾ 20.85 ರಷ್ಟು ಸದಸ್ಯರು ಮನೆಗೆಲಸ ಮತ್ತು ಕೂಲಿಯನ್ನು ಮಾಡುವವರಾಗಿದ್ದಾರೆ. ಶೇಕಡಾ 11.11 ರಷ್ಟು ಸದಸ್ಯರು ಕೃಷಿ ಕಾರ್ಮಿಕರಾಗಿದ್ದಾರೆ. ಶೇಕಡಾ 08.33 ರಷ್ಟು ಸದಸ್ಯರು ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. 06.94 ರಷ್ಟು ಸದಸ್ಯರು ಗುಡಿ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ.

ಈ ಮೇಲಿನ ಅಂಕಿ – ಅಂಶಗಳನ್ನು ನೋಡಿದಾಗ ಹೆಚ್ಚು ಸದಸ್ಯರು ವ್ಯಾಪಾರಸ್ಥರಾಗಿರುವುದು ಕಂಡು ಬಂದಿದೆ. ಕಾರಣ ಈ ಪ್ರದೇಶದಲ್ಲಿ ಹೆಚ್ಚಾಗಿ ಮೂಲ ವ್ಯಾಪಾರಸ್ಥರು ಇರುವುದರಿಂದ ಈ ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

**ಕೋಷ್ಟಕ–07 : ಮಾಹಿತಿದಾರರ ಕುಟುಂಬಗಳ ಸ್ವರೂಪದವರ್ಗೀಕರಣ**

| ಕ್ರ.ಸಂ. | ಕುಟುಂಬದ ಸ್ವರೂಪ | ಒಟ್ಟು | ಶೇಕಡವಾರು |
|---|---|---|---|
| 1. | ಅವಿಭಕ್ತ ಕುಟುಂಬ | 18 | 25.00 % |
| 2. | ವಿಭಕ್ತ ಕುಟುಂಬ | 54 | 75.00 % |
| | ಒಟ್ಟು | 72 | 100 % |

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಗ್ರಾಮ ಪಂಚಾಯತಿಯ ಒಟ್ಟು 72 ಸದಸ್ಯರಲ್ಲಿ ಶೇ 25.00 ರಷ್ಟು ಸದಸ್ಯರು ಅವಿಭಕ್ತ ಕುಟುಂಬದಿಂದ, ಶೇ 75.00 ರಷ್ಟು ಸದಸ್ಯರು ವಿಭಕ್ತ ಕುಟುಂಬದಿಂದ ಬಂದಿದ್ದಾರೆ.

ಈ ಮೇಲಿನ ಅಂಕಿ – ಅಂಶಗಳನ್ನು ಗಮನಿಸಿದರೆ, ಅಧಿಕ ಸಂಖ್ಯೆಯ ಸದಸ್ಯರು ವಿಭಕ್ತ ಕುಟುಂಬದಲ್ಲಿ ವಾಸಿಸುತ್ತಾರೆ. ಕಾರಣ ಕೈಗಾರಿಕರಣ, ನಗರಿಕರಣ, ಶಾಸನಗಳ ಪ್ರಭಾವದಿಂದ ಸದಸ್ಯರು ಪ್ರತ್ಯಕವಾಗಿ ವಾಸಿಸಲು ಬಯಸುತ್ತಾರೆ. ಎಂದು ಅಧ್ಯಯನದಿಂದ ತಿಳಿದು ಬಂದಿದೆ.

**ಕೋಷ್ಟಕ–08 : ಮಾಹಿತಿದಾರರ ಮನೆಗಳ ಸ್ವರೂಪದ ವರ್ಗೀಕರಣ**

| ಕ್ರ.ಸಂ. | ಮನೆಯ ಸ್ವರೂಪ | ಒಟ್ಟು | ಶೇಕಡವಾರು |
|---|---|---|---|
| 1. | ಗುಡಿಸಲು | 0.2 | 02.78 % |
| 2. | ಹಂಚಿನ ಮನೆ | 32 | 44.44 % |
| 3. | ಆರ್.ಸಿ.ಸಿ. ಕಟ್ಟಡ | 38 | 52.78 % |
| | ಒಟ್ಟು | 72 | 100 % |

ಗ್ರಾಮ ಪಂಚಾಯಿತಿಯ ಸದಸ್ಯರ ಮನೆಯ ಸ್ವರರೂಪದ ಬಗ್ಗೆ ವಿಶ್ಲೇಷಣೆಯನ್ನು ನೀಡುತ್ತದೆ. ಗ್ರಾಮ ಪಂಚಾಯತಿಯ ಒಟ್ಟು 72 ಸದಸ್ಯರಲ್ಲಿ ಪ್ರತಿ ಶತ 02.78 ರಷ್ಟು ಸದಸ್ಯರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಪ್ರತಿಶತ 44.44 ರಷ್ಟು ಸದಸ್ಯರು ಹಂಚಿನ ಮನೆಗಳಲ್ಲಿ ನೆಲೆಸಿದ್ದಾರೆ. ಪ್ರತಿಶತ 52.78 ರಷ್ಟು ಸದಸ್ಯರು ಆರ್.ಸಿ.ಸಿ ಕಟ್ಟಡಗಳಲ್ಲಿ ಜೀವನನ್ನು ನಡೆಸುತ್ತಿದ್ದಾರೆ. ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಈ ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಅತೀ ಹೆಚ್ಚು ಗ್ರಾಮ ಪಂಚಾಯತ್ ಸದಸ್ಯರು ಆರ್.ಸಿ.ಸಿ ಕಟ್ಟಡಗಳಲ್ಲಿ ವಾಸಿಸುತ್ತಿದದ್ದು ಕಂಡು ಬಂದಿದೆ, ಕಾರಣ ಈ ಪ್ರದೇಶದ ಸದಸ್ಯರು ಆರ್ಥಿಕವಾಗಿ ಉತ್ತಮ ಸ್ಥಿತಿ ಹೊಂದಿದವರಾಗಿದ್ದಾರೆ.

**ಕೋಷ್ಟಕ – 09 : ಗ್ರಾಮ ಪಂಚಾಯತ ಸದಸ್ಯರು ಭೂಮಿಯನ್ನು ಹೊಂದಿರುವ ಹಾಗೂ ಹೊಂದದೇ ಇರುವವರ ಅಭಿಪ್ರಾಯ ಕುರಿತು ವಿವರ**

| ಕ್ರ.ಸಂ. | ಅಭಿಪ್ರಾಯಗಳು | ಒಟ್ಟು | ಶೇಕಡವಾರು |
|---|---|---|---|
| 1. | ಹೌದು | 47 | 65.27 % |
| 2. | ಇಲ್ಲ | 25 | 34.73 % |
| | ಒಟ್ಟು | 72 | 100 % |

ಗ್ರಾಮ ಪಂಚಾಯತಿಯ ಸದಸ್ಯರು ಭೂಮಿಯನ್ನು ಹೊಂದಿರುವ ಹಾಗೂ ಹೂಂದದೆ ಇರುವವರ ಬಗ್ಗೆ ವಿವರಣೆಯನ್ನು ನೀಡುತ್ತದೆ. ಗ್ರಾಮ ಪಂಚಾಯತ ಒಟ್ಟು 72 ಸದಸ್ಯರಲ್ಲಿ ಪ್ರತಿಶತ 65.27 ರಷ್ಟು ಸದಸ್ಯರು ಭೂಮಿಯನ್ನು ಹೊಂದಿರುವರಾಗಿದ್ದಾರೆ. ಹಾಗೂ ಪ್ರತಿಶತ 34.73 ರಷ್ಟು ಸದಸ್ಯರು ಭೂಮಿಯನ್ನು ಹೊಂದಿರುವುದಿಲ್ಲ ಎಂಬುದು ಕಂಡು ಬಂದಿದೆ.

ಈ ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಅಧಿಕ ಪ್ರಮಾಣದ ಸದಸ್ಯರು ಭೂಮಿಯನ್ನು ಹೊಂದಿದವರಾಗಿದ್ದಾರೆ. ಹಾಗೇ ಪಂಚಾಯತ್ ಸದಸ್ಯರಲ್ಲಿ ಕಡಿಮೆ ಸದಸ್ಯರು ಮಾತ್ರ ಭೂಮಿಯ ಒಡೆತನವನ್ನು ಹೊಂದಿಲ್ಲ ಉಳಿದಂತೆ ಎಲ್ಲಾ ಸದಸ್ಯರು ಭೂಮಿಯ ಒಡತನವನ್ನು ಹೊಂದಿದ್ದಾರೆ.

**ಕೋಷ್ಟಕ–10 : ಮಾಹಿತಿದಾರರ ಭೂಮಿ ಪ್ರಮಾಣಗಳ ವರ್ಗೀಕರಣ**

| ಕ್ರ.ಸಂ. | ಭೂಮಿ ಪ್ರಮಾಣ | ಒಟ್ಟು | ಶೇಕಡವಾರು |
|---|---|---|---|
| 1. | 5 ಎಕರೆಗಿಂತ ಕಡಿಮೆ | 12 | 16.68% |
| 2. | 6 ರಿಂದ 10 ಎಕರೆ ವರೆಗೆ | 42 | 58.33% |
| 3. | 11 ರಿಂದ 15 ಎಕರೆ ವರೆಗೆ | 08 | 11.11% |
| 4. | 16 ರಿಂದ 20 ಎಕರೆ ವರೆಗೆ | 06 | 8.33% |
| 5. | 20 ಎಕರೆಕ್ಕಿಂತ ಹೆಚ್ಚು ಭೂಮಿ | 04 | 5.55% |
| | ಒಟ್ಟು | 72 | 100 % |

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೆನೆಂದರೆ ಗ್ರಾಮ ಪಂಚಾಯತಿಯ ಒಟ್ಟು 72 ಸದಸ್ಯರಲ್ಲಿ ವಿವಿಧ ರೂಪದ ಭೂಮಿಗಳನ್ನು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹೊಂದಿದ್ದು ಅದಕ್ಕೆ ಸಂಬಂಧಿಸಿದಂತೆ, ಅವರುಗಳು ಹೊಂದಿರುವ ಭೂಮಿಯ ಪ್ರಮಾಣದ ವರ್ಗೀಕರಣ ನೋಡಿದಾಗ ಅಧಿಕ ಸಂಖ್ಯೆಯ ಅಂದರೆ ಪ್ರತಿಶತ 58.33 ರಷ್ಟು ಸದಸ್ಯರು 6 ರಿಂದ 10 ಏಕರೆ ಭೂಮಿಯನ್ನು ಹೊಂದಿರುವರಾಗಿದ್ದಾರೆ. ಪ್ರತಿಶತ 16.68 ರಷ್ಟು ಸದಸ್ಯರು 5 ಏಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿದವರಾಗಿದ್ದಾರೆ. ಪ್ರತಿ ಶತ 11.11 ರಷ್ಟು ಸದಸ್ಯರು 11 ರಿಂದ 15 ಏಕರೆ ಭೂಮಿಯನ್ನು ಹೊಂದಿದವರಾಗಿದ್ದಾರೆ. ಪ್ರತಿಶತ 8.33 ರಷ್ಟು ಸದಸ್ಯರು 16 ರಿಂದ 20 ಎಕರೆ ಭೂಮಿಯನ್ನು ಉಳ್ಳವರಾಗಿದ್ದಾರೆ. ಹಾಗೂ ಪ್ರತಿ ಶತ 5.55 ರಷ್ಟು ಅತೀ ಕಡಿಮೆ ಸದಸ್ಯರು 20 ಎಕರೆಕ್ಕಿಂತ ಹೆಚ್ಚು ಭೂಮಿಯನ್ನು ಹೊಂದಿದವರಾಗಿದ್ದಾರೆ ಎಂಬುವುದ ಈ ಅಧ್ಯಯನದಿಂದ ತಿಳಿದು ಬಂದಿದೆ.

**ಕೋಷ್ಟಕ – 11 : ಮಾಹಿತಿದಾರರ ಮನೆಗಳ ಸ್ವರೂಪ ವರ್ಗೀಕರಣ**

| ಕ್ರ.ಸಂ. | ವಾರ್ಷಿಕ ಆದಾಯ | ಒಟ್ಟು | ಶೇಕಡವಾರು |
|---|---|---|---|
| 1. | 10,000ಕ್ಕಿಂತ ಕಡಿಮೆ ಆದಾಯ | 11 | 15.27 % |
| 2. | 10,000 ದಿಂದ 20,000 ವರೆಗೆ | 09 | 12.05 % |
| 3. | 20,001 ದಿಂದ 30,000 ವರೆಗೆ | 07 | 9.73 % |
| 4. | 30,001 ದಿಂದ 40,000 ವರೆಗೆ | 06 | 8.34 % |
| 5. | 40,000 ಸಾವಿರಕ್ಕಿಂತ ಹೆಚ್ಚು | 39 | 54.16 % |
| | ಒಟ್ಟು | 72 | 100 % |

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಗ್ರಾಮ ಪಂಚಾಯತ ಒಟ್ಟು 72 ಸದಸ್ಯರಲ್ಲಿ ಶೇಕಡಾ 15.27 ರಷ್ಟು ಸದಸ್ಯರು 10,000 ಕ್ಕಿಂತ ಕಡಿಮೆ ವಾರ್ಷಿಕ ಆದಾಯ, ಶೇಕಡಾ 12.50 ರಷ್ಟು ಸದಸ್ಯರು 10,000 ದಿಂದ 20,000 ರವರೆಗೆ ವಾರ್ಷಿಕ ಆದಾಯ ಶೇಕಡಾ 9.73 ರಷ್ಟು ಸದಸ್ಯರು, 20,001 ದಿಂದ 30,000 ವರೆಗೆ ವಾರ್ಷಿಕ ಆದಾಯ 8.34 ರಷ್ಟು ಸದಸ್ಯರು , 30,001 ದಿಂದ 40,000 ವರೆಗಿನ ವಾರ್ಷಿಕ ಆದಾಯ ಮತ್ತು ಪ್ರತಿಶತ 54.16 ರಷ್ಟು ಸದಸ್ಯರು 40,000 ಸಾವಿರಕ್ಕಿಂತ ಅಧಿಕ ವಾರ್ಷಿಕ ಆದಾಯವನ್ನು ಹೊಂದಿರುವುದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಗ್ರಾಮ ಪಂಚಾಯತ ಸದಸ್ಯರಲ್ಲಿ ಅಧಿಕ ಸಂಖ್ಯೆಯ ಅಂದರೆ ಪ್ರತಿಶತ 54.16 ರಷ್ಟು ಸದಸ್ಯರು ತಮ್ಮ ಹೆಚ್ಚಿನ ವಾರ್ಷಿಕ ಆದಾಯವನ್ನು ಹೊಂದಿರುವುದು ಕಂಡು ಬಂದಿದೆ. ಆದ್ದರಿಂದ ಸದಸ್ಯರ ಆರ್ಥಿಕ ಸ್ಥಿತಿ ಗತಿ ಉತ್ತಮವಾಗಿದೆ. ಎಂದು ಈ ಅಧ್ಯಯನದಿಂದ ತಿಳಿದು ಬಂದಿದೆ.

## ಸಾರಾಂಶ ಮತ್ತು ಉಪಸಾರಾಂಶ

ಪಂಚಾಯತ್ ವ್ಯವಸ್ಥೆಯ ಕಲ್ಪನೆಗಳು ಅತಿ ಪುರಾತನವಾಗಿದೆ. ಭೂಮಿಯ ಮೇಲೆ ಮಾನವನ ನೆಲೆ– ಉಗಮವಾದಗಿನಿಂದ ಇಂದಿನವರೆಗೆ ಸಾಂಸ್ಕೃತಿಕ ಮತ್ತು ಸಮಾಜಿಕ ಸಮುದಾಯಗಳಲ್ಲಿ ಬೆಳೆದ ಬಗೆಯನ್ನು ದಾಖಲಿಸುತ್ತಾ ಬಂದಿದೆ. ರಾಮಾಯಣ ಮತ್ತು ಮಹಾಭಾರತಲ್ಲಿ ಗ್ರಾಮೀಣ ಆಡಳಿತ ವ್ಯವಸ್ಥೆಗಳ ಸ್ಪಷ್ಟ ಉಲ್ಲೇಖವಿದೆ ಶುಕ್ರಚಾರ್ಯ ನೀತಿ ಸಾರದಲ್ಲಿ ಗ್ರಾಮದ ವ್ಯವಸ್ಥೆ ಗ್ರಾಮದ ತಂದೆ–ತಾಯಿಯಂತಿರಬೇಕೆಂದು ವಿವರಿಸಲಾಗಿದೆ.

ದಕ್ಷಿಣ ಭಾರತದಲ್ಲಿ ಚೋಳರ ಆಡಳಿತದ ಕಾಲದಲ್ಲಿ ಪಂಚಾಯತ ವ್ಯವಸ್ಥೆ ಅತ್ಯಂತ ಸುವ್ಯವಸ್ಥಿತ ರೂಪವನ್ನು ಪಡೆದುಕೊಂಡಿದ್ದನ್ನು ನೋಡಬಹುದು. ಜನಪದ ಗ್ರಾಮದ ಸಾರ್ವಾಂಗಿಣ ಅಭಿವೃದ್ಧಿಯ ಹೊಣೆ – ನಿರ್ವಹಿಸುತ್ತಿತ್ತು. ಸಾಮ್ರಾಟ ಅಶೋಕ, ಚಂದ್ರಗುಪ್ತರಿಂದ ಆರಂಭಿಸಿ ಅಕ್ಬರ, ಕೃಷ್ಣದೇವರಾಯ, ಶಿವಾಜಿಗಳಂತಹ ರಾಜರವರೆಗೆ ಈ ವ್ಯವಸ್ಥೆಗಳು ಬೆಳೆದು ಬಂದಿವೆ.

ಪಂಚಾಯತ ರಾಜ್‌ವ್ಯವಸ್ಥೆಯು ನಮ್ಮ ಸ್ಥಾನಿಯ ಸ್ವರಾಜ್ಯ ವ್ಯವಸ್ಥೆಯಾಗಿದೆ ಅಂದರೆ ಗ್ರಾಮೀಣ ಭಾಗದ ಜನರ ತಮ್ಮ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುವ ಒಂದು ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯ ಮೂಲಕ ಗ್ರಾಮೀಣ ಪ್ರದೇಶದ ಜನರು ತಮ್ಮ ವ್ಯವಹಾರಗಳನ್ನು ತಾವೇ ನೋಡಿಕೊಳ್ಳಲು ಸಹಾಯಕವಾಗುವುದು.

ಸಂವಿಧಾನದ 73ನೇಯ ತಿದ್ದುಪಡಿಯ ಮೂಲಕ ಕರ್ನಾಟಕದಲ್ಲಿ ಜಾರಿಗೆ ಬಂದ 1993ರ ಪಂಚಾಯತಿಯ ಅಧಿನಿಯಮವು ಕರ್ನಾಟಕಕ್ಕೆ ಸಂಬಂಧಿಸಿದಂತೆ ಪಂಚಾಯತ ರಾಜ್ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಯನ್ನು ತಂದಿತು.

ಈ ತಿದ್ದು ಪಡಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಒಂದು ಪ್ರಮುಖ ಅಂಗವಾಗಿ ಸೇರಿಸಲಾಗಿದೆ ಇದನ್ನು ಮೊಟ್ಟ ಮೊದಲ ಬಾರಿಗೆ ಅನುಷ್ಠಾನಕ್ಕೆ ತಂದ ಕಿರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ.

ಸದರಿ ಅಧ್ಯಯನವನ್ನು ನೋಡಿದಾಗ ಅಧಿಕ ಪ್ರಮಾಣದ ಗ್ರಾಮ ಪಂಚಾಯತ ಸದಸ್ಯರು ಪುರುಷರು ಇರುವುದು ಕಂಡು ಬಂದಿದೆ ಇದರಂತೆಯೆ ಗ್ರಾಮ ಪಂಚಾಯತ್ ಸದಸ್ಯರ ವಯಸ್ಸನ್ನು ಪರಿಶಿಲಿಸಿದಾಗ ಹೆಚ್ಚು ಸದಸ್ಯರು 31ರಿಂದ 40 ವರ್ಷದ ವಯೋಮಾನದವರಾಗಿದ್ದಾರೆ. ಅತಿ ಕಡಿಮೆ ಸಂಖ್ಯೆಯ ಸದಸ್ಯರು ಕ್ರಮವಾಗಿ 21ರಿಂದ 30 ವರ್ಷದ ಹಾಗೂ 60 ವಯಸಿಗಿಂತ ಮೇಲ್ಪಟ್ಟವರು ಇರುವುದು ಕಂಡು ಬಂದಿದೆ. ಅದೇ ರೀತಿಯಾಗಿ ಮಾಹಿತಿದಾರರ ಜಾತಿಯನ್ನು ನೋಡಿದಾಗ ಅಧಿಕ ಸಂಖ್ಯೆಯ ಸದಸ್ಯರು ಕುರುಬ ಮತ್ತು ಲಿಂಗಾಯತ ಜಾತಿಗೆ ಸೇರಿದವರಾಗಿದ್ದಾರೆ. ಇದರಂತೆ ಅವರ ವೈವಾಹಿಕ ಸಂಬಂಧವನ್ನು ನೋಡಿದಾಗ ಸದಸ್ಯರೆಲ್ಲರು ವಿವಾಹಿತರಾಗಿರುವುದು ತಿಳಿದು ಬಂದಿದೆ. ಆದರೆ ಕೆಲವು ಸದಸ್ಯರು ವಿಧೆವೆಯರಾಗಿದ್ದಾರೆ ಹಾಗೆಯೇ ಸದಸ್ಯರ ಶೈಕ್ಷಣಿಕ ಮಟ್ಟವನ್ನು ನೋಡಿದಾಗ ಅಧಿಕ ಪ್ರಮಾಣದ ಸದಸ್ಯರು ಸಾಕ್ಷರಸ್ಥರಾಗಿದ್ದಾರೆ. ಇವರಲ್ಲಿ ಕೆಲವರು ಮಾತ್ರ ಸ್ನಾತಕೋತರ ಪದವಿ ಪಡೆದವರಾಗಿದ್ದಾರೆ.

ಸದಸ್ಯರ ವೃತ್ತಿಯನ್ನು ಪರಿಶಿಲಿಸಿದಾಗ ಹೆಚ್ಚಿನ ಸಂಖ್ಯೆಯ ಸದಸ್ಯರು ವ್ಯಾಪಾರಸ್ಥರಾಗಿದ್ದಾರೆ ಅದರಂತೆ ರೈತರು ಮತ್ತು ಕೂಲಿ ಕಾರ್ಮಿಕರಾಗಿದ್ದು ಕಂಡು ಬಂದಿದೆ ಮತ್ತೆ ಕೆಲವರು ಗೃಹಿಣಿಯರಾಗಿದ್ದು ಕಂಡು ಬಂದಿದೆ ಇದರಲ್ಲಿ ಸದಸ್ಯರ ಕೌಟುಂಬಿಕ ಸ್ವರೂಪವನ್ನು ನೋಡಿದಾಗ ಹೆಚ್ಚಿನ ಸಂಖ್ಯೆಯ ಸದಸ್ಯರು ವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಅಧಿಕ ಸಂಖ್ಯೆಯ ಸದಸ್ಯರು ಭೂಮಿಯನ್ನು ಹೊಂದಿದ್ದಾರೆ ಸದಸ್ಯರುಗಳ ಮನೆಯ ಸ್ವರೂಪವನ್ನು ನೋಡಿದಾಗ ಅಧಿಕ ಸಂಖ್ಯೆಯ ಸದಸ್ಯರು ಆರ್.ಸಿ.ಸಿ ಕಟ್ಟಡ ಮನೆಯನ್ನು ಹೊಂದಿದವರಾಗಿದ್ದಾರೆ. ಅವರ ವಾರ್ಷಿಕ ಆದಾಯವನ್ನು ನೋಡಿದಾಗ ಹೆಚ್ಚಿನ ಸಂಖ್ಯೆಯ ಸದಸ್ಯರ ವಾರ್ಷಿಕ ಆದಾಯ 40,000ಕ್ಕಿಂತ ಹೆಚ್ಚಿಗೆ ಇರುವುದು ಪ್ರಸ್ತುತ ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿದೆ.

ಭಾರತಿಯ ಸಮಾಜದ ಮೂರು ಆಧಾರ ಸ್ತಂಭಗಳಲ್ಲಿ ಗ್ರಾಮವು ಒಂದು. ಭಾರತದಲ್ಲಿ ಅತಿ ಹೆಚ್ಚಿನ ಪ್ರಮಾಣದ ಗ್ರಾಮಗಳು ಇರುವುದರಿಂದ "ಗ್ರಾಮಗಳ ಬೀಡು, ಹಳ್ಳಿಗಳ ನಾಡು" ಎಂದಿದ್ದಾರೆ.

ಗ್ರಾಮಗಳು ದೇಶದ ಬೆನ್ನೆಲಬು ಎನ್ನುವ ಈ ಗ್ರಾಮಗಳ ಪರಿಸ್ಥಿತಿಯು ಇಂದಿಗೂ ಸಹ ಅನೇಕ ಮೂಲಭೂತ ಸೌಕರ್ಯಗಳ

– 49ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712


# ಚೆಂಚು ಬುಡಕಟ್ಟಿನ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ

✍ **ಡಾ. ಮಲ್ಲಿಕಾರ್ಜುನ ಬಿ ಮಾನ್ಪಡೆ,** ಪೋಸ್ಟ ಡಾಕ್ಟರಲ್ ಫೆಲೋ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಪ್ರವೇಶ

ಭಾರತದ ಮೂರು ವಲಯಗಳ ಬುಡಕಟ್ಟುಗಳ ಪೈಕಿ ದಕ್ಷಿಣ ವಲಯ ಬುಡಕಟ್ಟುಗಳು ಅತ್ಯಂತ ಹಿಂದುಳಿದ ಬುಡಕಟ್ಟುಗಳಾಗಿವೆ. ಅಲ್ಲದೇ ಇನ್ನೂ ಪ್ರಾಚೀನ ಸ್ಥಿತಿಯಲ್ಲಿದ್ದಾರೆ ಎಂದರೆ ತಪ್ಪಾಗಲಾರದು. ಇಲ್ಲಿಯ ಬಹುತೇಕ ಬುಡಕಟ್ಟುಗಳು ಅಲೆಮಾರಿ ಜೀವನವನ್ನು ನಡೆಸುತ್ತಾರೆ. ದಕ್ಷಿಣ ವಲಯದ ಬುಡಕಟ್ಟುಗಳಲ್ಲಿ ಮಾತ್ರ ಪ್ರಧಾನ ಕುಟುಂಬಗಳು ಕಂಡುಬರುತ್ತವೆ. ಈ ವಲಯದಲ್ಲಿ ಕರ್ನಾಟಕದ ಬುಡಕಟ್ಟುಗಳ ವೈವಿಧ್ಯಗಳೊಂದಿಗೆ ಸಾಮ್ಯತೆ ಮತ್ತು ಅನನ್ಯತೆಯ ಲಕ್ಷಣಗಳನ್ನು ಹೊಂದಿವೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಜನರು ಬಯಲು ಸೀಮೆ, ಪಶ್ಚಿಮ ಘಟ್ಟ, ಕರಾವಳಿ ಮತ್ತು ಮಲೆನಾಡಿನ ತಪ್ಪಲು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ 50 ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಗಿದೆ. ಆದರೆ, ಇನ್ನೂ ಕೆಲವು ಬುಡಕಟ್ಟುಗಳು ರಾಜ್ಯದಲ್ಲಿ ಇವೆ ಎಂದು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳಿಂದ ತಿಳಿದುಬಂದಿದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ಕೊಡಗು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಕಂಡುಬಂದರೆ, ನಂತರದ ಸ್ಥಾನ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಶಿವಮೊಗ್ಗ ಜಿಲ್ಲೆಗಳದ್ದು. ಉತ್ತರ ಕನ್ನಡ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಬುಡಕಟ್ಟು ಜನರ ಸಂಖ್ಯೆ ಆಯಾ ಜಿಲ್ಲೆಯ ಶೇಕಡ ಒಂದರಷ್ಟಿದೆ.

ರಾಜ್ಯದ ಬುಡಕಟ್ಟುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬುಡಕಟ್ಟುಗಳೆಂದರೆ ನಾಯಕರು ಅಥವಾ ನಾಯಕ (69%). ಇವರ ನಂತರ ಕಾಡು ಕುರುಬರು ಶೇಕಡ 11 ರಷ್ಟಿದ್ದರೆ, ಮರಾಠಿ ನಾಯಕರು ಶೇಕಡ 4 ರಷ್ಟಿದ್ದಾರೆ. ಉಳಿದಂತೆ ಗೊಂಡರು ಶೇಕಡ ಮೂರರಷ್ಟು, ಕೋಲಿಡಾರ್, ಜೇನುಕುರುಬ ಮತ್ತು ಕೋಯ ತಲಾ ಶೇಕಡ ಎರಡರಷ್ಟು ಕಂಡುಬರುತ್ತಾರೆ. ಕಡಿಮೆ ಜನಸಂಖ್ಯೆಯ ರಾಜ್ಯದ ಬುಡಕಟ್ಟುಗಳೆಂದರೆ



ಯುರವ, ಮೇದ, ಸೋಲಿಗ, ಮಲೆಕುಡಿಯ, ಹಸಲರು, ಇವರ ಪ್ರಮಾಣ ಶೇಕಡ ಒಂದು. ಕೊರಗರ ಮತ್ತು ಚೆಂಚು ಜನಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ.

ಪ್ರತಿಯೊಂದು ಮಾನವ ಸಮುದಾಯಕ್ಕೂ ಸಾಮಾನ್ಯವಾಗಿ ಅದರ ಮೂಲ ಹಾಗೂ ಹಿನ್ನೆಲೆಗೆ ಸಂಬಂಧಿಸಿದಂತೆ ಒಂದೊಂದು ಇತಿಹಾಸ ಇದ್ದೇ ಇರುತ್ತದೆ. ಒಂದು ಸಮುದಾಯದ ಮೂಲವನ್ನು ಕಂಡುಕೊಳ್ಳಬೇಕಾದರೆ ಮಾನವಶಾಸ್ತ್ರದ ಕಡೆ ಗಮನಹರಿಸುವುದು ಅವಶ್ಯವಾಗಿದೆ. ಸಮುದಾಯದ ಸಂಸ್ಕೃತಿಯ ಅಧ್ಯಯನಕ್ಕೆ ಮಾನವಶಾಸ್ತ್ರ ಕ್ಷೇತ್ರಕಾರ್ಯದ ಅನುಭವಗಳು ಮೂಲಾಧಾರಗಳಾಗುತ್ತವೆ. ಚೆಂಚು ಬುಡಕಟ್ಟಿನವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದವರು. ಕಾಲ ಕ್ರಮೇಣವಾಗಿ ಗುಂಪುಗಳನ್ನು ಕಟ್ಟಿಕೊಂಡು ಒಂದೆಡೆ ಸ್ಥಿರವಾಗಿ ನೆಲೆಯೂರಿ, ನಾಗರೀಕ ಜೀವನ ಪ್ರಾರಂಭಿಸಲು ಪ್ರಯತ್ನಿಸಿದವರು. ಆಂಧ್ರಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಇವರು ಎಲ್ಲಿಂದ ಬಂದರೆಂದು ಹೇಳುವುದು ಸ್ವಲ್ಪ ಕಷ್ಟದ ಕೆಲಸವೇ ಆಗಿದೆ. ಆದರೆ ಭಾಷೆ ಹಾಗೂ ಜೀವನ ಶೈಲಿಯನ್ನು ನೋಡಿದರೆ ಇವರು ದಕ್ಷಿಣ ಭಾರತದವರು ಅದರಲ್ಲಿಯೂ ಆಂಧ್ರಪ್ರದೇಶದಿಂದ ವಲಸೆ ಬಂದವರೆಂದು ಹೇಳಬಹುದಾಗಿದೆ. ಬದುಕಿನ ಅನಿವಾರ್ಯ ಕಾರಣಗಳಿಂದಾಗಿ ದೇಶದ ಹಲವು ಭಾಗಗಳಲ್ಲಿ ಚದುರಿಹೋಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತವೆ. ಚೆಂಚು ಬುಡಕಟ್ಟು ಇಂದು ಬೇರೆ ಜಾತಿ, ಸಮುದಾಯಗಳೊಂದಿಗೆ ಸಹಬಾಳ್ವೆ ಮಾಡುತ್ತಿದೆ. ಹೀಗಾಗಿ ಅನ್ಯ ಸಮುದಾಯಗಳ ಪ್ರಭಾವಕ್ಕೆ ಒಳಗಾಗಿ ತಮ್ಮ ಮೂಲದ ಎಷ್ಟೋ ಅಂಶಗಳನ್ನು ಕಳೆದುಕೊಳ್ಳುತ್ತಿದೆಯೇನೋ ಅನಿಸುವುದು. ಆದರೂ ಈ ಸಮುದಾಯವು ತನ್ನ ಮೂಲವನ್ನು ಉಳಿಸಿಕೊಳ್ಳಲು ನಿರಂತರವಾದ ಹೋರಾಟವನ್ನು ಮಾಡುತ್ತಿರುವುದನ್ನು ಗಮನಿಸಬಹುದು.



ಚೆಂಚು ಚೆಂಚರು ದಕ್ಷಿಣ ಭಾರತದ ಮೂಲನಿವಾಸಿಗಳು, ಇವರ ಭಾಷೆ ತೆಲುಗು, ಕರ್ನೂಲು, ನೆಲ್ಲೂರು, ಮಹಬೂಬ್ ನಗರಗಳಿಂದ ವಲಸೆ ಹೊರಟು ಶ್ರೀಹರಿಕೋಟ ಅನಂತರ ಚಿತ್ತೂರು, ಅನಂತಪುರ ಜಿಲ್ಲೆಗಳಿಗೆ, ತಮಿಳುನಾಡಿನ ಉತ್ತರ ಆರ್ಕಾಟು ಜಿಲ್ಲೆಗಳಿಗೆ ಚೆದುರಿಹೋಗಿದ್ದಾರೆ. ಅನಂತಪುರ, ಚಿತ್ತೂರು ಮುಂತಾದ ಬಯಲು ಸೀಮೆ ಸೇರಿದ ಈ ಜನ ಆ ಮೂಲಕ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಪ್ರವೇಶ ಮಾಡಿ ಕಾಡು ಮೇಡು ಇರುವ ಕಡೆ ವಸತಿ ಸ್ಥಾನಗಳನ್ನು ನಿರ್ಮಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಪ್ರಮುಖವಾಗಿ ಯಾದಗಿರಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಹರಡಿದ್ದಾರೆ.

## ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕು ಹಾಗೂ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿ ನೆಲೆಸಿರುವ ಚೆಂಚು ಬುಡಕಟ್ಟಿನ ಆರ್ಥಿಕ ಸ್ಥಿತಿಯನ್ನು ಕುರಿತು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

## ಅಧ್ಯಯನದ ಉದ್ದೇಶಗಳು

1. ಈ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ತಿಳಿದು ಕೊಳ್ಳುವುದು.
2. ಈ ಸಮುದಾಯದಲ್ಲಿರುವ ಮಹಿಳಾ ಮತ್ತು ಪುರುಷ ವರ್ಗದ ಲಿಂಗಾನುಪಾತದ ಪ್ರಮಾಣ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅವರ ಬೆಳವಣಿಗೆಯ ಪ್ರಮಾಣವನ್ನು ತುಲನಾತ್ಮಕವಾಗಿ ತಿಳಿದು ಕೊಳ್ಳುವುದು.
3. ಈ ಸಮುದಾಯದ ಮೂಲ ವೃತ್ತಿ ಹಾಗೂ ಬದುಕಿನ ನಿರ್ವಹಣೆಗಾಗಿ ಪ್ರಸ್ತುತ ಅನುಸರಿಸುತ್ತಿರುವ ಅವಲಂಬಿತ ವೃತ್ತಿಗಳನ್ನು ಅರಿಯುವುದು.

## ಪ್ರಮೇಯಗಳು

1. ಚೆಂಚು ಬುಡಕಟ್ಟು ಸಂವಿಧಾನದ ಮುಖ್ಯವಾಹಿನಿಗೆ ಸೇರಲು ಹವಣಿಸುತ್ತಿದೆ.
2. ಚೆಂಚು ಬುಡಕಟ್ಟು ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಅರಣೋತ್ಪನಗಳನ್ನು ಅವಲಂಬಿಸಿದೆ.

## ಅಧ್ಯಯನದ ವಿನ್ಯಾಸ ಮತ್ತು ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಬುಡಕಟ್ಟುಗಳ ಕುರಿತಾಗಿ ಬಂದಿರುವ ಕೃತಿಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಲೇಖನಗಳು, ಜನಗಣತಿ ವರದಿಗಳು, ಮಾನವ ಅಭಿವೃದ್ಧಿ ವರದಿಗಳು ಹಾಗೂ ಇತರ ವರದಿಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಪ್ರತಿ ನೆಲೆಗಳಿಗೆ ನೇರವಾಗಿ ಹೋಗಿ ಸಮೀಕ್ಷೆ ಹಾಗೂ ಸಂದರ್ಶನ ಮಾಡುವುದರ ಮೂಲಕವೂ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮುಖ್ಯವಾಗಿ ಈ ಅಧ್ಯಯನ ಪೂರ್ಣಗೊಳಿಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ತುಲನಾತ್ಮಕ ವಿಧಾನ, ಸಂದರ್ಶನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನ ಮತ್ತು ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೇ ಛಾಯಾಚಿತ್ರಗಳು, ರೇಖಾಚಿತ್ರಗಳು, ಕೋಷ್ಟಕಗಳು ಮುಂತಾದವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಚೆಂಚು ಶಬ್ದದ ಔಚಿತ್ಯ : ಚೆಂಚು ಎನ್ನುವುದು ಜಾತಿ ಸೂಚಕ ಪದವಾಗಿದೆ. ಕರ್ನಾಟಕದಲ್ಲಿ ಚೆಂಚರನ್ನು 'ಚೆಂಚು', 'ಚೆಂಚುಕುಲಂ', 'ಚೆಂಚುವಾಡ', 'ಬೆಕ್ಕುಚೆಂಚು', 'ಅಡವಿಚೆಂಚರು' 'ಯಾನದಿಗಳು', ಇತ್ಯಾದಿ ಹೆಸರುಗಳಿಂದಲೂ ಕರೆಯುವುದುಂಟು. 'ಚೆಂಚು' ಎಂಬ ಪದ ಚೆಟ್ಟು (ಮರ) ಎಂಬ ಪದದಿಂದ ಬಂದಿರಬಹುದೇನೋ ಎಂದು 1948ರಲ್ಲಿ ಅಯ್ಯಪ್ಪನ ಎಂಬ ಮಾನವಶಾಸ್ತ್ರಜ್ಞ ಅಭಿಪ್ರಾಯಪಟ್ಟಿದ್ದಾನೆ. 'ಚೆಂಚು' (ಇಲಿ)ಗಳನ್ನು ಹಿಡಿಯುವುದರಿಂದ ಇವರಿಗೆ ಈ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ. ಒಂದು ಹೇಳಿಕೆಯ ಚೆಂಚರು ಕೆಂಪಾಗಿದ್ದರೆಂದು ಅವರನ್ನು 'ಕೆಂಚರು' ಕರೆಯುವುದಕ್ಕೆ ಬದಲಾಗಿ ಸೌಲಭ್ಯಾಕಾಂಕ್ಷೆಯಿಂದ ಚೆಂಚರು ಎಂದು ಕರೆಯುತ್ತಾ ಬಂದಿದ್ದಾರೆಂದು ಊಹಿಸಿರುವುದುಂಟು. ಚೆಂಚರು ಹೆಚ್ಚಾಗಿ ಆಂಧ್ರಪ್ರದೇಶದ ನಲ್ಲಮಲ್ಲ ಕಾಡಿನಲ್ಲಿ ಕಂಡುಬರುತ್ತಾರೆ. ಕರ್ನಾಟಕ ಯಾದಗಿರಿ ಹಾಗೂ ಕಲಬುರ್ಗಿ ಜಿಲ್ಲೆಯ ಆಂಧ್ರಗಡಿಗೆ ಹೊಂದಿಕೊಂಡಿರುವ ಕೇವಲ ನಾಲ್ಕು ಗ್ರಾಮಗಳಲ್ಲಿ ಕಂಡುಬರುತ್ತಾರೆ. ಇವರು ಇಲ್ಲಿಂದಲೇ ಕರ್ನಾಟಕದ ಬೇರೆ ಬೇರೆ ಕಡೆ ವಲಸೆ ಹೋಗಿರುವ ಸಾಧ್ಯತೆ ಇದೆ. ಇವರ ನಿವಾಸಗಳನ್ನು 'ಗೂಡೆಂ' ಎಂದು ಕರೆಯುತ್ತಾರೆ. ಚೆಂಚರಲ್ಲಿಯೇ ಅಡವಿ ಚೆಂಚಲು (ಕಾಡು ಚೆಂಚರು), ಊರ ಚೆಂಚಲು (ಊರಿನ ಚೆಂಚುಗಳು) ಎಂಬ ಬೇದಗಳಿವೆ. ನಲ್ಲ ಮಲ್ಲ ಕಾಡುಗಳಲ್ಲಿ ಜೀವಿಸುವ ಚೆಂಚರನ್ನು ಕಾಡು ಇಲ್ಲವೆ ಕೊಂಡ ಚೆಂಚಲು (ಗುಡ್ಡಗಾಡು ಚೆಂಚರು) ಎಂದು, ಬಯಲು ಪ್ರಾಂತಗಳಲ್ಲಿ ವಾಸಿಸುವ ಚೆಂಚರನ್ನು ಊರ ಚೆಂಚುರೆಂದು ಕರೆಯುತ್ತಾರೆ. (ಮುರಿಗೆಪ್ಪ ಎ:2011:ಪುಟ:7) ಕರ್ನಾಟಕದ ಬುಡಕಟ್ಟುಗಳಲ್ಲಿಯೇ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮತ್ತು ಅತ್ಯಂತ ಹಿಂದುಳಿದ ಪಂಗಡವಾಗಿದೆ.

## ಚೆಂಚುಗಳ ಬೆಡಗುಗಳು

ಇವರಲ್ಲಿ ಹಲವಾರು ಮನೆತನಗಳಿದ್ದು ಮನೆತನದ ಮೂಲಗಳನ್ನು ಬೆಡುಗುಗಳಿಂದ ಗುರುತಿಸುವರು. ಬೆಡಗುಗಳಿಗೆ ತಮ್ಮ ಸುತ್ತಲ ಪರಿಸರದಲ್ಲಿ ದೊರೆಯುವ ಮರ, ಗಿಡ, ಪ್ರಾಣಿ, ಪಕ್ಷಿ, ಸೂರ್ಯ, ಚಂದ್ರರ ಹೆಸರನ್ನೇ ತಮ್ಮ ಕುಲಗಳಿಗೆ ಇಟ್ಟುಕೊಂಡಿರುವುದನ್ನು ಕಾಣುತ್ತೇವೆ. ಅವರ ದೈನದಿಂದ ಚಟುವಟಿಕೆಗಳು ಅವರ ಬೆಡಗುಗಳ ಮುಖಾಂತರವೇ ನೆರವೇರುವುದು.

ಎಸ್. ಎಮ್. ಚನ್ನ ಮತ್ತು ಥರ್ಸ್ಟನ್ನರು ಚೆಂಚು ಬುಡಕಟ್ಟಿನ ಎಂಟು ಹೊರಬಾಂಧ್ಯವ್ಯದ ವಂಶ ಅಥವಾ ಕುಲಗಳನ್ನು ಅವರ ಕುಲಚಿನ್ಹೆಗಳಿಂದ ಪತ್ತೆ ಹಚ್ಚಿದ್ದಾರೆ. ಅವು ಗುರ್ರಮ್ಮ (Gurram) ಕುದುರೆ, ಆರತಿ (Arati) ಬಾಳೆಯ ಗಿಡ, ಮಂಗ್ಲಾ (Mangla) ಗಿಡಗಳು, ತೋಟ (Tota) ಉದ್ಯಾನ ಅಥವಾ ವನ, ಮೇಕಾಲ (Mekala) ಆಡು ಅಥವಾ ಮೇಕೆ, ಇಂಡ್ಲ (Indla) ಮನೆ, ಸವರಮ (Savaram) ರಾಜಪ್ರಭುತ್ವದ ಬಂಗಾರದ ನಾಣ್ಯ ಮತ್ತು ಗುಂಡಮ್ (Gundam) ಗುಂಡ ಅಥವಾ ಹೊಂಡ (ಎಸ್. ಎಮ್. ಚನ್ನ : 2004 : 1292), (ಸಿಂಗ್, ಕೆ.ಎಸ್. : 1994 : 214).

ಚೆಂಚು ಬುಡಕಟ್ಟಿನ ಹೊರಬಾಂಧವ್ಯದ ಕುಲಗಳು ಅವರ ಕುಲಚಿನ್ಹೆಗಳನ್ನು ಮತ್ತು ಪ್ರಾದೇಶಿಕತೆಯನ್ನು ಪ್ರತಿನಿಧಿಸುತ್ತವೆ. ಅವು: ನಲಬೋಟವಾರು(Nalabotawaru), ಮ್ಯಾಲಮಾರು (Mykalawaru), ಅವಲವಾರು (Avalawaru), (Kanyabainodu) ಕುಡುಮುಡುವಾಡ್ಲು (Kudumuduwadlu), ವಾರೆಗಾಲಿಂಗು (Waregalingu), ಮನುಲವಾರು (Manulawaru), ಗೋಗುಲವಾರು (Gogulawaru), ಮರಿಪಲ್ಲಿಪಾಪ್ಡಿ (Maripalligapdi), ಜಲಮುತ್ತಾಡು (Jalamuttadu), ಕನ್ಯಾಬೈನೋಡು (Kanyabainodu) (ಸಿರಾಜ್ ಉಲ್ ಹಸನ್ : 1989 : 150). ಚೆಂಚುಗಳು 26 ಹೊರಬಾಂಧವ್ಯದ ಬಳಿಗಳನ್ನು ಹೊಂದಿರುತ್ತಾರೆ. ಸಮಬಳಿಗಳಲ್ಲಿ ವಿವಾಹ ನಿಷೇಧವಿದೆ.

ನಲ್ಲಾಮಲಾಯಿ, ಶ್ರೀಶೈಲಂ ಪರಿಸರದ ಚೆಂಚರಲ್ಲಿಯ ಬೆಡಗುಗಳೆಂದರೆ ತೋಕಾಲೋಲು, ಪಿಟ್ಟೋಲೋಲು, ಚಾಲೋಲು, ನಿಮ್ಮಲೋಲು, ಗುಲ್ಲೋಲು, ಕುರುಮುಲೋಲು, ಅರ್ಟಿಲೋಲು, ಭೂಮನೋಲು, ಪುಲಚರಲೋಲು, ಕಾಟರಾಜೋಲು, ಉತ್ತರೂರುಲೋಲು, ಜಲ್ಲೋಲು, ಮುಂಡಲೋಲು, ಮಂಡ್ಲೋಲು, ಉರ್ತಾರೋಲು, ನಲಪೋತಲೋಲು, ಕುಕ್ಕಲೋಲು, ಮ್ಯಾಕಲೋಲು, ಮಂಡಲೋಲು, ತೋಟಲೋಲು, ಚಿಗುರ್ಲಾಲೋಲು, ರಾಯವೋಲು, ಐಲೋಲು ಇತ್ಯಾದಿ (ಮೈತ್ರಿ ಕೆ ಎಂ: 2002: 52) ಕರ್ನಾಟಕದಲ್ಲಿ ಕ್ಷೇತ್ರ ಕಾರ್ಯದಲ್ಲಿ ತಿಳಿದುಬರುವಂತೆ ಇವರಲ್ಲಿ ದಾಸರ್, ಮಹಾದಾಸರ್, ಮಾದಾರಚೋದ್, ಬೊಜ್ಜೇರ್, ಬೊಮ್ಮರಾಶಿ, ಮರ್ಪಲ್ಲಿ, ಕುಕ್ಕಲವಾರ್ ಎಂಬ ಬಳಿಗಳಿವೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಪ್ರಸಾರ ನೆಲೆಗಳು

ಚೆಂಚು ಸಮುದಾಯವು 2001ರ ಜನಗಣತಿಯ ಪ್ರಕಾರ ಕರ್ನಾಟಕದ 15 ಜಿಲ್ಲೆಗಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಇದರ ಪ್ರಕಾರ ಕಲಬುರ್ಗಿ ಜಿಲ್ಲೆಯಲ್ಲಿ ಒಂದರಲ್ಲಿಯೇ ಶೇ 62.8ರಷ್ಟು ಜನಸಂಖ್ಯೆ ಕಂಡುಬರುತ್ತದೆ. ಉಳಿದ ಜಿಲ್ಲೆಗಳಲ್ಲಿ ಅತಿ ಕಡಿಮೆ ಜನಸಂಖ್ಯೆ ಕಂಡುಬರುತ್ತದೆ. ಜಿಲ್ಲಾವಾರು ಹಾಗೂ ಕುಟುಂಬವಾರು ಜನಸಂಖ್ಯೆ ವಿವರಗಳು ಈ ಕೆಳಗಿನಂತಿವೆ.

ಪ್ರಸ್ತುತ ಚೆಂಚು ಬುಡಕಟ್ಟಿನ ಜನಸಂಖ್ಯೆ ಒಟ್ಟಾರೆಯಾಗಿ ರಾಜ್ಯದಲ್ಲಿ ಎಷ್ಟಿದೆ ಎಂಬುದು 2001ರ ಜನಗಣತಿಯಲ್ಲಿ ದೊರೆತರು ಕೂಡಾ ಅದರಲ್ಲಿ ಪಾರ್ಧಿ ಸಮುದಾಯದ ಅಡವಿಚೆಂಚರ ಸೇರಿರುವ ಸಾಧ್ಯತೆ ಇದೆ. ಚೆಂಚು ಆಂಧ್ರ ಮೂಲದಾಗಿದ್ದು, ತೆಲುಗು ಭಾಷೆ ಮಾತಾನಾಡುವವ ರಾಗಿದ್ದಾರೆ. ಆದರೆ ಅಡವಿಚೆಂಚು ಅಥವಾ ಅಡವಿ ಚಿಂಚೆರ ಬುಡಕಟ್ಟು ಗುಜರಾತ್ ಮತ್ತು ರಾಜಸ್ತಾನ ಮೂಲದ್ದಾಗಿದ್ದು, ಅಡವಿಚಿಂಚೆರರ ಭಾಷೆ ವಾಗ್ರಿ ಭಾಷೆಯಾಗಿದೆ. ಆದರೆ ಬಹಳಷ್ಟು ಅಧ್ಯಯನಕಾರರು ಈ ಎರಡು ಒಂದೇ ಎನ್ನುವ ರೀತಿಯಲ್ಲಿಯೇ ಪ್ರಸ್ತಾಪಿಸಿದ್ದಾರೆ.



ಬೇಟೆಗಾರಿಕೆಯ ಇವರ ಮೂಲ ಕಸುಬಾದುದರಿಂದ ಈ ಸಮುದಾಯದವರು ಬೇಟೆ ದೊರೆಯುವ ಆಹಾರ ಸಂಗ್ರಹಣೆ ಮಾಡಲು ಸುಲಭವಾಗಿ ದೊರೆಯುವ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಗ್ರಾಮಗಳಲ್ಲಿ ತಮ್ಮ ನೆಲೆಗಳನ್ನು ಗುರುತಿಸಿಕೊಂಡಿದ್ದಾರೆ. ಬಹುಶಃ ಇವರು ಮೊದಲಿಗೆ ಅಲೆಮಾರಿಗಳಾಗಿದ್ದು, ಆಂಧ್ರದ ಮೂಲದವರಾಗಿದ್ದಾರೆ ಅನ್ನುವುದರಲ್ಲಿ ಯಾವ ಅನುಮಾನಗಳು ಇಲ್ಲ.

**ಕೋಷ್ಟಕ : ಸಮೀಕ್ಷೆಗೊಳಪಟ್ಟ ಕರ್ನಾಟಕದ ಚೆಂಚು ಬುಡಕಟ್ಟಿನ ಜಿಲ್ಲಾವಾರು ಮತ್ತು ಲಿಂಗವಾರು ಜನಸಂಖ್ಯೆ**

| ಕ್ರ.ಸಂ. | ಜಿಲ್ಲೆ | ತಾಲೂಕ | ಗ್ರಾಮ | ಕುಟುಂಬಗಳು | ಪುರುಷ | ಮಹಿಳೆ | ಒಟ್ಟು |
|---|---|---|---|---|---|---|---|
| 1. | ಯಾದಗಿರಿ | ಯಾದಗಿರಿ | ಪಸಪೂಲ | 7 | 16 | 16 | 32 |
| | | | ಯಂಪಾಡ | 42 | 87 | 101 | 188 |
| | | | ಬಾಚವಾರ | 82 | 165 | 177 | 342 |
| 2. | ಕಲಬುರ್ಗಿ | ಸೇಡಂ | ಮೋತಕಪಲ್ಲಿ | 11 | 33 | 22 | 55 |
| | | | ಒಟ್ಟು | 142 | 301 | 316 | 617 |

ಕರ್ನಾಟಕದ ಕೆಲವು ನಿರ್ಧಿಷ್ಟ ಪ್ರದೇಶಗಳಲ್ಲಿ ಚೆಂಚುರು ನೆಲೆಸಿದ್ದಾರೆ. ಹಳ್ಳಿಯ ಜನಕ್ಕೆ ಬೇಕಾದ ಜೇನು, ಚೆಂಚುಗೆಡ್ಡೆ, ಇತ್ಯಾದಿಗಳನ್ನು ಅವುಗಳನ್ನು ತಲೆ ಮೇಲೆ ಹೊತ್ತು ಅಕ್ಕಪಕ್ಕದ ಹಳ್ಳಿಗಳಲ್ಲಿ ಸುತ್ತಿ ವ್ಯಾಪಾರವನ್ನು ಮಾಡಿ ಅದರಿಂದ ಬರುವ ದವಸಧಾನ್ಯಗಳು, ಹಣವನ್ನು ಪಡಿಯುತ್ತಿದ್ದರು. ಆದರೆ ಇಂದು ಮೂಲ ಕಸುಬು ಮಾಡುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಇವರು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಾಗಿ ವಾಸವಾಗಿರಲು ಬಹುಮುಖ್ಯ ಕಾರಣವೆನಂದರೆ ಕಾಡಂಚಿನಲ್ಲಿರುವ ಗ್ರಾಮಗಳಲ್ಲಿಯೇ ಅವರು ವಾಸಮಾಡುವುದರಿಂದ ಅವರ ದಿನ ನಿತ್ಯ ಆಹಾರ ಸಂಗ್ರಹಣೆ ಮಾಡಲು ಮತ್ತು ಬೇಟೆಗಾರಿಕೆಗೆ ಹೆಚ್ಚು ಅನುಕೂಲವಿರುವುದರಿಂದ ಎಂಬುದು ಕ್ಷೇತ್ರ ಕಾರ್ಯದಲ್ಲಿ ತಿಳಿದುಬರುತ್ತದೆ.

**ಕೋಷ್ಟಕ : ಕರ್ನಾಟಕದ ಚೆಂಚು ಬುಡಕಟ್ಟಿನ ಗ್ರಾಮೀಣ ಮತ್ತು ನಗರ ಜನಸಂಖ್ಯೆ (2011)**

| ರಾಜ್ಯ | ವಿಭಾಗವಾರು | ಕುಟುಂಬಗಳು | ಪುರುಷ | ಮಹಿಳೆ | ಒಟ್ಟು |
|---|---|---|---|---|---|
| ಕರ್ನಾಟಕ | ಗ್ರಾಮ | 375 | 411 | 435 | 846 |
| | ನಗರ | 51 | 54 | 54 | 108 |
| | ಒಟ್ಟು | 426 | 465 | 489 | 954 |

## ಆರ್ಥಿಕ ಸ್ಥಿತಿಗತಿ

ಕರ್ನಾಟಕದ ಚೆಂಚು ಬುಡಕಟ್ಟು ಪಾರಂಪರಿಕವಾಗಿ ಬೇಟೆ, ಗೆಡ್ಡೆ ಗೆಣಸುಗಳನ್ನು ತೆಗೆಯುವುದು, ಜೇನು ಸಂಗ್ರಹಿಸುವುದು ಇತ್ಯಾದಿ ಆಹಾರೋತ್ಪನ್ನಗಳನ್ನೆ ಅವಲಂಬಿಸಿ ಜೀವನ ಸಾಗಿಸುವ ಸಮುದಾಯವಾಗಿದ್ದು, ತುಂಬಾ ಹಿಂದುಳಿದ ಸಮುದಾಯವಾಗಿದೆ.

## ಕೃಷಿಕೂಲಿ

ಕೃಷಿ ಕೆಲಸಗಳು ಇದ್ದಾಗ ಅವರು ಮಾಲೀಕರಿಂದ ಗೊತ್ತುಪಡಿಸಿ ಕೊಂಡು ಕೂಲಿ ಕೆಲಸಗಳಿಗೆ ಹೋಗುವರು. ಇವರು ಕೂಲಿ ರೂಪದಲ್ಲಿ ಹಣ ಇಲ್ಲವೆ ದವಸ ಧಾನ್ಯಗಳ ರೂಪದಲ್ಲಿ ಪಡೆಯುವರು. ಇವರು ಸಸಿ ನಾಟಿ, ಕಳೆ, ಭತ್ತ ಕೊಯ್ಯುವ ಕೆಲಸ ಇತ್ಯಾದಿ ಕೂಲಿ ಕೆಲಸಗಳಿಗಾಗಿ ಹೋಗುವರು. ಕೃಷಿ ಕೂಲಿಯಲ್ಲಿ ತೊಡಗಿಸಿಕೊಂಡಿರುವವರ ಪ್ರಮಾಣವು ಶೇ.80.4 ರಷ್ಟು ಜನರಿದ್ದಾರೆ. ಇದರಲ್ಲಿ ಮುರುಷರ ಪ್ರಮಾಣವು ಶೇ.86.5 ರಷ್ಟಿದ್ದು, ಮಹಿಳೆಯರ ಪ್ರಮಾಣವು ಶೇ.75.5ರಷ್ಟಿರುವುದು ಕಂಡುಬರುತ್ತದೆ.

**ಕೋಷ್ಟಕ : ಸಮೀಕ್ಷೆಗೊಳಪಟ್ಟ ಚೆಂಚು ಸಮುದಾಯದವರು ವಿವಿಧ ಕೆಲಸಗಳಲ್ಲಿ ತೊಡಗಿಕೊಂಡವರ ಪ್ರಮಾಣ**

| ವಿವರ | ಪುರುಷ | ಶೇಕಡ | ಸ್ತ್ರೀ | ಶೇಕಡ | ಒಟ್ಟು | ಶೇಕಡ |
|---|---|---|---|---|---|---|
| ಒಟ್ಟು ಜನಸಂಖ್ಯೆ | 301 | – | 316 | – | 617 | – |
| ಆಶ್ರಿತರ ಗುಂಪು | 158 | 52.5 | 147 | 46.5 | 305 | 49.4 |
| ಕಾಯಕಾರ್ಹ ಗುಂಪು | 143 | 47.5 | 169 | 53.5 | 312 | 50.6 |
| ಕೆಲಸಗಾರರ ಗುಂಪು | 169 | 118.1 | 204 | 120.7 | 372 | 119.2 |
| ಕೃಷಿ | 20 | 11.8 | 2 | 1 | 22 | 5.9 |
| ಕೃಷಿಕೂಲಿ | 146 | 86.5 | 154 | 75.5 | 299 | 80.4 |
| ಮನೆ ಕೆಲಸ | – | – | 44 | 21.5 | 44 | 11.82 |
| ಇತರೆ | 3 | 1.8 | 4 | 2 | 7 | 1.9 |

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಕೃಷಿ ಕೆಲಸ

**ಭೂಮಿಯ ಸಮಸ್ಯೆ :** ಬುಡಕಟ್ಟುಗಳ ಮುಖ್ಯ ಸಮಸ್ಯೆ ಭೂಮಿಯ ಮತ್ತು ನೆಲೆಯ ಸಮಸ್ಯೆ. ಭಾರತದ ಬಹುತೇಕ ಬುಡಕಟ್ಟು ಜನರಿಗೆ ತಮ್ಮದೇ ಆದಂತಹ ಭೂಮಿ ಇರುವುದಿಲ್ಲ. ಇವರು ಸಾಮಾನ್ಯವಾಗಿ ಅರಣ್ಯಗಳನ್ನೇ ನಂಬಿಕೊಂಡು ವಾಸಿಸುತ್ತಾರೆ. ಇತ್ತೀಚೆಗೆ ಜಾಗತೀಕರಣದ ಪ್ರಕ್ರಿಯೆಯಲ್ಲಿ ಬುಡಕಟ್ಟು ಜನರನ್ನು ಭೂ ರಹಿತ ಜನರನ್ನಾಗಿ ಮಾಡಲಾಗುತ್ತಿದೆ ಎಂಬ ದೂರು ಕೇಳಿ ಬರುತ್ತಿದೆ. ಬುಡಕಟ್ಟು ಜನರಿಗೆ ಅವರ ಹಿಂದುಳಿದಿರುವಿಕೆಯಿಂದಾಗಿ ಭೂ ಒಡೆತನದ ಕಲ್ಪನೆ, ಭೂಮಿಯ ದಾಖಲೆಗಳು ಗೊತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಭೂಮಿಯನ್ನು ಮತ್ತು ಅರಣ್ಯ ಭೂಮಿಯನ್ನು ಜಮೀನ್ದಾರರಿಗೆ ವರ್ಗಾಯಿಸಿತು ಮತ್ತು ಉಳಿದ ಭೂಮಿಯನ್ನೆಲ್ಲಾ ಅರಣ್ಯ ಭೂಮಿ ಎಂದು ಘೋಷಿಸಿತು. ಇದರಿಂದ ಬುಡಕಟ್ಟು ಜನರು ಭೂಮಿಯ ಜೊತೆಗಿನ ಸಂಬಂಧ ಕಳೆದುಕೊಂಡರು. ಹತ್ತು ಹಲವಾರು ತಲೆಮಾರುಗಳಿಂದ ಜೀವಿಸುತ್ತಿದ್ದ ಬುಡಕಟ್ಟು ಜನರಿಗೆ ತಮ್ಮದೇ ಆದ ಭೂದಾಖಲೆ ಮತ್ತು ಭೂಮಿಯ ಒಡೆತನ ಇಲ್ಲದಂತಾಯಿತು. ಮೊದಲಿದ್ದ ಬಹುತೇಕ ಅರಣ್ಯ ನೀತಿಗಳು ಅಥವಾ ಕಾನೂನುಗಳು ನಗರ ಮಾರುಕಟ್ಟೆಗಳಿಗೆ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ಸಂಬಂಧಿಸಿದವುಗಳಾಗಿದ್ದವು. ಬುಡಕಟ್ಟುಗಳೂ ಸಹ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ತಮಗೆ ಸಮೀಪವಿರುವ ಸ್ಥಳೀಯ ಮಾರುಕಟ್ಟೆಗಳಿಗೆ ಮಾರಾಟ ಮಾಡುತ್ತಿದ್ದರು. ಇವರಿಗೆ ಯಾವುದೇ ಅಧಿಕೃತವಾದ ಇವರಿಗೆಂದೇ ಮೀಸಲಿಟ್ಟ ಅರಣ್ಯ ಪ್ರದೇಶಗಳಿರಲಿಲ್ಲ. 1865ರ ಭಾರತದ ಅರಣ್ಯ ಕಾಯಿದೆಗೆ 1878ರಲ್ಲಿ ತಿದ್ದುಪಡಿ ತಂದು ಅರಣ್ಯಗಳನ್ನು ಕಂದಾಯ ಅರಣ್ಯಗಳು, ಸಂರಕ್ಷಿತ ಅರಣ್ಯಗಳು ಮತ್ತು ಗ್ರಾಮ ಅರಣ್ಯಗಳು ಎಂದು ವಿಭಾಗ ಮಾಡಿ ಪ್ರತಿಯೊಂದಕ್ಕೂ ತನ್ನದೇ ಆದ ನಿಯಮಗಳನ್ನು ರೂಪಿಸಲಾಯಿತು.

ಸರ್ಕಾರದ ಈ ನೀತಿಯಿಂದಾಗಿ ಅರಣ್ಯದ ಉತ್ಪನ್ನಗಳನ್ನೇ ತಮ್ಮ ಜೀವಾಳವಾಗಿರಿಸಿಕೊಂಡಿದ್ದ ಬುಡಕಟ್ಟುಗಳಿಗೆ ಬರ ಸಿಡಿಲು ಬಡಿದಂತಾಗಿ ಭೂಮಿ, ನದಿ ಮತ್ತು ಅರಣ್ಯಗಳ ಭಾಗವಾಗಿದ್ದ ಇವರು ಇವೆಲ್ಲದರಿಂದ ದೂರವಾದರು. ಪರಿಣಾಮವಾಗಿ ಜಾರ್ಖಂಡ್, ಒರಿಸ್ಸಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಬುಡಕಟ್ಟು ಜನರು ಭೂರಹಿತ ಬುಡಕಟ್ಟುಗಳಾಗಿ ಉಳಿದರು. ಒಂದು ಗೇಣಸನ್ನಾದರೂ ಬೆಳೆಯಲು ನಮ್ಮದೆನ್ನುವ ಭೂಮಿ ನಮಗಿಲ್ಲ. ಪ್ರತಿಯೊಂದಕ್ಕೂ ನಾವು ಹೊರಗಿನವರ ಮೇಲೆ ಅವಲಂಬಿತರಾಗಿದ್ದೇವೆ ಎಂದು ಕೇರಳದ ವಯಾನಾಡು ಪ್ರದೇಶದ ಬುಡಕಟ್ಟು ಜನರ ನಾಯಕಿ ಬುಡಕಟ್ಟು ಮಹಿಳೆ ಸಿ.ಕೆ.ಜಾನು ಹೇಳುತ್ತಾರೆ. (ಸಂವಾದ ಆಗಸ್ಟ್ 2003). ಚೆಂಚು ಸಮುದಾಯದವರಿಗೆ ಭೂಮಿಯೇ ಇಲ್ಲ ಅನ್ನುವಷ್ಟರ ಮಟ್ಟಿಗೆ ಭೂಮಿ ಇದೆ. ಆದ್ದರಿಂದ ಚೆಂಚು ಸಮುದಾಯದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವವರು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದನ್ನು ಕಾಣಬಹುದಾಗಿದೆ. ಚೆಂಚರಲ್ಲಿ ಶೇ. 5.9ರಷ್ಟು ಜನರು ಕೃಷಿಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಇದರಲ್ಲಿ ಪುರುಷರು 11.8 ರಷ್ಟಿದ್ದರೆ, ಮಹಿಳೆಯರ ಪ್ರಮಾಣವು ಶೇ. 1 ರಷ್ಟಿದ್ದಾರೆ.

## ಭೂ ಹಿಡುವಳಿ

ಚೆಂಚು ಸಮುದಾಯದವರು ನೆಲೆ ನಿಂತಿರುವ ಈ ಎಲ್ಲ ಪ್ರದೇಶಗಳೂ ನಿರಾವರಿ ರಹಿತ ಪ್ರದೇಶಗಳಾಗಿದ್ದು, ಮಳೆಯನ್ನೆ ಆಶ್ರಯಿಸಿ ಬೆಳೆ ಬೆಳೆಯುಬೇಕಾದ ಪರಿಸ್ಥಿತಿ ಇದೆ. ಅದರಲ್ಲೂ ಚೆಂಚು ಸಮುದಾಯದವರಿಗಿರುವ ಭೂಮಿಯು ಕೃಷಿ ಯೋಗ್ಯ ಭೂಮಿಯಾಗಿಲ್ಲ. ಈ ಭೂಮಿಯು ಕಲ್ಲು ಮತ್ತು ಗರ್ಸುಗಳಿಂದ ಕೂಡಿದ್ದು ಬೆಳೆ ಬೆಳೆಯಲು ಸಾಧ್ಯವೆ ಇಲ್ಲ ಅನ್ನುವಂತದ್ದಾಗಿವೆ. ಸಮೀಕ್ಷೆಗೊಳಪಟ್ಟ ಚೆಂಚರು ಹೊಂದಿರುವ ಭೂ ಹಿಡುವಳಿಯು ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಪಸಪುಲ ಗ್ರಾಮದಲ್ಲಿ ಒಟ್ಟು 7 ಕುಟುಂಬಗಳಿದ್ದು ಅದರಲ್ಲಿ 3 ಕುಟುಂಬಗಳಿಗೆ ಭೂಮಿಯೇ ಇಲ್ಲ. ಇನ್ನೂ 4 ಕುಟುಂಬಗಳ ನಡುವೆ ಕೇವಲ 13.2 ಎಕರೆ ಒಣ ಭೂಮಿ ಇರುತ್ತದೆ. ಅದೇ ರೀತಿಯಾಗಿ ಯಂಪಾಡ ಗ್ರಾಮದಲ್ಲಿ 42 ಕುಟುಂಬಗಳಿದ್ದು, 15 ಕುಟುಂಬಗಳಿಗೆ ಮಾತ್ರವೇ 44.4 ಎಕರೆ ಒಣ ಭೂಮಿ ಇದೆ. ಸರಾಸರಿ 1.05ಎಕರೆ ಮಾತ್ರ ಭೂಮಿಯನ್ನು ಹೊಂದಿದ್ದಾರೆ. ಬಾಚವಾರ ಗ್ರಾಮದಲ್ಲಿ 82 ಚೆಂಚು ಸಮುದಾಯದವರ ಕುಟುಂಬಗಳಿದ್ದು, ಇಲ್ಲಿ 16 ಕುಟುಂಬಳಿಗೆ ಮಾತ್ರವೇ ಕೇವಲ 34.5 ಎಕರೆ ಒಣ ಭೂಮಿ ಇರುವುದು ಕಂಡು ಬರುತ್ತದೆ. ಸರಾಸರಿ 0.42ಎಕರೆ ಭೂಮಿಯನ್ನು ಹೊಂದಿದ್ದಾರೆ. ಅದೇ ರೀತಿಯಾಗಿ ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಮೋತಕಪಲ್ಲಿ ಗ್ರಾಮದಲ್ಲಿ ವಾಸಿಸುವ ಚೆಂಚು ಸಮುದಾಯದವರ 11 ಕುಟುಂಬಗಳಲ್ಲಿ ಕೇವಲ ಮೂರು ಕುಟುಂಬಗಳು 6ಎಕರೆ ಮಾತ್ರವೆ ಭೂಮಿಯನ್ನು ಹೊಂದಿದ್ದು ಉಳಿದ ಕುಟುಂಬಗಳು ವ್ಯವಸಾಯದಿಂದ ದೂರವೇ ಉಳಿದಿರುವುದು ಕಂಡು ಬರುತ್ತದೆ. ಚೆಂಚು ಬುಡಕಟ್ಟುವಿನ ಭೂ ಹಿಡುವಳಿ ವ್ಯವಸ್ಥೆಯನ್ನು ಅವಲೋಕಿಸಿದಾಗ ಈ ದೇಶದ ಮೂಲ ನಿವಾಸಿಗಳು ಯಾವ ರೀತಿಯ ಗಂಭಿರವಾದ ಭೂಮಿಯ ಸಮಸ್ಯೆಗಳು ಎದುರಿಸುತ್ತವೆ ಎಂದು ತಿಳಿದುಬರುತ್ತದೆ.

## ಇತರೆ ಕಸುಬುಗಳು

ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇಂತಹ ಬುಡಕಟ್ಟು ಸಮುದಾಯದ ಜೀವನಕ್ರಮ ಬದಲಾವಣೆಗೆ ಒಳಪಡುತ್ತಿದೆ. ಪರಂಪರಾಗತವಾದ ಮೂಲ ಕಸುಬಗಳ ಜೊತೆಯಲ್ಲಿ ಆಧುನಿಕ ವೃತ್ತಿಗಳು ಸೇರ್ಪಡೆಗೊಂಡಿವೆ.


ಸಮೀಕ್ಷೆಗೊಳ್ಳಪಟ್ಟ ಚೆಂಚು ಸಮುದಾಯದ ಆರ್ಥಿಕ ಸ್ಥಾನಮಾನವು ಕೆಳಸ್ತರದಲ್ಲಿದೆ. ಅವರಿಗೆ ಮನೆ, ಭೂಮಿ, ಯಾವುದು ಇಲ್ಲದಾಗಿದೆ. ಅಕ್ಷರ ಜ್ಞಾನವಿಲ್ಲದ ಇವರು ಬುದ್ಧಿವಂತರು ಹಾಗೂ ವೃತ್ತಿಪರರು. ಯಾವುದೇ ಕೆಲಸಕೊಟ್ಟರೂ ಅತ್ಯಂತ ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡುವ ಶಕ್ತಿ ಇವರಲ್ಲಿದೆ. ಯಾವ ಹೊಸ ವೃತ್ತಿಯೇ ಆಗಲಿ ಅದಕ್ಕೆ ಬಹುಬೇಗ ಹೊಂದಿಕೊಳ್ಳುವರು.

ಇಂದು ಚೆಂಚು ಬುಡಕಟ್ಟಿನವರು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಚೆಂಚು ಬುಡಕಟ್ಟಿನವರಲ್ಲಿ ಇತರೆ ಕಸುಬುಗಳಲ್ಲಿ ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವವರ ಸಂಖ್ಯೆ, ನಿರುದ್ಯೋಗಿಗಳ ಸಂಖ್ಯೆ ಮುಂತಾದವುಗಳು ಈ ಕೆಳಗಿನಂತಿದೆ.

## ಬೇಟೆ

ಬೇಟೆಯಾಡಲು ವಿವಿಧ ಬಗೆಯ ಬಲೆಗಳು, ಬಿಲ್ಲು, ಕಣ್ಣಿ, ಜಿಗುರು, ಮುಕ್ಕೊಡು, ತಡಿಕೆ, ಮಿಡಿ, ಪಾಜಿ, ಬಲೆ, ಬರ್ಚಿ, ಕೊಡಲಿ ಮುಂತಾದ ಸಾಧನಗಳನ್ನು ಬಳಸುತ್ತಾರೆ. ಹಾಗೂ ಬೇಟೆನಾಯಿ, ಗೌಜಿಗನ ಹಕ್ಕಿಯನ್ನು ಪಳಗಿಸಿ ಬೇಟೆಯಾಡುವ ಸಂದರ್ಭಗಳಲ್ಲಿ ಅವುಗಳನ್ನು ಸಹ ಬಳಸಿಕೊಳ್ಳುವರು. ಮೇಲ್ಕಾಣಿಸಿ ಯಾವ ಬೇಟೆಯೂ ಹಣಕ್ಕಾಗಿ ಮಾರಾಟ ಮಾಡುವುದಿಲ್ಲ. ಆದರೆ ತಮಗೆ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುವಂತಹ ಮೊಲ, ಕೌಜುಗಗಳನ್ನು ಹಣಕ್ಕೆ ಮಾರಿ ಜೀವನ ಸಾಗಿಸುತ್ತಾರೆ. ಇವೆಲ್ಲಾ ಹೊಟ್ಟೆಪಾಡಿಗಾಗಿ ಮಾಡುವ ಬೇಟೆಗಳಾಗಿರುತ್ತವೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712



ಪ್ರಸ್ತುತ ದಿನಗಳಲ್ಲಿ ಇವರು ಬೇಟೆಯಾಡುವುದು ಕಡಿಮೆಯಾಗುತ್ತಾ ಬಂದಿದೆ. ನಾಗರಿಕತೆ ಮುಂದುವರೆದಂತೆಲ್ಲ ಈ ಸಮುದಾಯದ ಜನರು ತಮ್ಮ ಮೂಲ ವೃತ್ತಿಗಳಿಂದ ದೂರಾವಾಗುತ್ತಿದ್ದಾರೆ. ಆದರೆ ಬೇಟೆ ಅವರ ಒಂದು ಕಾಲದ ಕಾಡಿನ ಜೀವನವನ್ನು ಪ್ರತಿನಿಧಿಸುವುದು ಕಂಡಬರುತ್ತದೆ.

## ಆಹಾರ ಪದ್ಧತಿ

ಚೆಂಚರು ತಮ್ಮ ಆಹಾರಕ್ಕಾಗಿ ಕಾಡನ್ನೇ ನಂಬಿದ್ದವರು. ಹಿಂದಿನ ಕಾಲದಲ್ಲಿ ಕಾಡುಮೇಡುಗಳಲ್ಲಿ ಸಿಗುವಂತಹ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ತಿನ್ನುವುದು ಹಾಗೂ ಅವುಗಳನ್ನು ಬೇಟೆಯಾಡುವ ತಂತ್ರಗಳನ್ನು ಕರಗತ ಮಾಡಿಕೊಂಡವರಾಗಿದ್ದರು. ಹೆಚ್ಚಾಗಿ ಬೇಟೆಗಳಲ್ಲಿ ಚಿಪ್ಪಂದಿ, ಬೆಳ್ಳಿಲಿ, ಆಳಿಲು, ಮೊಲ, ತೋಡನ, ಜಿಂಕೆ, ಮುಳ್ಳುಹಂದಿ, ಕಾಡುಹಂದಿ, ಕಾಡುಕುರಿ, ಉಡ, ಮುಂಗುಸಿ, ಕಡವೆ, ಹಾರುಬೆಕ್ಕು, ಮುಂತಾದ ಪ್ರಾಣಿಗಳಾದರೆ, ಪಕ್ಷಿಗಳಲ್ಲಿ ನವಿಲು, ನೀರ್ಕೋಳಿ, ಗೌಜಿಗನ ಹಕ್ಕಿ, ಕಾಡುಕೋಳಿ, ಪಾರಿವಾಳ, ಲಗಡು, ಗೂಬೆ, ಗಿಳಿ, ಬುರಲೆ ಹಕ್ಕಿ, ಮರಕುಟಿಗ, ಬಾವುಲಿ, ಕೊಕ್ಕರೆ, ಗಿಡಗ ಹೀಗೆ ಇತರೆ ಅನೇಕ ವಿಧದ ಪಕ್ಷಿಗಳ ಮಾಂಸವನ್ನು ಅವರು ಆಹಾರವಾಗಿ ಬಳಸಿಕೊಳ್ಳುತ್ತಿದ್ದರು. ಕಾಡಿನಲ್ಲಿ ಸುಲಭವಾಗಿ ದೊರೆಯುವ ಗಿಡ ಮರ ಬಳ್ಳಿಗಳ ಎಲೆ, ಕಾಂಡದಂಥ ಸಸ್ಯಾಹಾರವನ್ನು ಕೂಡ ಬಳಸುವುದು ರೂಢಿಯಲ್ಲಿತ್ತು. ಕೆರೆ ಮುಂತಾದ ನೀರಿನ ಆಶ್ರಯದಲ್ಲಿ ಸಿಗುವ ಮೀನು ಮುಂತಾದ ಜಲಚರಗಳನ್ನು ಅವರು ಆಹಾರವಾಗಿ ಬಳಸುತ್ತಿದ್ದರು. ನಾಗರೀಕತೆಯ ಪ್ರಭಾವ ಹೆಚ್ಚಾದಂತೆ ಕಾಡುಗಳು ನಾಶವಾಗತೊಡಿಗದವು. ಇದರಿಂದಾಗಿ ಕಾಡಿನ ಸಂಪತ್ತು ಕಡಿಮೆಯಾಗತೊಡಗಿತು. ಆದ್ದರಿಂದ ಅವರು ತಮ್ಮ ಆಹಾರ ಸಂಗ್ರಹಣೆಗಾಗಿ ಅನ್ಯ ಮಾರ್ಗಗಳನ್ನು ಹುಡುಕಿಕೊಂಡಿದ್ದಾರೆ. ಆದರೆ ಈಗಲೂ ಅಲ್ಲಲ್ಲಿ ಕಂಡುಬರುವ ದಟ್ಟವಾದ ಕಾಡುಗಳಿಗೆ ಅವರು ಗುಂಪುಗುಂಪಾಗಿ ಇಲ್ಲವೇ ಒಂಟಿಯಾಗಿ ಬೇಟೆಯಾಡಲು ಹೋಗುವುದು ಕಂಡುಬರುತ್ತದೆ. ಕಾಡಿನಲ್ಲಿ ದೊರಕಬಹುದಾದ ಆಹಾರವನ್ನಲ್ಲದೇ ಕಟ್ಟಿಗೆ ಮುಂತಾದ ಕಾಡಿನ ಉತ್ಪನ್ನಗಳನ್ನು ಅವರು ತಂದು ಕಲೆ ಹಾಕುತ್ತಾರೆ. ಯಾವಾಗಲೂ ಬೇಟೆಯನ್ನೇ ನಂಬಿ ಬದುಕಲು ಸಾಧ್ಯವಾಗದ ಕಾರಣ, ಬೇಟೆಯನ್ನಾಡಲು ಸಾಧ್ಯವಾಗದ ದಿನಗಳಲ್ಲಿ ಚೆಂಚರ ಹೆಂಗಸರು ಮತ್ತು ಗಂಡಸರು ಬೇಸಾಯ ಮಾಡುವ ರೈತರ ಹೊಲಗಳಿಗೆ ಹೋಗಿ ಕೂಲಿ ಕೆಲಸ ಮಾಡಿ ಹಣ ಸಂಪಾದನೆ ಮಾಡುತ್ತಾರೆ. ಅದರಿಂದ ದೊರಕುವ ಅಲ್ಪಸ್ವಲ್ಪ ಹಣದಿಂದ ಆಹಾರ ಪದಾರ್ಥಗಳನ್ನು ಕೊಳ್ಳುತ್ತಾರೆ. ಬಹುತೇಕ ಅಕ್ಕಿ, ಜೋಳ, ಮೊದಲಾದವುಗಳನ್ನು ಹೆಚ್ಚಾಗಿ ಬಳಸುವುದು ಕಂಡುಬರುತ್ತಿದೆ. ತಾವು ಕೆಲಸ ಮಾಡುವ ರೈತರ ಹೊಲಗಳಲ್ಲಿ ಬೆಳೆ ನಾಶ ಮಾಡುವ ಇಲಿಗಳನ್ನು ಹಿಡಿದು ಅದಕ್ಕೆ ಪ್ರತಿಫಲವಾಗಿ ಹಣ ಪಡೆಯುತ್ತಾರೆ. ಇಲ್ಲವೇ ದವಸಧಾನ್ಯವನ್ನು ಕೂಡ ಪಡೆಯುವುದು ರೂಢಿಯಲ್ಲಿದೆ.





ಕಾಡಿನಲ್ಲಿಯೇ ದೊರಕಬಹುದಾದ ಆಹಾರವನ್ನು ಬೇಟೆಯಾಡುವುದರ ಮೂಲಕ ಸಂಗ್ರಹಿಸುತ್ತಾರೆ. ಹಾಗೆ ಸಂಗ್ರಹಿಸಿದುದನ್ನು ಶೇಖರಿಸಿಡುತ್ತಾರೆ.

## ವಸತಿ ಸಮಸ್ಯೆ

ಇವರು ಇಂದಿಗೂ ವಾಸಯೋಗ್ಯ ಮನೆಯಿಲ್ಲದೆ ಗುಡಿಸಲಗಳಲ್ಲಿ, ಟಿನ್ ಮನೆಗಳಲ್ಲಿಯೇ ವಾಸಿಸುತ್ತಿದ್ದಾರೆ. ಸರಕಾರ ವಿವಿಧ ವಸತಿಯೋಜನೆಯ ಮನೆಗಳು ಪಡೆದುಕೊಳ್ಳಲು ಇವರಿಗೆ ಸಾಧ್ಯವಾಗಿಲ್ಲ.



## ವೃದ್ಧಾಪ್ಯ ವೇತನ

60 ಹಾಗೂ ಅದಕ್ಕಿಂತಲೂ ಮೇಲ್ಪಟ್ಟ ವಯೋವಾನದ ಹಿರಿಯರಿಗೆ ವೃದ್ಧಾಪ್ಯವೇತನವನ್ನು ಸರ್ಕಾರ ನೀಡುತ್ತದೆ. 60 ವರ್ಷಕ್ಕಿಂತ ಮೇಲ್ಪಟ್ಟ ವೃದ್ಧರಲ್ಲಿ ಪುರುಷರು 134 ಹಾಗೂ ಮಹಿಳೆಯರು 126 ಒಟ್ಟು 260 ಜನರಿದ್ದಾರೆ. ಆದರೆ ವೃದ್ಧಾಪ್ಯ ವೇತನ ಪಡೆಯುತ್ತಿರುವವರಲ್ಲಿ 7 ಜನ ಪುರುಷರು 8 ಜನ ಮಹಿಳೆಯರು ಮಾತ್ರ ವೃದ್ಧಾಪ್ಯವೇತನ



ISSN : 2249-2429 ಸಂಶೋಧನೆ RNI REG.NO.KARKAN/2011/38712

ಪಡೆಯುತ್ತಿದ್ದಾರೆ. ಅಜ್ಞಾನ ಹಾಗೂ ಬಡತನದಲ್ಲಿರುವ ನಿರ್ಗತಿಕ ವೃದ್ಧರಿಗೆಂದು ನಿಗದಿ ಮಾಡಿದ ಈ ಸೌಲಭ್ಯ ಪಡೆಯುವಲ್ಲಿಯೂ ಚೆಂಚರು ವಂಚಿತರಾಗಿರುವುದು ಕಂಡುಬರುತ್ತದೆ.

**ಕೋಷ್ಟಕ : ಸಮೀಕ್ಷೆಗೊಳಪಟ್ಟ ಚೆಂಚು ಬುಡಕಟ್ಟಿನವರ ವೃದ್ಧಾಪ್ಯವೇತನದ ವಿವರ**

| ಕ್ರ.ಸಂ. | ವಿವರ | ಪುರುಷ | ಸ್ತ್ರೀ | ಒಟ್ಟು |
|---|---|---|---|---|
| 1. | ಒಟ್ಟು ಜನಸಂಖ್ಯೆ | 301 | 316 | 617 |
| 2. | 60 ಕ್ಕಿಂತ ಮೇಲ್ಪಟ್ಟ ವಯೋಮಾನದವರು | 134 | 126 | 260 |
| 3. | ವೃದ್ಧಾಪ್ಯವೇತನ ಪಡೆಯುತ್ತಿರುವವರು | 7 | 8 | 15 |
| 4. | ವೃದ್ಧಾಪ್ಯವೇತನ ಪಡೆಯದೆ ಇರುವವರು | 127 | 118 | 245 |

## ಇತರೆ ಸೌಲಭ್ಯಗಳು

ಸಮೀಕ್ಷೆಗೊಳಪಟ್ಟ 142 ಚೆಂಚು ಕುಟುಂಬಳಲ್ಲಿ 141 ಕುಟುಂಬಗಳಿಗೆ ಪಡಿತರ ಚೀಟಿ ಪಡೆದಿರುವುದು ಕಂಡುಬರುತ್ತದೆ. 128 ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವಿದ್ದು, ಇನ್ನೂ 14 ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವೆ ಹೊಂದಿರುವುದಿಲ್ಲ. ವಿದ್ಯುತ್ ಸೌಲಭ್ಯ ಹೊಂದಿರುವ ಕುಟುಂಬಗಳಲ್ಲಿ ಭಾಗ್ಯ ಜ್ಯೋತಿ/ಕುಟಿರಜ್ಯೋತಿಯ ಸೌಲಭ್ಯ ಹೊಂದಿರುವುದು 9 ಕುಟುಂಬಗಳು ಕಂಡುಬರುತ್ತವೆ. ಚೆಂಚುಗಳಲ್ಲಿ ಗ್ಯಾಸ್ ಸೌಲಭ್ಯ ಹೊಂದಿರುವುದು ಕೇವಲ 1 ಕುಟುಂಬ ಮಾತ್ರವೇ ಹೊಂದಿದೆ. ಟಿವಿ 2 ಕುಟುಂಬಗಳು ಹೊಂದಿದೆ. ಮೊಬೈಲ್ 33 ಜನರು ಹೊಂದಿದ್ದರೆ, ಸ್ನಾನಗೃಹಗಳು ಹೊಂದಿರುವುದು 16 ಕುಟುಂಬಗಳು ಮಾತ್ರ. ಇನ್ನೂ 126 ಕುಟುಂಬಗಳಿಗೆ ಸ್ನಾನಗೃಹಗಳೆ ಇಲ್ಲದಿರುವುದು. ಮತ್ತು ಇಡೀ ಚೆಂಚು ಕುಟುಂಬಗಲ್ಲಿ ಒಂದೇ ಒಂದು ಶೌಚಾಲಯ ಇಲ್ಲದಿರುವುದನ್ನು ಗಮನಿಸಿದಾಗ ಪಡಿತರ ಚೀಟಿ ಮತ್ತು ವಿದ್ಯುತ್ ಸೌಲಭ್ಯವೊಂದು ಬಿಟ್ಟರೆ ಉಳಿದ ಎಲ್ಲ ಸೌಲಭ್ಯಗಳಿಂದ ಈ ಸಮುದಾಯ ವಂಚಿತವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

## ಶಿಕ್ಷಣ



ಚೆಂಚು ಬುಡಕಟ್ಟಿನವರಿಗೆ ಶಿಕ್ಷಣ ನುಂಗಲಾರದ ತುತ್ತಾಗಿದೆ. ಬಡತನ, ಅಜ್ಞಾನ ಮತ್ತು ಮೂಢನಂಬಿಕೆ ಮೊದಲಾದ ಕಾರಣಗಳಿಂದಾಗಿ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಕೂಲಿ-ನಾಲಿ ಕಳುಹಿಸುವುದಕ್ಕೆ ಪಾಲಕರೇ ಬೆಂಬಲಿಸುತ್ತಾರೆ. ಆರ್ಥಿಕ ತೊಂದರೆಯ ಕಾರಣದಿಂದ, ಪಾಲಕರ ಬೇಜಾವಾಬ್ದಾರಿ ತನದಿಂದ, ಶಿಕ್ಷಕರ ಅಸಡ್ಡೆತನದಿಂದ ಮತ್ತು ಶ್ರೀಮಂತರ ಮಕ್ಕಳ ಪಕ್ಕದಲ್ಲಿ ಸರಿಸಮಾನವಾಗಿ ಕುಳಿತುಕೊಳ್ಳದೆ, ಸಂಕೋಚ ಮನೋಭಾವನೆಯಿಂದಾಗಿ ಈ ಮಕ್ಕಳು ಶಾಲೆಗೆ ತಪ್ಪಿಸುತ್ತಾರೆ.

ಪಶುಪಾಲನೆ ಮತ್ತು ಕೃಷಿಕೂಲಿ ಎರಡನ್ನೇ ನಂಬಿ ಜೀವಿಸುವ ಈ ಸಮುದಾಯದಲ್ಲಿ ಬಾಲಕಾರ್ಮಿಕ ಪದ್ಧತಿ ಅಧಿಕವಾಗಿದೆ. ಏಳೆಂಟು ವರ್ಷದ ಮಕ್ಕಳು ಶಾಲೆಬಿಟ್ಟು ದನಕರು, ಕುರಿಮೇಕೆಗಳ ಹಿಂದೆ ತಿರುಗುವ ದೃಶ್ಯ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಆಕಸ್ಮಿಕವಾಗಿ ಮಕ್ಕಳು ಶಾಲೆಗೆ ಹೋಗುತ್ತಿದ್ದರೂ, ಸುಗ್ಗಿ ಮತ್ತು ಬೇಸಾಯದ ಕಾಲದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳುವುದು, ಆಡಿಸುವುದು,



ಹುಲ್ಲು, ನೀರು ತರುವುದು, ಹೊಲಗದ್ದೆಗಳಿಗೆ ಬುತ್ತಿಕೊಟ್ಟು ಬರುವುದು ಮೊದಲಾದ ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಾರೆ.

ಆದರೆ ಇತ್ತೀಚಿಗೆ ಸರ್ಕಾರದ ಕಡ್ಡಾಯ ಶಿಕ್ಷಣ ನೀತಿ ಮತ್ತು ಇತರ ಸೌಲಭ್ಯಗಳಿಂದಾಗಿ ಇತ್ತೀಚಿಗೆ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.

**ಕೋಷ್ಟಕ : ಸಮೀಕ್ಷೆಗೊಳಪಟ್ಟ ಚೆಂಚರ ಸಾಕ್ಷರತೆ ಅರ್ಹ ಮತ್ತು ಅನರ್ಹ ಗುಂಪು**

| ಜಿಲ್ಲೆಗಳು | ಪುರುಷ | ಶೇಕಡ | ಸ್ತ್ರೀ | ಶೇಕಡ | ಒಟ್ಟು | ಶೇಕಡ |
|---|---|---|---|---|---|---|
| ಒಟ್ಟು ಜನಸಂಖ್ಯೆ | 301 | – | 316 | – | 617 | – |
| ಸಾಕ್ಷರತೆಗೆ ಅನರ್ಹರು | 68 | 22.5 | 49 | 15.5 | 117 | 19 |
| ಸಾಕ್ಷರತೆಗೆ ಅರ್ಹರು | 233 | 77.5 | 267 | 84.5 | 500 | 81 |
| ಸಾಕ್ಷರರು | 97 | 41.6 | 57 | 21.3 | 154 | 30.8 |
| ನಿರಕ್ಷರಿಗಳು | 136 | 58.4 | 210 | 78.7 | 346 | 69.2 |

**ಕೋಷ್ಟಕ : ಸಮೀಕ್ಷೆಗೊಳಪಟ್ಟ ಚೆಂಚು ಬುಡಕಟ್ಟಿನ ಸಾಕ್ಷರತೆ ಪ್ರಮಾಣ**

| ಜಿಲ್ಲೆಗಳು | ಪುರುಷ | ಶೇಕಡ | ಸ್ತ್ರೀ | ಶೇಕಡ | ಒಟ್ಟು | ಶೇಕಡ |
|---|---|---|---|---|---|---|
| ಒಟ್ಟು ಜನಸಂಖ್ಯೆ | 301 | | 316 | | 617 | |
| ಸಾಕ್ಷರರು | 97 | 41.6 | 57 | 21 | 154 | 30.8 |
| ಮೆಟ್ರಿಕ್ ಪೂರ್ವ ಸಾಕ್ಷರತೆ | 89 | 91.1 | 53 | 92.9 | 142 | 92.2 |
| ಪ್ರಾಥಮಿಕ ಶಿಕ್ಷಣ | 57 | 64 | 34 | 64.2 | 91 | 64 |
| ಮಾಧ್ಯಮಿಕ ಶಿಕ್ಷಣ | 17 | 19.1 | 12 | 22.6 | 29 | 20.5 |
| ಪ್ರೌಢ ಶಿಕ್ಷಣ | 15 | 16.9 | 7 | 13.2 | 22 | 15.5 |
| ಮೆಟ್ರಿಕ್ ನಂತರದ ಸಾಕ್ಷರತೆ | 8 | 8.9 | 4 | 7.54 | 12 | 8.4 |
| ಪದವಿ ಪೂರ್ವ | 3 | 37.5 | 3 | 75 | 6 | 50 |
| ಡಿಪ್ಲೊಮಾ | 1 | 12.5 | 1 | 25 | 2 | 16.6 |
| ಪದವಿ | 4 | 50 | – | – | 4 | 33.4 |
| ನಿರಕ್ಷರಿಗಳು | 136 | 58.4 | 210 | 78.7 | 346 | 69.2 |

ಸಾಕ್ಷರತೆ ಪಡೆಯಲು ಅನರ್ಹವಾದವರ ಒಟ್ಟು ಪ್ರಮಾಣ ಶೇ. 19 ಇದ್ದು ಅದರಲ್ಲಿ ಗಂಡು ಮಕ್ಕಳ ಪ್ರಮಾಣ ಶೇ. 22.5 ಹಾಗೂ ಹೆಣ್ಣು ಮಕ್ಕಳ ಪ್ರಮಾಣ ಶೇ. 15.5 ಮಾತ್ರ ಕಂಡುಬರುತ್ತದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣ ಒಟ್ಟು ಶೇ. 81 ಇದ್ದು ಅದರಲ್ಲಿ ಪುರುಷರ ಪ್ರಮಾಣವು ಶೇ. 77.5 ಹಾಗೂ ಮಹಿಳೆಯರ ಪ್ರಮಾಣ ಶೇ. 84.5ರಷ್ಟಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಸಾಕ್ಷರತೆ ಪಡೆಯಲು ಅರ್ಹವಾದವರಲ್ಲಿ ಸಾಕ್ಷರತೆ ಹೊಂದಿದವರ ಪ್ರಮಾಣವು ಪುರಷರಲ್ಲಿ ಶೇ. 41.6 ಹಾಗೂ ಮಹಿಳೆಯರಲ್ಲಿ ಶೇ. 21.3 ಸಾಕ್ಷರತೆಯನ್ನು ಪಡೆದವರ ಒಟ್ಟು ಪ್ರಮಾಣವು ಶೇ. 30.8ರಷ್ಟು ಮಾತ್ರ ಕಂಡುಬರುತ್ತದೆ.

ಸಾಕ್ಷರತೆ ಪಡೆದವರಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣ ಪಡೆದವರ ಒಟ್ಟು ಪ್ರಮಾಣವು ಶೇ. 92.2ರಷ್ಟು ಇದೆ. ಇದರಲ್ಲಿ ಪುರುಷರು ಶೇ. 91.1 ರಷ್ಟಿದ್ದರೆ ಮಹಿಳೆಯರು ಶೇ. 92.9ರಷ್ಟು ಕಂಡುಬರುತ್ತದೆ.

## ಪರಿಹಾರೋಪಾಯಗಳು

ಯಾದಗಿರಿ ಜಿಲ್ಲೆಯ ಚೆಂಚು ಬುಡಕಟ್ಟಿನವರ ಆರ್ಥಿಕ ಸ್ಥಿತಿಗತಿಗಳ ಅಧ್ಯಯನದ ಹಿನ್ನೆಲೆಯಲ್ಲಿ ಈ ಸಮುದಾಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ.

1. ಚೆಂಚು ಸಮುದಾಯದವರು ಬಹುತೇಕ ಪ್ರದೇಶಗಳಲ್ಲಿ ಗುಡಿಸಲು ಟಿನ್‌ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸುವುದು.
2. ಚೆಂಚು ಸಮುದಾಯಕ್ಕೆ ಸರ್ಕಾರವು ವ್ಯವಸಾಯಕ್ಕಾಗಿ ಭೂಮಿಯನ್ನು ಒದಗಿಸುವುದು.
3. ಚೆಂಚುಗಳು ವಾಸಿಸುವ ಸ್ಥಳಗಳಲ್ಲಿ ಗುಡಿ ಕೈಗಾರಿಕೆಗಳ ತರಬೇತಿಯನ್ನು ನೀಡುವುದು.
4. ಮಹಿಳೆಯರನ್ನು ಸ್ವ-ಸಹಾಯ ಗುಂಪಿನಲ್ಲಿ ಸೇರುವಂತೆ ಪ್ರೇರೇಪಣೆ ಮಾಡಿ, ಅವರಿಗೆ ಅನೇಕ ಯೋಜನೆಗಳನ್ನು ಪರಿಚಯಿಸಿ ಮಾಹಿತಿ ಒದಗಿಸುವುದು ಮತ್ತು ಪ್ರೋತ್ಸಾಹಿಸುವುದು.
5. ಸ್ವಯಂ ಸೇವಾ ಸಂಸ್ಥೆಗಳು ಸರಕಾರ ಮತ್ತು ಸಮುದಾಯಗಳ ನಡುವೆ ಕೊಂಡಿಯಾಗಿ ಸರಕಾರದ ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಂದಾಗುವುದು
6. ಅಂತ್ಯೋದಯ ಪಡಿತರ ಚೀಟಿ ಪ್ರತಿಯೊಂದು ಕುಟುಂಬಗಳಿಗೂ ದೊರಕುವಂತೆ ಮಾಡುವುದು.
7. ಚೆಂಚು ಸಮುದಾಯದ ನಿರ್ಲಕ್ಷಿತ ವೃದ್ಧರಿಗೆ, ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸುವುದು.
8. ವಿಶೇಷ ಸಾಲ ಸೌಲಭ್ಯಗಳನ್ನು ಬ್ಯಾಂಕ್‌ಗಳಿಂದ ದೊರೆಯುವಂತೆ ಮಾಡಿ, ಉಳಿತಾಯ ಮನೋಭಾವನೆ ಬೆಳಸುವುದು.
9. ಆರೋಗ್ಯ ಮತ್ತು ಪೌಷ್ಟಿಕತೆ, ಶಿಕ್ಷಣ ಮುಂತಾದವುಗಳು ಹಾಗೂ ಮಹಿಳೆಯರ ಶಿಕ್ಷಣದ ಕುರಿತು ಉತ್ತೇಜನ ಕೊಡಬೇಕು. ಹಾಗೇ ಚೆಂಚು ಮಕ್ಕಳು ಅವಶ್ಯವಾಗಿ ನಿರಂತರವಾಗಿ ಶಾಲೆಗೆ ಹೋಗುವಂತೆ ನೋಡಿಕೊಳ್ಳಬೇಕು.
10. ಇವರು ವಾಸಿಸುವ ಕಾಲೋನಿಗಳಿಗೆ ನೀರು, ವಸತಿ, ವಿದ್ಯುತ್, ಶೌಚಾಲಯ, ಸಮುದಾಯ ಭವನ, ಅಂಗನವಾಡಿ ಕೇಂದ್ರ, ಶಾಲೆ, ಗ್ರಂಥಾಲಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

## ಆಕರ ಗ್ರಂಥಗಳು


- **Ananthakrishna Iyer, L K. :** 1998, The Mysore Tribes and Castes (Mysore : The Mysore University, 1930; rpt. New Delhi: Mittal Publications), 5 Vols.
- **Enthoven, R E. :** 1999, The Tribes and Castes of Bombay (New Delhi: Asian Education Service.
- **Hussan Syed Siraj :** 1989, Ul, The Castes and Tribes of HEH, The Nizams Dominion (New Delhi : Asian Education Services.
- **Luiz, AAD :** 1963, Tribes of Mysore, (Bangalore: G S Viswa and company.
- **Misra, P K ,Molhotra K C, :** 1982, Nomads in India Calcutta : ASI.
- **Nirmal Kumar Bose :** 1972, Some Indian Tribes (New Delhi : NBT)
- **Nangundayya, H V. :** 1906, The Ethnographical Survey of Mysore (Bangalore : Government press)
- **Simha, RN. :** 1999, Scheduled Castes and Scheduled Tribes (Prohibition of Transfer of Certain Lands ) Act and Rules in Karnataka (Bangalore : Sree Ambica Book House)
- **Singh, K S. :** 1994, The Scheduled Tribes (Delhi :Oxford University Press)
- **Thurston and Rangachari K. :** 1987, Castes and Tribes of Southern India New Delhi (Asian Educational Service)
- **ಕೋಡಿರಾಂಪುರ ರಂಗಾರೆಡ್ಡಿ :** 2000, 'ಚೆಂಚು,ಚೆಂಚರು' ಲಕ್ಕಪ್ಪಗೌಡ, ಎಚ್.ಜೆ. (ಪ್ರಸಂ), ಕರ್ನಾಟಕ ಬುಡಕಟ್ಟುಗಳು (ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ), ಸಂಪುಟ 2,
- **ಮಾನ್ವಡೆ ಮಲ್ಲಿಕಾರ್ಜುನ ಬಿ. :** 2014, ಯಾದಗಿರಿ ಜಿಲ್ಲೆಯ ಚೆಂಚು ಬುಡಕಟ್ಟು ಸಂಸ್ಕೃತಿ. ಕಿರು ಸಂಶೋಧನಾ ಯೋಜನೆಯ ಪ್ರಬಂಧ (ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ)
- **ತಿಪ್ಪೇಸ್ವಾಮಿ ಜಿ. ಆರ್. (ಲೇ) :** 2000, 'ಅಡವಿ ಚೆಂಚರು' ಲಕ್ಕಪ್ಪಗೌಡ ಎಚ್.ಜೆ. (ಪ್ರಸಂ), ಕರ್ನಾಟಕ ಬುಡಕಟ್ಟುಗಳು (ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ) ಸಂಪುಟ 2,
- **ನಾರಾಯಣ ಟಿ. :** 1993, ಯಾನದಿಗರ ಸಂಸ್ಕೃತಿ (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ)
- **ದಳವಾಯಿ ರಾಜಪ್ಪ :** 1993, ಹಕ್ಕಿಪಿಕ್ಕಿಯರ ಸಂಸ್ಕೃತಿ (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ,1993)
- **ಬೆಟಗೇರಿ ಪ್ರಹ್ಲಾದ್ :** 1993, ಅಡವಿ ಚೆಂಚರ ಸಂಸ್ಕೃತಿ (ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ)
- **ಜಿ. ಆರ್. ಟಿ (ಲೇ) :** 2011, "ಅಡವಿ ಚೆಂಚರು" ಮುರಿಗೆಪ್ಪ ಎ, (ಪ್ರ.ಸಂ), ದಕ್ಷಿಣ ಭಾರತೀಯ ಜಾನಪದ ಕೋಶ (ಹಂಪಿ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ) ಸಂಪುಟ-1
- **ಬಿ. ಕೆ. ಆರ್, (ಅನುವಾದ ಕೆ.ಎಸ್) :** 2011, "ಚೆಂಚರು" ಮುರಿಗೆಪ್ಪ ಎ. (ಪ್ರ.ಸಂ), ದಕ್ಷಿಣ ಭಾರತೀಯ ಜಾನಪದ ಕೋಶ (ಹಂಪಿ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ) ಸಂಪುಟ-1
- **ಮಾನ್ವಡೆ ಬಿ. ಮಲ್ಲಿಕಾರ್ಜುನ :** 2008, 'ಕೊರಮ' (ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ)
- **ಮೈತ್ರಿ ಕೆ.ಎಂ. :** 2002, 'ಬುಡಕಟ್ಟು ಕುಲಕಸಬುಗಳು' (ಹಂಪಿ ಕನ್ನಡ ವಿಶ್ವವಿದ್ಯಾಲಯ)


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಭಾರತೀಯ ಮಹಿಳೆಯರ ಸಬಲೀಕರಣದ ಐತಿಹಾಸಿಕ ಬೆಳವಣಿಗೆ

✍ **ರಾಜಶೇಖರ ಮಾವಿನಮರ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ
ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ರಾ.ಚ.ವಿ. ಬೆಳಗಾವಿ

## ಪರಿಚಯ

ಮಹಿಳಾ ಸಬಲೀಕರಣವು ಆಧುನಿಕ ಸಮಾಜದ ಒಂದು ಜಾಗತಿಕ ವಿದ್ಯಮಾನವಾಗಿದೆ. ಭಾರತದಲ್ಲಿ 1950ರ ನಂತರ ಚರ್ಚಾಸ್ಪದ ವಿಷಯವಾಗಿ ಬೆಳೆಯುತ್ತಿದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಮಹಿಳಾ ಸಬಲೀಕರಣಕ್ಕೆ ಪ್ರಥಮ ಆದ್ಯತೆ ನೀಡಲಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳಾದ ಸಮಾನತೆಯ ಹಕ್ಕು ಮತ್ತು ಶೋಷಣೆಯ ವಿರುದ್ಧದ ಹಕ್ಕುಗಳ (14–18ನೇ ಕಲಂ ಮತ್ತು 23–24ರ ಕಲಂ) ಅಧಿನಿಯಮದ ಪ್ರಕಾರ ಲಿಂಗ ತಾರತಮ್ಯ ಮತ್ತು ಶೋಷಣೆಯನ್ನು ಹತ್ತಿಕ್ಕುತ್ತದೆ. ಭಾರತ ಸರ್ಕಾರವು 2001ನೇ ವರ್ಷವನ್ನು 'ಮಹಿಳಾ ಸಶಕ್ತಿಕರಣ ವರ್ಷವೆಂದು ಸಾರಿದೆ. ಪ್ರತಿವರ್ಷ ಮಾರ್ಚ 8 ರಂದು 'ಅಂತರಾಷ್ಟ್ರೀಯ ಮಹಿಳಾ ದಿನ' ವೆಂದು ಆಚರಿಸಲಾಗುತ್ತದೆ.ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳಾ ಜಾಗೃತಿ ಮೂಡಿಸಿ ಸಮಸ್ಯೆಗಳ ಬಗ್ಗೆ ಗಹನವಾದ ಕ್ರಮವನ್ನು ಅಳವಡಿಸುವ ಧೋರಣೆಯನ್ನು ಕೈಗೊಳ್ಳಲಾಯಿತು.

ಋಗ್ವೇದ / ಉಪನಿಷತ್ತು / ಮಹಾಕಾವ್ಯಗಳ ಕಾಲದ ಅವಧಿಯಲ್ಲಿ ಭಾರತೀಯ ಮಹಿಳೆಯರಿಗೆ ಸಾಮಾಜಿಕ ಉನ್ನತ ಸ್ಥಾನಮಾನಗಳನ್ನು ಕಲ್ಪಿಸಲಾಗಿತ್ತು. ಗಾರ್ಗೆಯಂತಹ ದಿಟ್ಟ ಮಹಿಳೆಯರು ಸಮಾಜದಲ್ಲಿ ಪುರುಷ ಸಮಾನ ಸ್ಥಾನ ಹೊಂದಿದ್ದರು.ಸಂಸ್ಕೃತೀಯ ಪ್ರತೀಕ ಅವಳಾಗಿದ್ದಳು.ಮದ್ಯಕಾಲೀನ ಅವಧಿಯಲ್ಲಿ (ಉತ್ತರ ವೇದ) "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತೆ" ಎಂಬುದಾಗಿ ಮಹಿಳೆಯರನ್ನು ದೂಷಿಸಿ ಅವಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಅಧೋಗತಿಗಿಳಿಯುವಂತೆ ಮಾಡಿದರು.ಬಾಲ್ಯವಿವಾಹ, ವಿಧವಾ ಪುನರ್ ವಿವಾಹ ನಿಷೇಧ, ಸತಿ ಸಹಗಮನ ಪದ್ಧತಿ, ಪರ್ದಾ ಪದ್ಧತಿ, ದೇವದಾಸಿ ಪದ್ಧತಿ, ಜಾತಿ ಪದ್ಧತಿ, ಅವಿಭಕ್ತ ಕುಟುಂಬ ಪದ್ಧತಿ, ವಿದ್ಯಾಭ್ಯಾಸ ನಿಷೇಧ, ಧಾರ್ಮಿಕ ಅನಾಚರಣೆಗಳು ಮುಂತಾದವು ಮಹಿಳೆಯರ ಸ್ಥಾನಮಾನಗಳನ್ನು ದಾರುಣ ಸ್ಥಿತಿಗೆ ತಲುಪಿಸಿದವು.

ಆಧುನಿಕ ಮಹಿಳೆಯು ಇಂದು ಸಂಪೂರ್ಣ ಸ್ವಾವಲಂಬಿ ಬದುಕು ಹೊಂದಿದ್ದಾಳೆ. ಮಧ್ಯಕಾಲೀನ ಯುಗದುದ್ದಕ್ಕೂ ಮಹಿಳೆಯರ ಶೋಷಣೆ ದೌರ್ಜನ್ಯಗಳನ್ನು ಸಹಿಸಿಕೊಂಡು ಮೌನವಾಗಿ ಅನುಭವಿಸುತ್ತಾ ಬಂದಿರುವರು.ಹಲವಾರು ಸಮಸ್ಯೆ, ಸವಾಲು ಮತ್ತು ದುರವಸ್ಥೆಗಳ ಹಿನ್ನೆಲೆಯಲ್ಲಿಯೇ ಅವರನ್ನು ಸಬಲೀಕರಿಸುವ ಪ್ರಯತ್ನ ಇಂದಿಗೂ ಮುಂದುವರೆದಿದೆ. 21 ನೇ ಶತಮಾನದ ಸಮಾಜವು ಸಂಸ್ಕೃತಾನುಕರಣ, ಶೈಕ್ಷಣಿಕ ಕ್ರಾಂತಿ, ಸಾಮಾಜಿಕ ಆಂದೋಲನಗಳು, ಧಾರ್ಮಿಕ ಸುಧಾರಣಾ ಚಳುವಳಿಗಳು, ಸ್ವಾತಂತ್ರ್ಯ ಹೋರಾಟಗಳು, ರಾಜಕೀಯ ಕ್ರಾಂತಿ, ಕೈಗಾರಿಕರಣ, ನಗರೀಕರಣ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಸಾಮಾಜೀಕರಣ, ನಾಗರೀಕತೆಯ ಬೆಳವಣಿಗೆಗಳು ಮುಂತಾದ ಪ್ರಕ್ರಿಯೆಗಳು ತೀವ್ರ ಗೊಂಡಿರುವದರಿಂದ ಸಮಾಜಕ್ಕೆ ಹಿಡಿದಿರುವ ಮೌಢ್ಯಗಳು ದೂರವಾದವು. "ಇಂದಿನ ಮಹಿಳೆಯು ಅಬಲೆಯಲ್ಲ, ಸಬಲೆ. ಪರಾಧೀನಳಲ್ಲ, ಸ್ವಾವಲಂಬಿ" ಎಂಬುದನ್ನು ನಿರೂಪಿಸಿದ್ದಾಳೆ.

## ಸಬಲೀಕಣ ಎಂದರೇ

- "ಅಬಲತೆಯಿಂದ(ಅದೀನತೆ) ದೂರವಾಗಿ ಸಬಲೆಯಾಗುವುದೇ ಸಬಲೀಕರಣ"
- "ಲಿಂಗತಾರತಮ್ಯ, ಅಸಮಾನತೆ, ಅನರ್ಹತೆ, ನಿಭಂಧನೆಗಳ ವಿರುದ್ಧ ಸಮಾನತೆ, ಅರ್ಹತೆ ಹಾಗೂ ಸ್ವತಂತ್ರ್ಯವನ್ನು ಕಲ್ಪಿಸುವುದೇ ಸಬಲೀಕರಣವಾಗಿದೆ."
- "ಮಹಿಳೆಯರ ಸಾಮಾಜಿಕ ಅಂತಸ್ತಿನ, ಆರ್ಥಿಕ ಸ್ವಾವಲಂಬನೆಯು ಹಾಗೂ ರಾಜಕೀಯ ಹಕ್ಕು ಬಾಧ್ಯತೆ, ಕೌಟುಂಬಿಕ ಸ್ವಾತಂತ್ರ್ಯ ಹೊಂದುವ ದೀರ್ಘ ಪ್ರಕ್ರಿಯೆಯೇ ಸಬಲೀಕರಣ ಎಂದು ಕರೆಯಬಹುದು."

## ಮಹಿಳಾ ಸಬಲೀಕರಣದ ಉದ್ದೇಶಗಳು

i. ಹೆಣ್ಣು ಮಗಳು ಅಥವಾ ಮಹಿಳೆಯರನ್ನು ಮಾನವ ಹಕ್ಕುಗಳ ರಕ್ಷಣೆಗೆ ಒಳಪಡಿಸುವುದು.
ii. ಮಹಿಳೆಯರು ಅನುಭವಸುವ ಬಡತನದ ಭಾರವನ್ನು ಇಳಿಸುವ ಪ್ರಯತ್ನ ಮಾಡುವುದು.
iii. ಮಹಿಳಾ ಪಾಲುಗಾರಿಕೆ ಸಾರ್ವಜನಿಕ ನಿರ್ಣಯಗಳಲ್ಲಿ ವ್ಯಕ್ತವಾಗಬೇಕು.
iv. ಮಹಿಳೆಯರ ವಿರುದ್ಧದ ದೌರ್ಜನ್ಯಗಳನ್ನು ತೊಡೆದು ಹಾಕುವುದು.
v. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವುದು.
vi. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಉತ್ಪಾದನೆಯ ಬಂಡವಾಳವನ್ನು ಹೆಚ್ಚಿಸುವುದು.
vii. ಮಹಿಳೆ ಮತ್ತು ಪುರುಷರಿಗೆ ಕುಟುಂಬದ ಜವಾಬ್ದಾರಿಯನ್ನು ಸಮಾನವಾಗಿ ಹಂಚುವುದು.
viii. ಲಿಂಗ ತಾರತಮ್ಯ ನಿರ್ಮೂಲನೆಗಾಗಿ ಪ್ರಯತ್ನಿಸುವುದು.
ix. ಮಹಿಳೆಯರನ್ನು ಸಂಘಟಿಸಿ ಜಾಗೃತರನ್ನಾಗಿಸುವುದು.
x. ಮಹಿಳೆಯರ ಸರ್ವತೋಮುಖ ಏಳ್ಗೆಯನ್ನು ಸಾಧಿಸುವುದು.

## 1. ಸಾಮಾಜಿಕ ಸಮಾನತೆ : ಮಹಿಳಾ ಸಬಲೀಕರಣ

ಮಹಿಳೆಯರು ವೈಯಕ್ತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಶಕ್ತೀಕರಣ ಹೊಂದುವುದೇ ಆಗಿದೆ. ಸ್ವಾವಲಂಬನೆ, ಸಂಘಟನೆ, ಸ್ವಾತಂತ್ರ್ಯ ಹಕ್ಕಿನ ಬಾಧ್ಯತೆ, ಸ್ವಯಂ ಇಚ್ಛಾಶಕ್ತಿ ಇವೇ ಮುಂತಾದ ಕ್ರಿಯಾಶೀಲ ಅಂಶಗಳೇ ಸಬಲೀಕರಣ.

**ಜಗಜ್ಯೋತಿ ಬಸವೇಶ್ವರರು** 12ನೇ ಶತಮಾನದಲ್ಲಿ ಜಾತಿ ಸಮಾನತೆ, ಕಾಯಕ ಸಮಾನತೆ, ಸಾಮಾಜಿಕ ಆರ್ಥಿಕ ಸಮಾನತೆಯ ಧಾಟಿಯಲ್ಲಿಯೇ ಲಿಂಗ ಸಮಾನತೆಯನ್ನು ಪ್ರತಿಪಾದಿಸಿದರು. ಮಹಿಳೆಯರಿಗೂ ಲಿಂಗದೀಕ್ಷೆಯನ್ನು ನೀಡಿ ಶಿವ ಪೂಜೆಗೆ ಆಸ್ಪದ ನೀಡಿದರು. ತಮ್ಮಅನುಭವ ಮಂಟಪದಲ್ಲಿ ಮಹಿಳೆಯರಿಗೂ ಸಮಾನ ಅವಕಾಶಗಳನ್ನು ನೀಡುತ್ತಿದ್ದರು. ಅಕ್ಕಮಹಾದೇವಿ, ಮೊಳಿಗೆಯ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಗಂಗಾಂಬಿಕೆ, ನೀಲಾಂಬಿಕೆ

ಮೊದಲಾದವರು ಸಾಮಾಜಿಕ ವಿಚಾರ ಗೋಷ್ಠಿಗಳಲ್ಲಿ ಹಾಗೂ ವಚನ ಸಾಹಿತ್ಯ ಸೃಷ್ಠಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಮಹಿಳಾ ಸಬಲೀಕರಣಕ್ಕಾಗಿ ಸ್ವತಃ ಮಹಿಳೆಯರೇ ಮುಂದಾಗ ಬೇಕು. ಅದಕ್ಕೆ ಪುರುಷ ಸಮಾಜ ಸಹಕರಿಸಿ ನಡೆಯಬೇಕು. ಮಹಿಳೆ ಜಾಗ್ರತಳಾಗಿ ತನ್ನತನವನ್ನು ರೂಪಿಸಿಕೊಳ್ಳಲು ರಾಜಕೀಯ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಹೊಂದುವುದು ಅವಶ್ಯವಾಗಿದೆ.ಈ ನಿಟ್ಟಿನಲ್ಲಿ ಭಾರತ ಸರ್ಕಾರವು 1992ರಲ್ಲಿ 'ರಾಷ್ಟ್ರೀಯ ಮಹಿಳಾ ಆಯೋಗ' ವನ್ನು ನೇಮಕ ಮಾಡಿತು. ಇದು ರಾಷ್ಟ್ರ ಮಟ್ಟದ ಸಂಸ್ಥೆಯಾಗಿದ್ದು, ಮಹಿಳೆಯರಿಗೆ ನೀಡಲಾಗಿರುವ ಸಂವಿಧಾನಾತ್ಮಕ ಸೌಲಭ್ಯಗಳು, ಶಾಸನಾತ್ಮಕ ಸ್ಥಾನಗಳು, ರಕ್ಷಣೆಯ ಕಾನೂನು, ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಗಳು ಇತ್ಯಾದಿಗಳನ್ನು ಒದಗಿಸುವುದೇ ಈ ಆಯೋಗದ ಪ್ರಮುಖ ಆಯಾಮಗಳಾಗಿವೆ. ಇದರ ಮೂಲ ಉದ್ದೇಶ ಮಹಿಳೆಯರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು, ಕರ್ನಾಟಕದಲ್ಲಿಯೂ 1996ರಲ್ಲಿ 'ಕರ್ನಾಟಕ ರಾಜ್ಯ ಮಹಿಳಾ ಆಯೋಗ' ಒಂದನ್ನು ಸ್ಥಾಪಿಸಲಾಯಿತು.

## ಎ. ಮಹಿಳಾ ಸಬಲೀಕರಣಕ್ಕಾಗಿ (ಲಿಂಗನ್ಯಾಯ) ರೂಪಿಸಲಾದ ಸಾಮಾಜಿಕ ಶಾಸನಗಳು

1. 1829–ಸತಿ ಸಹಗಮನ ಪದ್ಧತಿ ನಿಷೇಧ ಕಾಯ್ದೆ.
2. 1829–ಬಾಲ್ಯ ವಿವಾಹ ನಿಷೇಧ ಕಾಯ್ದೆ.
3. 1856 –ವಿಧವಾ ಪುನರ್‌ವಿವಾಹ ಕಾಯ್ದೆ.
4. 1872–ನಾಗರಿಕ ವಿವಾಹ ಕಾಯ್ದೆ
5. 1874–ವಿವಾಹಿತ ಸ್ತ್ರೀಯರ ಆಸ್ತಿ ಹಕ್ಕಿನ ಕಾಯ್ದೆ.
6. 1886–ಜನನ, ಮರಣ ಮತ್ತು ವಿವಾಹ ನೊಂದಣಿ ಕಾಯ್ದೆ.
7. 1952–ಕುಟುಂಬ ಕಲ್ಯಾಣ ಯೋಜನೆ.
8. 1954–ವಿಶೇಷ ವಿವಾಹ ಕಾಯ್ದೆ.
9. 1956–ಹಿಂದೂ ಉತ್ತರಾಧಿಕಾರ ಕಾಯ್ದೆ.
10. 1956–ಹಿಂದು ದತ್ತು ಸ್ವೀಕಾರ ಮತ್ತು ಜೀವನಾಂಶ ಕಾಯ್ದೆ.
11. 1956–ಅನೈತಿಕ ವ್ಯವಹಾರಗಳ ಪ್ರತಿಬಂಧಕ ಕಾಯ್ದೆ.
12. 1958–ವೇಶ್ಯಾವಾಟಿಕೆ ನಿಷೇಧ ಕಾಯ್ದೆ.
13. 1961–ಪ್ರಸೂತಿ ಕಾಯ್ದೆ
14. 1961–ವರದಕ್ಷಿಣೆ ನಿಷೇಧ ಕಾಯ್ದೆ.
15. 1969–ಭಾರತೀಯ ವಿವಾಹ ವಿಚ್ಛೇದನ ಕಾಯ್ದೆ.
16. 1971–ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ.
17. 1976–ಸಮಾನ ವೇತನ ಕಾಯ್ದೆ.
18. 1983–ಕುಟುಂಬ ನ್ಯಾಯಿಕ ಕಾಯ್ದೆ.
19. 1994–ಪ್ರಸವ ಪೂರ್ವ ಲಿಂಗ ಪರೀಕ್ಷೆಗಳ ಕಾಯ್ದೆ.
20. 2012–ಬಾಲಕಿಯರ ಲೈಂಗಿಕ ಕಿರುಕುಳ ನಿಷೇಧ
21. 2013–ಮಹಿಳೆಯರ ಲೈಂಗಿಕ ದೌರ್ಜನ್ಯ ನಿಷೇಧ

## ಬಿ. ಮಹಿಳಾ ಸಬಲೀಕರಣಕ್ಕಾಗಿ ಸಾಮಾಜಿಕ ಸುಧಾರಣಾ ಆಂದೋಲನಗಳು

| ಅ.ಸಂ. | ಸಂಸ್ಥೆ | ವರ್ಷ | ಸಂಸ್ಥಾಪಕರು | ಉದ್ದೇಶಿತ ಸಾಧನೆಗಳು |
|---|---|---|---|---|
| 1. | ಬ್ರಹ್ಮ ಸಮಾಜ | 1829 | ರಾಜಾರಾಮ ಮೋಹನರಾಯ್ | ಮಹಿಳಾ ಶಿಕ್ಷಣಕ್ಕೆ ಆದ್ಯತೆ, ಬಾಲ್ಯ ಮತ್ತು ಬಹುಪತ್ನಿತ್ವ ವಿವಾಹ ನಿರ್ಮೂಲನೆ, ವಿಧವಾ ಪುನರ್ ವಿವಾಹಕ್ಕೆ ಆಸ್ಪದ. |
| 2. | ಆರ್ಯ ಸಮಾಜ | 1875 | ದಯಾನಂದ ಸರಸ್ವತಿ | ವಿಧವಾ ಪುನರ್ ವಿವಾಹ ಮತ್ತು ಜಾತಿ ನಿರ್ಮೂಲನೆ. |
| 3. | ರಾಮ ಕೃಷ್ಣ ಮಿಶನ್. | 1893 ಚಿಕಾಗೋ ವಿಶ್ವ ಸಮ್ಮೇಳನ | ಸ್ವಾಮಿ ವಿವೇಕಾನಂದ | ಮೂಢ ನಂಬಿಕೆ ನಿವಾರಣೆ, ಶಿಕ್ಷಣ, ಆಸ್ಪತ್ರೆ, ಸರ್ವಧರ್ಮ ಸಮಭಾವ. |
| 4. | ದಿವ್ಯ ಜ್ಞಾನ ಸಭೆ. | 20 ನೇ ಶತಮಾನ | ಶ್ರೀಮತಿ ಆ್ಯನಿಬೆಸೆಂಟ | ಸರ್ವಧರ್ಮದ ಸಮಭಾವ, ಶಿಕ್ಷಣ, ಸಾಮಾಜಿಕ ನ್ಯಾಯ ಪ್ರಾಧಾನ್ಯತೆ. |
| 5. | ಪ್ರಾರ್ಥನಾ ಸಮಾಜ | 1867 | ಡಾ. ಆತ್ಮಾರಾಂ ಪಾಂಡುರಂಗ | ಶಿಕ್ಷಣ, ಲಿಂಗ ಸಮಾನತೆ, ಸಾರ್ವತ್ರಿಕ ಸಹಮತ. |
| 6. | ಸತ್ಯಶೋಧಕ ಸಮಾಜ | 1873 | ಜ್ಯೋತಿಬಾ ಫುಲೆ | ಸತಿಸಹಗಮನ ಪದ್ಧತಿ ನಿಷೇಧ, ಮಹಿಳಾ ಶಿಕ್ಷಣ, ಸಾಮಾಜಿಕ ನ್ಯಾಯ, ಮಹಿಳೆಯರ ಏಳ್ಗೆ. |
| 7. | ಅಸ್ಪ್ರಶ್ಯ ಮಹಿಳಾ ಶಾಲೆ | 1852 | ಸಾವಿತ್ರಿಬಾಯಿ ಫುಲೆ | ಮಹಿಳಾ ಶಿಕ್ಷಣ ಮತ್ತು ಹಕ್ಕು, ಸಾಮಾಜಿಕ ಸಮಾನತೆ, ಜಾತಿ ನಿರ್ಮೂಲನೆ. |
| 8. | ಅಲಿಘಡ್ ಚಳುವಳಿ | 1875 | ಸರ್ ಸಯ್ಯದ್ ಅಹ್ಮದ ಖಾನ್ | ಖುರಾನಿನ ಸಿದ್ಧಾಂತಗಳಿಗೆ ಹೊಸ ವಿವರಣೆ ನೀಡಲಾಯಿತು. |
| 9. | ಕಾಂಗ್ರೇಸ್ ಹರಿಜನ ಚಳುವಳಿ | 1932 | ಮಹಾತ್ಮಾ ಗಾಂಧಿ | ಅಸ್ಪ್ರಶ್ಯತಾ ನಿವಾರಣೆ, ಮಹಿಳಾ ಸಮಾನತೆ |

## ಸಿ. ಮಹಿಳಾ ಸಬಲೀಕರಣಕ್ಕಾಗಿ ಮುಂದಾದ ಮಹಿಳಾ ನೇತಾರರು

ಭಾರತೀಯ ಮಹಿಳೆಯರ ಸರ್ವೋತೋಮುಖ ಏಳ್ಗೆಯಲ್ಲಿ ದುಡಿದು, ಸಾವಾಜಿಕ ನ್ಯಾಯ ಒದಗಿಸುವಲ್ಲಿ ಯಶಸ್ಸು ಹೊಂದಿರುವ, ಸಂಘಟಿತ ಮಹಿಳಾ ನೇತಾರರು, ಮಹಿಳೆಯರ ಜನಮಾನಸದಲ್ಲಿ ಚಿರಸ್ಮರಣೀಯರಾಗಿದ್ದಾರೆ.ಉದಾಹರಣೆಗಾ : ಪಂಡಿತ ರಮಾಬಾಯಿ, ರಮಾಬಾಯಿ ರಾನಡೆ, ತೋರುದತ್ತ ಕಮಲಾಬಾಯಿ ಚಟ್ಟೋಪಾಧ್ಯಾಯ, ಸ್ವರ್ಣಕುಮಾರಿ ದೇವಿ, ರಾಜಕುಮಾರಿ ಅಮೃತಾ ಕೌರ, ಮೊದಲಾದವರು.

## 2. ರಾಜಕೀಯ ಸಹಭಾಗಿತ್ವ : ಮಹಿಳಾ ಸಬಲೀಕರಣ

ಆಧುನಿಕ ಮಹಿಳೆಯರ ರಾಜಕೀಯ ಅಧಿಕಾರವು ಕ್ರಿ.ಶ. 1917ರಲ್ಲಿಯೇ ಬ್ರಿಟಿಷ ಪಾರ್ಲಿಮೆಂಟನಲ್ಲಿಯೇ ಮಹಿಳೆಯರ ನೇತೃತ್ವವನ್ನು ವಹಿಸಿಕೊಂಡ ಸರೋಜಿನಿ ನಾಯ್ಡು ಅವರಿಂದಲೇ ಪ್ರಾರಂಭವಾಯಿತು. ಕ್ರಿ. ಶ. 1937ರಲ್ಲಿಯೇ ಮಹಿಳೆಯರ ಸೀಮಿತ ಹಕ್ಕುಗಳು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಸಿಕ್ಕಿತು. ಗಾಂಧೀಜಿಯವರ ಪ್ರೇರಣೆಯ ಪರಿಣಾಮವಾಗಿ ನಗರ ವಿದ್ಯಾವಂತ ಮಹಿಳೆಯರನ್ನು ಒಳಗೊಂಡಂತೆ ಬಹುಸಂಖ್ಯಾತ ಮಹಿಳೆಯರು ಸಾಮಾಜಿಕ ಆರ್ಥಿಕ ಕ್ಷೇತ್ರಗಳತ್ತ ಧಾವಿಸತೊಡಗಿದರು.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಎ.** ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಸಂಘಟನೆಗಳು ಸ್ಥಾಪನೆಯಾದವು. ಅವುಗಳಲ್ಲಿ ಕೆಲವು ಇಲ್ಲಿ ಉಲ್ಲೇಖನೀಯ. 'ಅನ್ನಪೂರ್ಣ ಮಹಿಳಾ ಮಂಡಳ', 'ಜನವಾಹಿನಿ ಮಹಿಳ ಸಮಿತಿ', 'ಭೂಪಾಲ್ ಗ್ಯಾಸ್ ಪೀಡಿತ ಮಹಿಳಾ ಉದ್ಯೋಗ ಸಂಘಟನೆ', 'ಸ್ತ್ರೀ ಸಂಘಟನೆ', 'ನಾರಿ ರಕ್ಷಾ ಸಮಿತಿ', ಮುಂತಾದ ಸಂಘಟನೆಗಳು ಮಹಿಳೆಯರ ವಿರುದ್ಧದ ದೌರ್ಜನ್ಯಗಳನ್ನು ಖಂಡಿಸಲು ನೆರವಾದವು.

**ಬಿ.** ಕ್ರಿ. ಶ. 1997ರಲ್ಲಿ ಮಹಿಳೆಯರ ಜಾಗತಿಕ ಮಟ್ಟದ ರಾಜಕೀಯ ಪ್ರತಿನಿಧಿತ್ವ 12% ರಷ್ಟು ಇತ್ತು. ಭಾರತದ ಸಂಸತ್ತಿನಲ್ಲಿ ಮಹಿಳೆಯರ ರಾಜಕೀಯ ಪ್ರತಿನಿಧಿತ್ವವು ಕೆಳಮನೆಯಲ್ಲಿ 9.8% ಹಾಗೂ ಮೇಲ್ಮನೆಗಳಲ್ಲಿ 7.8% ರಷ್ಟು ಕಂಡು ಬಂದಿರುತ್ತದೆ. ಮತದಾನದಲ್ಲಿ ಭಾರತೀಯ ಮಹಿಳೆಯರು 40% ದಿಂದ 50% ರಷ್ಟು ಭಾಗಿಯಾಗುತ್ತಿದ್ದಾರೆ. ಪ್ರಮುಖ ರಾಜಕೀಯ ಪಕ್ಷಗಳು ಮಹಿಳಾ ಘಟಕಗಳನ್ನು ಸ್ಥಾಪಿಸಿದವು. ಸಿ.ಪಿ.ಆಯ್. ಪಕ್ಷವು 'ನ್ಯಾಶನಲ್ ಫೆಡರೇಶನ್ ಆಫ್ ವುಮನ್' ಹೊಂದಿದೆ. ಇಂದಿನ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯು ರಾಷ್ಟ್ರಪತಿಯಾಗಿ, ಪ್ರಧಾನ ಮಂತ್ರಿಯಾಗಿ, ಕ್ಯಾಬಿನೇಟ್ ಮಂತ್ರಿಯಾಗಿ, ರಾಜ್ಯಪಾಲರಾಗಿ, ಮುಖ್ಯಮಂತ್ರಿಗಳಾಗಿ ಮತ್ತು ರಾಯಭಾರಿಗಳಾಗಿ ರಾಜಕೀಯ ಕ್ಷೇತ್ರಗಳಲ್ಲಿ ಪ್ರಧಾನ ಪಾತ್ರಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತಿದ್ದಾಳೆ.

ಸಿ. ಭಾರತೀಯ ಸಂವಿಧಾನವು ಮಹಿಳೆಯರ ಸಬಲೀಕರಣಕ್ಕಾಗಿ **ಮೀಸಲಾತಿ ಸೌಲಭ್ಯ**ವನ್ನು ನೀಡಿರುವುದು ಐತಿಹಾಸಿಕ ಮೈಲುಗಲ್ಲಾಗಿದೆ. ಮಹಿಳೆಯರ ಸೇವೆ, ಶಿಕ್ಷಣ, ಮತ್ತು ಸ್ಥಳೀಯ ಸರ್ಕಾರದ ಆಡಳಿತದಲ್ಲಿ ಅರ್ಧದಷ್ಟು ಮೀಸಲಾತಿಯನ್ನು ಪಡೆದಿದ್ದಾರೆ.ಕೇಂದ್ರ ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅನುಕ್ರಮವಾಗಿ 15% ಮತ್ತು 3 % ರಷ್ಟು ಸ್ಥಾನಗಳನ್ನು ಸ್ತ್ರೀ ಪುರುಷರಿಗಾಗಿ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ.ಕೇಂದ್ರ ಹಾಗೂ ರಾಜ್ಯ ಶಾಸನಸಭೆಗಳಲ್ಲಿ ಸಾಮಾನ್ಯವಾಗಿ ಮಹಿಳೆಯರಿಗಾಗಿ ಶೇ. 33 ರಷ್ಟು ಮೀಸಲಾತಿ ಕಾಯ್ದೆ ಜಾರಿಗೆ ಬರಬಹುದು.

**ಡಿ.** 1993ರ ಪಂಚಾಯತ್ ರಾಜ್ ಅಧಿನಿಯಮವು ಮಹಿಳಾ ಸಬಲೀಕರಣ ಇತಿಹಾಸದಲ್ಲಿ ದಾಖಲಾಗಿದೆ. ಸಂವಿಧಾನದ 73 ಮತ್ತು 74 ನೇ ತಿದ್ದುಪಡಿಗಳು ಮಹಿಳೆಯರ ಸಬಲೀಕರಣಕ್ಕೆ ವರದಾನವಾಗಿವೆ. ಪಂಚಾಯತರಾಜ್ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ 33% ರಷ್ಟು ಮೀಸಲಾತಿಯನ್ನು ಅಧ್ಯಕ್ಷ / ಉಪಾಧ್ಯಕ್ಷ, ಸದಸ್ಯ ಸ್ಥಾನಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲಾಗಿದೆ.

**ಇ. ಭಾರತದ ಪ್ರತಿಷ್ಠಿತ ಸ್ಥಾನಗಳಲ್ಲಿ ಮಹಿಳೆಯರು :** ಭಾರತೀಯ ಮಹಿಳೆಯರು ತಾವು ವಾಸಿಸುವ ಸಾಮಾಜಿಕ ಪರಿಸರ ಹಾಗೂ ತಮ್ಮ ಮೇಲೆ ಹೇರಿರುವ ಇತಿ-ಮಿತಿಗಳ ಹೊರತಾಗಿಯೂ ಕೆಲವು ಪ್ರಶಂಸನಾರ್ಹವಾದ ಸಾಧನೆಗಳನ್ನು ಮಾಡಿದ್ದಾರೆ. ಅವರ ಸಾಧನೆಗಳನ್ನು ಮೆಚ್ಚಿ ದೇಶವು ಪರಮೋನ್ನತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

- **ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ಗೌರವಾನ್ವಿತ ಭಾರತೀಯ ಮಹಿಳೆಯರು**

1. ಇಂದಿರಾ ಗಾಂಧಿ (1917- 1984) – 1971 – ಮೂರನೇ ಪ್ರಧಾನಿ
2. ಮದರ ಥೆರೆಸಾ (1910–1997) –1980 – ಕ್ಯಾಥೋಲಿಕ್‌ನನ್ ಮಿಷನರೀ ಆಫ್ ಚಾರಿಟಿಯ ಸಂಸ್ಥೆ
3. ಅರುಣಾ ಅಸಫ್ ಅಲಿ (1908–1996) –1997–ಸ್ವಾತಂತ್ರ್ಯ ಹೋರಾಟಗಾರ್ತಿ
4. ಎಮ್. ಎಸ್. ಸುಬ್ಬುಲಕ್ಷ್ಮೀ (1916–2004) 1998 – ಕರ್ನಾಟಕ ಸಂಗೀತಗಾರ್ತಿ
5. ಲತಾ ಮಂಗೇಶ್ಕರ (1929–ಇಂದಿನವರೆಗೂ) 2001 – ಖ್ಯಾತ ಬಹುಭಾಷಾ ಹಿನ್ನೆಲೆ ಗಾಯಕಿ.

- **ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದ ಗೌರವಾನ್ವಿತ ಭಾರತೀಯ ಮಹಿಳೆಯರು.**

1. ಡಾ. ಕುಮಾರಿ ಪದ್ಮಾ ಸುಬ್ರಹ್ಮಣ್ಯಂ–2003
2. ಶ್ರೀಮತಿ ಸ್ವಪ್ನ ಸುಂದರಿ –2003
3. ಶ್ರೀಮತಿ ಥೇಜನ ಬಾಯಿ – 2003

- **ನೊಬೆಲ್ ಪ್ರಶಸ್ತಿ ಪುರಸ್ಕೃತ ಭಾರತೀಯ ಮಹಿಳೆ**

1. ಮದರ ಥೆರೆಸಾ 1979 ಶಾಂತಿಗಾಗಿ

- **1937ರ ಸ್ಥಳೀಯ ಶಾಸನ ಸಭೆಗಳ ಭಾರತದ ಪ್ರಥಮ ಮಹಿಳಾ ರಾಜಕಾರಣಿಗಳು**

1. ಕಮಲಾಬಾಯಿ ಚಟ್ಟೋಪಾಧ್ಯಾಯ
2. ವಿಜಯಲಕ್ಷ್ಮೀ ಪಂಡಿತ

- **ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಮಹಿಳಾ ನೇತಾರರು.**

ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಅರುಣಾ ಅಸಫ್ ಅಲಿ, ಮೃದುಲಾ ಸರಭಾಯ್, ಸುಚೇತಾ ಕೃಪಲಾನಿ, ಡಾ. ಆ್ಯನಿ ಬೆಸೆಂಟ್ ಇತ್ಯಾದಿ.

- **ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿಗಳಾಗಿ ಸೇವೆ**

ಡಾ. ಪ್ರತಿಭಾ ಪಾಟೀಲ (2007–2012)

- **ಭಾರತದ ಪ್ರಥಮ ಮಹಿಳಾ ಪ್ರಧಾನ ಮಂತ್ರಿಗಳಾಗಿ ಸೇವೆ**

ಶ್ರೀಮತಿ ಇಂದಿರಾ ಗಾಂಧಿ (1966–77. (1980–84)

- **ಭಾರತದ ಮಹಿಳಾ ರಾಜ್ಯಪಾಲರಾಗಿ ಸೇವೆ**

1. ಸರೋಜನಿ ನಾಯ್ಡು
2. ವಿಜಯಲಕ್ಷ್ಮೀ ಪಂಡಿತ
3. ಶಾರದಾ ಮುಖರ್ಜಿ
4. ಶೀಲಾದಿಕ್ಷಿತ್ (ಕೇರಳ)
5. ವ್ಹಿ.ಎಸ್. ರಮಾದೇವಿ (ಕರ್ನಾಟಕ)
6. ರಂಜನಿ ರಾಮ
7. ಮಾರ್ಗರೇಟ್ ಆಳ್ವಾ (ಉತ್ತರಪ್ರದೇಶ)
8. ಫಾತೀಮಾ ಬೀವಿ (ತಮಿಳುನಾಡು)

- **ಭಾರತದ ರಾಜ್ಯಗಳ ಮಹಿಳಾ ಮುಖ್ಯಮಂತ್ರಿಗಳಾಗಿ ಸೇವೆ**

1. ನಂದಿನಿ ಸತ್ಪತಿ (ಓರಿಸ್ಸಾ)
2. ಜಯಲಲಿತಾ (ತಮಿಳುನಾಡು)
3. ಉಮಾಭಾರತಿ (ಮಧ್ಯಪ್ರದೇಶ)
4. ಆನಂದಿ ಬೇನ್ ಪಟೇಲ್ (ರಾಜಸ್ಥಾನ್)
5. ಸುಚೇತಾ ಕೃಪಲಾನಿ (ಉ.ಪ್ರ.)
6. ಶೀಲಾದಿಕ್ಷಿತ್ (ದೆಹಲಿ)
7. ವಸುಂಧರಾ ರಾಜೇ (ಗುಜರಾತ)
8. ರಾಬ್ಡಿದೇವಿ (ಬಿಹಾರ)
9. ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ)
10. ಮಾಯಾವತಿ (ಉ.ಪ್ರ.)

- **ಭಾರತದ ಸಂಸತ್ತಿನ ಸಚಿವರಾಗಿ ಮಹಿಳೆಯರ ಸೇವೆ**

1. ಸುಷ್ಮಾಸ್ವರಾಜ್ (ವಿದೇಶಾಂಗ ಸಚಿವೆ)
2. ಸ್ಮೃತಿ ಇರಾನಿ (ಮಾನವ ಸಂಪನ್ಮೂಲ ಸಚಿವೆ)

ISSN : 2249-2429 ಸಂಶೋಧನೆ RNI REG.NO.KARKAN/2011/38712

3. ಮೇನಕಾ ಗಾಂಧಿ (ಮಹಿಳಾ ಮತ್ತು ಕಲ್ಯಾಣ ಸಚಿವೆ)
4. ರಾಣಿ ಸತೀಶ (ಮಂತ್ರಿಗಳು)
5. ಮೀರಾಕುಮಾರಿ (ಸಭಾಪತಿ)
6. ಸುಮಿತ್ರಾ ಮಹಾಜನ್ (ಲೋಕಸಭೆಯ)

## 3. ಆರ್ಥಿಕ, ಔದ್ಯೋಗಿಕ ಸ್ವಾವಲಂಬನೆ : ಮಹಿಳಾ ಸಬಲೀಕರಣ

2011 ರ ಭಾರತದ ಜನಗಣತಿಯ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯು 121,01,93,442 ರಷ್ಟು ಜನಸಂಖ್ಯೆ ಇದೆ. ಇದರಲ್ಲಿ 58,64,89,174 ಕೋಟಿ ಜನರು ಸ್ತ್ರೀಯರಿದ್ದಾರೆ. 2001 ರ ಜನಗಣತಿಯ ಪ್ರಕಾರ ಭಾರತದ ಲಿಂಗಾನುಪಾತವು 933/1000 ದಷ್ಟು ಇತ್ತು.2011 ರಲ್ಲಿ 940/1000 ರವರೆಗೆ ಹೆಚ್ಚಿದೆ. 21ನೇ ಶತಮಾನದ ಕೈಗಾರಿಕರಣ, ನಗರೀಕರಣದ ಪ್ರಕ್ರಿಯೆಗಳ ಪ್ರಭಾವದಿಂದ ಭಾರತೀಯ ಮಹಿಳೆಯು ಆರ್ಥಿಕ ಹಾಗೂ ಔದ್ಯೋಗಿಕವಾಗಿ ಸ್ವಾವಲಂಬಿಯನ್ನು ಹೊಂದುತ್ತಾಳೆ. ಮಹಿಳೆಯರ ಶೈಕ್ಷಣಿಕ ಮಟ್ಟ ಬೆಳೆದಂತೆಲ್ಲಾ ಅವರ ಅರ್ಹತೆ ಮತ್ತು ಸಾಮರ್ಥ್ಯಗಳ ಅನುಗುಣವಾಗಿ ಔದ್ಯೋಗಿಕ ಅವಕಾಶಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ. ಆರ್ಥಿಕ ಸ್ವಾವಲಂಬನೆಯಿಂದ ಅವರ ಜೀವನ ಮಟ್ಟ, ಜೀವನ ಶೈಲಿ, ಸಾಮಾಜಿಕ ಮತ್ತು ಆರ್ಥಿಕ ಅಂತಸ್ತುಗಳು ಬದಲಾವಣೆ ಹೊಂದುತ್ತಿವೆ. ಜೊತೆಗೆ ಮಹಿಳೆಯರ ಹಕ್ಕುಗಳು ಮತ್ತು ಸಂಘಟನೆಗಳ ಬಗ್ಗೆ ಜಾಗೃತಿ ಮೂಡುತ್ತಿವೆ.

ಮಹಿಳೆಯರಲ್ಲಿ ವಿಶೇಷವಾಗಿ ಕೆಳವರ್ಗದ, ಗ್ರಾಮೀಣ ಮಹಿಳೆಯರ ಸಶಕ್ತೀಕರಣದ ಬಗ್ಗೆ ಆದ್ಯತೆ ನೀಡಲಾಗುತ್ತಿದೆ.ತೋಟಗಾರಿಕೆ, ಹೈನುಗಾರಿಕೆ, ಗುಡಿಕೈಗಾರಿಕೆ, ಕರಕುಶಲತೆ, ಶಿಕ್ಷಣ, ತರಬೇತಿ, ಸ್ವಸಹಾಯ ಗುಂಪು, ಮಹಿಳಾ ಸಂಘಟನೆಗಳು ಇತ್ಯಾದಿಗಳ ಮೂಲಕ ಮಹಿಳೆಯರ ಆರ್ಥಿಕ ಸ್ವಾವಲಂಬನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

### ಎ. ಭಾರತದ ಪ್ರತಿಷ್ಠಿತ ಉದ್ಯಮ ಮತ್ತು ಆಡಳಿತ ಸೇವೆಯಲ್ಲಿ ಮಹಿಳೆಯರು

1. ಶ್ರೀಮತಿ ಸುಧಾಮೂರ್ತಿ – ಕರ್ನಾಟಕದ ಇನ್ಫೋಸಿಸ್ ಸಾಫ್ಟವೇರ್ ಕಂಪನಿಯ ಪಾಲುದಾರರು.
2. ಶ್ರೀಮತಿ ಮೆಹರ್ ಪ್ರದುಮ್ ಟಿ. – ಥರ್ಮ್ಯಾಕ್ಸ್ ಇಂಟರ್ ನ್ಯಾಶನಲ್ ಕಂಪನಿಯ ಅಧ್ಯಕ್ಷೆ.
3. ಶ್ರೀಮತಿ ಕಿರಣ ಮುಜುಮದಾರ್ ಷಾ– ಬಯೋಕಾನ್ ಡ್ರಗ್ಸ್ ಕಂಪೆನಿಯ ಅಧ್ಯಕ್ಷೆ.
4. ಶ್ರೀಮತಿ ಇಂದಿರಾ ಲೂಯಿ – ಪೆಪ್ಸಿ ಕಂಪೆನಿಯ ಸಿ.ಇ.ಓ.
5. ಶ್ರೀಮತಿ ಪ್ರೀತಾ ರೆಡ್ಡಿ – ಅಪೋಲೋ ಸಮೂಹ ಆಸ್ಪತ್ರೆಗಳ ನಿರ್ವಾಹಕಿ.
6. ಮದಿರಾ ಛತ್ರಪತಿ – ಉದ್ಯಮಿ
7. ಮಧುರಾ ಭಟ್ಟ – ಉದ್ಯಮಿ
8. ದೀಪಾ ಟಂಡನ್ – ಉದ್ಯಮಿ.

### ಬಿ. ಭಾರತೀಯ ಬ್ಯಾಂಕ ಕ್ಷೇತ್ರದಲ್ಲಿ ಸಾಧನೆ ಗೈದ ಮಹಿಳೆಯರು

1. ಅರುಂಧತಿ ಭಟ್ಟಾಚಾರ್ಯ – ಎಸ್.ಬಿ.ಆಯ್. ಬ್ಯಾಂಕ ಕಾರ್ಯದರ್ಶಿ.
2. ಉಷಾ ಅನಂತ ಸುಬ್ರಹ್ಮಣ್ಯಂ – ವುಮೆನ್ ಬ್ಯಾಂಕ ಆಫ್ ಇಂಡಿಯಾ ಮುಖ್ಯಸ್ಥೆ.
3. ಶಿಖಾ ಶರ್ಮಾ – ಎಕ್ಸಿಸ್ ಬ್ಯಾಂಕ ಮುಖ್ಯಸ್ಥೆ.

### ಸಿ. ಭಾರತೀಯ ಆಡಳಿತ ಸೇವೆಯಲ್ಲಿ (ಆಯ್.ಎ.ಎಸ್.) ಮಹಿಳೆಯರು

1948ರ ವರೆಗೆ ಭಾರತದಲ್ಲಿ ಒಬ್ಬ ಮಹಿಳೆಯೂ ಐ.ಎ.ಎಸ್. ಪರೀಕ್ಷೆಯನ್ನು ಪಾಸು ಮಾಡಿರಲಿಲ್ಲ. ಕ್ರಿ.ಶ. 1951ರಲ್ಲಿ ಪ್ರಪ್ರಥಮ ಬಾರಿಗೆ ಕುಮಾರಿ ಪದ್ಮಾ ರಾಮಚಂದ್ರನ್ ರವರು ಐ.ಎ.ಎಸ್. ಪರೀಕ್ಷೆಯನ್ನು ಪಾಸಾದ ದೇಶದ ಮೊದಲ ಮಹಿಳೆ ಎನಿಸಿದಳು. ಮುಂದೆ 1951 ರಿಂದ 1960ರ ವರೆಗಿನ ದಶಕದಲ್ಲಿ ಐ.ಎ.ಎಸ್. ಪರೀಕ್ಷೆ ಪಾಸಾದ ಭಾರತೀಯ ಮಹಿಳೆಯರ ಸಂಖ್ಯೆ 18 ಕ್ಕೆ ಏರಿತು.1987ರಲ್ಲಿ ಅದು 339 ಮಹಿಳಾ ಐ.ಎ.ಎಸ್. ಅಧಿಕಾರಿಗಳಾಗಿದ್ದಾರೆ.

**ಉದಾ :** ಶ್ರೀಮತಿ ಮಾಲತಿ ದಾಸ್ (ಉಡುಪಿ) ರವರು (2006) ಐ.ಎ.ಎಸ್. ಅಧಿಕಾರಿ. ಇವರು ಕರ್ನಾಟಕ ಸರ್ಕಾರದ ಮಹಿಳಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.2014ರಲ್ಲಿ ಯು.ಪಿ.ಎಸ್.ಸಿ. ನಡೆಸುವ ಐ.ಎ.ಎಸ್. ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದ ಯುವತಿ ಕುಮಾರಿ ಇರಾ ಸಿಘಲ್ ಸ್ಮರಣೀಯಳಾಗಿದ್ದಾಳೆ.

### ಡಿ. ಭಾರತೀಯ ವಿದೇಶಿ ಸೇವೆಯಲ್ಲಿ (ಐ.ಎಫ್.ಎಸ್.) ಮಹಿಳೆಯರು

ಕ್ರಿ. ಶ. 1993ರ ವರೆಗೆ ದೇಶದಲ್ಲಿ ಐ. ಎಫ್.ಎಸ್. ಅಧಿಕಾರಿಗಳಾಗಿ ಒಟ್ಟು 409 ಜನ ಆಯ್ಕೆಯಾಗಿದ್ದರು. ಅದರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 40 ಇತ್ತು. ಇವರಲ್ಲಿ 6 ಜನ ಭಾರತದ ರಾಯಭಾರಿಗಳಾಗಿ ವಿಭಿನ್ನ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. 2014ರಲ್ಲಿ ತಮಿಳುನಾಡಿನ 25 ವರ್ಷದ ಯುವತಿ ಬೆನೋ ಯುಫೇನ್ಸ್ ಇವರು ಐ.ಎಫ್.ಎಸ್.ಗೆ ನೇಮಕಗೊಂಡಿದ್ದಾರೆ.

### ಜಿ. ಭಾರತೀಯ ಪೋಲಿಸ್ ಸೇವೆಯಲ್ಲಿ (ಆಯ್.ಪಿ.ಎಸ್.) ಮಹಿಳೆಯರು

ಭಾರತೀಯ ಪೊಲೀಸ್ ಸೇವೆಗೆ ಸ್ತ್ರೀಯರು 1993ರಲ್ಲಿ ಪ್ರಥಮ ಬಾರಿಗೆ ಪ್ರವೇಶ ಆರಂಭವಾಯಿತು. ಪೊಲೀಸ್ ಇಲಾಖೆಯಲ್ಲಿಯೂ ಸ್ತ್ರೀಯರ ಪಾತ್ರ ಗಣನೀಯವಾಗಿದೆ. ಮಹಿಳೆ ಕೇವಲ ಬೌದ್ಧಿಕ ಕ್ಷಮತೆಯಲ್ಲಿ ಮಾತ್ರ ಸಬಲಳಲ್ಲ. ದೈಹಿಕವಾಗಿಯೂ ನಾನು ಪುರುಷ ಸಮಾನವಾಗಿ ಸಾಧಿಸಬಲ್ಲೆ ಎಂಬುದನ್ನು ತೋರಿಸಿದ್ದಾಳೆ. ಸಾಮಾನ್ಯ ಪೊಲೀಸ್ ಪೇದೆಯಿಂದ ಹಿಡಿದು ಐಎಎಸ್ ನಂತಹ ಉನ್ನತ ಪೊಲೀಸ್ ಅಧಿಕಾರಿಯಾಗಿ ಮಹಿಳೆಯರು ಇಂದು ಪೊಲೀಸ್ ಇಲಾಖೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಪ್ರಥಮ ದರ್ಜೆಯ ಪೊಲೀಸ್ ಅಧಿಕಾರಿಯಾಗಿ ಐಪಿಎಸ್ ಪದವಿಯೊಂದಿಗೆ ಪೊಲೀಸ್ ಸೇವೆ ಆರಂಭಿಸಿದ ಕಿರಣ್ ಬೇಡಿ (ಮ್ಯಾಗ್ಸೆಸೆ ವಿಜೇತೆ) ಜಗತ್ತಿನಲ್ಲಿಯೇ ಪ್ರಪ್ರಥಮ ಮಹಿಳಾ ಪೊಲೀಸ್ ಅಧಿಕಾರಿ ಎನಿಸಿಕೊಂಡಿದ್ದಾರೆ. **ಶ್ರೀಮತಿ ಕಾಂಚನ್ ಭಟ್ಟಾಚಾರ್ಯ** ರವರು ದೇಶದ ಪ್ರಥಮ ಮಹಿಳಾ ಡಿ.ಜಿ.ಪಿ. ಯಾಗಿ ಉತ್ತರಾಂಚಲದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಹಾಗೂ ಭಾರತದಲ್ಲಿ ಇದುವರೆಗೂ ಸುಮಾರು 150 ಕ್ಕೂ ಹೆಚ್ಚು ಮಹಿಳೆಯರು ಐಎಎಸ್ ಅಧಿಕಾರಿಗಳಾಗಿ ಬೇರೆ–ಬೇರೆ ಉನ್ನತ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.

## 4. ಕೌಟುಂಬಿಕ ಸ್ವಾತಂತ್ರ್ಯ : ಮಹಿಳಾ ಸಬಲೀಕರಣ

ಭಾರತ ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪುರುಷರಷ್ಟೆ ಸಮಾನವಾದ ಪಾತ್ರ ಮಹಿಳೆಯರದ್ದಾಗಿದೆ. 'ತೊಟ್ಟಿಲು ತೂಗುವ ಕೈ ಜಗತ್ತನ್ನೇ ತೂಗಬಲ್ಲದು" ಎಂಬ ಮಾತು ಮಹಿಳೆಯರ ಸಾಮಾಜಿಕ ಮತ್ತು ಕೌಟುಂಬಿಕ ಜವಾಬ್ದಾರಿಯನ್ನು ಹೆಚ್ಚಿಸಿದೆ. ರಾಣಿ ಅಬ್ಬಕ್ಕ, ರಾಣಿ ಚೆನ್ನಮ್ಮ, ಒನಕೆ ಓಬವ್ವ, ಜಾನ್ಸಿ ರಾಣಿ ಲಕ್ಷ್ಮೀಬಾಯಿ, ಸತಿ ಸಕೂಬಾಯಿ ಮೊದಲಾದ ವೀರ ವನಿತೆಯರು ಕೇವಲ ತಮ್ಮ ಕುಟುಂಬಕ್ಕೆ ಮಾತ್ರ ಸೀಮಿತವಾಗದೇ ದೇಶ, ಜನ, ನಾಡು, ಭಾಷೆ, ಪ್ರೇಮಗಳಿಗಾಗಿ ದುಡಿದು ದೇಶದ ಚರಿತ್ರೆಯಲ್ಲಿ ಅಜರಾಮರರಾಗಿದ್ದಾರೆ. ಮಹಿಳೆ ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ತನ್ನ ಕುಟುಂಬದ ಜವಾಬ್ದಾರಿಯನ್ನು ಅತ್ಯಂತ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ. ಮಹಿಳೆಯು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಸ್ಕೃತಿಯ ಪ್ರತೀಕಗಳಾಗಿದ್ದಾಳೆ. ದೇಶದ ನಾಯಕಿಯಾಗಿ, ಕುಟುಂಬದ ಗೃಹಿಣಿಯಾಗಿ, ಸಮಾಜದ ಒಳ್ಳೆಯ ಪ್ರಜೆಯಾಗಿ ಬದುಕನ್ನು ರೂಪಿಸಿದ್ದಾಳೆ. ಮಹಿಳೆಯು ಭೋಗದ ವಸ್ತುವಲ್ಲ. ಅಥವಾ ಮಕ್ಕಳನ್ನು ಹೆರುವ ಯಂತ್ರವಲ್ಲ. ಅವಳಿಗೂ ಸ್ಥಾನಮಾನ, ಸ್ವಾಭಿಮಾನ, ಎಲ್ಲಕ್ಕಿಂತ ಹೆಚ್ಚಾಗಿ ಪವಿತ್ರವಾದ ಚಾರಿತ್ರ್ಯವಿದೆ. ಹೀಗಾಗಿ ಪುರುಷ ಸಮಾಜವು ಅವಳಿಗೆ ಸಮಾನ ಗೌರವ, ಅಂತಸ್ತು, ಹಕ್ಕು ಬಾದ್ಯತೆ, ಅಧಿಕಾರ ನೀಡಬೇಕು.

ಭಾರತದಲ್ಲಿ ಮಹಿಳೆಯರ **ಜನನಶಕ್ತಿಯ ಪ್ರಮಾಣವು** ಪಾಶ್ಚಾತ್ಯ ಕ್ಯಾಥೋಲಿಕ್ ದೇಶಗಳಿಗೆ ಹೋಲಿಸಿದರೇ ತೀರಾ ನಗಣ್ಯವೇ ಆಗಿದೆ. 1990ರ ಭಾರತದ ಸರಾಸರಿ ಜನನದರ 32 ರಷ್ಟಿದೆ. ಇದು ಮಹಿಳೆಯರ ವಯೋಮಾನ, ಆರೋಗ್ಯ, ಶಿಕ್ಷಣ, ಆರ್ಥಿಕೆ ಮತ್ತು ಪ್ರಾದೇಶಿಕ ಭಿನ್ನತೆಗಳ ಆಧಾರದ ಮೇಲೆ ಬೇರೆ–ಬೇರೆಯೇ ಆಗಿದೆ. ಭಾರತೀಯ ಹೆಚ್ಚಿನ ಮಹಿಳೆಯರು ಜನನ ಶಕ್ತಿಯನ್ನು ನಿಯಂತ್ರಿಸಲು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುತ್ತಾರೆ. ಮಹಿಳೆಯರಿಗೆ ಜನನ ಶಕ್ತಿಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ ಮೂಡಿಸುವುದು ತೀರಾ ಅವಶ್ಯಕವಾಗಿದೆ.

ಭಾರತೀಯ ಮಹಿಳೆಯರ **ವಿವಾಹದ ವಯೋಮಿತಿಯೂ** ಪ್ರತಿ ದಶಕಗಳಿಗೆ ಹೆಚ್ಚುತ್ತಲಿದೆ.ಬಾಲ್ಯವಿವಾಹಗಳ ಸಂಖ್ಯಾ ಪ್ರಮಾಣ ತಗ್ಗಿ, ಮಹಿಳೆಯರು ಜಾಗೃತರಾಗುತ್ತಿದ್ದಾರೆ.ಮಹಿಳೆಯರ ಶಿಕ್ಷಣ, ಉದ್ಯೋಗ, ಆಕಾಂಕ್ಷೆ, ಆರೋಗ್ಯ ಮುಂತಾದವುಗಳ ಅಭಿವೃದ್ಧಿಯಿಂದಾಗಿ ಅವರ ವಿವಾಹದ ವಯೋಮಿತಿಯು ಸಾಮಾನ್ಯವಾಗಿ 20 ವರ್ಷಗಳ ಗಡಿಯನ್ನು ದಾಟಿದೆ ಎಂದೇ ಹೇಳಬಹುದು.

## 5. ಶಿಕ್ಷಣ ಮತ್ತು ಆರೋಗ್ಯ – ಮಹಿಳಾ ಸಬಲೀಕರಣ

**ಎ. ಶಿಕ್ಷಣ :** 2001 ನೇ ವರ್ಷದಲ್ಲಿ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಪರಿವರ್ತಿಸಿರುವುದು ಮಹಿಳಾ ಸಾಕ್ಷರತೆಯ ಮತ್ತೊಂದು ಐತಿಹಾಸಿಕ ಹೆಜ್ಜೆ. 'ಬಾ ಬಾಲೆ ಶಾಲೆಗೆ' ಹಾಗೂ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಶೀರ್ಷಿಕೆಯಡಿ ಮಹಿಳೆಯರ ಶಿಕ್ಷಣ ಮಟ್ಟ ಎತ್ತರಿಸಲು ಸರ್ಕಾರ ಮತ್ತು ಸರ್ಕಾರೇತರ ಸಂಘಟನೆಗಳು ಜಾಗೃತಿ ಮೂಡಿಸುತ್ತಿವೆ. ಮಹಿಳೆಯರು ಹೆಚ್ಚು ಸಾಕ್ಷರರಾದಂತೆ ಅವರಲ್ಲಿ ಮೌಢ್ಯ, ಅಜ್ಞಾನ, ಮತ್ತು ಅಂಜಿಕೆ ಕೀಳರಿಮೆ, ಮೂಢನಂಬಿಕೆ ಮೊದಲಾದವು ದೂರವಾಗಿ ವೈಚಾರಿಕತೆ, ವೈಜ್ಞಾನಿಕ ಮನೋಭಾವನೆ ಬೆಳೆಯುತ್ತಿದೆ.

**ಭಾರತದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ**

| ಅ. ನಂ. | ವರ್ಷ | ಪ್ರತಿಶತ |
|---|---|---|
| 01. | 1901 | 0.6% |
| 02. | 1951 | 8.9% |
| 03. | 2001 | 54.2% |
| 04. | 2011 | 65.4% |

ಮೇಲಿನ ಅಂಕಿ ಅಂಶಗಳ ಪ್ರಕಾರ ಮಹಿಳಾ ಸಾಕ್ಷರತೆಯು ಪ್ರಮಾಣವು ಪ್ರತಿದಶಕಗಳಿಂದ ದಶಕಗಳವರೆಗೆ ಹೆಚ್ಚಿರುವುದು ಕಂಡು ಬರುತ್ತದೆ. ಮಹಿಳೆಯರ ಸಾಕ್ಷರತೆಯು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತದವರೆಗೆ ಮಾತ್ರ ಪಡೆಯುತ್ತಲಿದ್ದು ಬಹಳಷ್ಟು ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣದಿಂದ ವಂಚಿತ ರಾಗುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಕುಟುಂಬದ ಮಹಿಳೆಯರು ತಮ್ಮ ವಿವಾಹದ ಒತ್ತಡ, ಬಡತನ, ತಂದೆ–ತಾಯಿಯರ ಅನಕ್ಷರತೆ, ಗ್ರಾಮೀಣ ಭಾಗಗಳ ಶೈಕ್ಷಣಿಕ ಸೌಲಭ್ಯಗಳ ಕೊರತೆ ಮೊದಲಾದವು ಅವರ ಶೈಕ್ಷಣಿಕ ಅವಕಾಶಗಳನ್ನು ಪ್ರತಿಬಾಧಿಸುತ್ತಿವೆ.

ಮಹಿಳಾ ಉನ್ನತ ಶಿಕ್ಷಣದ ಬೆಳವಣಿಗೆಗಾಗಿ ಕೇಂದ್ರ ಹಾಗೂ ರಾಜ್ಯ ಜಂಟಿ ಸರ್ಕಾರಗಳ ಮಹತ್ವದ ಜವಾಬ್ದಾರಿಯಾಗಿದೆ. ಮಹಿಳೆಯರನ್ನು ಶಿಕ್ಷಣಕ್ಕೆ ಆಕರ್ಷಿಸಲು ಮಹಿಳಾ ವಿದ್ಯಾರ್ಥಿ ವೇತನ, ಸಾಲ ಸೌಲಭ್ಯ, ವಸತಿ ನಿಲಯದ ವ್ಯವಸ್ಥೆಪ್ರಾಥಮಿಕ ಹಂತದಿಂದ, ವಿಶ್ವವಿದ್ಯಾಲಯದ ಮಟ್ಟದವರೆಗೂ ಮಹಿಳೆಯರಿಗೆ ಪ್ರತ್ಯೇಕ ಶಾಲೆ–ಕಾಲೇಜುಗಳನ್ನು ತೆರೆದು ಸುವರ್ಣಾವಕಾಶಗಳನ್ನು ಒದಗಿಸಿದೆ. ಮಹಿಳಾ ಶಿಕ್ಷಣಕ್ಕೆ ಕಾಂಪೋಸಿಟ್ ಶಿಕ್ಷಣ ಸಂಸ್ಥೆ ಮತ್ತು ಮುಕ್ತ ದೂರ ಶಿಕ್ಷಣ ವ್ಯವಸ್ಥೆಯನ್ನು ಕೂಡಾ ಒದಗಿಸಲಾಗಿದೆ.

ಸರ್ಕಾರವು ಮಹಿಳೆಯರ ಉನ್ನತ ಶಿಕ್ಷಣಕ್ಕಾಗಿ ಮಹಿಳಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದೆ. ಅವುಗಳು ಇಂತಿವೆ –

1. ಎಸ್.ಎಸ್.ಡಿ.ಟಿ. ಭಾರತೀಯ ಮಹಿಳಾ ವಿಶ್ವವಿದ್ಯಾನಿಲಯ – ಪೂನಾ, (ಮಹಾರಾಷ್ಟ್ರ)
2. ಪದ್ಮಾವತಿ ಮಹಿಳಾ ವಿಶ್ವವಿದ್ಯಾನಿಲಯು – ತಿರುಪತಿ (ಆಂಧ್ರಪ್ರದೇಶ)
3. ಮದರ ಥೆರೆಸಾ ಮಹಿಳಾ ವಿಶ್ವವಿವಿದ್ಯಾಲಯ – ಕೊಡೈಕೆನಾಲ್ (ತಮಿಳುನಾಡು)
4. ವಿಜಯಪುರ ಮಹಿಳಾ ವಿಶ್ವವಿದ್ಯಾನಿಲಯ – ವಿಜಯಪುರ (ಕರ್ನಾಟಕ)

2012ರಲ್ಲಿ ವಿಜಯಪುರದ ಮಹಿಳಾ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಕುಲಪತಿಗಳಾದ ಡಾ. ಗೀತಾ ಬಾಲಿ ರವರು ವಿವಿಧ ಅಧ್ಯಯನ ವಿಭಾಗಗಳಲ್ಲಿ ಸಾಧನೆಗೈದ 30 ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ 33 ಚಿನ್ನದ ಪದಕಗಳನ್ನು ನೀಡಿ ಗೌರವಿಸಿದರು. ಇದು ಮಹಿಳೆಯರ ಶೈಕ್ಷಣಿಕ ಕ್ಷೇತ್ರದ ಸಬಲೀಕರಣವನ್ನು ಸ್ಪಷ್ಟೀಕರಿಸುತ್ತದೆ. ಮಹಿಳೆಯರ ಗುಣಮಟ್ಟ ಮತ್ತು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಯು.ಜಿ.ಸಿ. ದೇಶದಾದ್ಯಂತ 20 ಹೊಸ ಮಹಿಳಾ ವಿಶ್ವವಿದ್ಯಾಲಯಗಳನ್ನು ತೆರೆಯುವ ಯೋಜನೆಯನ್ನು ರೂಪಿಸಿದೆ.

**ಬಿ. ಆರೋಗ್ಯ :** ಮಹಿಳೆಯರ ಆರೋಗ್ಯ ವರ್ಧನೆಗೂ ಸರ್ಕಾರ ಮತ್ತು ಸರ್ಕಾರೇತರ ಸಂಘಟನೆಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗರ್ಭಿಣಿಯ ಆರೋಗ್ಯ ಚಿಕಿತ್ಸೆ, ತಾಯಿ ಮಗುವಿನ ಆರೋಗ್ಯ ಮತ್ತು ಆರೈಕೆ, ಪೌಷ್ಠಿಕಾಂಶ ಆಹಾರ, ಶೂಶ್ರೂಷೆ, ಕುಟುಂಬ ಪೋಷಣೆ, ಉಚಿತ ವೈದ್ಯಕೀಯ ಸೌಲಭ್ಯ, ಇತ್ಯಾದಿ ಯೋಜನೆಗಳ ಮೂಲಕ ಮಹಿಳೆಯರ ಆರೋಗ್ಯವನ್ನು ವೃದ್ಧಿಸಲಾಗುತ್ತಿದೆ.ಅಂತಹ ಆರೋಗ್ಯ ಸಂಘಟನೆಗಳು ಈ ಕೆಳಗಿನಂತಿವೆ.

1. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
2. ಕೇಂದ್ರ ಆರೋಗ್ಯ ಸೇವಾ ಯೋಜನೆ.
3. ಭಾರತೀಯ ವೈದ್ಯಕೀಯ ಸಂಘಗಳು.
4. ಪ್ರಾಥಮಿಕ ಆರೋಗ್ಯ ಸಮುದಾಯಗಳು.
5. ಕುಟುಂಬ ಕಲ್ಯಾಣ ಕೇಂದ್ರಗಳು.
6. ವಿಶ್ವ ಆರೋಗ್ಯ ಸಂಸ್ಥೆ.
7. ವಿಶ್ವಬ್ಯಾಂಕಿನ ಆರೋಗ್ಯ ನೆರವು.
8. ಫೋರ್ಡ ಫೌಂಡೇಶನ್ ಇತ್ಯಾದಿ

## 6. ಕಲೆ, ಕ್ರೀಡೆ ಮತ್ತು ಸಾಹಿತ್ಯ ಕ್ಷೇತ್ರಗಳ ಸಾಧನೆ – ಮಹಿಳಾ ಸಬಲೀಕರಣ

ಮಹಿಳೆಯರಿಗೆ ಅವಕಾಶದೊಂದಿಗೆ ಸರಿಯಾದ ಪ್ರೋತ್ಸಾಹ ದೊರಕುವುದಾದರೇ ಎಲ್ಲ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಯನ್ನು ಮಾಡಬಲ್ಲಳು ಎಂಬುದಕ್ಕೆ ಅವರ ಕಲೆ ಮತ್ತು ಕ್ರೀಡಾ, ಸಾಹಿತ್ಯಿಕ ಸಾಧನೆಗಳೇ ಸಾಕ್ಷಿಯಾಗಿವೆ. ಮಹಿಳೆಯರ ಮೇಲಿನ ದೌರ್ಜನ್ಯ,

ಬಲಾತ್ಕಾರ, ಅತ್ಯಾಚಾರ, ಲೈಂಗಿಕ ಕಿರುಕುಳ, ಸಲ್ಲದು. ಮಹಿಳೆಯರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವುದು, ಬಲಿಪಶುಗಳನ್ನಾಗಿಸುವುದು ಪುರುಷ ಸಮಾಜಕ್ಕೆ ವಿರುದ್ಧವಾದುದು. ಮಹಿಳೆಯರನ್ನು ಸಹೋದರಿ, ಮಾತೃತ್ವ ಭಾವನೆಯಿಂದ, ಗೌರವದಿಂದ ಕಾಣುವದಾದಲ್ಲಿ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ.

## ಎ. ಮಹಿಳೆಯರ ಕಲೆ ಕ್ಷೇತ್ರದ ಸಾಧನೆಗಳು

- **ರಂಗಭೂಮಿ ಕಲೆಯ ಮಹಿಳಾ ಸಾಧಕಿಯರು**

1. ಶ್ರೀಮತಿ ಸಾಯಿ ಪರಂಚಾಪೆ – ಮರಾಠಿ ಪ್ರಸಿದ್ಧ ನಾಟಕಕಾರರು.
2. ಶ್ರೀಮತಿ ಅಮಲ್ ಆಲನ್ – ರಂಗನಿರ್ದೇಶಕಿ
3. ಶ್ರೀಮತಿ ಕಲ್ಪನಾ ಲಾಜ್ಮಿ – ಹಿಂದಿ ಚಲನಚಿತ್ರ ನಿರ್ಮಾಪಕರು
4. ಶ್ರೀಮತಿ ಬಿ.ಜಯಮ್ಮ ಮತ್ತು ಪಂಡರಿ ಬಾಯಿ – ಕನ್ನಡ ಚಲನಚಿತ್ರ ಕಲಾವಿದರು.

- **ನೃತ್ಯ ಕಲೆಯ ಸಾಧಕಿಯರು**

1. ರುಕ್ಮಿಣಿದೇವಿ ಅರುಂಢೇಲ್ (ಭರತನಾಟ್ಯ)
2. ಸೋಲಿಲಾಲ್ ಮಾನಸಿಂಗ್ (ಓಡಿಸ್ಸಿ ನೃತ್ಯ)
3. ಕುಮುದಿನಿ (ಕಥಕ್ ನೃತ್ಯ)
4. ಮಲ್ಲಿಕಾ ಸಾರಾಭಾಯಿ
5. ಡಾ. ಕುಮಾರಿ ಪದ್ಮಾ ಸುಬ್ರಹ್ಮಣ್ಯಂ
6. ಚಂದ್ರಭಾಗಾದೇವಿ

- **ಸಂಗೀತ ಕ್ಷೇತ್ರದ ಸಾಧಕಿಯರು. :**

1. ಎಂ.ಎಸ್. ಸುಬ್ಬುಲಕ್ಷ್ಮೀ – ಕರ್ನಾಟಕ ಸಂಗೀತ
2. ಗಂಗೂ ಬಾಯಿ ಹಾನಗಲ್ – ಹಿಂದೂಸ್ತಾನಿ ಗಾಯನ
3. ಲತಾ ಮಂಗೇಶ್ಕರ –ಹಿಂದಿ ಚಲನಚಿತ್ರಗಳ ಹಿನ್ನೆಲೆ ಗಾಯಕಿ
4. ಅನುಪಮ ಜಲ್ಲೋತ, ಸಂಗೀತಾ ಕಟ್ಟಿ – ಸಂಗೀತಾ

- **ಜನಪದ ಗೀತೆ ಮತ್ತು ಸಾಹಿತ್ಯದಲ್ಲಿ ಸಾಧನೆ ಮಾಡಿದ ಸ್ಮರಣೀಯರು**

ತೇಜನಬಾಯಿ, ಆಶಾ ಭೋಸ್ಲೆ, ಪ್ರಭಾ ಅತ್ರೆ, ಕಿಶೋರಿ ಅಮೋನ್‌ಕರ ಇತ್ಯಾದಿ.

## ಬಿ. ಮಹಿಳೆಯರ ಸಾಹಿತ್ಯ ಮತ್ತು ವಿಜ್ಞಾನ ಕ್ಷೇತ್ರದ ಸಾಧನೆಗಳು

ಭಾರತದಲ್ಲಿ ಪ್ರತಿಷ್ಠಿತ ವೃತ್ತಿ ಶಿಕ್ಷಣ ಸಂಸ್ಥೆಗಳಾದ ಇಂಜೀನಿಯರಿಂಗ ಹಾಗೂ ವೈದ್ಯಕೀಯ ಕಾಲೇಜುಗಳಿಗೂ ಮಹಿಳೆಯರು ಬಹುದೊಡ್ಡ ಸಂಖ್ಯೆಯಲ್ಲಿ ಸೇರ್ಪಡೆಗೊಳ್ಳುತ್ತಿದ್ದಾರೆ. ಪ್ರತಿ ವರ್ಷವೂ ಭಾರತದ ವೃತ್ತಿ ಶಿಕ್ಷಣ ಸಂಸ್ಥೆಗಳಿಂದ 1.25 ಲಕ್ಷ ಮಹಿಳಾ ವೈದ್ಯಕೀಯ ಪದವೀಧರ ಮಹಿಳೆಯರು ಹೊರಬರುತ್ತಿದ್ದು, ಇದು ಒಟ್ಟು ವೈದ್ಯಕೀಯ ವಿದ್ಯಾರ್ಥಿಗಳ ಸಂಖ್ಯೆಯ 50 % ರಷ್ಟು ಇದೆ. ದೇಶದ 21 % ರಷ್ಟು ವೃತ್ತಿಪರ ಸಾಫ್ಟವೇರ ಇಂಜೀನೀಯರಿಂಗ ಪದವಿ ಪಡೆದ ಮಹಿಳೆಯರು ಹೊರಬರುತ್ತಿದ್ದಾರೆ. ದೇಶದ ಒಟ್ಟು ವಿಜ್ಞಾನ ಮತ್ತು ಇಂಜೀನಿಯರಿಂದ ಪದವೀಧರರಲ್ಲಿ 25% ರಷ್ಟು ಜನ ಮಹಿಳೆಯರಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸುತ್ತಿರುವ ಸ್ತ್ರೀಯರ ಸಂಖ್ಯೆಯು ಸಾಕಷ್ಟಿದೆ. ಐಐಟಿ ಯಂತಹ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಶಿಕ್ಷಣ ಸಂಸ್ಥೆಗಳಲ್ಲಿ ಸ್ತ್ರೀಯರಿದ್ದಾರೆ. ತಂತ್ರಜ್ಞಾನದಲ್ಲಿ ಅವರು ಪಡೆದಿರುವ ಪರಿಣಿತಿಯಿಂದಾಗಿಯೇ ಇದೀಗ ವಿಮಾನ ಚಾಲಕರನ್ನಾಗಿ ಕೂಡ ಮಹಿಳೆಯರನ್ನು ಸೇರಿಸಿಕೊಳ್ಳುತ್ತಿದ್ದಾರೆ.

- **ಕನ್ನಡದ ಹೆಸರಾಂತ ಮಹಿಳಾ ಸಾಹಿತಿಗಳು**

ಎಂ.ಕೆ. ಇಂದಿರಾ, ಡಾ.ಅನುಪಮಾ ನಿರಂಜನ, ಶಾಂತಿದೇವಿ ಮಾಳವಾಡ, ಜಯದೇವಿ ತಾಯಿ ಲಿಗಾಡೆ, ಸುಧಾ ಮೂರ್ತಿ, ಗೀತಾ ನಾಗಭೂಷಣ, ಸಾರಾ ಅಬೂಬಕರ, ಇತರರು ಉಲ್ಲೇಖನೀಯ ಸಾಹಿತಿಗಳಾಗಿದ್ದಾರೆ.

1. ಶಕುಂತಲಾದೇವಿ (ಗಣಿತ)
2. ಅಮೃತಾನಂದಮಯಿ
3. ಮಹಾಶ್ವೇತಾದೇವಿ (ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತೆ)

## ಸಿ. ಮಹಿಳೆಯರ ಕ್ರೀಡಾ ಕ್ಷೇತ್ರದ ಸಾಧನೆಗಳು

1. **ಪಿ.ಟಿ. ಉಷಾ :** ಇವರು ಏಷ್ಯನ್ ಪಂದ್ಯಾಟಗಳಲ್ಲಿ ಮಹಿಳಾ ಓಟದ ವಿಭಾಗಗಳಲ್ಲಿ 6 ಚಿನ್ನದ ಪದಕ ಪಡೆದ ಕೇರಳದ ಹೆಮ್ಮೆಯ ಕ್ರೀಡಾಪಟು.
2. **ಬಚೇಂದ್ರಿಪಾಲ್ :** ಹಿಮಾಲಯದ ಗದೌರಿಶಂಕರ ಶಿಖರವನ್ನು ಏರಿದ ಮೊದಲ ಭಾರತೀಯ ಮಹಿಳೆ (1984)
3. **ಕರ್ಣಮ್ಮ ಮಲ್ಲೇಶ್ವರಿ :** ಓಲಂಪಿಕ್ಸ ಪಂದ್ಯಾಟಗಳಲ್ಲಿ ಭಾರ ಎತ್ತುವ ಸ್ಪರ್ಧೆಯಲ್ಲಿ ಮಹಿಳಾ ವಿಭಾಗದಲ್ಲಿ ಕಂಚಿನ ಪದಕವನ್ನು ತಂದ ಭಾರತದ ಹೆಮ್ಮೆಯ ಪುತ್ರ.
4. **ಮಾಲತಿ ಹೊಳ್ಳ :** ದೈಹಿಕ ಅಂಗವಿಕಲತೆ ಹೊಂದಿದ ಪ್ರತಿಭಾನ್ವಿತ ಕ್ರೀಡಾಪಟು. ಹೀಗೆ ಅಶ್ವಿನಿ ನಾಚಪ್ಪ, ರೋಸಾ ಕುಟ್ಟಿ, ನಿಶಾ ಮಲ್ಲೆಪ, ಶಿಲ್ಪಾ ಟಂಡನ್ ಮೊದಲಾದ ಭಾರತೀಯ ಮಹಿಳೆಯರು ತಾವು ಯಾರಿಗೇನು ಕಮ್ಮಿ ಇಲ್ಲ ಎಂಬಂತೆ ಪುರುಷರ ಜೊತೆ ಸರಿ ಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆ ಮಾಡಿದ್ದಾರೆ.

## ಸಮಾರೋಪ

21ನೇ ಶತಮಾನದ ಮಹಿಳೆಯರು ಸಂವಿಧಾನ ಬದ್ಧವಾಗಿ ತನ್ನ ಹಕ್ಕು ಸ್ವಾತಂತ್ರ್ಯಗಳ ಮೂಲಕ ಸಮಾನ ಅವಕಾಶಗಳನ್ನು ಪಡೆದುಕೊಂಡು ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ, ತಂತ್ರಜ್ಞಾನ ಮತ್ತು ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಗೈಯುವದರ ಮೂಲಕ ತಾನು ಪುರುಷ ಸಮಾನಳು. ಅಬಲೆಯಲ್ಲ ಸಬಲೆ ಮತ್ತು ಪ್ರಭಲೆ ಎಂಬುದನ್ನು ಸಾಬೀತುಪಡಿಸಿದ್ದಾಳೆ. ನಾನು ನೀಡಿರುವ ಮಹಿಳೆಯರ ಹೆಸರು ಮತ್ತು ಸಂಖ್ಯಾ ಪ್ರಮಾಣ ಕೇವಲ ಉದಾಹರಣೆ ಅಷ್ಟೆ.ಅಂತಹ ಎಷ್ಟೋ ಭಾರತೀಯ ಮಹಿಳೆಯರು ಸಾಧನೆಗೈದು ಸ್ತ್ರೀ ಸಮಾಜಕ್ಕೆ ಮಾದರಿಯಾಗಿದ್ದಾರೆ. ಪುರುಷ ಪ್ರಧಾನ ಸಮಾಜವು ಮಹಿಳಾ ಸಬಲೀಕರಣವನ್ನು ಒಪ್ಪಿಕೊಂಡಿದೆ. ಮಹಿಳೆಯರಿಗೆ ದೊರೆಯಬೇಕಾದ ಸಾಮಾಜಿಕ ಸ್ಥಾನಮಾನ ಅವಕಾಶಗಳನ್ನು ಪಡೆದುಕೊಳ್ಳಲು ಅರ್ಹಳು ಎಂದು ಬೆಂಬಲಿಸುತ್ತಿದ್ದುದರಿಂದ 21ನೇ ಶತಮಾನದಲ್ಲಿ ಮಹಿಳೆ ಸಬಲೆಯಾಗಿದ್ದಾಳೆ.

## ಆಕರ ಗ್ರಂಥಗಳು


- **ರಾಮಚಂದ್ರ ಜೋಷಿ :** ಸಮಗ್ರ ಸಮಾಜಶಾಸ್ತ್ರ.
- **ಉಮೇಶ ಮುಳ್ಳೂರ :** ಭಾರತದ ಸಂವಿಧಾನ.
- **ಕೆ.ಎಸ್. ಪಾಟೀಲ :** ಮಾನವ ಹಕ್ಕುಗಳು.
- **ಎಂ. ನಾರಾಯಣ :** ಜನಸಂಖ್ಯಾ ಅಧ್ಯಯನ.
- **ಚ.ನ. ಶಂಕರರಾವ್ :** ಸಮಾಜಶಾಸ್ತ್ರ ಸಂಪುಟ–1.
- **ವಿಜಯಕರ್ನಾಟಕ** ದಿನಪತ್ರಿಕೆ.
- **ಸೋಶಿಯಾಲಜಿಕಲ್ ಜರ್ನಲ್ಸ್.**


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

– 11ನೇ ಪುಟದಿಂದ ಮುಂದುವರೆದುದು

ದೊಡ್ಡದಾದ ಕೆರೆ ಹಾಗೂ ಹಲವು ದೇವಾಲಯಗಳು ಇಲ್ಲಿವೆ. ಚೈತ್ರ ಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುವುದು. ಶಿರಸಿಯ ಸೊಂದೆ ಐತಿಹಾಸಿಕ ಧಾರ್ಮಿಕ ಸ್ಥಳವಾಗಿದ್ದು ಶಿರಸಿಯಿಂದ 19 ಕಿ.ಮೀಟರ ದೂರದಲ್ಲಿದ್ದು ಸೊಂದೆ ಪರಿಸರದಲ್ಲಿ ಶಂಕರನಾರಾಯಣ ದೇವಾಲಯ, ಗದ್ದಿಗೆ ಮಠ, ಹುಣಸೆ ಹೊಂಡದ ವೆಂಕಟ್ರರಮಣ ದೇವಾಲಯ ಮತ್ತು ಎತ್ತರದ ಧ್ವಜ ಸ್ತಂಭ ಜೀರ್ಣ ದೇವಾಲಯಗಳು ಕಾಣುತ್ತವೆ. ಸ್ವರ್ಣವಳ್ಳಿಯು ಶೃಂಗೇರಿ ಮಠದ ಶಾಖೆಯಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳ ಕೇಂದ್ರವಾಗಿದೆ. ಶಿರಸಿ ಹತ್ತಿರದ ಸಹಸ್ರಲಿಂಗ ಪ್ರದೇಶವನ್ನು ಮೊದಲು ಸಹಸ್ರಹಳ್ಳಿ ಎಂದು ಕರೆಯುತ್ತಿದ್ದರು. ಈ ಪ್ರದೇಶದ ಶಾಲ್ಮಲಾ ನದಿಯಲ್ಲಿ ಅನೇಕ ಲಿಂಗಗಳನ್ನು ಕೊರೆಯಲಾಗಿದೆ. ಈ ಸ್ಥಳದಲ್ಲಿಗ ಜನವಸತಿಯಿಲ್ಲ. ಶಿವರಾತ್ರಿ ಸಮಯ ಜಾತ್ರೆ ನೆರದಂತೆ ಜನಸೇರುತ್ತಾರೆ. ಶಿರಾಲಿ ಭಟ್ಕಳದಿಂದ 6 ಕಿ.ಮೀ. ದೂರದಲ್ಲಿದೆ. ವೆಂಕಟಾಪುರ ನದಿ, ಚಿತ್ರಾಪುರ ಸಾರಸ್ವತರ ಮುಖ್ಯ ಮಠ, ವಸ್ತು ಸಂಗ್ರಹಾಲಯವನ್ನು, ಗೋಪಾಲಕೃಷ್ಣ, ದತ್ತಾತ್ರೇಯ, ಶಾಂತಾದುರ್ಗಾ, ಕೇಶವನಾರಾಯಣ ದೇವಾಲಯಗಳಿವೆ. ಶಿರಾಲಿಯಲ್ಲಿ ಮಹಾಗಣಪತಿ, ಮಹಾಮಾಯಾ ದೇವಾಲಯು, ಹನುಮಂತ ದೇವಾಲಯುಗಳಿವೆ. ಗುಂಡಬಾಳೆ ಹೊನ್ನಾವರದ ಪೂರ್ವಕ್ಕೆ ಗುಂಡಬಾಳಿಯಿದ್ದು ಇಲ್ಲಿಯ ಹನುಮಂತ ದೇವರಿಂದ ಬಹು ಪ್ರಖ್ಯಾತ ವಾಗಿದೆ. ಇಲ್ಲಿ ಜೈನ ಬಸ್ತಿಗಳು, ದೇವಾಲಯಗಳು, ಮೆಣಸಿನ ಕಾಳಿನ ಬಾವಿಗಳು ಪ್ರಸಿದ್ಧವಾಗಿವೆ. ಅವರ್ಸೆ ಅಂಕೋಲೆಯಿಂದ ಕಾರವಾರಕ್ಕೆ ಹೋಗುವ ರಸ್ತೆಯಲ್ಲಿ ಇದೆ. ಧಾರ್ಮಿಕ ಮಹತ್ವ ಪಡೆದ ಚಿಕ್ಕ ಊರಿನಲ್ಲಿ ಕಾತ್ಯಾಯನಿ ದೇವಿಯ ಪ್ರಸಿದ್ಧವಾಗಿದೆ.

ಅಂಕೋಲಾದಿಂದ 22 ಕಿ. ಮೀ ದೂರದಲ್ಲಿ ಹೀರೆಗುತ್ತಿಯಿದೆ. ಈ ಊರು ಜೈನ ಅವಶೇಷಗಳ ದೇವಾಲಯಗಳ ಬೀಡಾಗಿದೆ. ಈ ಊರಲ್ಲಿ ಅನೇಕ ಗುಡಿ ಗುಂಡಾರಗಳು, ಶಾಸನ ವೀರಗಲ್ಲುಗಳಿವೆ. ಕಿರೆಗುತ್ತಿ ಎಂಬಲ್ಲಿ ಜೈನನ ಗದ್ದೆ ಎಂಬ ಸ್ಥಳವಿದ್ದು ಜೈನ ಅವಶೇಷಗಳಿವೆ. ಇನ್ನೂ ಪ್ರಾಚೀನ ಮಹಾಲಿಂಗೇಶ್ವರ. ಲಕ್ಷೀ ನಾರಾಯಣ, ಬೊಮ್ಮಯ್ಯ (ಬ್ರಹ್ಮ) ತ್ರಿಮೂರ್ತಿ ದೇವಾಲಯಗಳ ಜೊತೆಗೆ ಇನ್ನೂ ಅನೇಕ ಪೀಠಗಳಿದ್ದು ಹೊಸದಾಗಿ ನಿರ್ಮಿತವಾದ ಮಹಾಲಕ್ಷೀ ದೇವಕಿ ಕೃಷ್ಣ, ರವಳನಾಥ ದೇವಾಲಯ, ಬ್ರಹ್ಮ ಜಟಗ ಗುಡಿಗಳು ಈ ಊರಲ್ಲಿ ಕಾಣುತ್ತದೆ. ಯಲ್ಲಾಪುರ ಕಾರವಾರ ರಸ್ತೆಯಲ್ಲಿ ಇಡಗುಂಜಿ ಯಲ್ಲಾಪುರದಿಂದ 10 ಕಿ. ಮೀ. ದೂರದಲ್ಲಿದೆ. ಶ್ರೀ ರಾಮನು ಲಕ್ಷ್ಮಣ ಸೀತಾಯೊಡನೆ ಇಲ್ಲಿಗೆ ಬಂದಿದ್ದನೆಂದೂ ರಾಮ ಲಿಂಗವನ್ನು ಪ್ರತಿಷ್ಠಾಪಿಸಿದನೆಂದು ಸ್ಥಳಿಯರು ನಂಬುತ್ತಾರೆ. ಹತ್ತಿರವಿದ್ದ ದೊಡ್ಡ ಕೆರೆಯಲ್ಲಿ ಚಿನ್ನದ ರಥವಿದೆ ಎಂದು ನಂಬಿಕೆಯಿದೆ. ಕೋಟೆ ಹಾಗೂ ಇತರ ಅವಶೇಷಗಳಿವೆ. ಭಟ್ಕಳದಿಂದ ಹಾಡುವಳ್ಳಿಯಿಲ್ಲಿ 24 ಜೈನ ತೀರ್ಥಕರಿರುವ ಬಸದಿಯಿದೆ. ಸಂಗಮರಿ ಕಲ್ಲುಗಳಿಂದ ರಚಿಸಲ್ಪಟ್ಟಿರುವ ಸುಂದರ ಮೂರ್ತಿಗಳಡಿಗೆ ಬರಹಗಳಿವೆ. ಸಿದ್ದಾಪುರದಿಂದ 13 ಕಿ.ಮೀ ದೂರದಲ್ಲಿ ಬೀಳಗಿ ಇದೆ ಇಲ್ಲಿ ನಾಲ್ಕು ಬಸದಿಗಳು ಜಿಲ್ಲೆಯಲ್ಲಿಯೆ ಅತಿ ದೊಡ್ಡವೆಂದು ಪರಿಗಣಿಸಲ್ಪಟ್ಟಿದೆ. ದುರ್ಗಾಂಬಿಕಾ ಹಾಗೂ ರಾಮ ದೇವಾಲಯಗಳು, ಬೀಳಗಿ– ಸಿದ್ದಾಪುರಗಳ ನಡುವೆ ಭುವನಗಿರಿ ಎಂಬ ಗುಡ್ಡವಿದ್ದು ವಿಷ್ಣು ವಿಗ್ರಹವನ್ನೊಳಗೊಂಡ ಭುವನೇಶ್ವರಿ ದೇವಾಲಯ ಮತ್ತು ಮೂಕಾಂಬಿಕಾ ಕೆರೆ ಇವು ಚೆನ್ನಾಗಿವೆ. ಸಿದ್ದಾಪುರದಿಂದ 19 ಕಿ. ಮೀ. ಮತ್ತು ಬಿಳಗಿಯಿಂದ 5 ಕಿ.ಮೀ ದೂರದಲ್ಲಿ ರಾಮೇಶ್ವರ, ವಿಠ್ಠಲ, ಕ್ಷೇತ್ರಪಾಲ ದೇವಾಲಯಗಳಿದ್ದು ಮೇ ತಿಂಗಳಲ್ಲಿ ಜಾತ್ರೆ ನಡೆಯುವದು. ಹೀಗೆ ಐತಿಹಾಸಿಕವಾಗಿ ಪೌರಾಣಿಕವಾಗಿ ಪ್ರಸಿದ್ಧ ಪಡೆದಿರುವ ಹಲವಾರು ದೇವಾಲಯಗಳಿದ್ದು ವಾರ್ಷಿಕವಾಗಿ ಈ ಹಲವಾರು ಪ್ರದೇಶಗಳಲ್ಲಿ ದೈವರಾಧನೆ ನಡೆಯತ್ತಿದ್ದೂ ಈ ಜಿಲ್ಲೆಯಲ್ಲಿ ಬದುಕಿ ಬಾಳುತ್ತಿರುವ ಜನಾಂಗಳು ಶಿಷ್ಠ ಮತ್ತು ಜನಪದ ಎರಡು ರೀತಿಯಲ್ಲಿ ಜಾತ್ರೆ, ಉತ್ಸವಗಳನ್ನು ಆಚರಿಸುತ್ತಾರೆ. ಇತ್ತೀಚೆಗೆ ಉತ್ಸಾಹವು ಸಾಂಸ್ಕೃತಿಕವಾಗಿ ನಡೆಸುವ ಕರವಾಳಿ ಉತ್ಸವ, ಕದಂಬ ಉತ್ಸವಗಳ ಕಾರ್ಯಕ್ರಮಗಳು ಉತ್ಸವಗಳೆನ್ನಬಹುದು. ಈ ಉತ್ಸವಗಳಲ್ಲಿ ಹಲವಾರು ಜನರು ಭಾಗವಹಿಸಿ, ಪರಸ್ಪರ ಬೆರೆತು, ಭಾಗವಹಿಸುತ್ತಾರೆ. ಆದರೆ ಇಲ್ಲಿ ದೈವಾರಾಧನೆಯಿರುವದಿಲ್ಲ, ಮನರಂಜನೆಯಿರುತ್ತದೆ. ಆದರೆ ಧಾರ್ಮಿಕ ಉತ್ಸವಗಳಲ್ಲಿ ತಮ್ಮ ಧಾರ್ಮಿಕ ಭಕ್ತಿ ಭಾವುಕತೆಗಳನ್ನು ಪ್ರಕಟಿಸಿ, ಉತ್ಸಾಹದಿಂದ ಹಿಗ್ಗಿ ನಲಿಯುತ್ತಾರೆ.

## ಅಡಿ ಟಿಪ್ಪಣಿಗಳು

1. ಮೋಹನ್ ಕೃಷ್ಣ ರೈ ಕೆ. (ಸಂ.) ವಸಾಹತುಶಾಹಿ ಮತ್ತು ನಗರೀಕರಣ, ಪುಟ–79.
2. ನಾಯಕ್ ವಿ. ಎನ್. ಮತ್ತು ಸುಧೀರ್ ಡಿ. ನಾಯಕ್ (ಸಂ.) ಸಮೃದ್ಧಿ, ಕರಾವಳಿ ತೀರದ ಸೂಕ್ಷ್ಮ ಜೀವವಾಸಗಳು, ಪು.53.

■■

– 35 ನೇ ಪುಟದಿಂದ ಮುಂದುವರೆದುದು

ಕೊರತೆಯಿಂದ ಕೂಡಿವೆ. ಆದ್ದರಿಂದ ಭಾರತ ಸರಕಾರವು ಗ್ರಾಮ ಪಂಚಾಯತ ಸದಸ್ಯರಿಗೆ ಹೆಚ್ಚಿನ ಅಧಿಕಾರವನ್ನು ಒದುಗಿಸುವದು ಮತ್ತು ಅಧಿಕಾರ ಹಾಗೂ ಕಾರ್ಯಗಳ ಬಗ್ಗೆ ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಆಯಾ ರಾಜ್ಯ ಸರಕಾರಗಳು ನೀಡುವ ಅನುದಾನ ನೇರವಾಗಿ ಗ್ರಾಮ ಪಂಚಾಯತಿಗಳಿಗೆ ತಲುಪಿದರೆ ಮಾತ್ರ ಗ್ರಾಮಗಳ ಅಭಿವೃದ್ಧಿ ಹೊಂದಲು ಸಾಧ್ಯ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ ಕಂಡ **“ಗ್ರಾಮ ಸ್ವರಾಜ್ಯ ಎಂಬ ಕಲ್ಪನೆ”** ನನಸಾಗಲು ಸಾಧ್ಯ.

## ಆಕರ ಗ್ರಂಥಗಳು



- **Panchayat Raj and Rural Development :** 1989, NEW DEHELI, Common Wealth Publisher.
- **Hirway India :** 1989, “Panchayat Raj Crossed” Economical and Political weekly 24 (29), 22nd July.
- **Chandrashekar B. K. :** 1989, “Panchayat Raj Bill : the real flow” Economic and Political weekly 24 (26) 1st july.
- **Abdul Azziz :**1987-1992,Decentralization : Mandal Panchaya System in Karanataka.
- **ದತ್ತಾನಿಕುಂಜಲತಾ :** 1989,“ವಿಲೀಜ್ ಪಂಚಾಯತ್ ಇನ್ ಇಂಡಿಯಾ”.
- **ಭಟ್ ಕೆ.ಎಸ್.:** 1966, “ಎಮ್‌ರ್ಜಿಂಗ್ ಪ್ಯಾಟರನ್ ಆಫ್ ಲೀಡರ್ ಶಿಫ್ ಇನ್ ಪಂಚಾಯತ್ ರಾಜ್ ಇನ್ ಮೈಸೂರ ಸ್ಟೇಟ್.
- **ಧರ್ಮಪಾಲ :** 1972, “ದಿ ಮದ್ರಾಸ್ ಪಂಚಾಯತ್ ರಾಜ್ ಸಿಸ್ಟಿಮ್”.
- 1988, ಪಂಚಾಯತ್ ಆಡಳಿತ ಸಾಧಕ ಬಾಧಕಗಳು
- **ರಾಮಚಂದ್ರ ಬಿ. :** 1993, “ರೂಲ್ ಆಫ್ ಪಂಚಾಯತ್ ರಾಜ್.
- 1994, ಕರ್ನಾಟಕದಲ್ಲಿ ಪಂಚಾಯತಿ ರಾಜ್ಯ.
- **ಚಂದ್ರ ಆಂಡ್ ಸಿಂಗ್ ಬಿ.ಸಿ. :** 1995, “ಪಂಚಾಯತ್ ರಾಜ್ ಪವರ್ ಟು. ದಿ ಪಿಪಲ್”.
- **ಜಾಮಾದಾರ್ ಶಿವಾ :** 1995, “ಗ್ರಾಮ ಸಭಾ ಇನ್ ದಿ. ನಿವ್ ಪಂಚಾಯತ್ ಸಿಸ್ಟಿಮ.
- 2006, ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು.


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಡಾ. ಝಾಕೀರ್ ಹುಸೇನ್ (1897-1969)

✍ **ಎನ್. ಎಂ. ಮುಲ್ಲಾ** ಎಂ.ಎಂ. ಪ್ರಥಮ ದರ್ಜೆ ಕಾಲೇಜು, ಗದಗ.



## ಜೀವನ ಚರಿತ್ರೆ

ಝಾಕೀರ್ ಹುಸೇನ್‌ರು 1897ರ ಫೆಬ್ರುವರಿ 8 ರಂದು ಹೈದರಾಬಾದಿನಲ್ಲಿ ಜನಿಸಿದರು. ಮೊದಲಿನಿಂದಲೂ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಹೈದರಾಬಾದಿನಲ್ಲಿ ಮುಗಿಸಿ, ಅಲಿಗಢ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದರು. ಗಾಂಧೀಜಿಯವರು ಅಸಹಕಾರ ಆಂದೋಲನ ಪ್ರಾರಂಭಿಸಿದ್ದರು. 1921ರಲ್ಲಿ ಝಾಕೀರ್ ಹುಸೇನ್‌ರು ಅದರಲ್ಲಿ ಸೇರಿಕೊಂಡರು. ನಂತರ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದು 1926ರಲ್ಲಿ ಭಾರತಕ್ಕೆ ಹಿಂದಿರುಗಿದರು. ಆಗ ಅವರಿಗೆ ಕೇವಲ 29 ವರ್ಷ ವಯಸ್ಸು. ಆ ಚಿಕ್ಕ ವಯಸ್ಸಿನಲ್ಲಿಯೇ ಅವರು ದೆಹಲಿಯಲ್ಲಿ ಜಾಮಿಯ ಮಿಲಿಯಾ ಎಂಬ ಪ್ರಖ್ಯಾತ ರಾಷ್ಟ್ರೀಯ ಮುಸಲ್ಮಾನ ಮಹಾವಿದ್ಯಾಲಯ ಸ್ಥಾಪನೆಗೆ ಕಾರಣರಾದರು. ಅದರ ಉಪಕುಲಪತಿಯಾಗಿ ಸೇವೆ ಸಲ್ಲಿಸಿದರು. ನಂತರ ಅಲಿಗಢ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಕೆಲಕಾಲ ಸೇವೆ ಸಲ್ಲಿಸಿ ಅಲ್ಲಿ ಕೆಲವು ಸುಧಾರಣೆಗಳನ್ನು ತಂದರು.

1952ರಲ್ಲಿ ರಾಜ್ಯಸಭೆಗೆ ನಾಮಕರಣ ಹೊಂದಿದರು. ನಂತರ ಬಿಹಾರದ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದರು. 1962ರಲ್ಲಿ ಉಪರಾಷ್ಟ್ರಪತಿಯಾಗಿ ನೇಮಕಗೊಂಡರು. 1967ರಲ್ಲಿ ಭಾರತದ ಮೂರನೇ ರಾಷ್ಟ್ರಪತಿಯಾಗಿ ಆಯ್ಕೆಗೊಂಡು 1969 ರವರೆಗೆ ಕಾರ್ಯ ನಿರ್ವಹಿಸಿದರು.

ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದ ಇವರನ್ನು ಮೂಲ ಶಿಕ್ಷಣದ ರಾಷ್ಟ್ರೀಯ ಸಮಿತಿ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಅವರು ಉರ್ದು ಭಾಷೆಯ ಶ್ರೇಷ್ಠ ಬರಹಗಾರರಾಗಿದ್ದರು. ಮಕ್ಕಳಿಗಾಗಿ ಬರೆದ ಅವರ ನೀತಿಬೋಧಕ ಕಥೆಗಳು ಪ್ರಖ್ಯಾತವಾಗಿವೆ. 1963ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಲಾಯಿತು. 1969 ಮೇ 3 ರಂದು ನಿಧನರಾದರು.

## ಶೈಕ್ಷಣಿಕ ವಿಚಾರಗಳು

ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಅವರು ಶಿಕ್ಷಣ ಕುರಿತು ತಮ್ಮ ಅನಿಸಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ. ''ಶಿಕ್ಷಣವೆಂದರೆ ವಿದ್ಯಾರ್ಥಿಗಳಲ್ಲಿ ಅತ್ಯುನ್ನತವಾದ ಬೌದ್ಧಿಕ ಮತ್ತು ನೈತಿಕ ಗುಣಗಳನ್ನು ಬೆಳೆಸಿ. ತಮ್ಮ ತಮ್ಮ ಜೀವನದಲ್ಲಿ ಅವುಗಳನ್ನು ಅನುಭವಿಸುವಂತೆ ಮಾಡುವುದಾಗಿದೆ'' ಎಂದಿದ್ದಾರೆ.

ಶಿಕ್ಷಣ ಸಾಂಸ್ಕೃತಿಕ ಬೆಳವಣಿಗೆಗೆ ಸಾಧನವಾಗಬೇಕು ಎಂದು ಝಾಕೀರ್ ಹುಸೇನ್ ವಿಚಾರವಾಗಿತ್ತು. ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಶಿಕ್ಷಣ ಸಾಧನವಾಗಬೇಕು. ನಮ್ಮ ಶಾಲಾ ಪಠ್ಯಕ್ರಮದಲ್ಲಿ ಅಂತಹ ವಿಷಯಗಳನ್ನು ಸೇರಿಸಬೇಕು. ಸಾಂಸ್ಕೃತಿಕ ಬೆಳವಣಿಗೆಯ ಐತಿಹಾಸಿಕ ಹಿನ್ನೆಲೆಯಲ್ಲಿ ಕಲ್ಪಿಸಲ್ಪಡಬೇಕು. ಇಲ್ಲಿ ಮಕ್ಕಳನ್ನು ಗೊಂದಲಕ್ಕೀಡು ಮಾಡುವ ಸಂಗತಿಗಳನ್ನು ಬಿಟ್ಟು ಬಿಡಬೇಕು. ಪ್ರತಿಯೊಂದು ಮಗುವು ತನ್ನ ದೇಶದ ಸಂಸ್ಕೃತಿಯನ್ನು ತಿಳಿಯಲು ಪ್ರಯತ್ನಿಸುವರು ಸಹಜವಾಗಿದೆ. ಅದನ್ನು ಶಾಲೆಗಳು ಪೂರೈಸಬೇಕು.

ಇಂದು ಶಿಕ್ಷಣವು ವೈಜ್ಞಾನಿಕವಾಗಿರಬೇಕು. ಆದರೂ ಸಹಿತ ನಮ್ಮ ಸಂಸ್ಕೃತಿ, ನೈತಿಕತೆ ಹಾಗೂ ಮಾನವೀಯತೆಯನ್ನು ಮರೆಯಬಾರದು. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಎಲ್ಲ ಹಂತಗಳಲ್ಲಿಯೂ ಸರಿಯಾದ ಸ್ಥಾನ ದೊರೆಯುವದು ಅವಶ್ಯಕ. ಇದರಿಂದ ನಮ್ಮ ಅನೇಕ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದು. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಮಾನವೀಯ ವಿಷಯಗಳನ್ನು ಹಾಗೂ ಸಂಸ್ಕೃತಿಯನ್ನು ಅಧ್ಯಯನ ಮಾಡುವದು ಅವಶ್ಯ.

ವಿದ್ಯಾರ್ಥಿಗಳಲ್ಲಿ ಸ್ವಯಂ ಶಿಸ್ತು ಬೆಳೆದು ಬರಬೇಕು. ಉತ್ತಮ ಶಿಕ್ಷಣದ ಮೂಲಕ ಇದು ಸಾಧ್ಯವಿದೆ ಎಂಬ ಹುಸೇನ್‌ರ ಅಭಿಮತ. ಮಕ್ಕಳಲ್ಲಿ ಜವಾಬ್ದಾರಿ, ಸ್ವಾತಂತ್ರ್ಯ ಹಾಗೂ ಶಿಸ್ತು ಬೆಳೆದು ಬರಬೇಕು. ಒಂದು ದೇಶದ ಅಭಿವೃದ್ಧಿಗೆ ಶಿಸ್ತು ಕಾರಣವಾಗಿದೆ. ಪಠ್ಯಕ್ರಮದ ಅಧ್ಯಯನದ ಮೂಲಕ ಶಿಸ್ತು ಬೆಳೆದು ಬರಬೇಕು.

ವಿದ್ಯಾರ್ಥಿಗಳಲ್ಲಿ ಕಾರ್ಯಾನುಭವ ಬೆಳೆದು ಬರಬೇಕು. ಶಾಲೆಗಳಲ್ಲಿ ಪುಸ್ತಕೀಯ ಜ್ಞಾನದ ಜೊತೆಗೆ ನಿರೀಕ್ಷಣೆ ಹಾಗೂ ಅನುಭವಗಳನ್ನು ಪಡೆಯುವಂತಾಗಬೇಕು. ಇದಕ್ಕಾಗಿ ಯಾವುದಾದರೊಂದು ಚಟುವಟಿಕೆಯನ್ನು ಅನುಸರಿಸಬೇಕು. ಕಾರ್ಯಾನುಭವದಿಂದ ದೇಹ ಮತ್ತು ಮನಸ್ಸುಗಳ ಸಮನ್ವಿತ ವಿಕಾಸ ಸಾಧ್ಯವಾಗುತ್ತದೆ. ಕೇವಲ ಪುಸ್ತಕೀಯ ಜ್ಞಾನವು ವಿದ್ಯಾರ್ಥಿಯನ್ನು ಜೀವನಕ್ಕಾಗಿ ಸಿದ್ಧಗೊಳಿಸಲು ಸಾಧ್ಯವಿಲ್ಲ. ಶಾಲೆಯ ಎಲ್ಲ ಹಂತದ ಪಠ್ಯಕ್ರಮದಲ್ಲಿ ಉತ್ಪಾದನೆಯ ಚಟುವಟಿಕೆಗಳನ್ನು ಸೇರಿಸಬೇಕು. ಇದು ವಿದ್ಯಾರ್ಥಿಗಳ ಮನಸ್ಸನ್ನು ಸದೃಢಗೊಳಿಸುತ್ತದೆ ಮತ್ತು ಅವರನ್ನು ಸುಶೀಲರನ್ನಾಗಿ ಮಾಡುತ್ತದೆ.

ಝಾಕೀರ್ ಹುಸೇನ್‌ರ ಪ್ರಕಾರ ಶಿಕ್ಷಕನು ಶಿಕ್ಷಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾನೆ. ಅವನು ತನ್ನದೇ ಉದಾಹರಣೆಯೊಂದಿಗೆ ಬೋಧಿಸಬೇಕು. ಅವನು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವ ವ್ಯಕ್ತಿತ್ವ ಹೊಂದಿರಬೇಕು. ವಿದ್ಯಾರ್ಥಿಗಳು ಅವನಿಂದ ಅತ್ಯುತ್ತಮವಾದುದನ್ನು ಅಪೇಕ್ಷೆ ಪಡುವಂಥ ಜಾಣತನ, ಕುಶಲತೆಯನ್ನು ಹೊಂದಿರುವುದು ಅವಶ್ಯಕ.

ಮಕ್ಕಳ ಸಂಪೂರ್ಣ ಬೆಳವಣಿಗೆಗೆ ಅವಕಾಶ ನೀಡುವ ಮಾದರಿ ಶಾಲೆಗಳ ಅವಶ್ಯಕತೆ ಇದೆ ಎಂದು ಝಾಕೀರ್ ಹುಸೇನ್‌ರು ಹೇಳಿದರು. ಅಂಥ ಮಾದರಿಯ ಶಾಲೆಗಳು ಅವಶ್ಯಕ. ಅಂತಹ ಶಾಲೆಯ ಲಕ್ಷಣಗಳು ಈ ಕೆಳಗಿನಂತಿರಬೇಕೆಂದು ಸೂಚಿಸಿದರು.

1. ಪ್ರತಿ ವಿದ್ಯಾರ್ಥಿಗೆ ಸಾಕಷ್ಟು ಮಹತ್ವ ನೀಡುವದು, ವೈಯಕ್ತಿಕ ಕಾಳಜಿ ವಹಿಸುವದು.
2. ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವ ಶಿಕ್ಷಣದ ಮೂಲಕ ಬೆಳೆಯುತ್ತದೆ.
3. ಶಾಲೆಯ ಪ್ರತಿ ಹಂತದ ಪಠ್ಯಕ್ರಮದಲ್ಲೂ ಶೈಕ್ಷಣಿಕವಾಗಿ ಉತ್ಪಾದಕವಾದ ಚಟುವಟಿಕೆಗಳನ್ನು ಸೇರ್ಪಡೆ ಮಾಡುವದು.
4. ಕಲಿಯುವ ಹಂಬಲವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಸ್ವಯಂ ಶಿಕ್ಷಣ ಪಡೆಯಲು ವಿದ್ಯಾರ್ಥಿಯನ್ನೇ ಜವಾಬ್ದಾರನನ್ನಾಗಿ ಮಾಡುವುದು.

■■